ಮುದ್ದಣ ಕವಿಯ

ಶ್ರೀರಾಮಾಶ್ವಮೇಧಸಂಗ್ರಹ

ಹೊಸಗನ್ನಡಾನುವಾದ

ಸಂಗ್ರಹ

ಎನ್. ಅನಂತರಂಗಾಚಾರ್

033,1M70;8,1
M15

ಅನುವಾದ

. ಶಿವಕುಮಾರ್

ಮಿತ್ರ ಪ್ರಕಾಶನ

24, 'ಕುಮಾರಕೃಪಾ', ಸರಸ್ವತೀಪುರಂ ಹೊಸ ಬಡಾವಣೆ

ಮೈಸೂರು ೯

033,1M70;g,1 708
M15
Shivakumar, K Y.
Muddana kaviya
Shri Ramaswa
medha Sangraha

ಶ್ರೀಮತಿ ಪುಷ್ಪ ಮತ್ತು ಶ್ರೀ ಜಿ. ಆರ್. ಸುಬ್ರಮಣ್ಯ
ಅವರಿಗೆ ಪ್ರೀತಿಪೂರ್ವಕವಾಗಿ

O33,1M70;g,1 708
M15

ಮೊದ್ದಣ ಕವಿಯ ಕೆ.ವೈ. ಶಿವಕುಮಾರ್
1-11-1984

ಶ್ರೀರಾಮಾಶ್ವಮೇಧಸಂಗ್ರಹ

ಹೊಸಗನ್ನಡಾನುವಾದ

Please return this volume on or before the date last stamped
Overdue volume will be charged 1/- per day.

ಸಂಗ್ರಹ

ಎನ್. ಅನಂತರಂಗಾಚಾರ್

ಅನುವಾದ

ಕೆ. ವೈ. ಶಿವಕುಮಾರ್

ಮಿತ್ರ ಪ್ರಕಾಶನ
ಸರಸ್ವತೀಪುರಂ ಹೊಸ ಬಡಾವಣೆ : ಮೈಸೂರು 570 009

MUDDANA KAVIYA SRIRAMASHVAMEDHASANGRAHA—An abridged new kannada version of Sri Ramashvamedha of Muddana (Nandalike Lakshminarayana)—One of the great poets of kannada literature who lived from 24-1-1980 to 15-2-1901 in South Kanara District—by K. Y. Shivakumar. Original abridged old kannada version edited by N. Anantarangachar. Published by Mitra Prakashana, 24, 'Kumara Krupa', Saraswatipuram New Extension, Mysore-570 009. Printed by A. G. Suvratheendra, at Vani press, Gita Road, Mysore-4. First Edition : 1981, Page 24+100, © Ambuja Shivakumar

O33,1M70;g;1
M15

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. ...1388...708

ಅರ್ಪಣೆ

ಮುದ್ದಣಕವಿಯ ಶ್ರೀರಾಮಾಶ್ವಮೇಧವನ್ನು
ಸಂಗ್ರಹರೂಪದಲ್ಲಿ ಬೆಳಕಿಗೆ ತಂದು
ಜನಪ್ರಿಯಗೊಳಿಸಿದವರಲ್ಲೊಬ್ಬರಾದ

ಎನ್. ಅನಂತರಂಗಾಚಾರ್

ಹಾಗೂ

ಟಿಪ್ಪಣಿ ಮತ್ತು ಸಮಗ್ರಾನುವಾದ ಸಹಿತ
ಸಂಪೂರ್ಣರೂಪದಲ್ಲಿ ಬೆಳಕಿಗೆ ತಂದ

ತೆಕ್ಕುಂಜ ಗೋಪಾಲಕೃಷ್ಣಭಟ್ಟ

ಅವರಿಗೆ

ಗೌರವ ಪೂರ್ವಕವಾಗಿ

ಅರಿಕೆ

ತಾವು ಸಂಪಾದಿಸಿರುವ 'ಮುದ್ದಣಕವಿಯ ಶ್ರೀರಾಮಾಶ್ವಮೇಧಸಂಗ್ರಹ'ವನ್ನು ಹೊಸಗನ್ನಡಕ್ಕೆ ಅನುವಾದಿಸಲು ನನಗೆ ಅನುಮತಿ ಕೊಟ್ಟ ಎನ್. ಅನಂತರಂಗಾಚಾರ್ ಅವರಿಗೆ, ಇದನ್ನು ಪ್ರಕಟಿಸಿದ ಮಿತ್ರಪ್ರಕಾಶನದವರಿಗೆ, ಕೆಲವು ಸಲಹೆಗಳನ್ನಿತ್ತ ಜಿ. ಎಸ್. ಭಟ್ಟ ಅವರಿಗೆ, ಇದನ್ನು ಮುದ್ರಿಸಿದ ವಾಣೀ ಪ್ರೆಸ್ಸಿನ ಎ. ಜಿ. ಸುವ್ರತೀಂದ್ರ ಅವರಿಗೆ ನನ್ನ ಕೃತಜ್ಞತೆಗಳು.

ಕೆ. ವೈ. ಶಿವಕುಮಾರ್

ಪರಿವಿಡಿ

ಪ್ರಸ್ತಾವನೆ	....	೬–೨೪
ಕಥಾಮುಖ	....	1–4
ಯಜ್ಞೋಪದೇಶ	....	4–8
ಗರ್ಭಧಾರಣ	....	8–12
ಸೀತಾಪರಿತ್ಯಾಗ	....	13–19
ವಾಲ್ಮೀಕಿ ದರ್ಶನ	....	19–26
ವಿಜಯ ಪ್ರಯಾಣ	....	27–29
ಕಾಮಾಕ್ಷಿ ದರ್ಶನ	....	29–32
ಚ್ಯವನಮುನಿ ಕಥನ	....	33–40
ನೀಲಾಚಲ ದರ್ಶನ	....	40–41
ಸುಬಾಹು ಯುದ್ಧ	....	41–51
ತೇಜಃಪುರಗಮನ	....	51–53
ಆರಣ್ಯಕಮುನಿ ದರ್ಶನ	....	54–59
ದೇವಪುರ ವರ್ಣನ	....	60–65
ಹನುಮತ್ಪರಾಜಯ	....	65–78
ಕಥೋಪಸಂಹಾರ	....	78–97

ಪ್ರಸ್ತಾವನೆ

ದಿನಾಂಕ ೨೪-೧-೧೮೭೦ ರ ಸೋಮವಾರದಂದು, ಇಂದು ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ನಂದಳಿಕೆ ಎಂಬಲ್ಲಿ ಪಾತಾಳಿ ತಮ್ಮಯ್ಯ ಮತ್ತು ಮಹಾಲಕ್ಷ್ಮಮ್ಮ ಎಂಬ ತಂದೆತಾಯಿಗಳಿಗೆ ನಂದಳಿಕೆ ಲಕ್ಷ್ಮೀನಾರಾಯಣ ಎಂಬ ಹೆಸರಿನಿಂದ ಮುದ್ದಣನು ಜನಿಸಿದನು. ಈಗ ಆ ಗ್ರಾಮ ನಮ್ಮ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿಗೆ ಸೇರಿದೆ. ಹೆತ್ತವರು ಪ್ರೀತಿಯಿಂದ ಕರೆದ ಮುದ್ದಣ ಎಂಬ ಹೆಸರೇ ಇಟ್ಟ ಹೆಸರಿಗಿಂತ ಹೆಚ್ಚು ಜನಪ್ರಿಯವಾಯಿತು.

"ಲಕ್ಷ್ಮೀನಾರಾಯಣನಿಗೆ ರಾಮಪ್ಪ, ಲಿಂಗಣ್ಣಯ್ಯ ಎಂಬಿಬ್ಬರು ಚಿಕ್ಕಪ್ಪಂದಿರೂ ಇಂದಮ್ಮ ಎಂಬ ಸೋದರತ್ತೆಯೂ, ಶಿವರಾಮಯ್ಯ, ರಾಮಕೃಷ್ಣ ಎಂಬೀರ್ವರು ತಮ್ಮಂದಿರೂ ಇದ್ದರು. ಅವರ ತಮ್ಮ ಶಿವರಾಮಯ್ಯ, ಎಂಬುವರು ಹೆಬ್ರಿಶಾಲೆಯಲ್ಲಿ ಅಧ್ಯಾಪಕರಾಗಿದ್ದರು. ಲಕ್ಷ್ಮೀನಾರಾಯಣನ ತಂದೆ ತಮ್ಮಯ್ಯನವರು ನಂದಳಿಕೆ ಬಿಟ್ಟನಂತರ ಉಡುಪಿಯಿಂದ ಹದಿನಾಲ್ಕು ಮೈಲಿ ದೂರ ಇರುವ ಇವಾತ್ತೂರಿನಲ್ಲಿ ಒಂಟಿ ಜೀವನ ನಡೆಸುತ್ತಿದ್ದರೆಂದು ತಿಳಿದು ಬರುತ್ತದೆ."[1]

"ನಂದಳಿಕೆಯಲ್ಲಿ ಮೂರೂರು ಚರಡಪ್ಪಯ್ಯ ಎಂಬುವರು ಸ್ಥಾಪಿಸಿದ ಶಾಲೆಯಲ್ಲಿ ಲಕ್ಷ್ಮೀನಾರಾಯಣನ ಪ್ರಾಥಮಿಕ ವಿದ್ಯಾಭ್ಯಾಸವಾಯಿತು. ಅಂಗಾರಸೆಟ್ಟಿ ಎಂಬವರು ನಡೆಸುತ್ತಿದ್ದ ಶಾಲೆಯಲ್ಲಿ ಈತನು ಓದುತ್ತಿದ್ದುದಾಗಿಯೂ ಹೇಳಿಕೆಯಿದೆ."[2] ಹರಿಕಥೆ, ಪುರಾಣಗಳನ್ನು ಕೇಳುವುದು, ಯಕ್ಷಗಾನ ಬಯಲಾಟಗಳನ್ನು ನೋಡುವುದು, ಹಾಡು, ಭಜನೆ, ಕೀರ್ತನೆ, ಪದ, ಯಕ್ಷಗಾನದ ಪದ್ಯ—ಇವುಗಳನ್ನು ತನ್ನ ಕೋಮಲ ಕಂಠದಿಂದ ಹಾಡುವುದು ಮುದ್ದಣನಿಗೆ ಚಿಕ್ಕವಯಸ್ಸಿನಲ್ಲೆ ರೂಢಿಯಾಯಿತು. ಬಡತನದಿಂದಾಗಿ ಇಂಗ್ಲಿಷ್ ಶಾಲೆಯ ಶಿಕ್ಷಣವನ್ನು ಒಂದೆರಡು ವರ್ಷಗಳಲ್ಲೇ ಬಿಟ್ಟು, ಕನ್ನಡ ಟ್ರೈನಿಂಗ್ ಶಾಲೆಗೆ ಸೇರಿ ಕಲಿತನು. ಆದರೆ ಇಂಗ್ಲಿಷ್ ಕಲಿಯುವಿಕೆಯನ್ನು ಮಾತ್ರ ಬಿಡದೆ ಮನೆಯಲ್ಲೆ ಸ್ವಪ್ರಯತ್ನದಿಂದ ಕಲಿಯುತ್ತಿದ್ದ. ಹದಿನೆಂಟನೆ ವಯಸ್ಸಿಗೆ ಆತನ ವಿದ್ಯಾರ್ಥಿಜೀವನ ಕೊನೆಗೊಂಡಿತು.

ಇಷ್ಟರಲ್ಲಿ ಆತನಿಗೆ ಯಕ್ಷಗಾನದಲ್ಲಿ ಸಾಕಷ್ಟು ಪರಿಣತಿಯಾಗಿತ್ತು. ಯಕ್ಷಗಾನದ ಹಾಡುಗಾರಿಕೆ, ಮಾತುಗಾರಿಕೆ, ಕುಣಿತ, ವೇಷಭೂಷಣಗಳು ಆತನನ್ನು ಸೆಳೆದಿದ್ದವು. ತುಳು, ಕನ್ನಡಗಳಲ್ಲಿ ಯಕ್ಷಗಾನದ ಪದ್ಯಗಳನ್ನು ರಚಿಸುತ್ತಿದ್ದ. ಬಯಲಾಟದ ರಂಗಕ್ಕೆ ನಟನಾಗಿ ಪ್ರವೇಶಿಸಿದ. ಒಳ್ಳೆಯ ಸ್ನೇಹ ಸಹವಾಸದಿಂದಾಗಿ ಪಿಟೀಲು, ಸಂಗೀತಗಳನ್ನು ಕಲಿತ. ಕನ್ನಡ ಟ್ರೈನಿಂಗ್ ಶಾಲೆಯ ಶಿಕ್ಷಣ ಪಡೆದದ್ದರಿಂದ ಉದ್ಯೋಗ ದೊರಕಲಿಲ್ಲ. ಜೀವನಕ್ಕೆ ಬೇರೆ ದಾರಿ ತೋರದೆ ಅಂಗಸಾಧನೆಯ ತರಬೇತಿಗಾಗಿ ಮದ್ರಾಸಿಗೆ ತೆರಳಿದ. ಹೀಗೆ ತರಬೇತಿ ಪಡೆಯುವವರಿಗೆ ಸರಕಾರದವರು ಧನಸಹಾಯ ಮಾಡುತ್ತಿದ್ದುದರಿಂದ ಮುದ್ದಣನಿಗೆ ಹಣದ ಚಿಂತೆ ತಪ್ಪಿತು.

ಅಲ್ಲಿ ದೈಹಿಕ ಶಿಕ್ಷಣದ ಜೊತೆಗೆ ಮಾನಸಿಕ, ಬೌದ್ಧಿಕ ಶಿಕ್ಷಣಗಳನ್ನೂ ಉತ್ತಮಪಡಿಸಿಕೊಂಡ. ಇಂಗ್ಲಿಷ್ ಭಾಷೆಯ ಜ್ಞಾನವನ್ನು ಹೆಚ್ಚಿಸಿಕೊಂಡ. ಕನ್ನಡ, ತುಳು, ತೆಲುಗು, ತಮಿಳು, ಮಲೆಯಾಳ—ಈ ದ್ರಾವಿಡ ಭಾಷೆಗಳನ್ನು ತುಲನಾತ್ಮಕವಾಗಿ ಅಭ್ಯಾಸ ಮಾಡಿದ. 'ಸುವಾಸಿನಿ' ಪತ್ರಿಕೆಯಲ್ಲಿ 'ಚಕ್ರಧಾರಿ' ಅಂಕಿತದಿಂದ 'ಜೋಜೋ' ಎಂಬ ಪ್ರಬಂಧ ಬರೆದ. ಅಲ್ಲಿನ ದೈಹಿಕ ಶಿಕ್ಷಣವನ್ನು ಮುಗಿಸಿಬಂದ ಮುದ್ದಣನು ೧೮೮೯ನೆ ಮೇ ತಿಂಗಳಲ್ಲಿ ಉಡುಪಿ ಬೋರ್ಡು ಹೈಸ್ಕೂಲಲ್ಲಿ ಹತ್ತು ರೂಪಾಯಿ ಸಂಬಳಕ್ಕೆ ವ್ಯಾಯಾಮ ಶಿಕ್ಷಕನಾಗಿ ಸೇರಿಕೊಂಡ. ಅಲ್ಲಿ ಅಧ್ಯಾಪಕರಾಗಿದ್ದ ಮಳಲಿ ಸುಬ್ಬರಾಯರೆಂಬ ವಿದ್ವಾಂಸರ ಪರಿಚಯವಾಯಿತು. ಅವರಿಂದ ಸಂಸ್ಕೃತ ಕಾವ್ಯಪುರಾಣಗಳನ್ನು ಕೇಳಿ ತಿಳಿದುಕೊಂಡ. ಅವರಲ್ಲಿದ್ದ ಗ್ರಂಥಗಳನ್ನು ಓದಲು ಆತನಿಗೆ ಅವಕಾಶ ದೊರೆಯಿತು. ಅವರಿಂದ ಸಂಸ್ಕೃತ ರತ್ನಾವಳೀ ನಾಟಕವನ್ನು ಓದಿಸಿ ಕೇಳಿ ಅದನ್ನು ಆಧರಿಸಿ 'ರತ್ನಾವತೀ ಕಲ್ಯಾಣ'ವೆಂಬ ಯಕ್ಷಗಾನ ಪ್ರಸಂಗವನ್ನು ರಚಿಸಿದನು. ಇದಾದ ಮೇಲೆ ಸ್ಕಾಂದಪುರಾಣದೊಳಗಿನ ಶೂರ ಪದ್ಮಾಸುರ ಕಾಳಗದ ಕಥೆಯನ್ನು ಎತ್ತಿಕೊಂಡು 'ಕುಮಾರ ವಿಜಯ'ವನ್ನು ಬರೆದನು. ಇವೆರಡನ್ನೂ ಆತ ಉಡುಪಿಯ ಹಿಂದೂ ಪ್ರೆಸ್ಸಿನಲ್ಲಿ ಅಚ್ಚು ಹಾಕಿಸಿದನು. ಪ್ರತಿಗಳು ಮಾರಾಟವಾಗದೆ ಮುದ್ದಣನಿಗೆ ನಷ್ಟವಾಯಿತು. ಪಂಪ, ರನ್ನ, ಕುಮಾರವ್ಯಾಸ, ಲಕ್ಷ್ಮೀಶ ಮುಂತಾದವರ ಕೃತಿಗಳ ಜೊತೆಗೆ ಶ್ರೀ ವೆಂಕಟಾಚಾರ್ಯರ ಕಾದಂಬರಿಗಳನ್ನೂ, ಮೈಸೂರಿನಲ್ಲಿ ಪ್ರಕಟವಾಗುತ್ತಿದ್ದ 'ಕಾವ್ಯ

ಮಂಜರಿ' ಮುಂತಾದ ಮಾಸಿಕಗಳನ್ನೂ ಅಭ್ಯಾಸ ಮಾಡುತ್ತಿದ್ದ. ಇಷ್ಟರಲ್ಲಿ ಮಳಲಿ ಸುಬ್ಬರಾಯರಿಗೆ ಕುಂದಾಪುರ ಹೈಸ್ಕೂಲಿಗೆ ವರ್ಗವಾಗಲು, ಮುದ್ದಣನೂ ಪ್ರಯತ್ನಿಸಿ ೧೮೯೨ ನೆಯ ಮಾರ್ಚಿಯಲ್ಲಿ ಕುಂದಾಪುರಕ್ಕೆ ವರ್ಗ ಮಾಡಿಸಿಕೊಂಡನು. ಶಬ್ದಮಣಿದರ್ಪಣ ಮೊದಲಾದ ಹಳಗನ್ನಡ ವ್ಯಾಕರಣ ಗಳ ಅಭ್ಯಾಸವನ್ನೂ ಮುಂದುವರೆಸಿದನು. ಆಗತಾನೆ ಪ್ರಕಟವಾಗಿದ್ದ ಕಿಟ್ಟೆಲರ ನಿಘಂಟು ಮುದ್ದಣನಿಗೆ ಒಬ್ಬ ಜೊತೆಗಾರನಂತೆಯೇ ಆಯಿತು. ಕುಂದಾಪುರ ಹೈಸ್ಕೂಲಿಗೆ ವರ್ಗವಾದಮೇಲೆ ಮುದ್ದಣನ ಸಂಬಳ ಹದಿನೈದು ರೂಪಾಯಿ ಆಯಿತು. ೧೮೯೫ರಲ್ಲಿ ಮದುವೆಯಾಯಿತು. ಇಷ್ಟರಲ್ಲಿ ಸಂಸ್ಕೃತ ಭಾಷೆ ಯಲ್ಲಿನ ಮೂಲ ಅದ್ಭುತ ರಾಮಾಯಣವನ್ನು ಮಳಲಿ ಸುಬ್ಬರಾಯರಿಂದ ಓದಿಸಿ ಕೇಳಿ ಹಳಗನ್ನಡ ಗದ್ಯಶೈಲಿಯಲ್ಲಿ ಬರೆದು ಮುಗಿಸಿದ್ದನು. ಇದನ್ನು ತಾನೇ ಪ್ರಕಟಿಸಲಾಗದೆ, ತನ್ನ ಹೆಸರಿನಿಂದ ಕಳಿಸಿದರೆ ಯಾರೂ ಪ್ರಕಟಿಸು ವುದಿಲ್ಲವೆಂಬ ಸಂಶಯದಿಂದಾಗಿ, ತನಗೆ ಓಲೆಗರಿಯಿಂದ ದೊರಕಿದ ಕೃತಿಯೆಂದು 'ಕಾವ್ಯಮಂಜರಿ' ಪತ್ರಿಕಾ ಸಂಪಾದಕರಿಗೆ ಕಳುಹಿಸಿಕೊಟ್ಟನು. ೧೮೯೫ ರ ಆಕ್ಟೋಬರ್‌ನಲ್ಲಿ 'ಅದ್ಭುತ ರಾಮಾಯಣ' ಪ್ರಕಟವಾಯಿತು. ಗ್ರಂಥದ ಕೊನೆಗೆ 'ತಿರುಳ್ಗನ್ನಡಿಗನಡಿದಾವರೆಯ ಬಂಡುಣಿಗಳಪ್ಪ ಕನ್ನಡಗಬ್ಬಿಗರ ಮನೆಯೊಳಿಗದವನೋರ್ವಂ ಕನ್ನಡಿಗಂ ಪೇಳ್ದಂ' ಎಂದು ಕವಿ ತಿಳಿಸಿದ್ದಾನೆ. ಮೂಲ ಹಸ್ತಪ್ರತಿಯ ಮುಖಪತ್ರದ ಯಥಾಪ್ರತಿ ಮುದ್ರಿತವಾದುದರಿಂದ ಅದ್ಭುತ ರಾಮಾಯಣದ ಕರ್ತೃ ಮುದ್ದಣನೆಂದು ಮುಂದೆ ತಿಳಿಯಿತು.

ಸಂಸ್ಕೃತದ ಪದ್ಮಪುರಾಣದಲ್ಲಿ ಬರುವ ಶ್ರೀರಾಮನ ಅಶ್ವಮೇಧದ ಕಥೆ ಯನ್ನು ಮಳಲಿ ಸುಬ್ಬರಾಯರಿಂದ ಓದಿಸಿ ಕೇಳಿಕೊಂಡು, ಲಕ್ಷ್ಮೀಶನ ಜೈಮಿನಿ ಭಾರತದಂತೆ ವಾರ್ಧಕಷಟ್ಪದಿಯಲ್ಲಿ ಬರೆಯಬೇಕೆಂದು ಆರಂಭಿಸಿ, ಕುಂದಾಪುರ ಸಮೀಪದ ಬವಲಾಡಿಯ ವೆಂಕಟರಮಣ ಹೆಬ್ಬಾರ ಎಂಬುವರಿಗೆ ತೋರಿಸಿ ದನು. ಅವರು ಗದ್ಯದಲ್ಲೇ ಬರೆಯಲು ಸಲಹೆ ಕೊಟ್ಟದ್ದರಿಂದ, ಸುಮಾರು ೩೫೦ ಪದ್ಯಗಳಷ್ಟು ಬರೆದಿದ್ದ ಕಾವ್ಯ ವ್ಯರ್ಥವಾಗಬಾರದೆಂದು 'ಶ್ರೀರಾಮ ಪಟ್ಟಾಭಿಷೇಕ'ವೆಂದು ಹೆಸರಿಸಿ, ಇದನ್ನೂ ಸಹ ಹಳೆಯ ಓಲೆಗರಿಯಿಂದ ಪ್ರತಿ ಮಾಡಿದುದೆಂದೇ ತಿಳಿಸಿ 'ಕಾವ್ಯಮಂಜರಿ' ಸಂಪಾದಕರಿಗೆ ಕಳುಹಿಸಿದನು. ಅದು ೧೮೯೬ರಲ್ಲಿ ಪ್ರಕಟವಾಯಿತು. ಅದರಲ್ಲೇ 'ಉಡುಪಪುರವಾ್ ಎಂಬ ಸುಕ್ಷೇತ್ರವಾ್'

ತ್ರವಮ್ ಉಂಟು, ಅಲ್ಲಿ ಚಾವಡಿರಂಗಭಟ್ಟನ ಆತ್ಮಜೆ ಮಹಾಲಕ್ಷ್ಮಿ ಕನ್ನಡಿತಿ ಚೆಂಗಳದೇವಿ ಪೇಳೆಂದು ಪೇಳೆ ನೆರೆಪೇಳ್ದಳ್ ಈ ಸತ್ಕೃತಿಯನು' ಎಂದು ಹೇಳಿದ್ದಾನೆ. ಇದರಿಂದ ಈ ಕೃತಿ ಒಬ್ಬ ಮಹಿಳೆಯಿಂದ ರಚಿತವಾದುದೆಂದು ಅನ್ನಿಸುತ್ತದೆ. ಹೀಗಾಗದಿರಲೆಂದು ಮತ್ತೆ 'ಕನ್ನಡಿತಿಯೊರೆದ ನುಡಿಯೆಂದು ಇದಂ ಭಾವಿಸದೆ ಕನ್ನಡಿಗನು ಒರೆದ ನುಡಿಯೆಂದು ಸಂಭಾವಿಪುದು' ಎಂದು ಹೇಳಿದ್ದಾನೆ. ಮುದ್ದಣನ ತಾಯಿ ಹೆಸರು ಮಹಾಲಕ್ಷ್ಮಿಯಾದುದರಿಂದ ಅದೂ ಈತನ ಕೃತಿಯೆಂದೇ ತಿಳಿಯಿತು. ಇವೆರಡೂ ಗ್ರಂಥಗಳು ಮದ್ರಾಸ್ ವಿಶ್ವವಿದ್ಯಾನಿಲಯದ ಎಫ್. ಎ. ಪರೀಕ್ಷೆಗಳಿಗೆ ೧೮೯೫ರಲ್ಲಿ ಪಠ್ಯವಾದುವು. ೧೮೯೬ರಲ್ಲಿ ಉಡುಪಿ ಮಿಶನ್ ಹೈಸ್ಕೂಲಿನಲ್ಲಿ ಇಪ್ಪತ್ತು ರೂಪಾಯಿ ಸಂಬಳದ ಮೇಲೆ ಕನ್ನಡ ಪಂಡಿತನಾಗಿ ಮುದ್ದಣನು ನೇಮಿಸಲ್ಪಟ್ಟನು. ೧೮೯೭ರ ಹೊತ್ತಿಗೆ ತನ್ನ ಮೇರು ಕೃತಿ 'ಶ್ರೀರಾಮಾಶ್ವಮೇಧ'ವನ್ನು ಗದ್ಯದಲ್ಲಿ ಬರೆದು ಮುಗಿಸಿದನು.

ಮೊದಲೆರಡು ಕೃತಿಗಳನ್ನು ಕಳಿಸಿದಂತೆ 'ಮುದ್ದಣ' ಎಂಬುವನು ಬರೆದ ಪ್ರಾಚೀನ ಕೃತಿಯೆಂದು 'ಕಾವ್ಯಮಂಜರಿ' ಸಂಪಾದಕರಿಗೆ ಕಳುಹಿಸಿದನು. ಆದರೆ ಅಷ್ಟರಲ್ಲಿ ಅದು ನಿಂತು ಹೋಗಿತ್ತು. ೧೮೯೯ರಲ್ಲಿ ರಾಮಾನುಜಯ್ಯಂಗಾರ್ ಹಾಗೂ ಎಸ್. ಜಿ. ನರಸಿಂಹಾಚಾರ್ ಅವರಿಂದ, 'ಕಾವ್ಯಕಲಾನಿಧಿ' ಎಂಬ ಮಾಸಿಕ ಆರಂಭವಾಯಿತು. ಇದರಲ್ಲಿ 'ಶ್ರೀ ರಾಮಾಶ್ವಮೇಧ' ಪ್ರಕಟವಾಗತೊಡಗಿ ೧೯೦೧ನೆಯ ಆಗಸ್ಟ್‌ನಲ್ಲಿ ಕೊನೆಗೊಂಡಿತು. ಆದರೆ ೧೯೦೧ನೆಯ ಫೆಬ್ರವರಿ ೧೫ ಶುಕ್ರವಾರದಂದೇ, ಕ್ಷಯರೋಗದಿಂದಾಗಿ ಮುದ್ದಣ ತನ್ನ ಮೂವತ್ತೊಂದನೆ ವಯಸ್ಸಿನಲ್ಲೇ ಚಿಕ್ಕ ವಯಸ್ಸಿನ ತನ್ನ ಸತಿ–ಸುತರನ್ನು ಅಗಲಿ ಅಕಾಲ ಮರಣಕ್ಕೆ ತುತ್ತಾದನು.

'ಕುಶವಿಜಯ' ಎಂಬ ಗ್ರಂಥವನ್ನು ಮುದ್ದಣನು ಬರೆಯಬೇಕೆಂದಿದ್ದು ಬರೆಯಲಾಗಲಿಲ್ಲವಂತೆ. ಭಗವದ್ಗೀತೆಯನ್ನು ಭಾಮಿನೀಷಟ್ಪದಿಯಲ್ಲಿಯೂ, ಕರ್ಣಾಟಕ ರಾಮಾಯಣವನ್ನು ವಾರ್ಧಕಷಟ್ಪದಿಯಲ್ಲಿಯೂ ರಚಿಸಿದ್ದು, ಹಾಗೂ ಕಾಮಶಾಸ್ತ್ರವೆಂಬ ಗ್ರಂಥವನ್ನೂ ರಚಿಸಿದ್ದನಂತೆ. ಆದರೆ ಈ ಪ್ರತಿಗಳು ಯಾವುವೂ ದೊರೆತಿಲ್ಲ

ಪದ್ಮ ಪುರಾಣದಲ್ಲಿ ಶೇಷ ವಾತ್ಸ್ಯಾಯನನಿಗೆ ಹೇಳಿದನೆಂದಿರುವ ಸಂಸ್ಕೃತ ರಾಮಾಶ್ವಮೇಧವೇ ಮುದ್ದಣನ ಶ್ರೀರಾಮಾಶ್ವಮೇಧಕ್ಕೆ ಮೂಲ. ಈ

ಮೂಲದಲ್ಲಿ ೬೮ ಅಧ್ಯಾಯಗಳಿವೆ. ಮೊದಲನೆ ಐದು ಅಧ್ಯಾಯಗಳ ಕಥೆಯನ್ನು, ಅಂದರೆ ರಾವಣವಧೆಯಿಂದ ರಾಮಪಟ್ಟಾಭಿಷೇಕದವರೆಗಿನ ಕಥೆಯನ್ನು ಮುದ್ದಣನು ಅನುಸರಿಸಿ 'ಶ್ರೀರಾಮಪಟ್ಟಾಭಿಷೇಕ'ವನ್ನೂ, ಮುಂದಿನ ಆರನೆ ಅಧ್ಯಾಯದಿಂದ ಅರವತ್ತೆಂಟನೆ ಅಧ್ಯಾಯದವರೆಗಿನ ಕಥೆಯನ್ನು ಅನುಸರಿಸಿ, ಹದಿನಾರು ಆಶ್ವಾಸಗಳಲ್ಲಿ 'ಶ್ರೀರಾಮಾಶ್ವಮೇಧ'ವನ್ನೂ ರಚಿಸಿದ್ದಾನೆ. ಆದರೆ ಯಥಾವತ್ತಾಗಿ ಅನುಸರಿಸಿಲ್ಲ. ಅನಾವಶ್ಯಕವೆನ್ನಿಸಿದುದನ್ನು ನಿರ್ದಾಕ್ಷಿಣ್ಯವಾಗಿ ಕೈಬಿಟ್ಟಿದ್ದಾನೆ. ಅತಿಯೆನ್ನಿಸಿದುದನ್ನು ಸಂಗ್ರಹಿಸಿದ್ದಾನೆ. ಸ್ವಾರಸ್ಯಕರವೆನ್ನಿಸಿದುದನ್ನು ತನ್ನದೇ ಆದ ವಿಶಿಷ್ಟ ಕನ್ನಡ ಭಾಷೆಯಲ್ಲಿ ಸ್ವತಂತ್ರ ನಿರ್ಮಿತಿ ಎನ್ನುವಷ್ಟರ ಮಟ್ಟಿಗೆ, ಇನ್ನೂ ಹೆಚ್ಚು ಸ್ವಾರಸ್ಯಕರವಾಗಿ ಹಿಡಿದಿಟ್ಟಿದ್ದಾನೆ. ಕೊರತೆಯಾಗಿದ್ದು, ಕಳೆಯನ್ನು ಹೆಚ್ಚಿಸುವಂತಹ ಹೆಚ್ಚಿನ ಪ್ರಸಂಗಗಳನ್ನು ಸಂದರ್ಭೋಚಿತವಾಗಿ ಸೇರಿಸಿಕೊಂಡಿದ್ದಾನೆ. ಪೀಠಿಕೆ ಪ್ರಾರ್ಥನೆಗಳನ್ನೊಳಗೊಂಡ ಸಂಪ್ರದಾಯಬದ್ಧ ಪ್ರಾರಂಭವನ್ನು ಬಿಟ್ಟು ವರ್ಷಾಕಾಲದ ವರ್ಣನೆಯ ಜೊತೆಯಲ್ಲಿಯೇ ರಾಮಾಶ್ವಮೇಧದ ಕಥೆಯನ್ನು ಪ್ರಾರಂಭಿಸಿದ್ದಾನೆ. ಇವೆಲ್ಲಕ್ಕಿಂತ ಹೆಚ್ಚಾಗಿ, ಕಿರೀಟಪ್ರಾಯವಾದ ಮುದ್ದಣ ಮನೋರಮೆಯೆಂಬ ಸತಿ-ಪತಿಯರ ಸರಸಸಲ್ಲಾಪವನ್ನು ಆರಂಭದಲ್ಲಿ, ಮಧ್ಯಮಧ್ಯದಲ್ಲಿ, ಮುಕ್ತಾಯದಲ್ಲಿ ಅಳವಡಿಸಿದ್ದಾನೆ.

ವರ್ಣಾಶ್ರಮಧರ್ಮ ನಿರೂಪಣೆ, ಗೋಹತ್ಯಾ ಪ್ರಾಯಶ್ಚಿತ್ತ, ಕರ್ಮಗತಿ ನಿರೂಪಣೆ, ಕರ್ಮವಿಚಾರ ವರ್ಣನೆ, ಬ್ರಾಹ್ಮಣಭೋಜನ ವರ್ಣನೆ, ಸೀತೆಗೆ ಗಿಣಿಗಳು ಶಾಪ ಕೊಟ್ಟ ಭಾಗ, ಕಾಲಜಿತು ಪುಷ್ಕಲ ಹನುಮಂತರೊಡನೆ ಲವ ಯುದ್ಧ ಮಾಡಿದ ಪ್ರಸಂಗ ಮುಂತಾದುವನ್ನು ಪೂರ್ಣವಾಗಿ ಕೈಬಿಟ್ಟಿದ್ದಾನೆ. ತೀರ್ಥಯಾತ್ರಾಪ್ರಶಂಸೆ, ತೀರ್ಥನಾಮ ಕಥನ, ಪುರುಷೋತ್ತಮ ಕ್ಷೇತ್ರವಿಧಿ, ಗೋಸೇವಾನಿರೂಪಣೆ, ನರಕವರ್ಣನೆ ಮೊದಲಾದವುಗಳನ್ನು ಸಂಗ್ರಹಿಸಿದ್ದಾನೆ. ಹತ್ತು ಅಧ್ಯಾಯಗಳಲ್ಲಿ ವಿವರವಾಗಿ ವರ್ಣಿತವಾಗಿರುವ ಲವಕುಶರ ಕಾಳಗವನ್ನು ಒಂದೇ ಒಂದು ಆಶ್ವಾಸದಲ್ಲಿ ಮುಗಿಸಿದ್ದಾನೆ.

ಪದ್ಮ ಪುರಾಣಗಳಲ್ಲಿಲ್ಲದ ಒಂದೆರಡು ಪ್ರಸಂಗಗಳನ್ನು ಮುದ್ದಣ ತನ್ನ ಕೃತಿಯಲ್ಲಿ ಅಳವಡಿಸಿದ್ದಾನೆ. ಗುಬ್ಬಚ್ಚಿಯೊಂದು ತನ್ನ ಮರಿಗೆ ಗುಟುಕಿಡುವುದನ್ನು ನೋಡಿದ ಸೀತೆ ಆ ಹಕ್ಕಿಯೂ ತನ್ನನ್ನು ಬಂಜೆಯೆಂದು ಹಾಸ್ಯ

ಮಾಡುತ್ತಿದೆಯೆಂದು ಬಗೆದು ಕುಲವರ್ಧಕನಾದ ಮಗನನ್ನು ಪಡೆದು ಎತ್ತಿ ಮುದ್ದಾಡಿ ಬೇಸರವನ್ನು ಕಳೆಯುವ ಪುಣ್ಯ ನನಗೆ ಎಂದಿಗೆ ಆಗುತ್ತದೆಯೊ ಎಂದು ಮೂರ್ಛೆಹೋಗುವಳು. ಇದನ್ನು ಸಖಿ ಚಂದ್ರಮತಿಯಿಂದ ತಿಳಿದ ಶ್ರೀರಾಮನು ಬೇಗನೆ ಎದ್ದು, ದಿಗ್ಭ್ರಮೆಯಿಂದ ಬಂದು ಸಮಾಧಾನ ಪಡಿಸುವನು. ಇಲ್ಲಿರುವ ಸೀತೆಯ ಮಕ್ಕಳ ಬಯಕೆ ಸ್ವತಂತ್ರವಾಗಿದ್ದು ಕಲಾತ್ಮಕವಾಗಿದೆ. ಈ ಸಂದರ್ಭದಲ್ಲೇ ಸೀತೆಯ ಬಾಯಿಂದಲೇ ಬಂಜೆಯರನ್ನು ಮಕ್ಕಳ ತಾಯಂದಿರು ತಿರಸ್ಕರಿಸುವ ಬಗೆ ಹಾಗೂ ಮಕ್ಕಳು ತಮ್ಮ ಲೀಲೆಯಿಂದ ತಾಯಂದಿರನ್ನು ನಲಿಸುವ ಬಗೆಗಳು ವರ್ಣಿತವಾಗಿವೆ. ಹೀಗೆಯೇ, ಹಿಂದೆ ರಾಮನ ಜೊತೆಯಲ್ಲಿ ಕಾಡಿಗೆ ಬಂದಿದ್ದಾಗ ರಾಮ ತನ್ನನ್ನು ಉಪಚರಿಸಿದ್ದನ್ನು, ರಾಮ ತನ್ನನ್ನು ತ್ಯಜಿಸಿದಮೇಲೆ ಕಾಡಿನಲ್ಲಿ ಸೀತೆಯು ನೆನೆಸಿಕೊಳ್ಳುವುದು, ಲಕ್ಷ್ಮಣನು ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬಂದನೆಂಬ ವಾರ್ತೆಯನ್ನು ಕೇಳಿದ ರಾಮ, ಕಾಡಿನಲ್ಲಿ ಸೀತೆಯ ಸ್ಥಿತಿ ಏನಾಯಿತೊ ಎಂದು ಪರಿತಪಿಸುವುದು—ಈ ಮುಂತಾದವು ಪದ್ಮ ಪುರಾಣದಲ್ಲಿಲ್ಲದ ಅಂಶಗಳು.

ಕತೆಯನ್ನು ಹೇಳುವ ಕ್ರಮದಲ್ಲೂ ಮುದ್ದಣ ಒಂದೆರಡು ಕಡೆ ವ್ಯತ್ಯಾಸಗಳನ್ನು ಮಾಡಿಕೊಂಡಿದ್ದಾನೆ. ಮೂಲದಲ್ಲಿ ಮೊದಲಿಗೆ ಸೀತಾ ಪರಿತ್ಯಾಗವು ಅಗಸನೊಬ್ಬನ ದೂಷಣೆಯಿಂದ ಆಯಿತೆಂದು ಅಷ್ಟೇ ಹೇಳಿ, ಅಗಸ್ತ್ಯ ಬಂದು ರಾವಣವಂಶವನ್ನು ವಿವರಿಸಿದ ಮೇಲೆ ಅಶ್ವಮೇಧಯಾಗ ಮಾಡಲು ನಿರ್ಧರಿಸಿ, ಆ ಅಶ್ವವನ್ನು ಜಾನಕಿಪುತ್ರ ಲವನು ಕಟ್ಟುತ್ತಾನೆಂದು ಆದಿಶೇಷ ಹೇಳಿದಾಗ ವಾತ್ಸ್ಯಾಯನ 'ಎಲೈ ಶೇಷನೇ, ನೀನು, ರಾಮನು ಅಗಸನ ಮಾತಿನಮೇಲೆ ಪ್ರಜೆಗಳನ್ನು ರಂಜಿಸಲು ಸೀತೆಯನ್ನು ಕಾಡಿನಲ್ಲಿ ಬಿಟ್ಟನು ಎಂದಷ್ಟೇ ಹೇಳಿದೆ, ಜಾನಕಿಗೆ ಮಕ್ಕಳು ಎಲ್ಲಿ ಹುಟ್ಟಿದರು ? ಎಲ್ಲಿ ಧನುರ್ವಿದ್ಯೆಯನ್ನು ಕಲಿತರು ?' ಎಂದು ಕೇಳಿದಾಗ ಆದಿಶೇಷ ಸೀತಾಪರಿತ್ಯಾಗವನ್ನು ಮತ್ತೆ ಮೊದಲಿನಿಂದ ವಿಸ್ತಾರವಾಗಿ ವರ್ಣಿಸುತ್ತಾನೆ.

ಮುದ್ದಣನಲ್ಲಿ, ಮುದ್ದಣನು ಮನೋರಮೆಗೆ ಕಥೆ ಹೇಳುತ್ತ 'ವಸಿಷ್ಠಂ ರಾಘವಂಗೆ........ನೀಂ ಪೊನ್ನ ಸೀತೆವೆರಸು ವ್ರತಮನ್ ಅಪ್ಪುಕೆಯ್ವುದು ಎಂದು ಎಚ್ಚಱಿಸಿದಂ' ಎಂದು ಹೇಳುತ್ತಿದ್ದಂತೆಯೇ, ಮನೋರಮೆ 'ರಮಣ, ಇಂತು ಇದೇಂ ಪೊನ್ನ ಸೀತೆಯೆಂಬಯ್ ? ರನ್ನ ಸೀತೆಯೆತ್ತವೋದಳ್ ?

ಜನಕಂ ಜನಕಂ ಕರೆದು ಉಯ್ದಿರ್ದನೇಂ ? ಅಂತಿರೆಯುಂ ಮಗುಳ್ದುಂ ಕರೆಯಿಸಿಕೊಳ್ವುದಲ್ತೆ ನೋಂಪಿಗೆ' ಎಂದು ಪ್ರಶ್ನೆ ಹಾಕುತ್ತಾಳೆ. ಆಗ ಮುದ್ದಣ 'ಓ ಮರುಳೆ ನೀನು ಈ ಇರವಂ ಪೇಳಲ್ಕೆ. ಸಂದೆಯಂ ಸಾಜಂ. ಕೇಳ !' ಎಂದು ಹೇಳಿ, ಸಂತಾನವಿಲ್ಲದಕ್ಕಾಗಿ ಸೀತೆ ಪರಿತಪಿಸಿದ್ದು, ಗರ್ಭ ಧರಿಸಿದ್ದು, ಋಷಿಪತ್ನಿಯರೊಡನೆ ಕಾಲಕಳೆಯಲು ಆಕೆ ಬಯಸಿದ್ದು, ಅಗಸನಿಂದ ದೂಷಣೆ ಬಂದಿದ್ದು, ಸೀತೆಯ ಬಯಕೆಯನ್ನೇ ಕಾರಣವನ್ನಾಗಿ ಮಾಡಿಕೊಂಡು ಲಕ್ಷ್ಮಣ ಅವಳನ್ನು ಕಾಡಿಗೆ ಕರೆದುಕೊಂಡು ಹೋಗಿ ಬಿಟ್ಟುಬಂದದ್ದು, ವಾಲ್ಮೀಕಿ ಸೀತೆಯನ್ನು ತನ್ನ ಆಶ್ರಮಕ್ಕೆ ಕರೆದುಕೊಂಡು ಹೋದದ್ದು, ಇತ್ತ ಅಯೋಧ್ಯೆಯಲ್ಲಿ ರಾಮ ಪರಿತಪಿಸಿದ್ದು — ಇಷ್ಟನ್ನೂ ವಿವರವಾಗಿ ವರ್ಣಿಸಿ, ಮುಂದೆ ಯಜ್ಞಾಶ್ವದ ಕಥೆಗೆ ಹೋಗುತ್ತಾನೆ. ಬೇಕೆಂದೆ 'ಪೊನ್ನಸೀತೆ' ಎಂಬುದನ್ನು ಪ್ರಯೋಗಿಸಿ ಮನೋರಮೆ ಅದರ ಮೇಲೆ ಪ್ರಶ್ನೆ ಕೇಳುವಂತೆ ಮಾಡಿ ಹಿಂದಿನ ಕಥೆಯನ್ನು ಹೇಳುತ್ತಾನೆ.

ಮುಂದೆ, 'ಅಂತು ಕುಂಡಲಪುರದಿಂ ತಳರ್ದು .. ....ಒಂದು ಮುನಿಗಳ ಆಶ್ರಮದಪ್ಪೊಜವಳಯದ ತೋಂಟದೊಳು ಆಟದ ಕಿರುವರೆಯದ ಕುವರರ್ ಇರ್ವರು ಅದಟಿಂ ತಡೆದು ಪಿಡಿದು ಹಯಮಂ ಕಟ್ಟಿದರ್ ಗಡ !' ಎಂದು ಮುದ್ದಣ ಹೇಳುತ್ತಿದ್ದಂತೆಯೇ, ಮನೋರಮೆ 'ಎನ್ನ ಚೆನ್ನರಸ, ಮುನಿಗಳ ಆಶ್ರಮದ ತರಳರ್ಗೆ ಈ ಬಗೆಯೊಳ್ ನಾಡರಾಯರ ಜನ್ನಗುದುರೆಯುಂ ಕಟ್ಟಿ ಕಾದುವ ಒಂದು ಬಲ್ಪುಂ ಕೂರ್ಪುಂ ನೇರ್ಪಟ್ಟುದು ಎಂತು ? ಆರಪ್ಪರು ಈ ಕುವರರ್ ಏಂ ಗೆಯ್ದರ್ ಏನಾದರ್ ಎಂತು ಕಾದಿದರು ಎಂದು ಪೇಟ ! ಅಬ್ಬಾ ! ಏಂ ಗಡುಸುಗಾಜಿತೊ' ಎಂದು ಪ್ರಶ್ನೆ ಹಾಕುತ್ತಾಳೆ. ಆಗ ಮುದ್ದಣ, ವಾಲ್ಮೀಕಿಯು ಸೀತೆಯನ್ನು ಕರೆದುಕೊಂಡು ಹೋದಮೇಲೆ ಅವಳು ಅಲ್ಲಿ ನಡೆದುಕೊಳ್ಳುತ್ತಿದ್ದ ರೀತಿ, ಅವಳಿಗೆ ನಡೆದ ಸೀಮಂತ ಕರ್ಮ, ಲವಕುಶರ ಜನನ, ಅವರು ತಮ್ಮ ಬಾಲ್ಯಚೇಷ್ಟೆಗಳೊಡನೆ ಬೆಳೆದು ವಿದ್ಯೆ ಕಲಿತ ರೀತಿ— ಇವೆಲ್ಲವನ್ನೂ ವಿವರವಾಗಿ ವರ್ಣಿಸಿ, ವಾಲ್ಮೀಕಿ ಇಲ್ಲದ ವೇಳೆಯಲ್ಲಿ ಲವನೊಬ್ಬನೇ ಕುದುರೆ ಕಟ್ಟಿದ್ದನ್ನು ಹೇಳಿ, ಹಾಗೆಯೇ ಮುಂದಕ್ಕೆ ಹೋಗುವನು.

ಮನೋರಮೆಗೆ ಕುತೂಹಲ ವಿಪರೀತವಾಗಿ ಕೆರಳುವಂತೆ ಮಾಡಿ ಅನಂತರ ಕಥೆಯನ್ನು ಮುಂದುವರೆಸುವುದರಲ್ಲೂ ಮುದ್ದಣ ನಿಪುಣ.

ಮುದ್ದಣ ಮನೋರಮೆಯರ ಸರಸಸಂಭಾಷಣೆಯ ಸಂದರ್ಭವೊಂದರಲ್ಲಿ, ಮನೋರಮೆ ಮುದ್ದಣನಿಗೆ 'ಪೊತ್ತಡೆವಿಡಿದು ಬೈಗುವರೆಗಮ್ ಉಪವಾಸಮ್ ಇರಲೆವೇಟ್ಪುದು' ಎಂದಾಗ, ಮುದ್ದಣ 'ಈಗಳ್ ಆಂ ಕತ್ತರಿಯೊಳ್ ಆದೆಂ. ಕಲ್ಲೊಳ್ ಕಾಲ್ಪೆಟ್ಟದ ರಾಮನ ಹಯಮ್ ಎಂತು ಅಂತು ಮನಂ ಮುಂಗೆಟ್ಟುದು. ಅಂತಪ್ಪೊಡೆ ಈ ನೋಂಪಿಯನು ಒಲ್ಲೆಂ' ಎನ್ನುತ್ತಾನೆ. ಮನೋರಮೆ 'ಅಂತೇಂ, ನಡೆವ ಜನ್ನಗುದುರೆಯು ಎಂದು ಕಲ್ಲೊಳ್ ಕೀಲಿಸಿದುದು ಪೇಟ!' ಎನ್ನುತ್ತಾಳೆ. ಮುದ್ದಣ 'ಅಪ್ಪೊಡಕ್ಕಂ. ಆದೊಡೆ ಇನಿತೊಂದಂ ನಿನ್ನಂ ಬೇಟಿಪ್ಪೆಂ. ನಾಳೆಗೆ ಉಪವಾಸಮನ್ ಉಟಾದ ನೋಂಪಿಯನೊಂದನೇರ್ಪಡಿಸಲೆವೇಟಪ್ಪುದು' ಎಂದು ಕೇಳುತ್ತಾನೆ. ಮನೋರಮೆ 'ನೋಟ್ಪೆಂ, ಮುನ್ನಂ ಕತೆಯಂ ಬಿತ್ತರಿಸು' ಎಂದು ಕೇಳುತ್ತಾಳೆ. ಮುದ್ದಣ 'ಆಯ್ತಾಯ್ತು, ಕೇಳ್' ಎಂದು ಹೇಳಿ ಕಥೆಯನ್ನು ಮುಂದುವರೆಸುತ್ತಾನೆ.

ಲಕ್ಷ್ಮಣ ಸೀತೆಯನ್ನು ಕರೆದುಕೊಂಡು ಗಂಗಾನದಿಯನ್ನು ದಾಟಿದ ಮೇಲೆ 'ಇಂತು ನಡೆನಡೆದು ಬಲ್ದೂರಂ ಪೋಗಿ ನಟ್ಟಡವಿಯಂ ಪೊಕ್ಕು ಕಟ್ಟಕಡೆಯೊಳ್ ಅಣ್ಣನ ಕಟ್ಟಾಣತಿಯನು ಒರೆದು ಲಕ್ಷ್ಮಣಂ ಭೂಮಿಜೆಯನು ಉಳಿಸಿ ಪೋದಂ' ಎಂದು ಬೇಕೆಂದೆ ಮುದ್ದಣ ಎರಡು ಸಾಲಿನಲ್ಲಿ ಬಹಳಷ್ಟನ್ನೂ (ಮನೋರಮೆಗೆ ಬಹುಮುಖ್ಯವಾದುದನ್ನು ಹೇಳದೆ) ಹೇಳಿ ಮುಗಿಸಿದರೆ, ಮನೋರಮೆ (ಕಂಬನಿಗರೆದು) 'ಆಃ ಎನ್ನೊಡೆಯ, ನೀನುಮ್ ಎಂತು ಕಲ್ಮನನಾದಯ್ ಒರ್ತಡವೆಯೆ ದೇವಿಯಂ ಕಾರಡವಿಯೊಳು ಉಳಿದು ಲಕ್ಷ್ಮಣಂ ಪೋದನು ಎಂಬೊಡೆ. ಮಯ್ದುನಂಗಮ್ ಎಂತು,ಮನಮ್ ಆದುದೋ! ಮೇಣ್ ಎಂತು ದೇವಿಯರ್ಗೆ ಕಾವಲಿರದೆ ಪೋದನೋ! ತೊರೆದು ಪೋಪನ್ನಂ ಸೀತೆಯೇನೆಂದು ಮರುಗಿದಳೋ! ಅಕ್ಕಟಾ! ಪೆಣ್ಗಳ ಒಂದು ಬಾಳ್ತೆ ಬಾಳ್ತೆಯೆ!' ಎಂದು ಮರಗುತ್ತಾಳೆ. ಮುದ್ದಣ (ತಾನುಂ ಸುರಿವ ಅಶ್ರುಜಲಮಂ ಕಿರುವೆರಲಿಂ ಮಿಡಿದು) 'ಪ್ರಾಣೇಶ್ವರೀ, ಈ ಇರವನೇನೆಂದು ಪೇಳ್ವೆನೊ? ಅಳಲ್ ಕೊರಲಂ ಓಂಕುಗುಂ. ಮುಂಗತೆಯ ನಾನುಂ ಪೇಳ್ವೆಂ' ಎಂದರೆ, ಮನೋರಮೆ 'ಪೆಣ್ಣೊಡಲಲ್ತೆ, ಎಂತು ಸೈರಿಪೆಂ. ಸೀತೆ ಏನಾದಳ್, ಪೇಳ್' ಎಂದು ಕೇಳುತ್ತಾಳೆ. ಆಗ ಮುದ್ದಣ, ಲಕ್ಷ್ಮಣ

ಸೀತೆಯಿಂದ ಅಗಲಿದ ಪ್ರಸಂಗವನ್ನು ವಿವರಿಸಿ 'ಆಗಳ್ ಸೌಮಿತ್ರಿ........ ಬೀಳ್ಕೊಂಡಂ' ಎಂದು ಹೇಳಿ, ವಾಲ್ಮೀಕಿ ಬಂದು ಸೀತೆಯನ್ನು ಕರೆದುಕೊಂಡು ಹೋದುದನ್ನು ಹೇಳದೆ 'ಅತ್ತಲ್ ಅಯೋಧ್ಯಾನಗರಿಯೊಳ್ ಜನ್ನಗುದುರೆಯುಂ....' ಎಂದು ಅತ್ತ ತಿರುಗುತ್ತಿದ್ದಂತೆಯೇ, ಮನೋರಮೆ 'ಸುಡು ಸುಡು ನಿನ್ನ ಜನ್ನಗುದುರೆಯುಂ, ಆ ಕಥೆಗೆ ಈಗಳೆ ಪೊಳ್ತೇ, ಆಃ ಸೀತೆಯೇನಾದಳೆಂತಿರ್ದಳೆಂದು ಪೇಳಯ್' ಎಂದು ಮತ್ತೆ ಸೀತೆಯ ವೃತ್ತಾಂತಕ್ಕೇ ತಿರುಗಿಸುತ್ತಾಳೆ.

ಮುಂದೆ, ಮುದ್ದಣ 'ಅಂತು ಕುಂಡಲಪುರದಿಂ ತಳರ್ದು........ಒಂದು ಮುನಿಗಳ ಆಶ್ರಮದ ಪೊರವಳಯದ ತೋಂಟದೊಳು ಆಟದ ಕಿರುವರೆಯದ ಕುವರರ್ ಇರ್ವರು ಅದಟಿಂ ತಡೆದು ಪಿಡಿದು ಹಯಮಂ ಕಟ್ಟಿದರ್ ಗಡ !' ಎಂದು ಹೇಳುತ್ತಿದ್ದಂತೆಯೇ, ಮನೋರಮೆ (ಕೇಳ್ವೊಂಡು ತವಕದಿಂ ಎನಸುಂ ಸಂತಸಕ್ಕೆ ಎಯ್ತಂದು ನಲ್ಮೆಮಿಗೆ ನಲ್ಲನಂ ಗಲ್ಲಮನ್ ಅಲುಗಿ ತಳ್ತು ಅಮರ್ದಪ್ಪಿ) 'ಎನ್ನ ಚೆನ್ನರಸ, ಮುನಿಗಳ ಆಶ್ರಮದ ತರಳರ್ಗೆ ಈ ಬಗೆಯೊಳ್ ನಾಡರಾಯರ ಜನ್ನಗುದುರೆಯುಂ ಕಟ್ಟಿ ಕಾದುವ ಒಂದು ಬಲ್ಪುಂ ಕೂರ್ಪುಂ ನೇರ್ಪಟ್ಟುದೆಂತು ? ಆರಪ್ಪರ್ ಈ ಕುವರರ್ ಏಂಗೆಯ್ದರ್ ಏನಾದರ್ ಎಂತು ಕಾದಿದರು ಎಂದು ಪೇಳ, ಅಬ್ಬಾ, ಏಂ ಗಡುಸುಗಾರರೊ !' ಎನ್ನುತ್ತಾಳೆ. ಮುದ್ದಣ 'ಉಃ ಪೋಕೆ, ಬಾಳ್ಕೆಟ್ಟ ಮಕ್ಕಳು ಆರಾದೊಡಮ್ ಏಂ ಸಾಲ್ಗುಂ ಈ ಪಾಳ್ಗತೆ. ಕತೆವೇಳ್ದು ಬೇಸತ್ತೆಂ. ಎಂತುಂ ಯಜ್ಞ ಪರಿಸಮಾಪ್ತಿಗೆಯ್ವೆಂ' ಎಂದರೆ, ಮನೋರಮೆ 'ಮುದ್ದುಮೊಗದ ಚೆನ್ನಿಗರಾಯ, ಆಗದಾಗದು. ತನ್ನಾಣೆ, ಬಾಲಕರ್ ರಣದೊಳ್ ಸೋಲ್ತರೆ, ಗೆಲ್ದರೆ ? ಪೇಳಯ್. ನಿನಗಮ್ ಏನಿಂತು ಬೇಸರೊ ಕಾಣೆಂ' ಎನ್ನುತ್ತಾಳೆ. ಮುದ್ದಣ 'ಎಳಗುವರರ ಒಂದು ಕತೆ ಮುಂತಿರ್ಕೆ. ನೀಂ ಮುನಿವೆರಸು ಪೋದ ಸೀತೆಯ ಒಂದು ಇರವನು ಅರಿತುಂಟೆ ?' ಎಂದರೆ, ಮನೋರಮೆ 'ಮುನಿಗಳ ಆಶ್ರಮದೊಳ್ ಎಂತಿರ್ದಳ್, ಏಂ ಗೆಯ್ದಳ್ ? ತಮರವರ್ ಕಡೆಗೆ ಕೊಂಡುಯ್ದರೇಂ ? ಎನಗಿದನೆ ಪೇಳ್. ಆ ಮಕ್ಕಳಿರ್ಕೆ ಪೋಕೆ' ಎನ್ನುತ್ತಾಳೆ. ಆಗ ಮುದ್ದಣ ಸೀತೆ ಹಾಗೂ ಲವಕುಶರ ವೃತ್ತಾಂತವನ್ನೆಲ್ಲ ವಿವರಿಸಿ 'ರಾಘವನ ಜನ್ನಗುದುರೆ ಆ ಆಶ್ರಮಮಂ ಪುಗುತರಲೊಡಂ....' ಎನ್ನುತ್ತಿದ್ದಂತೆಯೇ, ಮನೋರಮೆ 'ಈಗಳ್

ಅರಿತೆಂ ಹಸುವಂ ಕಟ್ಟಿದ ಬಾಲರ್ ಆರೆಂಬುದಂ. ಕುಶಲವರಾಗರೆ ? ನೀನುಂ ಆವ ನಾಡ ಗತಕಿಯೊ ? ಆಗಳೆ ಸೀತೆಯ ಮಕ್ಕಳ್ ಕಟ್ಟಿ ಕಾದಿದರ್ ಎಂದೊ ಡಾಗದೆ ? ತಾಂ ಪೇಳಂ ಗಡ ! ಮುಚ್ಚುಗಡ ! ಆಯ್ತಾಯ್ತು. ಮುಂತಣ ಕತೆಯಂ ಪೇಳ್ ನೋಳ್ಪೆಂ' ಎನ್ನುತ್ತಾಳೆ. ಮುದ್ದಣ 'ಒಳಪುಗ್ಗೊಟ್ಟ ಕಾದಲನಂ ಮೂದಲಿಪ ಹೂಣಿಗಾರ್ತಿಯ ಒಂದು ಆಯತಿಯಂ ಮೆರೆವ ನಿನಗೆ ನಲ್ಗೆಳದಿಗಲ್ಲದೆ ಪೆರಳಾವಳ್ಗಿಂ ಕತೆಯಂ ಬಿತ್ತರಂ ಬಿತ್ತರಿಪಂ ನುಡಿಗಬ್ಬದ ಗಬ್ಬದ ಗಬ್ಬದುಬ್ಬರದಿಂ ನನೆ ಕೊನೆವೋಗಿ ಕೊನೆವೆರ್ಚಿನ ಪುರ್ಚಿನ ಪೊಳ್ಳು ಬಳ್ಳು ಮುದ್ದಣಂ. ಆಯ್ತು ಕೇಳ್, ಇರ್ವನುಮಳ್ರೊರ್ವನೆ ಕಿರಿಯಂ ಲವಂ' ....ಎಂದು ಹೇಳಿ ಮುಂದಿನ ಕಥೆಯನ್ನು ವಿವರಿಸುತ್ತಾನೆ.

ಹೀಗೆ ಮನೋರಮೆಯ ಕುತೂಹಲ ಕೆರಳಿಸಿ, ಕಥೆಯನ್ನು ಹೇಳುವುದ ರಲ್ಲಿ ಮುದ್ದಣ ನಿಪುಣನಾಗಿರುವಷ್ಟೇ, ಅವಳನ್ನು ಹಾಸ್ಯಕ್ಕೆ ಗುರಿಮಾಡಿ ರೇಗಿ ಸುವುದರಲ್ಲೂ ನಿಪುಣ. ತನಗೆ ಒಲಿದಿರುವುದು ಸಪ್ತಾಕ್ಷರಿಮಂತ್ರ ಎಂದು ಹೇಳಿ, ಅದು ಯಾವುದೆಂದು ಅವಳು ಸಾಕಷ್ಟು ಪೀಡಿಸಿದಮೇಲೆ, ಅದೇ 'ಭವತಿಃ ಭಿಕ್ಷಾಂದೇಹಿ' ಎಂದು ಹೇಳುವುದಂತೂ ಅದಕ್ಕೆ ಒಂದು ಒಳ್ಳೆಯ ನಿದರ್ಶನ.

ಯುದ್ಧದಲ್ಲಿ ಲವನು ಮೂರ್ಛೆಹೋದಕೂಡಲೆ ಶತ್ರುಘ್ನನು ಆತನನ್ನು ರಥದಲ್ಲಿ ಮಲಗಿಸಿಕೊಂಡು, ಕುದುರೆಯನ್ನೂ ಬಿಚ್ಚಿ ಹೊರಡಿಸಿಕೊಂಡು ಹೊರಟುಬಿಡುತ್ತಾನೆ. ಈ ಸುದ್ದಿಯನ್ನು ವಟುಗಳು ಸೀತೆಗೆ ಹೇಳುತ್ತಾರೆ. ಆಕೆ ದುಃಖಿಸುತ್ತಾಳೆ. ಕುಶ ಬಂದು ವಿಚಾರಿಸಿದಾಗ ಲಕ್ಷ್ಮೀಶನ ಸೀತೆಯು ಕುಶ ನೊಡನೆ ನಡೆದುದೆಲ್ಲವನ್ನೂ ಹೇಳುತ್ತಾಳೆ. ಮುದ್ದಣನ ಸೀತೆ ತಾನೇ ಹೇಳು ವುದಿಲ್ಲ, ದುಃಖಿಸುತ್ತಲೇ ಇರುತ್ತಾಳೆ. ಅಲ್ಲಿದ್ದ ವಟುಗಳು ಹೇಳುತ್ತಾರೆ: "ಕುಶಂ........ಮರುಗುವ ಮಾತೆಯ ಪೊರೆಯೊಳ್ ನಿಂದು 'ಎನ್ನಬ್ಬೆ, ಇಂತು ಏನು ಅಳಲು ಆರಿಂ ಆಯ್ತು ? ನಿನಗೇಂ ಜಡಂ' ಎಂದು ಎನಸುಂ ಪತ್ತೆ ಸಾರ್ದು ಕೊರಲನಪ್ ಅಮರ್ದು ಅಪ್ಪಿಯುಂ ಗಲ್ಲಮನ್ ಅಲುಗಿಯುಂ ಒರೆವ ಕಂಬನಿಯುಂ ತೊಡೆದುಂ ನುಡಿಯಿಸುವ ಬಾಲಕಂಗೆ ಮರುನುಡಿ ಕುಡ ಲಾರದಂದು ಬಳಿಯ ಮಕ್ಕಳ್ ಪಗೆರಾಯರ ಜನ್ನಗುದುರೆಯುಂ ಬಂದಿವಿಡಿ ದುದಂ ಮೇಣ್ ಕಾದಿ ಸೆರೆವೋದುದಂ ಕುಶಂಗೆ ಕೇಳಿಸಿದರ್."—ಇದು ಹೆಚ್ಚು ಶಕ್ತಿಯುತವಾಗಿದೆ.

"ಇಂತೆಂಬ ವಟುಗಳಂ ಗದರಿ ಬೆದರಿ ಪೋಪಂತುಮಾಡಿ" (ವಿಷಯಗಳನ್ನು ಮಕ್ಕಳಿಂದ ತಿಳಿದುಕೊಂಡನಂತರ ಅವರನ್ನು ಗದರಿಸಿ ಸುಮ್ಮನಾಗಿಸುವುದು ಅಥವಾ ಅಲ್ಲಿಂದ ಹೋಗಿಸುವುದು ಇಂದಿಗೂ ನಮ್ಮಲ್ಲಿ ನಿಜವಾಗಿ ನಡೆಯುವ ವಿಚಾರವೆಂಬುದು ಗಮನಾರ್ಹ.) ಮುದ್ದಣನ ಕುಶನು ಸೀತೆಯ ಮುಂದೆ 'ಎನ್ನಾಣೆ, ಮರುಗದಿರೌ! ಜವನಕ್ಕೆ, ಉರಿಗಣ್ಣಭವನಕ್ಕೆ, ಬೆಟ್ಟನ ತಿಟ್ಟನ ಮಾಧವನಕ್ಕೆ, ಎನ್ನ ಲವನಂಕೊಂಡುಯ್ದುವನಂ ಸೊರ್ಕುಸೆರ್ಕಪ್ಪಿನೆಗಂ ಬಡಿನು ಪಿಡಿವಸುವೆರಸು ನಿನ್ನಡಿಗೊಪ್ಪಿಸಪೆನೆ ನಿನ್ನ ಮುದ್ದಿನ ಕಂದನೆ! ನೋಡೆನ್ನ ಅಧಟನು' ಎಂದು ಪ್ರತಿಜ್ಞೆ ಮಾಡಿ ಯುದ್ಧಕ್ಕೆ ಹೊರಡುತ್ತಾನೆ. ಲಕ್ಷ್ಮೀಶನ ಕುಶ 'ಶೋಕಮೇಕಿದಕೆ? ಹರಣವನೊಯ್ದೊಡೆ ಅಂತಕನ ಲೋಕಮಂ ಸುಡುವೆನ್. ಇಲ್ಲಹುದೆಂದೊಡೆ ಅಜ ಹರಿ ಪಿನಾಕಿಗಳನುರಿಪುವೆನ್. ಮಿಕ್ಕರಸುಗಿರಸುಗಳ ಪಾಡಾವುದೀಗ ತನಗೆ?' ಎಂದು ಪ್ರತಿಜ್ಞೆಮಾಡಿ ಯುದ್ಧಕ್ಕೆ ಹೊರಡುತ್ತಾನೆ—ಇವೆರಡೂ ಒಂದೊಂದು ರೀತಿಯಿಂದ ಚೆನ್ನಾಗಿವೆ.

ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ, ಲವಕುಶರ ಮೇಲೆ ಯುದ್ಧಕ್ಕೆ ಬಂದ ಶ್ರೀರಾಮ ಅವರನ್ನು 'ಎಲೆ ಪಸುಳೆಗಳಿರ, ನಿಮಗೆ ಈ ಧನುರ್ವೇದಮಂ ಕಲಿಸಿದವನು ಆವಂ? ಆವುದು ನಿವಾಸ ಸ್ಥಳಂ? ಸಲಹಿದವನು ಆವಂ? ಆವಂ ತಂದೆ? ತಾಯಿ ಆವಳ್? ಅಶ್ವಮಂ ಕಟ್ಟುವ ಇನಿತು ಛಲಮ್ ಇದೇತಕೆ? ನಮ್ಮ ಸೇನೆಯಂ ಜಯಿಸುವ ಈ ಬಲಂ ಏತರಿಂದ ಆದುದು?' ಎಂದು ಕೇಳುತ್ತಾನೆ. ಇದಕ್ಕೆ ಕುಶ 'ರಾಜೇಂದ್ರ, ನೀನು ಎಮ್ಮೊಳು ಆಹವಕೆ ಬಿಲ್ಗೊಂಡು ವಾಜಿಯಂ ಬಿಡಿಸಿಕೊಳ್, ಅಲ್ಲದೊಡೆ ಮರಳ್! ಅಪ್ರಯೋಜಕದ ಮಾತು ಇದೇತಕೆ?' ಎಂದು ಉತ್ತರಿಸಿದರೆ, ಲವ 'ನಿರುಪಮ ಕ್ಷಾತ್ರ ಪೌರುಷವನು ಉಳಿದು ಬರಿದೆ ಸೋಜಿಗದೊಳು ಎಮ್ಮ ಜನನಸ್ಥಿತಿಗಳಂ ಕೇಳ್ದೊಡೆ ಈ ಜಗಂ ಮೆಚ್ಚದು! ಎಚ್ಚಾಡಿ ನೋಡು' ಎಂದು ಉತ್ತರಿಸುತ್ತಾನೆ. ಮತ್ತೆ ಶ್ರೀರಾಮ 'ಶಿಶುಗಳಾಗಿಹ ನಿಮ್ಮೊಳ್ ಎನಗೆ ಕಾಳೆಗವೆ? ಪರವಶರಾಗಿ ಬಿದ್ದ ಅನುಜರಂ ಕಂಡು ಖತಿಯೊಳು ಅಂ ವಿಶಿಖಮಂ ತುಡುವೆನೆಂದೊಡೆ ಮನಂ ಒಡಂಬಡದು! ನಿಮ್ಮ ಜನನ ಸ್ಥಿತಿಗಳ ವಿಶದ ವಿಸ್ತರವಂ ಒರೆದೊಡೆ ನೋಡಿಕೊಳ್ವೆಂ' ಎಂದು ಹೇಳಿದಾಗ, ಕುಶ 'ಈ ತಪೋವನದೊಳ್ ಎಮ್ಮಿರ್ವರಂ ಅವಳಿಯಾಗಿ ಸೀತೆ

ಯೊರ್ವಳೆ ಪಡೆದಳ್. ಅನುದಿನದೊಳ್ ಅರ್ಭಿಡು ಜಾತೋಪನಯನಾದಿ ಕರ್ಮಂಗಳಂ ಮಾಡಿ ನಿಗಮಾಗಮ ಸ್ಮೃತಿಗಳ ವ್ರಾತಮಂ ಬರಿಸಿ, ಕಾರ್ಮುಕ ವೇದಮಂ ಕಲಿಸಿ, ನೀತಿಗಳನು ಅರುಹಿ ರಾಮಾಯಣವನು ಓದಿಸಿ, ಮಹಾ ಅತಿಬಲರು ಎನಿಸಿದಂ ವಾಲ್ಮೀಕಿಮುನಿಪಂ' ಎಂದೂ, ಲವ 'ರಾಮಚಾರಿತ್ರ ಪಠನಾಭ್ಯಾಸಯೋಗದಿಂ ಕ್ಷೇಮ ಸುಪುಷ್ಟಿ ನಿಶ್ಚಲನುತಿ ನಿರಾಲಸ್ಯಂ, ಈ ಮಹಾ ಸೈನ್ಯಮಂ ಗೆಲ್ವ ಅಡಟು ತಮಗೆ ಆದುದು' ಎಂದೂ, ಎಲ್ಲವನ್ನೂ ಮನಸ್ಸು ಬಿಚ್ಚಿ ಹೇಳಿಬಿಡುತ್ತಾರೆ. ಇವರು ತನ್ನ ಮಕ್ಕಳೇ ಎಂದು ತಿಳಿದುಬಿಟ್ಟದ್ದರಿಂದ ಶ್ರೀರಾಮನಿಗೂ ಅವರಿಗೂ ಯುದ್ಧ ನಡೆದರೂ ಗಂಭೀರವಾಗಿ ಆಗುವುದಿಲ್ಲ. "ರಾಮನಿಗೆ ಲವಕುಶರೇ ತನ್ನ ಮಕ್ಕಳೆಂದು ತಿಳಿಯುವ ಸನ್ನಿವೇಶವನ್ನು ಇನ್ನೂ ಆಶ್ಚರ್ಯಕರವಾಗಿಯೂ ರಸಭರಿತವಾಗಿಯೂ ಮಾಡಬಹುದಾಗಿದ್ದಿತು. ಅಲ್ಲದೆ ತನ್ನ ಮಕ್ಕಳೆಂದು ತಿಳಿದಮೇಲೆಯೂ ರಾಮನು ಯುದ್ಧ ಮಾಡುವುದು ಅಷ್ಟೇನು ಸಹಜವಾದುದಲ್ಲ. ಮಕ್ಕಳೆಂದು ಅರಿತಕೂಡಲೆ ತಂದೆಗಾಗಬಹುದಾದ ಆಶ್ಚರ್ಯ ಸಂತೋಷಗಳು ಚೆನ್ನಾಗಿ ಹೊರಪಟ್ಟಿಲ್ಲ."[3] "ಕವಿಚೂತವನ ಚೈತ್ರನು ಸಂಪ್ರದಾಯದ ಕಥಾವಸ್ತುವನ್ನು ತನ್ನ ಪ್ರತಿಭೆಯಿಂದ ಯುಕ್ತಿ ಯುಕ್ತವಾಗಿ ಬದಲಾಯಿಸಿ ಬರೆದಿದ್ದರೆ ಅದರ ಸ್ವಾರಸ್ಯವೇ ಬೇರೆಯಾಗುತ್ತಿತ್ತು ....ಸೀತಾಪರಿಗ್ರಹದಂತಹ ಮಹದ್ ವಿಷಯವೂ ಕವಿಯ ವಿಶೇಷ ಲಕ್ಷ್ಯಕ್ಕೆ ಬಾಹಿರವಾದಂತಿದೆ. ತ್ಯಜಿಸಿದ ಸಹಧರ್ಮಿಣಿಯನ್ನು ಮತ್ತೆ ಸ್ವೀಕರಿಸುವುದೇನು, ಕವಿತೆಯ ದೃಷ್ಟಿಯಿಂದಲೂ, ಸಾಮಾನ್ಯ ಘಟನೆಯಲ್ಲ."[4]

ಮುದ್ದಣನ ರಾಮಾಶ್ವಮೇಧದಲ್ಲಿ ರಾಮ ಲಕ್ಷ್ಮಣರಿಬ್ಬರೂ ಒಟ್ಟಿಗೆ ಲವಕುಶರ ಮೇಲೆ ಯುದ್ಧಕ್ಕೆ ಬರುತ್ತಾರೆ. ಅವರನ್ನು ನೋಡಿದ ಲವನು ಕುಶನಿಗೆ 'ಈಗಳ್ ಎಮಗೆ ಸಮರಂ ಸಾಟಿಯಾಯ್ತು. ಕಾಡದೆವ್ವಂಗಳ್ಗೆ ಬಲಿಯೀವಂ. ಕಿರಿಯನು ಒರ್ವನು ಎನಗೆ, ಪಿರಿಯಂ ನಿಮಗೆ, ಮಿಕ್ಕಿನ ಪಡಿ ಬಲಮ್ ಎನ್ನ ನಿಮ್ಮ ಕೋಲ್ಗೆ' ಎಂದು ಹೇಳಿದನಂತರ ಇವರು 'ಪಸುಗೆಗೆಯ್ದು ಮುಂದೊತ್ತಿ ಬರ್ಪ ರಾಮ ಲಕ್ಷ್ಮಣರ್ಗೆ ಕಟ್ಟೆದಿರಾಗಿ ನಡೆದರ್.'

"ಇಂತು ಸಂಕೆಯಿಲ್ಲದೆ ಬಿಂಕದಿಂ ಮುಟ್ಟಿವರ್ಪ ಮಕ್ಕಳ ಬಲಕಂ ಚಲಕಂ ನಿಬ್ಬೆರಗಾಗಿ ರಾಘವಂ ಲಕ್ಷ್ಮಣಂಗೆ, 'ಎಲೆ ತಮ್ಮ, ನಾಡೊಡೆಯರ ಮಕ್ಕಳ್ಗಮ್ ಈ ವಗೆಯ ಪೆಂಪುಂ ಕೆಂಪುಂ ನೋಳ್ಪೊಡೆ ಅರಿದು ಗಡಾ,

ಪಾಡುಗೆಟ್ಟ ಕಾಡತರುವಲಿಗಳ್ಗೆ ಇಂತುಟೊಂದು ಬೀರಮ್ ಎತ್ತಣಿತ್ತು ! ಇವರೊಳ್ ಎನಗೆ ಏನೊ ಮನುತೆ ಪುಟ್ಟುಗುಂ; ಮುನಿಸುಬಾರದು. ಆರೆಂಬುದನ್ ಅರ್ಕೈದು ಪೇಳಯ್' ಎಂಬುದುಂ, ಲಕ್ಷ್ಮಣಂ ತೇರನ್ ಅಣೆದು ನೋಂಕಿ ಬಿಲ್ಲ ಕೊಪ್ಪಿಂಗೆ ನಾರಿಯನ್ ಅಳವಡಿಸುತೆ ಕೋಲಂ ಸಂಧಿಸುತೆ ನುರ್ಗಿವರ್ಪ ಬಾಲರಂ ತಡೆದು 'ಎಲೆ ಮಕ್ಕಳಿರ, ನೀವ್ ಆರ್, ಹಯಮಂ ಕಟ್ಟಿದಿರೇಕೆ ? ಎಮ್ಮವರನ್ ಇದಿರ್ಚಿದಿರೇಕೆ ? ಪೋಪಿರೆಲ್ಲಿಗೆ ? ತಡೆಯಿಮ್ ಎಂದು ಬಿಲ್ಲನೇರಿಸಿದಂ ; ಆಗಳ್ಗೆ ಲವಂ 'ಎಲೆಲೆ ಕಟ್ಟೊತ್ತಾಯದ ರಾಯ, ಮೊನೆಗೊಡ್ಡಿ ಬಂದು ನೀವು ಆರೆಂದು ಬೆಸಗೊಳ್ವುದು ಇದಾವ ನಡತೆ ? ಸಲ್ವೊಡೆ ಕಾದು, ಮೋದು. ಅರೆಯಪ್ಪೊಡೆ ಪಲಾಯನಮನೊಂದು. ಅದೊಡಂ ನೀಂ ಕೇಳ್ವಿನಂ ಪೇಳ್ವೆಂ. ಎಮ್ಮನ್ ಅಬ್ಬೆ ಪೆತ್ತಳ್, ಅಜ್ಜಂ ಸಾಕಿದಂ. ಚಲದಿಂ ನಿಮ್ಮ ಹಯಮಂ ಕಟ್ಟಿದೆವು. ಇದಿರ್ಚಿದೊಡೆ ಇದಿರ್ಚಿದೆವು. ಮೀಸಲಿರ್ಪ ನಿಮ್ಮ ಜೋದರ ಸಮ್ಮುಖಕ್ಕೆ ಪೋಪೆವು. ತಡೆದೊಡೆ ತಡೆವೆವು' ಎಂದು ಕಟ್ಟಿ ನುಡಿವುದುಂ ; ಲಕ್ಷ್ಮಣಂ 'ಕೊರ್ವಿನ ಕೊಂಕುನುಡಿಗೆ ಇದು ಪೊಳ್ತಲ್ತು, ನೀವ್ ಎಳೆಯರ್ ; ಗೆಲ್ದ ಗೆಲ್ಲಂ, ಸೋಲ್ತ ಸೋಲಂ ಬೀರರ್ಗೆಮಗೆ ಬಾರದು ಸವಿನುಡಿಯಂ ಲಾಲಿಸಿ ಕೊಳುಗುಳಮಂ ಹಯಮಂ ಕಡುಚಲಮಂ ಬಿಟ್ಟು ಪೋಗಿಂ. ಈ ನುಡಿ ನಿಮಗೆ ಸೊಗಸಾಗದೆ ಪೋಗೆ ನಿಮ್ಮ ಒಡಲುಮಂ ಬಿಟ್ಟು ಪೋಪಿರ್. ಇದು ನಿಕ್ಕುವಂ' ಎಂದು ಮೂಡಿಗೆಯಿಂ ಕಣೆಯನೆತ್ತಿ ಬಿಲ್ಗೆ ಪೂಡಿದಂ. ಅದರ್ಕೆ ಆ ಲವಂ ಲವಂ ಬೆರ್ಚದೆ, 'ಎಲೆ, ಕೊಂಚಾಡುವೆಯೇಂ, ಆವ್ ಎಳೆಯರಾದೊಡೇಂ, ಕೋಲ್ಗೆ ಒಂದು ಎಳಮೆಯುಂಟೇ ?' ಎಂದು ಎನಿತ್ತೆನಿತ್ತಂ ಲಕ್ಷ್ಮಣನ್ ಇಸುವನ್ ಅನಿತ್ತನಿತ್ತಂ ಕೊಚ್ಚಿದರಿದಂ ಲವಂ.

ಅತ್ತಲ್ ಮೇಣೊಂದು ದೆಸೆಯೊಳ್ ಸೂಟಿಯಿಂ ಪೋಪ ಕುಶನಂ ತಡೆದು ರಾಘವಂ 'ಎಲೆ ಪಸುಳೆ, ನೀನ್ ಆವಂ, ಹಯಮನ್ ಏನೆಂದು ಕಟ್ಟಿದಯ್ ? ಎನ್ನಾಣೆ, ನಿನ್ನೊಳ್ ಎನಗೆ ಅಕ್ಕರುಂಟು. ನೀಂ ಗೇಯ್ದ ದುರುಡುಂಬಿತನಮಂ ಪೊಲ್ಲದ ಕಜ್ಜಮಂ ಮರೆತೆಂ, ಇದೆ ಕೊಳ್ ನಿನ್ನಂ ಕಾವೆಂ. ನಿಮಗೆ ಇನಿತ್ತು ಬಲ್ಪು ಎಂತು ಉಂಟಾಯ್ತು ? ಬಿಲ್ಲೋಜನ್ ಆವಂ ? ಪುಟ್ಟಿದರೆಲ್ಲಿ ? ಪೇಳ್' ಎಂಬುದುಂ ; ಕುಶಂ 'ಕೇಳ್ ಎಲೆ ರಾಯ, ನಿನ್ನ ಹಯಮಮಂ ಗಿಯನುಂ ನಾಂ ಕಟ್ಟಿದೆನಿಲ್ಲ. ಕಿರಿಯನ್ ಅರಿಯದೆ ಕಟ್ಟಿದ

ನಕ್ಕುಂ. ಮೇಣ್ ಎನ್ನೊಳು ಆವುದು ದುರುದುಂಬಿತನಂ ಬಾರದು. ನಿಮ್ಮವರು ಆತನಂ ಬರಿವೆ ನೋಯಿಸಲೊಡಂ ಎನಗೆ ನಿಮ್ಮೊಳ್ ಮುನಿಸಾಯ್ತು. ಈಗಳ್ ನಿಮ್ಮನ್ ಇದಿರ್ಚುವೊಡಾದೆಂ. ಎಮಗೆ ಅಜ್ಜಂ ಬಿಲ್ಲೋಜಂ, ಕಾಡೊಳೆ ಪುಟ್ಟಿದೆವು. ಅಬ್ಬೆಯ ಪರಕೆ, ಮುತ್ತಯ್ಯನ ಕಾಪು, ಕೆಳೆಯರ ನಲ್ಮೆ, ಪಿರಿಯರ ಒಲ್ಮೆ, ಎಮಗೆ ಈ ವಗೆಯ ಬಲ್ಪನ್ ಒಡರ್ಚಿದತ್ತು' ಎಂದು ಆಡಿದಂ. ಆ ನುಡಿಗೆ ರಾಘವಂ ತಲೆದೂಗಿ 'ಕಿರುಗೂಸುಗಳ್ ನಿಮಗೆ ಎಮಗೆ ಜುದ್ದಮ್ ಅಕ್ಕುಮೆ ? ಬರಿದೆ ಕಾದಿ ಬಳಲದಿರಿಂ. ಕೊಂಡ ಹಯಮಂ ಬಿಟ್ಟು ಸಂತಂ ಪೋಗಿಂ, ಪೋಗಿಮ್' ಎಂದು ಉಸಿರ್ದಿಂ ಬಳಿಯಿಂ, ಕುಶಂ 'ನಿನ್ನ ಈ ಕೊರ್ವಿನ ನುಡಿ ಅಂತಿರ್ಕೆ, ಕಟ್ಟಿದ ಹಯಮಂ ಕೊಟ್ಟು ಬಾಳ್ವ ಮಾತುಂಟೆ ? ಅಬ್ಬೆ ರೋಡಿಸಳೆ? ಅಜ್ಜಂ ಪಳಿಯನೆ? ಕೆಳೆಯರ್ ಏಡಿಸರೆ ? ಎನ್ನ ಚಲಕಂ ತೋಳ್ವಲಕಂ ಕುಂದಾಗದೆ ? ಎನ್ನ ಮೇಣೆನ್ನ ಪೊನ್ನ ಪಿಳುಕಿನ ಕೋಲ ಬಾಲಿಶಮಂ ನೋಡು' ಎಂದು ಜಡಿದು ನುಡಿದು ರಾಘವನ ಒಡಲನ್ ಇಸುಗೆಯಿಂ ತಳಿರ್ತಸುಗೆಯುಂ ಗೆಯ್ವುದುಮ್, ಎನಸುಂ ಕೋಪದಿಂ ಚಾಪಮಂ ತುಡುಕಿ ಸಂದ ಬಾಣಮಂ ಸಂಧಿಸುವುದುಂ ಆ ಬಾಣಂ ಮಾಣದೆ ಎಯ್ದಿ ಗುರಿಗೆಟ್ಟು ಬಂದತ್ತು. ಏನೊಂದು ಅಚ್ಚರಿಯೋ! ಆಹವಮಲ್ಲ ರಾಮಂಗೆ ಇಂದು ಚಿಣ್ಣರಾಟದ ಕೂಟದ ಪಸುಳೆಗಳತ್ತಣಿಂ ಸೋಲಂ ಗಡ! ಲಕ್ಷ್ಮಣನ ಅಸಿ ದಸಿಯಾಯ್ತು ಗಡ! ರಾಮಬಾಣಕ್ಕ ಮಣಿಯರ್ ಗಡ!

ಆ ವೇಳೆಗತ್ತಲ್ ವರುಣಲೋಕಕ್ಕೆ ಪೋದ ವಾಲ್ಮೀಕಿ ಬಾಲಕರಿರವಂ ನಾರದನತ್ತಣಿನರಿದು ಬರುವರುತುಮಿರಲೊಡಂ ಎನಸುಂ ದೂರದೊಳ್ ರಣವಿಕ್ರಮ ಮೂರ್ತಿಗಳಂತೆ ಕೋಡದೆ ಬಾಡದೆ ಸಾಹಸಮಲ್ಲರೊಳ್ ಪೊಣರ್ವ ಕುಶಲವರಂ ಕಂಡು ತಲೆದೂಗಿ ಸನಿಯಂ ಸಾರ್ದು 'ಓ ಓ ಮಾಣ್ ಮಾಣಿಮ್' ಎಂದು ನುಡಿದಂ ತಡೆದುಂ ಮಕ್ಕಳಂ ತಳ್ಕೈಸಿ ರಾಮಲಕ್ಷ್ಮಣರ್ಗೆ ಕಾಣಿಸಿಕೊಂಡಂ.

ಆಗಳ್ ಇರ್ವರುಂ ಮುನಿಗೆ ಮಣಿವುದುಂ ವಾಲ್ಮೀಕಿ ಮುಗುಳ್ನಗೆಯಿಂ ರಾಘವಂಗೆ 'ಓ ಓ, ಇನಿತೊಂದು ಜಗಕೆ ಪೊಸತೆನೆ ತಂದೆ ಮಕ್ಕಳ್ ನಿಮಗೆ ಸಂಗರಂ ಕಡಿದಾಯ್ತೇಂ! ಇಂತುಮ್ ಒಳವೆ ? ಕಾದುವರುಂಟು ದಾಯಿಗರ್, ಪಗೆಗಳ್, ಅಗ್ರಜಾನುಜರ್ ತಂತಮ್ಮೊಳ್, ಇನ್ನೆಬರಂ ಕಂಡೆನಿಲ್ಲಂ, ಕೇಳ್ದೆ

ನಿಲ್ಲ ಈ ತೆರನ ದೊರೆವೆತ್ತ ಕಣಸು. ಅಂತಲ್ಲದೊಂದು ನಿಮಗಮ್ ಏಂ ಜಗದ ಮಾಯದ ಜವನಿಕೆಯು ಬೆಗಡೊ ! ನಿನ್ನ ಬಣ್ಣದ ರೂಪು, ನಿನ್ನ ತಿಣ್ಣದ ಒಲ್ಪು ಸಣ್ಣದ ಪೊಣರ್ಕೆಯೊಳ್ ನಿನ್ನನ್ ಎಚ್ಚರಿಸದೆ ಪೋದುವೆ ? ನೀಂ ನಾಡೊಡೆಯನ್ ಎಂಬ ಒಂದು ಉರ್ಕಿಂ ಸೊರ್ಕಿಂ ಕೈವಿಡಿದ ಮಡದಿಯಂ ಬಗೆಯುದ ನಿನಗೆ ಈ ಬಾಲರ ಕುರುಪು ಎಂತುಟಕ್ಕುಂ' (ಎಂದು) ಸಮನಂತರ ದೊಳ್ (ಸೀತೆಯುಂ) ತನ್ನ ಆಶ್ರಮಕ್ಕೆ ಉಯ್ಯು ಆರಯ್ದುದಂ ಮೊದಲ್ಗೆಯ್ದು ಅಮಳರ್ ಒಗೆವಂ ಬಿಲ್ಗಾರಿಕೆಯ ಬಿನ್ನಣಮುಂ ನಾನಾ ಬಿಜ್ಜೆಯ ಅರಿವಂ ನಿರವಿಸಿ ಮುಗಿಸಿದಂ. ಆಗಳ್ ಆಗಸದತ್ತಣಿಂ 'ಇವರ್ ಈ ಬಾಲಕರ್ ಅಪ್ರತಿಮವೀರರ್, ನಿನಗೆ ಸೀತೆಯೊಳ್ ಪುಟ್ಟಿದರ್ ಇವರನ್ ಒಪ್ಪುಗೊಳ್' ಎಂದು ಮರೆನುಡಿ ಪುಟ್ಟಲ್ ಒಡಂ ಸುರರ್ ಪೂಮಳೆಗರೆದರ್.

ಮತ್ತಂ ರಾಘವಂ ಸಿಗ್ಗಿಂ ಕೆಮ್ಮನಿರ್ಪುದಂ ವಾಲ್ಮೀಕಿ ಮಕ್ಕಳನ್ ಅಡಿಗೆ ಎರಗಿಸಿ 'ಇವರೊಳ್ ಏನು ಅನ್ನೆಯುಂ ? ನಿನ್ನಂ ಮೀರಿದ ತೋರದ ಬಲ್ಪಿನ ಬಾಲರ್ ಎಂಬ ಜಸಂ ಜಗಮ್ ಅರಿಯೆ ಪರ್ಬಿದತ್ತು. ಅಪ್ಪಬರ್ಪ ಜಯ ಪರಾಜಯಂಗಳಂ ನೀನ್ ಅರಿಯದುಂಟೆ ? ನಿನ್ನ ಲೀಲೆಗೆ ಏನೆಂಬೆನೋ !' ಎಂದಂ.

ಆಗಳ್ ಸಂತಸದ ಅಲಿನೀರ್ ಕಾಲ್ಪುರಮ್ ಆಗೆ ನವಿರ್ ನಿಗರಮ್ ಆಗಿ ಗುಡಿಗಟ್ಟೆ ಮಣಿದ ಮಕ್ಕಳನ್ ಇರ್ವರುಮನ್ ಎತ್ತಿ ತೊಡೆಯೊಳ್ ಕುಳ್ಳಿರಿಸಿ ತಳ್ಕೈಸಿ ಮುದ್ದಿಸಿ ಮುಂಡಾಡಿ ಶಿರವನ್ ಆಘ್ರಾಣಿಸಿ ಮುಂಗುರುಳಂ ನೇವರಿಸಿ ಮೈದಡವಿ ತನಯರ ಮೈ ಸೋಂಕಿನ ಒಂದು ಹರವಸದಿಂ ಬಗೆ ಯುರ್ಜಿದ ರಾಘವಂ 'ಎಲೆಲೆ ಬಾಲಕರಿರ, ನಿಮಗೆ ಈ ಜಾಣ್ಮೆಗೆ ಆವುದು ಮೊದಲ್ ಪೇಳಿಮ್' ಎಂಬುದಂ; 'ಎಮಗೆ ಈ ಅಜ್ಜನು ಉಪದೇಶಿಸಿದ ರಾಮಾಯಣಮೆ ಮೊದಲಾಯ್ತು' ಎಂದರ್. ಆಗಳ್ ವಾಲ್ಮೀಕಿ ತಾನ ವಿತಾನವಿನಿಸಂ ಕಲಿಯೆ, ಕೊರಲುಂ ಬೆರಲುಮ್ ಒಂದಾಗಿ ಬೆರೆಯೆ, ಲಯ ಮನ್ ಎಡವದ ತಾಳದ ಮೇಳವದಿಂ ಪತ್ತುಂ ಬಗೆಯ ರಾಗಂಗಳೊಳ್ ಬಾಜಿಪ ಬಾಣಿಯ ಬೀಣೆಯ ಇಂಚರಕೆ ನೆರವಪ್ಪೊಂದು ಭಂಗಿಯಿಂ ಬಾಲಕರಿಂ ರಾಮಾಯಣಮನ್ ಒಪ್ಪಿಸಿದಂ. ಈಗಳ್ ಸರ್ವರುಂ ಪುರಕೆ ಬಿಜಯಂಗೆಯ್ದರ್."

ಇಲ್ಲಿ ಲವಕುಶರು ತಾವು ಯಾರೆಂಬುದನ್ನು ರಾಮಲಕ್ಷ್ಮಣರೊಡನೆ 'ಒಗಟೆ'ನರೂಪದಲ್ಲಿ ಹೇಳಿದ್ದರಿಂದ (ಇಬ್ಬರ ಉತ್ತರವೂ ಒಂದೇ ಆದರೂ ಹೇಳಿರುವ ರೀತಿ ಬೇರೆ ಬೇರೆಯಾಗಿದೆ) ಹೇಳಿದಂತೆಯೂ ಆಯಿತು. ಆದರೆ ತಂದೆ ಮಕ್ಕಳ ಪರಸ್ಪರ ಪರಿಚಯ ಯುದ್ಧಮುಗಿಯುವವರೆಗೆ ಆಗದಂತೆಯೂ ಉಳಿಯಿತು. ತಂದೆ ಮಕ್ಕಳ ಸಮಾಗಮವನ್ನು ಇಷ್ಟು 'ರಸಭರಿತ'ವಾಗಿ ಮಾಡಿದ ಮುದ್ದಣ ಸತಿಪತಿಯರ ಸಮಾಗಮವನ್ನು ಸ್ವಲ್ಪ ಸಪ್ಪೆ ಮಾಡಿದನೆಂದೇ ಹೇಳಬೇಕು :

'ಏಂ ಸೀತೆಯನ್ ಇನ್ನುಂ ಕೂಡಿ ಪೋಗನೆ? ಉಳಿದೆ ಪೋದನೆ ರಾಮಂ?' ಎಂದು ಮನೋರಮೆ ಕೇಳಿದಮೇಲೆ (ಒಂದು ದುಃಖಿತ ಹೆಣ್ಣಿನ ಬಗ್ಗೆ ಇನ್ನೊಂದು ಹೆಣ್ಣು ಹೇಗೆ ಕಾಳಜಿ ವಹಿಸುತ್ತದೆಂಬುದನ್ನು ತೋರಿಸುವುದ ಕ್ಕಾಗಿ ಹೀಗೆ ಮಾಡಿದ್ದಾನೆಂದು ತೋರುತ್ತದೆ), ಮುದ್ದಣ 'ಓ, ಇನ್ನುಮ್ ಉಳಿವನೆ ಸತಿಯಂ, ಈವೊಳ್ತುಂ ತನ್ನರಸಿಯ ಉರುಗಿಲ್ಲದ ನಡೆಗೆ ದೇವರ್ಕಳಂ ಸಾಕ್ಷಿಗೊಟ್ಟು ಆಗಳೆ ತನ್ನ ಅನ್ನೆಯಮಂ ಮನ್ನಿಸೆಂದು ನನ್ನಿವೆಳ್ದು ಸಂತಮಿಟ್ಟು ಸುದತಿ ಸೀತೆಯಂ ಪೊನ್ನ ಸಿಬಿಗೆಯೊಳ್ ಏರಿಸಿ ದೇವರ್ಕಳ್ ಪೊಗಳೆ ತಾನುಂ ತನ್ನವರುಂ ಆಶ್ರಮದ ಮುನಿಗಳ ಒಂದುಗೂಡಿ ಪೋದ.' ಎಂದು ಹೇಳುತ್ತಾನೆ.

ಉಡುಗೊರೆಯ ವಿಷಯಕ್ಕೆ, ಮುದ್ದಣ 'ಕತೆಯನಾಲಿಸಿ ಬಳಿಕ್ಕಮ್ ಈಯೆನ್ ಎಂದೊಡೆ ಬಿಡೆಂ, ನೋಳ್ಪೆಂ' ಎಂದರೆ, ಮನೋರಮೆ 'ಆನುಂ ನೋಳ್ಪೆಂ ಕತೆಯ ಪುರುಳ್ ಎಂತಿರ್ಕುಮ್ ಎಂದು' ಎಂದು ಹೇಳುತ್ತಾಳೆ. ಹೀಗೆ ಸವಾಲೊಡ್ಡಿದ ಮನೋರಮೆಯನ್ನು ಮುಕ್ತಾಯದ ಸಂದರ್ಭದಲ್ಲಿ ಏನೂ ಅರಿಯದವನಂತೆ ಅವಳ ಮಾತಿನಿಂದಲೇ ಕಟ್ಟಿಹಾಕುತ್ತಾನೆ, ಮುದ್ದಣ!

ಮನೋರಮೆ—ಅಂತಪ್ಪೊಡೆ ನೀಂ ಪೇಳ್ವ ನಲ್ಗತೆ ಮುಗಿಯೆ ವಂದುದು.

ಮುದ್ದಣ—ಉಂ! ಎಂತೆಂತೊ ರಗಳೆಯ ಪಾಳ್ಗತೆ ಕಡೆಗಂಡುದು.

ಮನೋರಮೆ—ಚೀ! ಶ್ರೀರಾಮಪುಣ್ಯಚರಿತಮಂ ಪಾಳ್ಗತೆಯೆಂದು ಇಳಿಕೆಯ್ದು ತೆಗೆಳ್ವೆ!

ಮುದ್ದಣ—ಶ್ರೀರಾಮಚರಿತಮನಿಳಿಸಿ ಕುಳಿಸಿ ನುಡಿದೆನಿಲ್ಲಂ. ಪುರುಳಿಲ್ಲದ ಸಲ್ಲದ ಪೊಲ್ಲದೆನ್ನ ಒಱುವಣ್ಣನೆಯ ಬೇಸರಿಕೆಯ ಪಾಳ್ಗಬ್ಬಮಂ ಪೊಳ್ಳೆಂದೆ ನುಡಿದೆಂ.

ಮನೋರಮೆ—(ಸವಿನಯಂ) ತಮ್ಮೊಡವೆಯಂ ತಾಮೆ ಪೊಗಳ್ವರೆ ಬಲ್ಲರ್ ? ಅಲ್ಲದಂದು ನವರಸದ ತನಿರಸಮೊರೆವ ಬಣ್ಣಗಬ್ಬಮಂ ಪೊಳ್ಳೆಂದೊರೆವ ನಿನಗಮೇಂ ನಿರಹಂಕೃತಿಯೊ ನಿನ್ನಾ ಜಾಣ್ಮೆಯೊಳ್.

ಮುದ್ದಣ—ಏನೆನ್ನ ಕಬ್ಬಂ ನಿನಗೆ ಮೆಚ್ಚುಗೆಯಾಯ್ತೆ ?

ಮನೋರಮೆ—ಎನಗೊರ್ವಳ್ಗೆಂದೊಡೇಂ. ನಾಡೊಳೆಲ್ಲರ್ಗಂ.

ಮುದ್ದಣ—(ನಕ್ಕು) ಎನ್ನೊಳೊಂದಭಿಮಾನದಿನಿಂತುಸಿರ್ವೆಯಕ್ಕುಂ

ಮನೋರಮೆ—ನಿನ್ನಾಣೆ ! ತಡೆಯೇಂ ? ಕಮ್ಮಲರ್ ಮಗಮಗಿಸದೇಂ ಪೋಕುಂ !

ಮುದ್ದಣ—ಮುತ್ತಬ್ಬೆಯಾಣೆ !

ಮನೋರಮೆ—ಮುತ್ತಬ್ಬೆಯಾಣೆ ! ಇಸ್ಸಿ! ಪುಸಿಯನೇ ವೊಲ್ತಿಂಗ ವಿಸಿರೆಂ. ಈ ಬಗೆಯ ನುಡಿಗಬ್ಬಂ ಮುಂತಿಲ್ಲ ಪಿಂತಿಲ್ಲಮೆಂದಾಯ್ತು.

ಮುದ್ದಣ—ಎಂತುಂ ನಿನಗೆ ಸೊಗಸಾಯ್ತಲೆ ! ಇದುವೆ ಪರಮಾನಂದಮೆನಗೆ.

ಮನೋರಮೆ—ಬಿನ್ನಣದ ಬಣ್ಣನೆಯ ನುಡಿಯಲ್ತು; ಬಲ್ಸೊಗಸು ಬಲ್ಸೊಗಸು ನೀನೆಂದ ಕತೆ.

ಮುದ್ದಣ—ಅಂತಪ್ಪೊಡೆ ತಾರೆಲೆ ನೀನೆಂದ ಮೆಚ್ಚಿನುಡುಗೊರೆಯಂ.

ಮನೋರಮೆ—(ಕಣ್ಬಗಡುಗೊಂಡರಂತೆ ನಟಿಸಿ) ಇನ್ನೇಂ ಜಾಣನೋ! ನೀನರಿಯದರಂತೆ ಮಿಣ್ಣನಿರ್ದುಮೆನ್ನಿಂದೆನ್ನಂ ಕಟ್ಟಿಸಿದ ದಿಟ್ಟಂ. ನಿನಗೇನೆಂಬೆನೇನೆಂಬೆನೋ ! ನಿನ್ನಾ ಬಣ್ಣವಾತಿಗೆ ಮಾರುವೋದೆಂ ; (ಎಂದು ವಿಚಾರದಿಂ) ಆಯ್ತಾಯ್ತು, ಪೇಳ್ದ ಕತೆಗೆ ಮಂಗಳಮಂ ಮಾಡು ; ಮೆಚ್ಚುಗಿಚ್ಚು ಬಳಿಕ್ಕಮಲ್ತೆ.

ಹಾಗೆಂದ ಮನೋರಮೆ ಕತೆಗೆ ಮಂಗಳವಾಗುತ್ತಿದ್ದಂತೆಯೇ ಎದ್ದು ಹೊರಟುಬಿಡುತ್ತಾಳೆ, ಸತಾಯಿಸುತ್ತಾಳೆ, ಕಡೆಗೂ 'ತಪ್ಪಿಸಿಕೊಂಡೇ ಬಿಡುತ್ತಾಳೆ'

ಮುದ್ದಣ—(ಎಳ್ದು ಪೋಪಳನೀಳ್ದು ಮಾಣಿಸಿ) ಬಲ್ಸೆಡಕಃಗಾರ್ತಿ ಕಣಾ ! ಮುದ್ದಣನುಮಂ ಟಕ್ಕಿಪ ಪೆಂಡಿರೊಳರೆ ? ಕೊಂಕ ನುಡಿಯೊಂದು ನೆವದಿಂ ಬಿಂಕದಿನೆರ್ದೊಡಾಯ್ತೆ ? ಮೆಚ್ಚನಿತ್ತಲ್ಲದೆ ಪೋಪೊಡೇಂ ಬಿಡುವೆನೆ!

ಮನೋರಮೆ—ಕತೆಗೆ ಮಂಗಳಮಂ ಮಾಡದೆ ಬರಿದೆ ಉಡುಗೊರೆ ತುಡುಗೊರೆಯೆಂದೊಡೇಂ ?

ಮುದ್ದಣ....ಕತೆಗೆ ಮಂಗಳಮನಾಗಳೆ ಪೇಳ್ದೆನುಳಿದೆನಿಲ್ಲ. ಈಗ ಳುಳಿದುದೊಂದೆ ನಿನ್ನುಡುಗೊರೆ.

ಮನೋರಮೆ—ಉಡುಗೊರೆಯ ಕಾಟಕ್ಕೆ ಇನ್ನೆತ್ತಪೋಪೆಂ ! ನೀನೇನಂ ಬೇಡುವಯ್ ? (ಹಿಂದೊಮ್ಮೆ ಮುದ್ದಣ 'ನೀನುಡುಗೊರೆಯ ನೀವುದನೇನುಮಂ ಕಾಣೆನುಂತೆ ಪೇಳೆಂದೊಡೆ ಪೇಳ್ವರೆ ?' ಎಂದಾಗ, ಮನೋರಮೆ ಕಿರುನಗೆಯಿಂ 'ಎರೆಯ, ನೀನುಮರೆವರೆಂತಂತು ಬೇಡುವಯ್. ಇಸ್ಸಿ ! ಕಾಡಿ ಬೇಡಿ ಕೊಂಡೊಡೊಂದುಡುಗೊರೆಯೆ ? ಮನವೊಲ್ದೀವೊಡಲ್ತೆ ಮೆಚ್ಚು ?' ಎಂದಿದ್ದಳು. ಆಗ ಮುದ್ದಣ 'ಮೆಚ್ಚಂ ನಚ್ಚಿ ಪಚ್ಚೆವೋದೆಂ. ಆಯ್ತು ನೋಳ್ಪೆಂ' ಎಂದು ಉತ್ತರಿಸಿದ್ದನು. ಈಗ ಪುಸಿಮುನಿಸಿನಿಂದ ಉತ್ತರಿಸುತ್ತಾನೆ :)

ಮುದ್ದಣ—(ಪುಸಿಮುನಿಸಿಂ) ಬೇಡುವೊಡೇಂ ತಿರಿಕನೇ ? ಮನೆಗೆ ಬಂದೆನೆ ? ಮೆಚ್ಚಿತ್ತೊಡದನೆ ಕೈಕೊಳ್ವೆಂ.

ಮನೋರಮೆ—ಆನಂತುಂ ಪರಾಧೀನೆ ಮೇಣೆನಗೊಡಮೆ ಯಾವುದು ? ಏನನೀವೆನೆಂತೀವೆಂ ?

ಮುದ್ದಣ—ಏನೋ, ಎಂತೋ, ಆಂ ಮೆಚ್ಚುವಂತುಂ ಕತೆಯ ಪುರುಳ್ಗೀವಂತುಂ ನಾಲ್ವರ್ ತಲೆದೂಗುವಂತುಂ ಉಡುಗೊರೆಗೆಯ್ದೊಡಾಯ್ತು.

ಮನೋರಮೆ—ಅಂತಪ್ಪೊಡಿಂತಿದು........ನಿನ್ನೀ ಕಬ್ಬಮನೋದುವ ಜಾಣರೇವಗೆಯುಡುಗೊರೆಯನೀಯೆ. ಬರಾವಗೆ ಮೆಚ್ಚನೀವೆಂ.

"ಈ ಸಂಭಾಷಣೆಯ ಮೂಲಕ ಮುದ್ದಣಕವಿ ಜಗತ್ತಿಗೊಂದು ಹಿರಿಯ ಸಂದೇಶವನ್ನು ನೀಡಿದ್ದಾನೆ. ಬಡತನ ಬಂದಾಗ ಮನುಷ್ಯ ಕುಗ್ಗಬೇಕಾದುದಿಲ್ಲ. ಅರಕೆಯಾದ ಸ್ಥಾನಕ್ಕೆ ರಸಿಕತೆ ಹರಿದು ಬಂದರೆ ಅಸಹ್ಯವೂ ಸಹ್ಯವಾಗುತ್ತದೆ. ಅಷ್ಟೇ ಅಲ್ಲ, ಶ್ರೀಮಂತಿಕೆ ನೀಡಲಾರದ ಶಾಂತಿಯನ್ನು ರಸಿಕತೆ ನೀಡಬಲ್ಲದು."[೫] ಎಂಬ ಮಾತುಗಳು ನಿಜ. ಯಾವ ಕೊರತೆಯೂ ಇಲ್ಲದಿದ್ದವರು ರಾಮ ಸೀತೆ. ಅಂತಹದರಲ್ಲಿ ರಾಮ ಸೀತೆಯನ್ನು ತ್ಯಜಿಸಿದ. ಬಡತನದಲ್ಲಿ

ತೊಳಲಾಡುತ್ತಿದ್ದರೂ ಮುದ್ದಣ 'ರನ್ನೆ, ಆನು ಒರ್ಮೆಯುಂ ನಿನ್ನನು ಉಳಿದು ಬಾಳೆಂ. ಅಂತದರಿಂ ಎಮ್ಮೊಳು ಅವಗಂ ಪುದುವಾಳ್ಕೆಯುಂ ದೀರ್ಘಾಯುಮಂ ಶಿವಂ ನೆಲೆಗೆಯ್ಗೆ, ಸ್ವಸ್ತಿ !' ಎಂದು ಪುದುವಾಳ್ಕೆ ಹಾಗೂ ದೀರ್ಘಾಯುಗಳೆರಡನ್ನು ಮಾತ್ರ ಕೇಳಿಕೊಳ್ಳುತ್ತಾನೆ.

ಕೆಲವು ಆರೆಕೊರೆಗಳಿದ್ದರೂ ಕನ್ನಡದ ಶ್ರೀರಾಮಾಶ್ವಮೇಧ ನಿಜಕ್ಕೂ ಒಂದು ಸತ್ಕೃತಿ. ಪಂಪ ರನ್ನರ ಶೈಲಿಯಂತೆ ಸಂಸ್ಕೃತ ಭೂಯಿಷ್ಠವೂ ಆಗಿರದೆ, ಆಂಡಯ್ಯನ ಅಚ್ಚಗನ್ನಡವೂ ಆಗಿರದೆ 'ಸಕ್ಕದಮೊಂದೆ ರನ್ನವಣೆಯಂ ಪೊನ್ನಿಂ ಬಿಗಿದಂತೆಸೆಗುಂ ; ಅದರಿಂ ಕರ್ಮಣಿಸರದೊಳ್ ಜೆಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕಿರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿ ಮೆರೆಯೆ.' ಆಗಿರುವ ತನ್ನದೇ ಆದ ಸುವರ್ಣಮಾಧ್ಯಮದ ಒಂದು ವಿಶಿಷ್ಟ ತಿರುಳ್ಗನ್ನಡದಿಂದ ಕೂಡಿರುವ ಕನ್ನಡದ ಶ್ರೀರಾಮಾಶ್ವಮೇಧ ಕನ್ನಡ ಶಾರದೆಗಾಗಿ ಮುದ್ದಣ ನೇಯ್ದಿರುವ ಒಂದು ಸಾಮಾನ್ಯ ವಸ್ತ್ರವಲ್ಲ, ಒಂದು ಒಳ್ಳೆಯ ರೇಷ್ಮೆ ಸೀರೆ. ಇದರಲ್ಲಿ ಮಧ್ಯೆಮಧ್ಯೆ ಕೆಲವು ನೂಲಿನ ಎಳೆಗಳು ಸೇರಿರುವುದೂ ಉಂಟು. ನಡುನಡುವೆ ಕಿತ್ತುಹೋಗಿರುವ ಒಂದೆರಡು ರೇಷ್ಮೆ ಎಳೆಗಳನ್ನು ಅಲ್ಲಲ್ಲೆ ಗಂಟುಹಾಕಿರುವುದೂ ಉಂಟು. ಆದರೂ ಹಾಸುಹೊಕ್ಕಾಗಿರುವ ಅಸಂಖ್ಯಾಂತ ರೇಷ್ಮೆ ಎಳೆಗಳ ನಡುವೆ ಅವು ಗೌಣವಾಗಿ ರೇಷ್ಮೆ ಸೀರೆಯ ಸೌಂದರ್ಯವೇ ಎದ್ದು ಕಾಣುತ್ತಿದೆ. ಕೃತಿಯ ಆರಂಭದಲ್ಲಿ, ಮಧ್ಯಮಧ್ಯದಲ್ಲಿ, ಮುಕ್ತಾಯದಲ್ಲಿ ಅಳವಡಿಸಿರುವ ಮುದ್ದಣ ಮನೋರಮೆಯರ ಸರಸ ಸಲ್ಲಾಪವೇ ಆ ಸೀರೆಗೆ ಕಲಾಪತ್ತಿನ ಅಂಚೂ, ಬೂಟಾಹೂವು, ಸೆರಗೂ ಆಗಿ ಅದರ ಮೆರಗಿನ ಸೊಬಗಿನ ಕಳೆಯನ್ನು ಇಮ್ಮಡಿಯಾಗುವಂತೆ ಮಾಡಿದೆ.

ಅಡಿ ಟಿಪ್ಪಣಿಗಳು

1 ಕಯ್ಯಾರ ಕಿಞ್ಞಣ್ಣರೈ, 'ಮುದ್ದಣ' ಪು. ೧೯, ಮೊ. ಮು. 1970

2 ಅಲ್ಲೆ, ಪು. ೧೯.

3 ಕುವೆಂಪು, 'ಕಾವ್ಯವಿಹಾರ' ಪು. ೨೫, ಮೂ. ಮು. 1955.

4 ಅಲ್ಲೆ, ಪು. ೨೭.

5 ತ ಸು. ಶಾಮರಾವ್ 'ಚೆನ್ನಿಗ ಕವಿ ಮುದ್ದಣ' ಪು. vi.

ಕಥಾಮುಖ

ಕಾಡೂ ನಾಡೂ ಮನೋಹರವಾಗಲಿಕ್ಕಾಗಿ ಉಂಟಾದ ಮಳೆಗಾಲದ ಒಂದು ದಿವಸ ಸಂಜೆ ಹೊತ್ತಿನಲ್ಲಿ ಎಂದಿನಂತೆ ಓಲಗ ಚದುರಲು, ಕವಿವಲ್ಲಭ ಮುದ್ದಣನು ಅರಮನೆಯಿಂದ ಹೊರಹೊರಟು ಹತ್ತಿರದ ಬೀದಿ ಹಿಡಿದು ಮನೆಗೆ ಬರುವುದನ್ನು ಆತನ ಮಡದಿ ಮನೋರಮೆ ದೂರದಿಂದಲೇ ಕಂಡು ಎದ್ದು ಎದುರುಗೊಂಡು ಕಾಲಿಗೆ ನೀರನ್ನು ನೀಡಿ, ಮತ್ತೆ ಕೈ ಹಿಡಿದು ಮನೆಯೊಳಕ್ಕೆ ಕರೆದುಕೊಂಡು ಹೋಗಿ—ಕುಳಿತುಕೊಳ್ಳಲು ಮಣೆ ನೀಡಿ—ಕುಳ್ಳಿರಿಸಿ, ತಕ್ಷಣವೇ ರುಚಿಯಾದ ಹಣ್ಣುಗಳನ್ನು ತಿನ್ನಲಿಕ್ಕೆ ಕೊಟ್ಟು, ಕೆನೆ ಹಾಲನ್ನು ಕುಡಿಯಲಿಕ್ಕೆ ಕೊಟ್ಟು ಉಪಚರಿಸುತ್ತಿದ್ದಳು. ಈ ಉಪಚಾರದಿಂದ ಆತನ ಹಸಿವೂ ಬಳಲಿಕೆಯೂ ಕೊನೆಗೊಳ್ಳಲು, ಗೆಳತಿ ಮನೋರಮೆ ಸುಗಂಧ ಭರಿತ ತಾಂಬೂಲವನ್ನು ಮಡಿಚಿ ಸವಿಯಲೆಂದು ಆತನಿಗೆ ನೀಡುತ್ತಿದ್ದಳು. ಹೀಗೆಯೆ ಇಬ್ಬರೂ ಸುಖಸಲ್ಲಾಪವನ್ನು ನಡೆಸುತ್ತಿದ್ದರು. ಅದು ಹೇಗೆಂದರೆ,

ಮನೋರಮೆ—(ಮೆಲುನುಡಿಯಿಂದ) ನೋಡು ಈ ಹಗಲುಗಳು ಅದೆಷ್ಟು ಹಿರಿಯವು ! ಹಗಲು ರಾತ್ರಿ ನಿರಂತರ ಸುರಿಯುವ ಜಿನುಗುಮಳೆಯಿಂದಾಗಿ ನನ್ನ ಮನವು ಬೇಸತ್ತಿದೆ. ಅದರಿಂದ ಏನಾದರೊಂದು ಒಳ್ಳೆಯ ಕಥೆಯನ್ನು ಹೇಳು.

ಮುದ್ದಣ—ಪ್ರಾಣೇಶ್ವರೀ, ತಡೆಯೇನು ! ಇಷ್ಟೊಂದು ಬಯಕೆ ತಲೆದೋರಿರುವಾಗ ಅದು ಯಾವ ದೊಡ್ಡ ವಿಷಯ ! ಆದರೆ ಯಾವ ಒಳ್ಳೆಯ ಕಥೆಯನ್ನು ಹೇಳಲಿ ? ಏನು, ಭೋಜಪ್ರಬಂಧವೆ ? ವಿಕ್ರಮ ವಿಜಯವೆ ? ಮಹಾವೀರ ಚರಿತೆಯೆ ?

ಮನೋರಮೆ—ಇಸ್ಸಿ ! ಇವುಗಳಲ್ಲಿ ನನಗೆ ಆಸಕ್ತಿಯಿಲ್ಲ ; ಉಳಿದರೂ ಅಳಿದರೂ ದಾರಿ ತೋರುವ ರಸಭರಿತ ಚರಿತೆಯೇ ಸರಿ.

ಮುದ್ದಣ—ನಿನಗೆ ಯಾವ ರಸವಲ್ಲಿ ಇಷ್ಟ ? ಶೃಂಗಾರರಸದಲ್ಲೇ ? ವೀರ ರಸದಲ್ಲೇ ? ಹಾಸ್ಯರಸದಲ್ಲೇ ?

ಮನೋರಮೆ—ಯಾವ ರಸದಲ್ಲಿ ಎಂದರೇನು ? ನವರಸದಲ್ಲಿ !

ಮುದ್ದಣ—ಹಾಗಾದರೆ ಆ ಕಥೆ ಯಾವುದು ?

ಮನೋರಮೆ—ರಾಮಾಯಣದಲ್ಲಿ ಏನಾದರೂ ಒಂದು.

ಮುದ್ದಣ—ಹಾಗೆಯೇ ಆಗಲಿ. ಸೀತಾಸ್ವಯಂವರವನ್ನು ಹೇಳುವೆನು.

ಮನೋರಮೆ—ನಾನು ಅದನ್ನು ಈ ಮೊದಲೇ ಕೇಳಿರುವೆನಲ್ಲವೆ ?

ಮುದ್ದಣ—ಹಾಗಾದರೇನು ಸೀತಾಪಹರಣ ಕಥೆಯಲ್ಲಿ ಇಷ್ಟವೆ ?

ಮನೋರಮೆ—ಉಃ ! ನಾನು ಅದನ್ನು ಒಲ್ಲೆ.

ಮುದ್ದಣ—ಮತ್ತೆ ಯಾವ ಒಳ್ಳೆಯ ಕಥೆಯನ್ನು ಹೇಳಲಿ ?

ಮನೋರಮೆ—ಹೀಗೇಕೆ ಮಾತನಾಡುತ್ತೀ, ನಾಡಿನಲ್ಲಿ ಎಷ್ಟೋ ರಾಮಾಯಣಗಳಿವೆ. ನೀನು ಕೇಳಿದುದರಲ್ಲಿ ಮೆಚ್ಚಿಕೆಯಾದೊಂದನ್ನು ಕಂಡರಿಸಿ ಹೇಳು.

ಮುದ್ದಣ—ನೀನೆ ಒಂದನ್ನು ಆರಿಸಿಕೊ.

ಮನೋರಮೆ—ಶ್ರೀರಾಮನು ಅಶ್ವಮೇಧವನ್ನು ಕೈಗೊಂಡನು ಎನ್ನುವರಲ್ಲವೇ ; ಆ ಕಥೆಯೇ ಆಗಲಿ.

ಮುದ್ದಣ—ಈಗ ಅರಿತೆನು ; ಶೇಷರಾಮಾಯಣವನ್ನು ಹೇಳೆನ್ನುವೆಯ ?

ಮನೋರಮೆ—ಅಹುದಹುದು, ಆದರೆ ಈ ಮೊದಲು ಅದನ್ನು ಯಾರು ಯಾರಿಗೆ ಹೇಳಿದ್ದರು ?

ಮುದ್ದಣ—ಅದನ್ನು ಈ ಮೊದಲು ಶೇಷನು ವಾತ್ಸ್ಯಾಯನನಿಗೆ ಹೇಳಿದನು. ಅದನ್ನೇ ನಿನಗೆ ವಿಸ್ತರಿಸುತ್ತೇನೆ. ಆದರೆ ಅದು ಬಹು ದೊಡ್ಡ ಕಥೆ, ನೋಡು, ಒಂದೆರಡು ದಿವಸಕ್ಕೆ ಮುಗಿಯದು.

ಮನೋರಮೆ—ಇರಲಿ, ಒಂದೊಂದು ದಿವಸ ಇಷ್ಟಿಷ್ಟು ಹೇಳಿದರೇನು ?

ಮುದ್ದಣ—ಆಗಲಿ, ಯಾವ ಧಾಟಿಯಲ್ಲಿ ಹೇಳಲಿ, ಪದ್ಯದಲ್ಲಿ ಹೇಳಲೊ, ಗದ್ಯದಲ್ಲಿ ಹೇಳಲೊ ?

ಮನೋರಮೆ—ಪದ್ಯ ವಧ್ಯ, ಗದ್ಯ ಹೃದ್ಯ, ಹೃದ್ಯವಾದ ಗದ್ಯದಲ್ಲಿಯೇ ಹೇಳು.

ಮುದ್ದಣ—(ನಸುನಗೆಯಿಂದ) ಅದು ಹಾಗಿರಲಿ, ಇಂತಹ ಒಳ್ಳೆಯ ಕಥೆಯನ್ನು ವಿಸ್ತರಿಸಿದರೆ ಅರಮನೆಯಲ್ಲಿ ರತ್ನದ ಕಡಗವನ್ನೂ ಚಿನ್ನದ ಕಂಠೀಹಾರವನ್ನೂ ಮೆಚ್ಚಿಕೆಯಿಂದ ನೀಡುವರು. ನೀನು ಕೊಡುವುದೇನು ?

ಮನೋರಮೆ—ಬೇರೆಯೇನು ? ನನ್ನನ್ನೇ ನಾನು ಕೊಡುವೆನು.

ಮುದ್ದಣ—ನೀನು ಬಲು ಗಡಸುಗಾರತಿಯಲ್ಲವೆ ! ಈ ಮೊದಲೇ ನಿನ್ನನ್ನು ನಿನ್ನ ತಾಯ್ತಂದೆಯರು ಕೊಟ್ಟಿರುವರೆಂಬುದನ್ನು ನೀನು ತಿಳಿಯೆಯಾ ?

ಮನೋರಮೆ—ಇದೇನು ಮಾತು ! ಹೋಗಲಿ, ನಾನು ಪರಾಧೀನೆ, ನಿಜ, ಪುರಾಣವನ್ನು ಓದಿದ ಮೇಲಲ್ಲವೆ ದಕ್ಷಿಣೆಯನ್ನು ಕೊಡುವುದು ? ಅರಮನೆಯವರೂ ಕಾವ್ಯವನ್ನು ಕಂಡಮೇಲಲ್ಲವೆ ಬಿರುದಿನ ಗುರುತನ್ನು ನೀಡುವುದು ? ನಾನೂ ಸಹ ಕಥೆಯನ್ನು ಕೇಳಿ ಸೊಗಸಾಗಿದ್ದರೆ ನನಗೆ ತಿಳಿದಂತೆ ಸನ್ಮಾನಿಸುತ್ತೇನೆ.

ಮುದ್ದಣ—ಒಳ್ಳೆಯದೊಳ್ಳೆಯದು ! ಕಥೆಯನ್ನು ಆಲಿಸಿದಮೇಲೆ ಕೊಡುವುದಿಲ್ಲವೆಂದರೆ ಬಿಡುವುದಿಲ್ಲ, ನೋಡಿಕೊಳ್ಳುತ್ತೇನೆ.

ಮನೋರಮೆ—ನಾನೂ ನೋಡುತ್ತೇನೆ, ಕಥೆಯು ಹುರುಳು ಹೇಗಿರುವುದೆಂದು !

ಮುದ್ದಣ—ಹಾಗಿದ್ದರೆ ಆಲಿಸು, ಸ್ವಸ್ತಿ ಶ್ರೀಮತ್ ಸುರಾಸುರೇಂದ್ರ ನರೇಂದ್ರ ಮುನೀಂದ್ರ ಫಣೀಂದ್ರ ಮಣಿಮುಕುಟತಟಘಟಿತ

ಮನೋರಮೆ—ಓ ಓ ! ತಡೆ ! ತಡೆ ! ಭೂಮಿಗೆ ಒಡೆಯನಾದ ಶ್ರೀರಾಮಚಂದ್ರನ ಕತೆಯನ್ನು ಹೇಳೆಂದರೆ ಬಸದಿಗೆ ಒಡೆಯರಾದ ಸುರೇಂದ್ರರ ಚರಿತೆಯನ್ನು ಹೇಳುವುದೆ ? ಸಾಕು ಸಾಕು. ಹೀಗೆ ಮನಮುಟ್ಟುವ ಕತೆಗೆ ಹೇಗೆ ಉಡುಗೊರೆಯನ್ನು ನೀಡಲೊ !

ಮುದ್ದಣ—ಒಳ್ಳೆಯ ಮಾತಿದು ರಮಣಿ ! ಕೂದಲಾಣೆಯಾಗಿ ಇದು ಬಸದಿ ಇಂದ್ರರ ಕಥೆಯಲ್ಲ; ಶ್ರೀರಾಮಚಂದ್ರನ ಕಥೆಯೆಂದು ಹೊಗಳುವುದು, ಇದು ಸಂಸ್ಕೃತದ ಒಂದು ಚೆಲುವು.

ಮನೋರಮೆ—ಸರಿ ಸರಿ, ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿದಂತಾಯಿತು; ಕನ್ನಡದ ಸೊಗಸನ್ನೇ ಅರಿಯಲಾರೆನು, ಇನ್ನು ನನಗೆ ಸಂಸ್ಕೃತದ ಸೊಗಸನ್ನು ಹೇಳುವುದೆ ?

ಮುದ್ದಣ—ಹಾಗಾದರೆ ಇನ್ನು ಹೇಗೆ ಹೇಳಲಿ ?

ಮನೋರಮೆ—ತಿರುಳ್ಗನ್ನಡದ ತಿಳಿ ನುಡಿಯಲ್ಲೇ ಹುರುಳೊಂದನ್ನೇ ಹೇಳು. 'ಕನ್ನಡ ಕಸ್ತೂರಿ'ಯಲ್ಲವೆ.

ಮುದ್ದಣ—ಹೌದು ಹೌದು. ಆದರೆ ಸಂಸ್ಕೃತವೂ ಸೇರಿದರೆ ರತ್ನಮಣಿಯನ್ನು ಹೊನ್ನಿನಿಂದ ಬಿಗಿದಂತಾಗುತ್ತದೆ; ಅದರಿಂದ ಕರಿಮಣಿ ಸರದಲ್ಲಿ ಕೆಂಪು ಹವಳವನ್ನು ಪೋಣಿಸಿದಂತಿರಲು, ರಸ ಒಸರುವಂತಿರಲು, ಲಕ್ಷಣ ಮೀರಿರಲು, ಮಧ್ಯಮಧ್ಯದಲ್ಲಿ ಸಂಸ್ಕೃತದ ಮೆಲುನುಡಿ ಮೆರೆದಿರಲು ತಿರುಳ್ಗನ್ನಡದಲ್ಲೇ ಕಥೆಯನ್ನು ಹೇಳುವೆನು.

ಯಜ್ಞೋಪದೇಶ

ಸ್ವರ್ಣಗಿರಿಯ ದಕ್ಷಿಣದಿಕ್ಕಿನಲ್ಲಿ ಭೂಮಿದೇವಿಯ ಸೀಮಂತ ರತ್ನದಂತೆ (ಬಯ್ತಲೆ ಬೊಟ್ಟಿನಂತೆ) ಪ್ರಕಾಶಿಸುವ ಅಯೋಧ್ಯಾನಗರದಲ್ಲಿ ಸೂರ್ಯವಂಶದ ಹಲವು ಅರಸರು ರಾಜ್ಯವಾಳುತ್ತಿದ್ದರು. ಇವರಲ್ಲಿ, ಬಾನಿಗೆ (ಆಕಾಶಕ್ಕೆ) ಭಾನು (ಸೂರ್ಯ) ಹುಟ್ಟಿದಂತೆ, ದಶರಥ ಹುಟ್ಟಿ, ನೀಡಿದೆಹೊದ್ದದ, ವಂಶಧರ್ಮ ಕಳೆಗುಂದದ ಭುಜಬಲವೂ ತನ್ನಲ್ಲೇ ಇರಲು, ವೇದನುಡಿಯನ್ನು ಅನುಸರಿಸಿ ಹಲವು ಕಾಲ ಭೂಮಿಯನ್ನು ಪಾಲಿಸಿದ ಬಳಿಕ ತನ್ನ ಕೀರ್ತಿಯನ್ನುಳಿಸಿ ತಾನು ತೀರಿಕೊಂಡನು. ಆತನಿಗೆ ಸಹಾಯಕವಾದ ನಾಲ್ಕು ಉಪಾಯದಂತೆ, ನಾಲ್ಕು ಪುರುಷಾರ್ಥದಂತೆ ದೇಹಧರಿಸಿ ಹುಟ್ಟಿದ ನಾಲ್ವರು ಕುಮಾರರಲ್ಲಿ ಹಿರಿಯನಾದ ರಾಮನಿಗೆ ಪಟ್ಟಾಭಿಷೇಕವಾಯಿತು. ಶ್ರೀರಾಮಚಂದ್ರನು ಹಾಗೆ ರಾಜ್ಯಭಾರಮಾಡುತ್ತಿರಲು ಒಮ್ಮೆ ದರ್ಶನಾರ್ಥವಾಗಿ ಅಗಸ್ತ್ಯ ಮಹರ್ಷಿಯು ಶಿಷ್ಯನೊಡನೆ ಬರುತ್ತಿರುವುದನ್ನು ಕಟ್ಟೆದುರಲ್ಲಿಯೇ ಕಂಡು

ಪ್ರತಿಹಾರಿಯು (ಬಾಗಿಲು ಕಾಯುವವನು) ಬೇಗನೆ ಎದ್ದು ಬಂದು ಓಲಗದ ಚಾವಡಿಗೆ ಎಷ್ಟೋ ದೂರದಲ್ಲಿ ನಿಂತು ತಲೆಬಾಗಿಸಿ ನೀಡಿದ ಕೈಗಳುಳ್ಳವನಾಗಿ (ಕೈಗಳನ್ನು ನೀಡಿ) ಹೀಗೆ ವಿಜ್ಞಾಪಿಸಿದನು: "ಸ್ವಾಮಿ, ಹೊರ ಬಾಗಿಲಲ್ಲಿ ಮುನಿಯೊಬ್ಬನು ವಟುವಿನೊಡನೆ ಬಂದಿದ್ದಾನೆ. ನಾನೂ, ಅವನೂ ನಿಮ್ಮ ಪಾದಗಳ ಆಜ್ಞೆಯನ್ನು ನಿರೀಕ್ಷಿಸುತ್ತೇವೆ."

ಒಡನೆಯೆ "ತಡೆಯೇನು! ಹೊಗಿಸಬೇಡವೆ?" ಎನ್ನುತ್ತ ಸಾಮಂತ ಮಾನ್ಯರನ್ನು ಕಳುಹಿಸಿ, ಪ್ರೀತಿಯ ತಮ್ಮನಾದ ಲಕ್ಷ್ಮಣನನ್ನೂ 'ತಕ್ಕ ರೀತಿಯಲ್ಲಿ ಕರೆದು ತರುವುದೆಂ'ದು ಕಳುಹಿಸಿದನು.

ಆಗ ಸೌಮಿತ್ರಿ ಮುಂತಾದವರು ಬಂದು ಮುನಿಗೆ ನಮಸ್ಕರಿಸಿ ಕೈ ಹಿಡಿದು ಕರೆದೊಯ್ಯಲು, (ಇವರು) ಬರುವುದನ್ನು (ರಾಮನು) ಕಂಡು ಸಿಂಹಾಸನದಿಂದ ಇಳಿದು ನಾಲ್ಕು ಹೆಜ್ಜೆ ಮುಂದೆ ಹೋಗಿ ಮುನಿಯನ್ನು ಎದುರುಗೊಂಡು ನಮಸ್ಕರಿಸಿ ಭದ್ರಾಸನದಲ್ಲಿ ಕುಳ್ಳಿರಿಸಿ ಅರ್ಘ್ಯಪಾದ್ಯಗಳಿಂದ ಪೂಜಿಸಿ ಮಧುಪರ್ಕ (ಹೊಸದಾಗಿ ಬಂದವರಿಗೆ ಶ್ರಮಪರಿಹಾರ್ಥವಾಗಿ ಕೊಡುವ, ಹಾಲು ಜೇನು ಮುಂತಾದವುಗಳನ್ನು ಸೇರಿಸಿ ಮಾಡಿದ ಪಾನೀಯ) ವನ್ನು ಸಮರ್ಪಿಸಿ ಕುಶಲವನ್ನು ಕೇಳಿ ಉಪಚರಿಸುತ್ತಿದ್ದನು.

ಹಾಗೆ ಅವರಿಬ್ಬರೂ ಸುಖಸಲ್ಲಾಪಗೊಳ್ಳುತ್ತಿದ್ದಾಗ ಅಗಸ್ತ್ಯನು ರಾಮಚಂದ್ರನ ಮುಖವನ್ನು ಸ್ವಲ್ಪ ಹೊತ್ತು ನೋಡಿದ ಬಳಿಕ "ರಾಜನೇ, ನಮ್ಮ ಈ ಮನುಷ್ಯರ ಮನೋವಿಕಾರವನ್ನೂ ಇಂಗಿತವನ್ನೂ ನುಡಿಯಿಂದ, ನಡೆಯಿಂದ, ಕೆಲಸದಿಂದ, ಮುಖದ ಮಾರ್ಪಾಟನಿಂದ ಅರಿಯಲು ಸಾಧ್ಯವೆಂದು ಬಲ್ಲವರ ಎಣಿಕೆ. ಈಗ ಈ (ನಿನ್ನ) ಮುಖದ ಸಿರಿಗೆ ಕಂದೂ, ಮೃದುಮಾತಿಗೆ ಕುಂದೂ ಸ್ವಲ್ಪ ತಲೆದೋರಿದಂತೆ ತೋರುತ್ತದೆ; ನಾನು ತಪ್ಪುತ್ತಿಲ್ಲವಷ್ಟೆ! ಆದರಿಂದ ಹೇಗೊ ಮನಸ್ಸಿನಲ್ಲಿ ಏನಾದರೊಂದು ಬೇಸರವಿದೆಯೆಂದು ಅರಿಯುವೆನು. ಹಾಗೆ ನರರಿಗೆ ಮೊದಲಲ್ಲಿ ಹೀಗೆ ಚಿಂತೆಯುಂಟಾದರೂ ಮರೆಮಾಚಿಸುವುದಕ್ಕೆಂದು ಹೊಸಮಾತಿನ ಬಿನ್ನಾಣವನ್ನೂ, ಹುಸಿನಗೆಯ ಸನ್ನಾಹವನ್ನೂ ತೋರ್ಪಡಿಸುತ್ತ ಅದನ್ನು ಮರೆಯುವುದುಂಟು. ಲೆಪ್ಪದ (ಲೇಪದ) ಬೊಂಬೆಯೂ ಎರಕಹೊಯ್ದು ಒಪ್ಪ ಹಾಕಿದ ಗೊಂಬೆಯೂ ಬೇರೆಯಾಗಿ ತೋರುವುವಲ್ಲವೆ?" (ಎಂದು ಕೇಳಿದನು.)

ರಾಘವನು ಮುನಿಗೆ ಹೀಗೆಂದನು: "ಆಃ ! ನಿಶ್ಚಯವಾಗಿ ಕೆಟ್ಟ ಕಾರ್ಯ ವನ್ನು ಮಾಡಿದೆನಲ್ಲ ! ಲೋಕದಲ್ಲಿ ನನ್ನನ್ನು ದುಷ್ಟನು ಎನ್ನರೆ ? ಬರಿದಾ ಯಿತು ಮುಂದಿನ ಏಳಿಗೆ. ಹೆಣ್ಣಿನ ನೆವದಿಂದ ಪಾತಕದ ಇಷ್ಟೊಂದು ಭಾರ ವನ್ನು ಹೊರುವುದಕ್ಕೆಂದೇ ವಿಧಿ ಮಾಡಿದನೇ ! ಅಯ್ಯೋ ! ಬ್ರಹ್ಮದ್ರೋಹಿ ಯಾದೆನಲ್ಲಾ ! ಹೋ ! ಕೆಟ್ಟ ಕೆಲಸದ ದುಃಖ ಹೀಗೆಯೆ. ಇಂದೀಗ ನಿಂದೆಗೆ ಕಾರಣ, ಸತ್ತ ಮೇಲೆ ನರಕಕ್ಕೆ ಕಾರಣ. ಏನು ಮಾಡಲಿ ! ಮುಂದೇನು ದಾರಿ ? ಯಾವ ಜನ್ಮ, ಯಾವ ಹೋಮ, ಯಾವ ಜಪ, ಯಾವ ತಪ, ಈ ದೋಷ ರಾಶಿಯಿಂದ ಏಳಲು ಆಶಿಸುವ ನನಗೆ ಸಹಾಯಕವಾಗುವುದನ್ನು, ಮುನಿಯೇ ಹೇಳು."

ಹೀಗೆ ಮಾನವರಂತೆ ಉಮ್ಮಳದಿಂದ ಉಬ್ಬಸಪಡುವ ರಾಜಪರಮೇಶ್ವರ ನಿಗೆ ಬೆಳ್ನಗೆಯಿಂದ ವಿಂಧ್ಯದ ಗುರುವಾದ ಅಗಸ್ತ್ಯನು ಸ್ವಾರಸ್ಯದಿಂದ, "ಒಳ್ಳಿಯದೊಳ್ಳಿಯದು ಎಲೆ ಸೀತಾರಮಣ ! ಈ ಕಪಟ ನಟನೆಯನ್ನು ಯಾರಿಗೆ ತೋರಿಸುತ್ತೀಯೆ ! ಬ್ರಹ್ಮಹತ್ಯೆಯಂತೆ ! ದೋಷವಂತೆ ! ಮೊದಲಲ್ಲಿ ಒಮ್ಮಡಿಯಿದ್ದುದನ್ನು ಈಗ ಇಮ್ಮಡಿ ಮಾಡಿದಂತೆ ಮಾತಾಡುತ್ತಿ ! (ಈಗ) ಹೀಗೆ ಇದನ್ನು ಕಂಡು ನೋಯಲು ನಾವು ಭ್ರಾಂತರಲ್ಲ." ಎಂದನು.

ಅದಕ್ಕೆ ಶ್ರೀರಾಘವನು "ಮರೆಮಾಚದೆ ಹೇಳುವುದಾದರೆ ಇದು ಬಲ್ಲವ ರಿಗೆ (ಒಪ್ಪತಕ್ಕ) ಮಾತು, ಮೂಢರು ಹೇಳುವುದಿಲ್ಲವೆ, ಲೋಕದವರು ಆಡರೆ, ಮಡದಿಗೆಂದು ಬ್ರಹ್ಮಘಾತವನ್ನು ಮಾಡಿದನೆಂದು ? ಹೀಗೆ ಇದನ್ನು ಯೋಚಿಸ ಬೇಡವೆ ? (ಎಂದು ಹೇಳಿದನು.)

ಮುನಿಪನು—"ಮೂಢರು ಎನ್ನಲಿ, ಲೋಕದವರು ಆಡಲಿ, ಬರಿಯ ದೂರನ್ನು ತಡೆಯಲು ಯಾವನು ಸಮರ್ಥ ! ಹರನಿಗೂ ಹಾಗಿದ್ದರೆ ಹಳಿದಾರು. ಹೋಗಲಿ ! ಹಾಗೆ ಅವರೊಳಗೂ ಪಾತಕವು ಜ್ಞಾತ ಅಜ್ಞಾತವೆಂದು ಎರಡು ಬಗೆ ಇದೆ. ಜ್ಞಾತವಾದರೆ (ತಿಳಿದೂ ಮಾಡಿದ ಪಾತಕವಾದರೆ) ದೋಷ. ಅಜ್ಞಾತವಾದರೆ (ತಿಳಿಯದೆ ಮಾಡಿದ ಪಾತಕವಾದರೆ) ಏನು? ಚಿಕ್ಕದರಿಂದ ಏನಾದರೊಂದು ಪ್ರಾಯಶ್ಚಿತ್ತ" ಎಂದನು.

ಮತ್ತೆ ರಘುಪುಂಗವನು "ಹೀಗೆ ಇದು ಸರಿಯಲ್ಲ. ಬೆಂಕಿಯನ್ನು ಅರಿ ತಾದರೂ, ಅರಿಯದಾದರೂ ಮುಟ್ಟಿದರೆ ಸುಡದೆ ! ಇದರಿಂದ ನನ್ನಿಂದ

ಅರಿಯದೆ ಆದ ಕೆಟ್ಟ ಕೆಲಸಕ್ಕೆ ಅಂತಹದೊಂದು ಪರಿಹಾರವನ್ನು ತೋರಿ ನನ್ನನ್ನೂ ಲೋಕದ ಜನರನ್ನೂ ಉದ್ಧರಿಸಬೇಕು" ಎಂದು (ಆತನ) ಕಾಲಿಗೆ ನಮಸ್ಕರಿಸಿದ.

ಹೀಗೆ ನಮಸ್ಕರಿಸಿದ ರಘುಪುಂಗವನನ್ನು ಮುನಿಪುಂಗವನು ಪ್ರೀತಿಯಿಂದ ಎತ್ತಿ ಆಲಂಗಿಸಿ—"ಇಷ್ಟೊಂದು ಉದ್ವೇಗವುಂಟಾಗಿದ್ದರೆ ತೊಡಕೇನು ? ಹುಡುಕಲುಂಟೆ ! ಕೈಕೊಳ್ಳುವುದು ಅಶ್ವಮೇಧವನ್ನು. ನಿನ್ನ ಹಿರಿಯರು ಹೀಗೆ ಯಜ್ಞಮಾಡಿ ಶ್ವೇತಕೀರ್ತಿಯಿಂದ ದಿಗಂಗನೆಯರಿಗೆ ಅಲಂಕಾರ ಮಾಡಿಯೂ ಅಮರ ಸ್ತ್ರೀಯರನ್ನು ತೊತ್ತುಗೊಂಡರು. ಹೀಗೆ ಈ ಯಜ್ಞದಿಂದ ಪಂಚಪಾತಕಗಳೂ ಒಮ್ಮೊದಲಲ್ಲಿಯೇ (ಒಮ್ಮೆಲೆ) ನಾಶವಾಗುತ್ತವೆ; ಕ್ಷಾಮ ಡಾಮರಗಳೂ ಬೇರು ಕಡಿದು ಹಾಳಾಗಿಹೋಗುತ್ತವೆ. ಪಟ್ಟಣದಲ್ಲಿಯೂ ನಿನ್ನ ಬಗೆಯ ಸಂದೇಹವೂ ಹಿಮ್ಮೆಟ್ಟುತ್ತದೆ. ಲೋಕ ಜನರಿಗೆ ಕಲ್ಯಾಣವಾಗುತ್ತದೆ; ಅದರಿಂದ ಇದೇ ನಿನ್ನ ಇಷ್ಟಾರ್ಥವನ್ನು ನೆರವೇರಿಸುತ್ತದೆ" ಎಂದು ಬೋಧಿಸಿದನು.

ಆಗ ರಾಘವನು—"ಆಗಲಿ, ನಾನೂ ಮುಕ್ತ ಮನಸ್ಸಿನಿಂದ ಒಪ್ಪುವೆನು. ಆದರೆ ಯಜ್ಞಕ್ಕೆ ಹೇಳಿದ ಕುದುರೆಯ ಲಕ್ಷಣ ಯಾವುದು ? ವಿಧಿ ಹೇಗಿದೆಯೊ ? ಮತ್ತು ನಮ್ಮಂಥವರಿಗೆ ಸಾಧ್ಯವೊ ? ಇವುಗಳಲ್ಲಿ ಮನಸ್ಸು ಯೋಚಿಸುತ್ತಿದೆ" ಎಂದನು.

ಮುನಿಯು—"ನಿಮಗಲ್ಲದೆ ಬೇರೆ ಯಾರಿಗೆ ಸಾಧ್ಯ ? ನೆರೆರಾಜರ ನೆರವು, ಪ್ರತಿಬಲದ ಬಲ, ಗುರು ಹಿರಿಯರ ಒಲುಮೆ, ಐಶ್ವರ್ಯದ ಹೆಮ್ಮೆ, ಬಂಧುಗಳ ನಲ್ಮೆ, ಬೇರೆ ಯಾರಿಗುಂಟು ? ಇವುಗಳಲ್ಲಿ ಶಂಕೆ ಬೇಡ, ಕುದುರೆಯಲ್ಲೇನು ? ಮೈಯಲ್ಲಿ ಬಿಳುಪು, ಮುಖದಲ್ಲಿ ಕೆಂಪು, ಕಿವಿಯಲ್ಲಿ ಕಪ್ಪು, ಬಾಲದಲ್ಲಿ ಹೊಂಬಣ್ಣವಿದ್ದರೆ ದೇವೇಂದ್ರನ ಕುದುರೆಯೊಂದನ್ನು ಹೋಲುವುದಷ್ಟೆ ; ನಿನಗೇನು ದೊಡ್ಡದಯ್ಯ ? ವಿಧಿ ಇಂತಿದೆ: ಬೇಸಿಗೆಯ ಹುಣ್ಣಿಮೆಯಲ್ಲಿ ಅಂತಹ ಕುದುರೆಯನ್ನು ಅರ್ಚಿಸಿ ಹಣೆಯಲ್ಲಿ ವಂಶಬಿರುದನ್ನೂ ನಿನ್ನ ಅಗ್ಗಳಿಕೆಯನ್ನೂ ಬರೆದ ಓಲೆಯನ್ನು ಬಿಗಿದು ನಾಡಿನಲ್ಲಿ ಒಂದು ಕಾಲ(ಒಂದು ವರ್ಷಕಾಲ) ಯಥೇಷ್ಟವಾಗಿ ತಿರುಗಾಡಲು ಬಿಡುವುದು ; ಹೇಗ್ಹೇಗೆ ಕುದುರೆಯ ದಾರಿಯೊ ಹಾಗ್ಹಾಗೆ ಹಿಂಬಾಲಿಸಬೇಕು ರಕ್ಷಣೆಯ ಭಟರು ; ಬಲವುಳ್ಳವರು

ಕಟ್ಟಿದರೆ ಯುದ್ಧದಲ್ಲಿ ಪ್ರತಿಭಟಿಸುವುದು, ಸೋತು ಕಪ್ಪವನ್ನಿತ್ತರೆ ಕೈಕೊಳ್ಳುವುದು, ಕಾವಲಿನವರಿಗೆ ಸೇರುವುದು (ಅವರನ್ನು ಕಾವಲಿನವರ ಜೊತೆಗೆ ಸೇರಿಸಿಕೊಳ್ಳುವುದು) ; ಎಲ್ಲಿಯವರೆಗೆ ಅಶ್ವವು ಭೂಮಿಯಲ್ಲಿ ಸಂಚರಿಸುವುದೋ ಅಲ್ಲಿಯವರೆಗೆ ಯಜಮಾನನು ಮೃಗಶೃಂಗಧರ (ಜಿಂಕೆಯಕೊಂಬನ್ನು ಧರಿಸಿದವ)ನಾಗಿ, ಬೆಣ್ಣೆ ಲೇಪಿಸಿದ ದೇಹವುಳ್ಳವನಾಗಿ ಬ್ರಹ್ಮಚರ್ಯವ್ರತವನ್ನು ಸ್ವೀಕರಿಸಿ, ಕಷ್ಟಪಡುವ ದೀನ, ಕುರುಡ, ಕಿವುಡರನ್ನು ದಾನಧರ್ಮಗಳಿಂದ ಪಾಲಿಸುತ್ತ, ಬ್ರಾಹ್ಮಣರನ್ನು ಭೋಜನದಿಂದ ಸಂತುಷ್ಟಿಗೊಳಿಸುತ್ತ, ಕಾಣುವುದಕ್ಕೆಂದು ಬರುವ ಪುರದ ಮಾನ್ಯರನ್ನು ಮನ್ನಿಸುತ್ತ, ಮುತ್ತೈದೆಯರನ್ನು ಚೆನ್ನಾಗಿ ಪೂಜಿಸುತ್ತ ಕಾಲವನ್ನು ಕಳೆಯಬೇಕು ; ಕಡೆಯಲ್ಲಿ ವಿಧಿವತ್ತಾಗಿ ಯಜ್ಞಪರಿಸಮಾಪ್ತಿಯನ್ನು ಮಾಡಿ ವ್ರತವನ್ನು ವಿಸರ್ಜಿಸುವುದಷ್ಟೆ. ಹೀಗೆ ಈ ಯಜ್ಞವನ್ನು ಮಾಡಿ ಲೋಕವನ್ನು ರಕ್ಷಿಸು ; ಮತ್ತು ನಿನಗೆ ಸರ್ವಮಂಗಳವಾಗಲಿ" ಎಂದನು.

ಗರ್ಭಧಾರಣ

ಸ್ತ್ರೀರತ್ನವೇ ಕೇಳು ! ಈ ಉಪದೇಶವು ರಾಮನಿಗೂ ಒಪ್ಪಿಗೆಯಾಯಿತು ; ವಸಿಷ್ಠನಿಗೂ ಸರಿಯೆನಿಸಿತು ; ಸೋದರರ ಮನಸ್ಸಿಗೂ ಸೇರಿತು. ಒಡನೆಯೆ ಸರಯೂ ನದಿ ತೀರದಲ್ಲಿ ಮುನಿ ತೋರಿದ ಸ್ಥಳವನ್ನು ಆಯ್ದು ಪುರೋಹಿತರ ಅನುಮತಿಯಿಂದ ನಾಲ್ಕು ಗಾವುದದ ಅಳತೆಯಲ್ಲಿ ಯಾಗಶಾಲೆಯನ್ನು ಏರ್ಪಡಿಸಿ ಯಜ್ಞಭೂಮಿಯನ್ನು ನಿರ್ಧರಿಸಿ, ಚಪ್ಪರ ಹಾಕಿ ಉಗ್ರಾಣವನ್ನು ನಿರ್ಮಿಸಿ, ವೇದಿಕೆಯನ್ನು ನಿರ್ಮಿಸಿ, ತಕ್ಕ ಸ್ಥಳದಲ್ಲಿ ಕೊಂಡವನ್ನು ಮಾಡಿಸಿ ಯಾಗಗಳನ್ನು (ಯಜ್ಞಸಾಮಗ್ರಿಗಳನ್ನು) ಸಂಗ್ರಹಿಸುತ್ತಿದ್ದರು.

ಆಗಲೆ ವಸಿಷ್ಠಶಿಷ್ಯರು ಹೋಗಿ ಮುನಿಸಮೂಹವನ್ನು ಕರೆಯಲು, ಶ್ರೀರಾಮಚಂದ್ರದರ್ಶನದ ಲಾಲಸೆವುಳ್ಳವರು ನಾರದ ಪರ್ವತ ಕಪಿಲ ಯಾಜ್ಞವಲ್ಕ್ಯ ಸಂವರ್ತ ಮುಂತಾದ ಋಷಿಗಳು ತಮ್ಮ ಆಶ್ರಮಗಳಿಂದ ಹೊರಟು ತಡಮಾಡದೆ ಕೋಸಲೆಗೆ ಬಂದು ಶ್ರೀರಾಮಚಂದ್ರನಿಗೆ ಕಾಣಿಸಿಕೊಂಡರು.

ಹೀಗೆ ದಯಮಾಡಿಸಿದ ಮುನಿವರ್ಗವನ್ನು ಅರ್ಘ್ಯಪಾದ್ಯ ಆಸನ ಮುಂತಾದ ಉಪಚಾರಗಳಿಂದ ಮನ್ನಿಸಿ ತಪೋವೃದ್ಧಿಯನ್ನು ಕೇಳಿ ಗೋದಾನ ಮುಂತಾದ ದಾನಗಳಿಂದ ಸತ್ಕರಿಸಿದನು ; ಬಳಿಕ ಹರ್ಷಚಿತ್ತರಾದ ಆ ತಪಸ್ವಿಗಳೂ ವರ್ಣಾಶ್ರಮ ಧರ್ಮಗಳನ್ನು ರಾಘವನಿಗೆ ನಿರೂಪಿಸುತ್ತಿದ್ದರು. ಆ ಪ್ರಸ್ತಾವದಲ್ಲಿ—ವಸಂತನಿಗೆ ನಡುಯವ್ವನವು ಬಂದಂತೆ ಕಾಣುತ್ತಿರಲು, ವಸಿಷ್ಠನು ರಾಘವನಿಗೆ—"ಇದೀಗ ಸಮಯವು ಯಜ್ಞಾಶ್ವವನ್ನು ಪೂಜಿಸುವುದಕ್ಕೆ, ದಿಗ್ದೇಶಗಳಿಂದ ಕಪ್ಪಕಾಣಕೆಗಳನ್ನು ತರುವುದಕ್ಕೆ, ನೆರೆದಿರುವ ಬ್ರಾಹ್ಮಣಸಮೂಹವನ್ನು ದಾನಗಳಿಂದ ಸನ್ಮಾನಿಸುವುದಕ್ಕೆ ; ಆದರಿಂದ ನೀನು ಹೊನ್ನಿನ ಸೀತೆಯೊಡನೆ ವ್ರತವನ್ನು ಸ್ವೀಕರಿಸುವುದು" ಎಂದು ಎಚ್ಚರಿಸಿದನು.

ಮನೋರಮೆ—ರಮಣ ! ಇದೇನು ಹೊನ್ನಿನ ಸೀತೆಯೆನ್ನುವೆ ? ರತ್ನದ (ನಿಜವಾದ) ಸೀತೆ ಎತ್ತ ಹೋದಳು ? ಜನಕನಾದ (ತಂದೆಯಾದ) ಜನಕನು (ಜನಕಮಹಾರಾಜನು) ಕರೆದು ಒಯ್ದಿದ್ದನೇ ? ಹಾಗಿದ್ದರೂ ಮರಳಿ ಕರೆಸಿಕೊಳ್ಳುವುದಲ್ಲವೆ, ವ್ರತಕ್ಕೆ.

ಮುದ್ದಣ—ಓ! ಮರೆತೆನು ಈ ಸ್ಥಿತಿಯನ್ನು ಹೇಳುವುದಕ್ಕೆ. ಸಂದೇಹವು ಸಹಜ. ಕೇಳು ! ರಾಘವನು ರಾವಣ ಕುಂಭಕರ್ಣಾದ್ಯರನ್ನು ಮರುಹುಟ್ಟನಿಂದ (ಪುನರ್ಜನ್ಮದಿಂದ) ಬರುವುದು ಎಂದು ಕಳುಹಿಸಿ ದೇವತೆಗಳ ಬಂಧನವನ್ನು ಬಿಡಿಸಿ ಲಂಕಾಧಿಪತ್ಯವನ್ನು ವಿಭೀಷಣನಿಗೊಪ್ಪಿಸಿ ತಾನು ಸೀತಾಸಮೇತನಾಗಿ ಅಯೋಧ್ಯೆಯಲ್ಲಿ ರಾಜ್ಯವಾಳುತ್ತಿದ್ದನೆಂಬುದನ್ನು ಆಗಲೇ ಕೇಳಿದ್ದಿಯಲ್ಲವೆ ! ಹೀಗೆ ಸಾವಿರಕಾಲ ಕಳೆದರೂ ಇವರಲ್ಲಿ ಸಂತಾನವು ಹುಟ್ಟಲ್ಲ. ಎಷ್ಟು ಐಶ್ವರ್ಯವಿದ್ದರೂ ಮಕ್ಕಳಿಲ್ಲದವನ ಬಾಳುವೆಯದೊಂದು ಬಾಳುವೆಯೆ ! ದೊಡ್ಡಮರದಂತಿದ್ದರೆ ಅದೊಂದು ಇರವೆ ! ಇವರಲ್ಲಿಯೂ ಪುರುಷರಿಗಿಂತ ಸ್ತ್ರೀಯರಿಗೆ ಅಧಿಕವು ಈ ದುಗುಡ. ದಿನನಿತ್ಯದ ಊಳಿಗಗಳು (ಕೆಲಸಗಳು) ಅದನ್ನು ಮರೆಸುವ ಸಂದರ್ಭವಿದ್ದರೂ ನೆರೆಹೊರೆಯ ಹೆಂಗಸರ ಸುಖಗೋಷ್ಠಿಗಳಲ್ಲಿ ನಾರಿಯರಲ್ಲಿ ಅದು(ಮತ್ತೆ) ಆರಂಭವಾಗುತ್ತದೆ.

ಸೀತೆಯು ಒಮ್ಮೆ ಅಂತಃಪುರದ ಉಪ್ಪರಿಗೆಯ ಮೊಗಸಾಲೆಯಲ್ಲಿ ತೂಗುಮಂಚವನ್ನೇರಿ ಸಂತೋಷದಿಂದ ಕುಳಿತು ತಾನೂ, ಮೆಚ್ಚಿನ ಗೆಳತಿ ಚಂದ್ರಮತಿಯೂ ಸಲ್ಲಾಪ ನಡೆಸುತ್ತಿರುವಾಗ, ಕಟ್ಟೆದುರಿನಲ್ಲಿಯೇ ಒಂದು

ಹೆಣ್ಣು ಗುಬ್ಬಿ ಗೂಡಿನಲ್ಲಿದ್ದು ಚಿಕ್ಕ ಮರಿಗೆ ಗುಟುಕಿತ್ತು, ಅದನ್ನು ರೆಕ್ಕೆಯಲ್ಲಿ ಹುದುಗಿಸಿಕೊಂಡು ಕೊಕ್ಕಿನಿಂದ ಅದರ ಮೃದುಗರಿಯನ್ನು ಮೆಚ್ಚಿ ಮೇಲೆತ್ತಿ ಲಲ್ಲೆಗರೆಯುವುದನ್ನು ನೆಟ್ಟದೃಷ್ಟಿಯಿಂದ ಚೆನ್ನಾಗಿ ನೋಡಿ, ಮಕ್ಕಳ ಬಯಕೆಯಿಂದ ಜಾನಕಿ ಸಖಿಗೆ ಹೀಗೆಂದಳು :—"ಮಿತ್ರೆ, ನೋಡೆ ! ನೋಡೆ ! ವಿಶೇಷ (ಚಿಕ್ಕ) ಗೂಡಿನ ಪಕ್ಷಿಯೂ ನನ್ನನ್ನು ಬಂಜೆಯೆನ್ನುತ್ತ ಚೇಡಿಸುವಂತೆ ನನ್ನ ಎದುರಿನಲ್ಲಿ ಮರಿಯನ್ನು ಮುದ್ದು ಮಾಡುತ್ತದೆ. ಹೀಗಿರಲು ಇನ್ನು ಒಲ್ಲೆನು ಈ ಸ್ಥಳವನ್ನು. ಎಲ್ಲಿಯಾದರೂ ಬೇರೊಂದೆಡೆಗೆ ಹೋಗೋಣ. ಬೇಸರಿಸುವೆನು ಈ ನೋಟಕ್ಕೆ. ಓ ! ಈ ಪಕ್ಷಿಯೊಂದನ್ನೇ ದ್ವೇಷಿಸುವುದೇತಕ್ಕೋ, ಕಾರಣವಿಲ್ಲವೆ ! ನನ್ನಂಥವರಿಗೆ ಲೋಕವೇ ಹಗೆ; ಹಲವು ಮಾತಿನಿಂದ ಏನಾಗುತ್ತದೆ ? ನಿಶ್ಚಯವಾಗಿ ಮಕ್ಕಳನ್ನು ಪಡೆದು ಪ್ರೀತಿಸುವುದಕ್ಕೆ ನಾನು ಪುಣ್ಯ (ವ್ರತ)ಮಾಡಿಲ್ಲ. ಎಳೆವಯಸ್ಸಿನಲ್ಲಿ ಮೆಚ್ಚಿನ ಕೂಸನ್ನ ಹೆತ್ತು ಬಾಲಕೇಳಿಯನ್ನು ಕಣ್ಣು ತಣಿ(ದಣಿ)ಯುವಷ್ಟು ಕಂಡು, 'ಸಂಸಾರದ ಸಾರವಿದು' ಎನ್ನುತ್ತ ಸಂತೋಷವನ್ನು ಪಡುವ ಹೆಣ್ಣುಗಳೆ ಧನ್ಯೆಯರಲ್ಲವೆ ! 'ಬಂದಳು ಇವಳು, ಇವಳು ಬಂಜೆ! ಕಂದನನ್ನು ಎತ್ತಿಕೊಳ್ಳುವುದಕ್ಕೆ ಬಿಡಬೇಡ ! ಬಡವಾಗುತ್ತಾನೆ ! ಮುಟ್ಟಲೂ ಬಿಡದಿರು ! ಕಂದಿ ಬಸವಳಿಯುತ್ತಾನೆ; ನೋಡಲೂ ಬಿಡದಿರು ! ಕಣ್ಣು ಕೊಂಕುತ್ತದೆ; ಮಾತನಾಡಿಸಲೂ ಅವಕಾಶಕೊಡದಿರು ! ಮಾತು ತಡವರಿಸುತ್ತದೆ' ಎಂಬ ನಾಡಿನ ಹೆಣ್ಣುಗಳ ಬಿರುನುಡಿಯನ್ನು ತಡೆದೂ (ತಡೆದುಕೊಂಡೂ) ಬಾಳುವ ಬಂಜೆಯರೆ ಜೀವನ್ಮೃತೆಯರೇ (ಜೀವದಿಂದಿದ್ದೂ ಸತ್ತವರೇ ದಿಟ) ಸಖಿಯೇ ! ಮರೆಮಾಚದೆ ಹೇಳು; ಕುಲವನ್ನು ವರ್ಧಿಸುವ ಕಂದನನ್ನು ಪಡೆದು (ಹಾಲು) ತುಂಬಿದ ಮೊಲೆಯನ್ನು ಊಡಿ ತೊಟ್ಟಿಲಲ್ಲಿಟ್ಟು ಹಾಡಿ ತೂಗಿ ಕೂಸು ನಿದ್ದೆಹೋದ ಮೇಲೆ ತಾನು ಅರೆಗಳಿಗೆ ಪಕ್ಕದಲ್ಲಿ ಕುಳಿತು ಬಾಲಲೀಲೆಯನ್ನು ನೆನೆನೆನೆದು ಮತ್ತೆ ಕುವರನು ಎಚ್ಚತ್ತಾಗ ಹಿಡಿದೆತ್ತಿ ಮುಂಡಾಡಿ ಮುದ್ದಿಸಿ ತೊದಲು ನುಡಿಯಲ್ಲಿ ಮಾತನಾಡಿಸಿ ಕಿರುನಗೆಯಲ್ಲಿ ನಗಿಸಿ ಹೊಸ ವಿನೋದದಿಂದ ಆಡಿಸಿ ಮನಸ್ಸಿನ ಬೇಸರವನ್ನು ಕಳೆಯುವ ಒಂದು ಪುಣ್ಯವು ನನ್ನಲ್ಲಿ ಎಂದಿಗಾಗುವುದೋ ! ಅದಲ್ಲದೆ, 'ಅಮ್ಮಾ ! ಹಿಡಿ ನಡೆಯುವೆನು' ಎನ್ನುತ್ತ ಎರಡು ಮೂರು ಹೆಜ್ಜೆಯಿಡುತ್ತ ಹಿಗ್ಗಿ ತಾಯಿಯ ನೀಳತೋಳನ್ನು ಒರಗಿ ಮೆಲ್ಲನೆ

ಒತ್ತಿನಲ್ಲೇ ತೊಡೆಯನ್ನೇರಿ ನುಣುಪಿನ ಗಲ್ಲವನ್ನು ಹಿಡಿದು ಅಲುಗಿಸಿ 'ಈಗ ನಡೆಯುವುದನ್ನು ಕಲಿತೆನು' ಎನ್ನುತ್ತ ಕೇಳುವ ಕಂದನು ಎಂದಿಗೆ ಹುಟ್ಟು ವನೋ! ಆಡುತ್ತಾ, ಡುತ್ತ ನೆಪವಿಲ್ಲದೆ ನಗುತ್ತ ಬಂದು, ತಾಯ್ತಂದೆಯರು ಮುಂದಿರಲು ಬೆನ್ನನ್ನು ಸೇರಿ ತಂದೆಯ ಕಣ್ಣುಗಳನ್ನು ಚಿಕ್ಕ ಕೈಗಳಿಂದ ಮುಚ್ಚುತ್ತ 'ನಾನು ಯಾರೆ'ಂದು ಕೇಳುವ, ಮಾತೆಯ ಹೊದಿಕೆಯ ಸೆರಗಿನಲ್ಲಿ ತಲೆಯನ್ನು ಮುಚ್ಚಿಟ್ಟುಕೊಂಡು 'ನಾನು ಗುಮ್ಮ,' ನಂಗುವೆನು, ಇಲ್ಲದಿದ್ದರೆ ರುಚಿಹಣ್ಣನ್ನು ಕೊಡಿ ನನಗೆ' ಎನ್ನುತ್ತ ಕಾಡುವ, ಬೇರೊಮ್ಮೆ ತಂದೆಯ ಹಿಂಭಾಗದಲ್ಲಡಗಿ ತಾನು ಎಲ್ಲಿರುವೆನೆಂದು ಅಮ್ಮನನ್ನು ಕೇಳುವ, ಮತ್ತೆ ದೊಮ್ಮೆ ಕನ್ನಡಿಯನ್ನು ಲೀಲೆಯಿಂದ ದೃಷ್ಟಿಸಿ ಪ್ರತಿಬಿಂಬಿಸುವ ಮುದ್ದು ಮುಖವನ್ನು ಮತ್ತೊಂದು ಕೂಸೆಂದು ಭಾವಿಸಿ ಅದನ್ನು ತನಗೆ ತಂದು ಕೊಡೆಂದು ಛಲದಿಂದ ಮರುಗುವ, ಮತ್ತೊಮ್ಮೆ, ತಾಯಿ ಹೊಡೆದಳೆಂದು ತಂದೆಗೆ ತೋರಿಸುವ, ತಂದೆ ಅಬ್ಬರಿಸಲು ತಾಯಲ್ಲಿ ದೂರುವ, ನಿಷ್ಕಾರಣವಾಗಿ ಹರಟುವ, ಹರಟಿದಮೇಲೆ ಬಳಲುವ, ಬಳಲಿ ಮರುಗುವ, ಮರುಗಿ ಬಂದು ಅಮ್ಮನ ಕಾಲನ್ನು ಬಿಗಿಯಾಗಿ ಹಿಡಿಯುವ, ಬಿಗಿ ಹಿಡಿದು ಬೆಣ್ಣೆಯನ್ನು ಕೊಡೆಂದು ಸೆರಗಿನ ತುದಿಯನ್ನು ಎಳೆಯುವ, ಹೀಗೆ ತನುಮನವನ್ನು ಅಪ್ಪಿ ಕೊಳ್ಳುವ ದಿವ್ಯ ಸುಂದರ ಶರೀರದ ಕುಮಾರನು ನನಗೆ ಆಗುವುದು ಎಂದಿಗೋ ಸಖಿ.

ದೇವಿಯರ ಇಷ್ಟೊಂದು (ದು)ಸ್ಥಿತಿಯನ್ನು ನೋಡಿ ಒಡನೆಯೇ ದೂತಿಯೊಬ್ಬಳು ಹೊರಟು ತಳಮಳಗೊಂಡು, ಓಲಗ ಚದುರಲು, ಸಚಿವ ರೊಡನೆ ಮಂತ್ರಾಲೋಚಿಸುವ ರಾಜನ ಹತ್ತಿರಕ್ಕೆ ಬಂದು—'ಜೀಯ! ಏನೆಂದು ಅರಿಯೆನು ಅಕ್ಕನು ಇಂದು ಕಟ್ಟುದ್ವೇಗದಲ್ಲಿದ್ದಳು; ನನ್ನಲ್ಲಿ ಹೇಳ ಲಿಲ್ಲ. ನೇರವಾಗಿ ಮಲಗುವ ಮನೆಗೆ ಹೋಗಲು, ಚಂದ್ರಮತಿ ತಾನೂ ಬಲು ದುಗುಡದಿಂದ ಹಿಂಬಾಲಿಸಿ ಹೋದಳು. ದೇವರೆ ದೇವಿಯರ ಸ್ಥಿತಿಯನ್ನು ಅರಿಯಬೇಕು' ಎಂದು ವಿಜ್ಞಾಪಿಸಿಕೊಳ್ಳಲು; ಶ್ರೀರಾಮಚಂದ್ರಮನು ಬೇಗನೆ ಎದ್ದು ದಿಗ್ಭ್ರಮೆಯಿಂದ ಕಣ್ಗೆಟ್ಟು ಚಿಂತಾಪರವಶತೆಯಿಂದ ನಡೆಯುವ ಕಂಬವೇ ಬರುವುದೆನ್ನುವಂತೆ ಬಂದು ಅಂತಃಪುರವನ್ನು ಹೊಕ್ಕು ರಾಣಿಯ ಹತ್ತಿರಕ್ಕೆ ಬಂದು ಎದುರುಗೊಳ್ಳಲು ಏಳುವಳನ್ನು ತಡೆದು ತಾನು ಅರ್ಧ

ಆಸನದಲ್ಲಿಯೇ ಕುಳಿತು ಹೀಗೆ ಕೇಳಿದನು: "ಚಂದ್ರಮುಖಿಯೇ, ಇಂದು ಈ ಸಿರಿಮುಖ ಹಗಲು ಕಾಣುವ ಚಂದ್ರನಂತಿದ್ದು ಕಳೆಗುಂದಿದೆ ಏಕೆ? ಇದು ಯಾವ ಕಾರಣದಿಂದಾಯಿತು ನಿನಗೆ ಕಮಲಾಕ್ಷಿ?" ಎಂದು ಮೃದುನುಡಿಯಿಂದ ವಿಚಾರಿಸುವ ಪ್ರಾಣೇಶ್ವರನ ಮಾತಿಗೆ ಪ್ರತ್ಯುತ್ತರ ಕೊಡಲೂ, ಮಾತಾಡದಿರಲೂ ಆಗದೆ ಸೀತೆ ಪಕ್ಕದ ಗೆಳತಿಯನ್ನು ದೃಷ್ಟಿಸಿ ನೋಡಲು, ಅವಳು—"ಸ್ವಾಮಿ, ಮರೆಹೊಕ್ಕವರಿಗೆ ಸುಖವನ್ನು ನೀಡುವ ಕಲ್ಪವೃಕ್ಷದಂತೆ ನೀನು ಬಳಿಯಲ್ಲಿದ್ದರೆ ದೇವಿಯರಿಗೆ ಬೇರೆ ಯಾವುದೂ ಮನಸ್ಸಿಗೆ ನೋವಲ್ಲ; ಮಕ್ಕಳನ್ನು ಹೆತ್ತು ಪ್ರೀತಿಸುವ ಪುಣ್ಯ ತನ್ನಲ್ಲಿ ಇನ್ನೂ ಆಗಿಲ್ಲವೆಂಬ ಒಂದು ಉದ್ವೇಗವೆಂದು ನಾನು ಅರಿವೆನು. ಹೆಣ್ಣುಗಳಿಗೆ ಇದು ಸಹಜವೆ" ಎಂದಳು.

ಬಾಲೆ ಚಂದ್ರಮತಿ ಹಾಗೆ ಹೇಳಿದ್ದಕ್ಕೆ ರಘುಪ್ರವರನೂ ಮನಮರುಗಿ ಸ್ವಲ್ಪ ಹೊತ್ತು ಧ್ಯಾನಿಸಿ ಮನಸ್ಸಿನಲ್ಲಿಯೇ ಅರಿತು ಮತ್ತೆ ತನ್ನ ಕಾಂತೆಗೆ— "ರಮಣಿ! ನಿಷ್ಕಾರಣವಾಗಿ ಮರುಗಲು ಏನಾಗಿದೆ ? ಇಂತು ಇವೆಲ್ಲವೂ ವಿಧಿ ವಶವಲ್ಲವೆ! ದೈವವೊಂದು ಕಣ್ಣು ತೆರೆಯಲು, ಗುರುಜನವು ಅನುಗ್ರಹಿಸಲು, ಹಿರಿಯರು ಹರಸಲು (ಅದು) ದೊಡ್ಡದೇನು ? ಇದಕ್ಕೆ ನಮ್ಮ ತಂದೆಯೇ ಪ್ರಮಾಣ. ಅದರಿಂದ ಮನಸ್ಸು ನಿಶ್ಚಿಂತವಾಗುವಂತೆ ನೀನು ಭಕ್ತಿಯಿಂದ ಕುಲದೈವವನ್ನು ಅರ್ಚಿಸುತ್ತ, ಗುರುಜನರನ್ನು ಪೂಜಿಸುತ್ತ, ಹಿರಿಯರನ್ನು ಸಂಭಾವಿಸುತ್ತ, ಗೋವು (ಹಾಗೂ) ಬ್ರಾಹ್ಮಣರನ್ನು ಸೇವಿಸುತ್ತ ಇದ್ದರೆ, ನಮ್ಮನ್ನು ಎಲ್ಲರೂ ಅನುಗ್ರಹಿಸಿದರೆ ಸಂತಾನವಾಗುತ್ತದೆ ಎಂದು ಅರಿತಿದ್ದೇನೆ" ಎಂದು ಹೇಳಿ ಕಾಂತೆಯನ್ನು ಸಂತೈಸಿ ಆಲಿಂಗಿಸಿ ಕಳುಹಿಸಿ ತಾನು ಓಲಗಕ್ಕೆ ದಯಮಾಡಿಸಿದನು.

ಮನೋರಮೆ! ವಿಸ್ತಾರವು ಸಾಕು. ಹೀಗೆ ಕೆಲವಾರು ದಿವಸಗಳು ಕಳೆಯಲು ಲೋಕಪದ್ಧತಿಯನ್ನು ಒಳಗೊಂಡು ಸೀತೆಗೆ ಮುಟ್ಟುನಿಂತು ದಿನ ಕ್ರಮದಿಂದ, ಸೀತೆ ಬಸಿರಿಯಾದಳು.

ಸೀತಾ ಪರಿತ್ಯಾಗ

ಮುದ್ದಣ—ಪ್ರಾಣನಾಯಿಕೆ! ಹೀಗೆ ಸೀತೆ ಗರ್ಭಿಣಿಯಾದಳು. ಆಗಲು ನಾಡಿಗೆ ನಾಡೆ ಸಂತೋಷದ ಕಡಲಲ್ಲಿ ಓಲಾಡುತ್ತಿತ್ತು; ಬಂಧುಜನಗಳ ಸಂತೋಷವೂ, ಪರಿಜನರ ಸಂತೋಷದ ಏಳಿಗೆಯೂ ಹಿರಿದಾಯಿತು; ಬ್ರಾಹ್ಮಣರು ದಾನ ದಕ್ಷಿಣೆಗಳಿಂದ ತಣಿದರು; ಸೇರಿದ್ದ ದೀನ ಕುರುಡ ಕಿವುಡ ಕುಬ್ಜ ವರ್ಗವು ಸ್ವರ್ಗಸುಖಾನುಭವದಲ್ಲಿತ್ತು.

ಆ ವೇಳೆಯಲ್ಲಿ ಒಮ್ಮೆ ಶ್ರೀರಘುಪ್ರವರನು ಸೀತೆಯೊಡನೆ ಅತಿ ಪ್ರೀತಿಯ ಸಲ್ಲಾಪದಿಂದ ಸಂಜೆಯಲ್ಲಿ ರಾಣಿವಾಸದ ಮೊಗಸಾಲೆಯಲ್ಲಿರಲು, ಸೀತೆಯು ರಾಮನಿಗೆ "ನಾಥ, ಬಲು ಬೇಸರ ಕಣಾ! ಯಾವುದನ್ನೂ ಒಳಗಿಟ್ಟುಕೊಂಡಿಲ್ಲ ನನ್ನ ಮನಸ್ಸು, ಆದರಿಂದ ಆರಣ್ಯದಲ್ಲಿ ಆಶ್ರಮಗಳ ಋಷಿಪತ್ನಿಯರನ್ನು ಕಂಡು ಸುಖಸಲ್ಲಾಪಗೊಂಡು ಅವರ ಒಡನಾಟದಿಂದ ನಾನು ಸ್ವಲ್ಪ ದಿನಗಳಿದ್ದು ಮರಳಿ ಬರಬೇಕು ಎಂದು ಬಯಸುವೆನು" ಎನ್ನಲು, ರಾಮನು—"ಹಾಗೆಯೇ ಆಗಲಿ! ಆದರೆ ಒಬ್ಬಳೇ ಹೋಗುವುದಲ್ಲ; ಜೊತೆಗೂಡಿ ಹೋಗಲು ಲಕ್ಷ್ಮಣನಿಗೆ ಹೇಳಿ ಕಳುಹಿಸುವೆನು" ಎಂದು ಉತ್ತರಿಸಿದನು.

ಹೀಗಿರಲು ಅತ್ತ ಅರಸನ ಕೆಲಸಕಾರ್ಯದ ಉದ್ಯೋಗವನ್ನು ಹಿಡಿದು, ಪ್ರಜೆಗಳ ಸ್ಥಿತಿಯನ್ನು ವಿಚಾರಿಸಬೇಕೆಂದು ರಾಜನು ಕಳುಹಿಸಿದ ಗೂಢಚಾರರು ಮರೆರೂಪಿನಿಂದ (ವೇಷಾಂತರದಿಂದ) ನಾಡನ್ನು ಸುತ್ತಿ ಕಂಡುದನ್ನು ತಿಳಿಸಲೆಂದು, ಸೋದರರಿಂದ ಸುತ್ತುವರೆದ, ಬಣ್ಣದ ಚೌಕಿಗೆಯಲ್ಲಿದ್ದ (ಒಳಅಂಗಳದಲ್ಲಿದ್ದ) ರಾಜನನ್ನು ಕಂಡು ದೂರದಿಂದ ತಲೆಬಾಗಿಸಲು; ರಾಘವನು ಅವರಿಗೆ—"ನಾಡಿನಲ್ಲಿ ಲೋಕದವರಿಗೆ ಸುಖಕ್ಕೆ ಕುಂದಿಲ್ಲವಲ್ಲವೆ, ಆಜ್ಞೆಗೆ ಭಂಗವಿರದಲ್ಲವೆ! ರಾಜನನ್ನು ನಿಂದಿಸರಲ್ಲವೆ! ಇಂದಿನ ವಾರ್ತೆಯೇನು ? ಹೇಳಿ" ಎಂದನು. ಆಗ ಗೂಢಚಾರರು—"ಸ್ವಾಮಿಯೇ, ಮೂರು ಜಗತ್ತನ್ನೂ ರಕ್ಷಿಸುವ ನೀವು ಸಮೀಪದಲ್ಲಿದ್ದು ಭೂಮಿಯನ್ನು ಹೊತ್ತಿರುವಾಗ ಲೋಕದವರಿಗೆ (ಪ್ರಜೆಗಳಿಗೆ) ಸುಖಕ್ಕೆ ಕುಂದೆ! ವಿಶ್ವವೆಲ್ಲವೂ ನಿನ್ನ ಆಜ್ಞೆಯಲ್ಲಿರುವಾಗ ಹುಲುಮಾನವರು ದೂರಲು ಸಮರ್ಥರೆ! ಮೃತ್ಯು ಹೊತ್ತನ್ನು

ನಿರೀಕ್ಷಿಸುತ್ತಿರಲು, ಪಾಪಿಗಳು ದೇವರನ್ನು ತೆಗಳಿದಾಕ್ಷಣಕ್ಕೆ ಏನಾಗುತ್ತದೆ? ಕಳ್ಳನು ಚಂದ್ರನನ್ನು, ಸೋಮಾರಿ ಹಗಲನ್ನು, ನಾಸ್ತಿಕನು ವೇದಗಳನ್ನು ನಿಂದಿಸಿದಂತಾಯಿತು" ಎಂದು ಹೇಳಲು; ರಾಮನು ಮತ್ತೆ ಆ ಚಾರಕರಿಗೆ "ಮರೆಮಾಚದೆ ಹೇಳಿರಿ, ವರ್ಣನೆಯ ನುಡಿಜಾಣ್ಮೆಗೆ ಅವಸರವಲ್ಲ, ಕಂಡುದನ್ನು ಹೇಳುವುದು" ಎನ್ನಲು; ಒಬ್ಬನು ಇನ್ನೊಬ್ಬನ ಮುಖವನ್ನು ನೋಡುತ್ತ ಮೌನವಾಗಿದ್ದರು. ಹೀಗಿರಲು ಮತ್ತೂ ಮತ್ತೂ ರಾಜನು ಏನಾದರೊಂದು ಹೊಸವಾರ್ತೆಯಿರುವುದೆಂದು ಚಾರರ ಭಂಗಿಯಿಂದ ಅರಿತು —"ನನ್ನಾಣೆ! ಅಪ್ಪನಾಣೆ! ಹೇಳಿ, ಮನ್ನಿಸುವೆನು, ಅಲ್ಲದಿದ್ದರೆ ನಿಮ್ಮನ್ನು ಶೂಲದ ತುತ್ತತುದಿಯಲ್ಲಿ ಕಾಣುವಿರಿ" ಎಂದು ಹುಬ್ಬಿನ ಜರ್ಬಿನಿಂದ ಗದರಲು; ಅವರಲ್ಲಿ ಒಬ್ಬನು ನಡುಕದೇಹಿಯಾಗಿ (ರಾಮನ) ಪಾದದಲ್ಲಿ ಬಾಗಿದ ಶಿರವುಳ್ಳವನಾಗಿ ಹೀಗೆ ಬಿನ್ನವಿಸಿದನು: "ಮಧ್ಯದ ಕೇರಿಯಲ್ಲಿ ಒಬ್ಬ ಅಗಸನು, ಹೆಂಡತಿಯು ಮುನಿಸಿನಿಂದ ಹೇಳದೆ ತವರುಮನೆಗೆ ಹೋಗಲು, ಕದ್ದು ಬಂದವಳಿಗೆ ಬುದ್ಧಿ ಹೇಳಿ ತಾಯ್ತಂದೆಯರು ಜೊತೆಯಲ್ಲಿ ಬಂದು ಅಳಿಯನಿಗೆ ಒಪ್ಪಿಸಲೆಂದು ಕೋಪವನ್ನು ತಿಳಿಗೊಳಿಸಲು, ಒಡನೆ, 'ಅಗಲಿದ ಹೆಂಡತಿಯನ್ನು ರಘುಜನಂತೆ ಕೊಂಡು ಆಳೆನು, ಬಾಳೆನು' ಎಂದು ಬಿರುಸು ಮಾತಾಡಿದನು. ಕರ್ಣಕಠೋರವಾಗಲು, ಕಿವಿಗಳನ್ನು ಮುಚ್ಚುತ್ತ ಅಲ್ಲಿಂದ ತೆರಳಿದೆವು. ಹೀಗೆ ಇದೊಂದು ವಾರ್ತೆಯಲ್ಲದೆ (ಬೇರೆ) ಯಾವುದನ್ನೂ ಕೇಳಲಿಲ್ಲ" ಎಂದು ಹೇಳಿ ಮತ್ತೆ ನಮಸ್ಕರಿಸಲು, ರಾಜನು ಅವರನ್ನು ಕೈಸನ್ನೆಯಿಂದ ಕಳುಹಿಸಿದನು.

ಗರತಿಯೇ, ಮುಂಗಾರ ಗುಡುಗಿನಿಂದ ಅಡ್ಡಬೀಳುವ (ಹೊಟ್ಟೆ ಮಗುಚಿ ಬೀಳುವ) ಎಳೆಯ ನೊಳಕೆಯೆನ್ನುವಂತೆ ರಾಜನು ಅಗಸನ ಒಂದು ಪರುಷ ನುಡಿಗೆ ಮನಸ್ಸು ಕೆಟ್ಟು, ಮರವಟ್ಟು, ವಿಚಾರಪರನಾಗಿ, ಮತ್ತೂ ದೀರ್ಘಾಲೋಚನೆಯಿಂದ, ನಿಟ್ಟುಸಿರ ಕಟ್ಟುಬ್ಬಸದಿಂದ ತನಗೆ ತಾನು— 'ಹಾ! ಹಾ! ಹೊನ್ನ ಚೂರಿಯೆಂದೇ ಎದೆಗೆ ಚುಚ್ಚಿಕೊಂಡೆನು; ಹೀಗೆ ಕರುಳನ್ನು ಕೊರೆಯುತ್ತದೆಂದು ಅರಿಯಲಿಲ್ಲ. ಅಯ್ಯೋ! ಪಾವನೆಯೆಂದೇ ಒಪ್ಪಿಕೊಂಡೆನು. ಆದರಿಂದ ಈ ಹಿಂಸೆಯೊಂದಕ್ಕೆ ತಲೆಯೊಡ್ಡಿದೆನು. ಆಃ! ಅಗಸನು ನನ್ನನ್ನು ಜೇಡಿಸಲಿಲ್ಲ (ಅವಮಾನಿಸಲಿಲ್ಲ) ಬಹುವಾಗಿ ಎಚ್ಚರಿಸಿ

ದನು. (ಇದು) ಸಹಜ. ಆಗ ರಾಕ್ಷಸನ ಬಂಧನದಲ್ಲಿ ಬಾಳಿದವಳನ್ನು ಮತ್ತೆ ನಾನು ಆಳಲಾಗುತ್ತದೆಯೆ ? ಮಾತೇನು, ಸೀತೆ ಮನಃಪೂರ್ವಕ ಪ್ರೀತಿಯುವ ಳೆಂದು ಒಪ್ಪಿಕೊಂಡೆನು ; ಹೀಗೆ ಲೋಕದವರ ಮಾತಿಗೆ ತುತ್ತಾಗುವೆನೆಂದು ಯೋಚಿಸದಾದೆ. ಇನ್ನೇನು ಮಾಡಲಿ ? ಕೈಯ ಹೊಲದಲ್ಲಿ ಬೆಳೆದ ಕಳೆಯು ಹುಲ್ಲನ್ನು ಕಿತ್ತು ಬಿಸಾಡುವಂತೆ ಸೀತೆಯನ್ನು ತ್ಯಜಿಸುವೆನು ಎಂದೇ ನಿರ್ಧರಿಸಿ, ಬಳಿಕ ಸೋದರರಲ್ಲಿ ಲಕ್ಷ್ಮಣನಿಗೆ—"ಕೇಳಿದೆಯ ತಮ್ಮ ! ನಮ್ಮ ವಂಶಕ್ಕೆ ಬಂದ ನಿಂದೆಯನ್ನು ! ಮುನ್ನ ಲಂಕೆಯಲ್ಲಿ ನೀನೇ ಹೇಳಿದೆಯಲ್ಲವೆ ; ಸೀತೆ ಪವಿತ್ರೆ, ಅವಳನ್ನು ಸ್ವೀಕರಿಸುವುದೆಂದು. ಈಗ ಏನಾಯಿತು ?" ಎನ್ನಲು ; ಮರುಮಾತಿನಲ್ಲಿ ಭರತನು "ಸೌಮಿತ್ರಿ ಹೇಳುವುದೇನು ! ನಮ್ಮ ಅಯ್ಯನು ಹೇಳನೆ ? ಅಗ್ನಿ ಹೇಳನೆ ? ದೇವತೆಗಳು ಹೇಳರೆ ? ಭೂದೇವಿ ತಾನು ಹೇಳಳೆ ? ಧೂರ್ತನೊಬ್ಬನು ಹೇಳಿದ ಊರ ಮಾತಿನ ನೆಪವನ್ನು ಹಿಡಿದು ದೇವಿಯರಲ್ಲಿ ಕುಂದನ್ನು ಚಿಂತಿಸಬಾರದೆ"ಂದು ಕೈ ಮುಗಿದನು. ಅದಕ್ಕೆ ಅಣ್ಣನು "ತಮ್ಮ, ಸುಮ್ಮನಿರು ; ನೀನು ಅರಿತಿಲ್ಲ, ಧರ್ಮವು ಹಾಗಲ್ಲ ; ಅಪವಾದ ಹೊದ್ದಿದ ಬಳಿಕ ದೂಷಿತೆಯಾದ ಈ ಮಡದಿಯನ್ನು ತ್ಯಜಿಸದೆ ಬಿಡೆನು" ಎಂದು ಹೇಳಲು ; ಶತ್ರುಘ್ನನು—"ಅಣ್ಣಯ್ಯ, ನರಿ ಊಳಿದರೆ (ಕೂಗಿದರೆ) ದೇವಲೋಕ ಹಾಳಾಗಿಹೋಗುತ್ತದೆಯೆ ? ನಾಯಿ ಬಗುಳಿದರೆ ಕುದುರೆ ಸವಾರನು ಅರಚುವನೆ ? ನನ್ನಾಣೆ, ತಾಯಿಯ ಆಣೆ, ಸೀತೆ ನೀತಿಗೆಟ್ಟವಳಲ್ಲ. ರಕ್ಷಿಸುವುದೆ"ಂದು ಕೈ ಒಡ್ಡಿ ಬೇಡಲು ; ಮತ್ತೂ ರಾಘವನು ಸೋದರರಿಗೆ "ಬಲ್ಲೆನು ಬಲ್ಲೆನು ಅವಳು ಅಯೋನಿಜೆಯೆಂಬುದನ್ನು, ಪಾವನೆಯೆಂಬುದನ್ನು ಪುಣ್ಯಶ್ಲೋಕೆಯೆಂಬುದನ್ನು (ಪುಣ್ಯಕೀರ್ತಿಯುವಳೆಂಬುದನ್ನು) ಆದರೆ ಈಗ ನನ್ನ ಅಂಕೆಯಲ್ಲ ; ತೆಗಳಿಕೆಗೆ ಮಾರುಹೋದೆನು. ಜನರು ಹೀಗೆ ಅಪಹಾಸ್ಯ ಮಾಡಿದರೆ ಹೇಗೆ ಕೂಡಿಬಾಳುವೆನೊ ! ಆದರಿಂದ ನನ್ನನ್ನು ನಿಷ್ಕಾರಣವಾಗಿ ತಡೆಯದೆ ಇಷ್ಟಬಂದಂತೆ ಹೋಗಿ" ಎಂದೂ, ಬಿಡೆನೆಂದೂ ಗದರಿ ನುಡಿಯುವ ಅಣ್ಣನನ್ನು ಕಂಡೂ ಕಾಣದೆ ಹಾ ಹಾ ಎಂದು ಆರ್ತನಾದ ಮಾಡುತ್ತ ಭರತ ಶತ್ರುಘ್ನರು ಹಿಂಜರಿದರು.

ಅನಂತರ ರಾಮನು ಪಕ್ಕದಲ್ಲಿ ಕೈಕಟ್ಟಿ ನಿಂತಿದ್ದ ಲಕ್ಷ್ಮಣನನ್ನು ಕರೆದು "ಪ್ರೀತಿಯ ತಮ್ಮನೇ, ಇತ್ತ ಬಾರಯ್ಯ, ಅಂದು ಇಂದಿಗೂ (ಅಂದಿನಿಂದ

ಇಂದಿನವರೆಗೂ) ನನ್ನ ಆಜ್ಞೆಯನ್ನು ಮೀರಿಲ್ಲ. ಬಲ್ಲೆನು ; ಈಗ ಚಂದ್ರನಿಗೆ ಕಳಂಕವು ಹೇಗೊ ಹಾಗೆ ನಮ್ಮ ಈ ವಂಶಕ್ಕೆ ನಿಂದೆ ಒದಗಿತು, ಈ ಜಾನಕಿಯ ಕಾರಣದಿಂದ. ಆಕೆಯನ್ನು ಕಾಡಿಗೆ ಒಯ್ದು ತೊರೆದು ಬಾ !" ಎಂದನು. ಅದಕ್ಕೆ ಸೌಮಿತ್ರಿ—"ಸ್ವಾಮಿಯೇ ಅಣ್ಣನ ಆಜ್ಞೆಯನ್ನು ಮೀರಿ ನಡೆದರೆ ಕುಂಭೀಪಾಕ(ಕುಂಭದಲ್ಲಿ ಹಾಕಿ ಪಾಕ ಮಾಡುವ ನರಕದ ಒಂದು ಶಿಕ್ಷೆ); ನಿರ್ದುಷ್ಟೆಯಾದ ಈ ಅತ್ತಿಗೆಯನ್ನು ತಿಳಿದೂ ನಟ್ಟಡವಿಗೆ ಒಯ್ದು ಬಿಟ್ಟರೆ ರೌರವ, ನನ್ನೊಡೆಯ, ಅದರಲ್ಲೂ ತುಂಬಿದ ಬಸಿರಿಯಲ್ಲವೆ ? ಹೇಗೆ ಕೊಂಡೊಯ್ದು, ಪಾಪಿ ಮೋಕ್ಷಲಕ್ಷ್ಮಿಯನ್ನು ಬಿಡುವಂತೆ, ನಿಷ್ಕರುಣೆಯಾದ ನಾನು ಭಾಗ್ಯಲಕ್ಷ್ಮಿಯನ್ನು ಬಿಡುವೆನು ?" ಎಂದು ಹೇಳಲು ; ಮತ್ತೂ ರಾಘವನು ಛಲವನ್ನು ಹಿಡಿದು "ಬಾಲಕನೇ, ಹೀಗೆ ನುಡಿಯಬೇಡಯ್ಯ, ಸ್ವಲ್ಪವೂ ದೋಷವಿಲ್ಲ, ಪ್ರತಿ ನುಡಿಯದಿರು, ಹೋಗು, ಹೋಗು" ಎಂದು ಹೇಳಿದನು. ಹೀಗಾಗಲು ಲಕ್ಷ್ಮಣನು ವೀರಾವೇಶಗೊಂಡು ಮನಸ್ಸನ್ನು ಗಟ್ಟಿ ಮಾಡಿ ಅಣ್ಣನಿಗೆ "ಎಲೆ ಅಣ್ಣ, ಇದೊ ಚಂಡಾಲನು ಸಿದ್ಧನಾಗಿದ್ದೇನೆ. ಪಾದ ದಾಣೆ ! ಆಜ್ಞೆ ಹೇಗೊ ಹಾಗೆಯೇ ನಡೆಯುವೆನು ; ಮೊದಲು ಪರಶುರಾಮನು ತಂದೆಯ ನಿಜನುಡಿಗಾಗಿ ತಾಯಿ ರೇಣುಕೆಯನ್ನು ಕೊಲ್ಲಲಿಲ್ಲವೆ ? ಅದು ಹಾಗಿರಲು, ನೀನು ತಂದೆಗೆ ಸಮನಾಗಿರಲು ತಾಯಿ ಸೀತೆಯನ್ನು ಕೊಲ್ಲಲೋ ಅಥವಾ ಕಾಡಿನಲ್ಲಿ ಸಿಂಹ ಇರುವಲ್ಲಿ ಬಿಸಾಡಲೋ ಹೇಳು." ಎನ್ನಲು; ರಾಘವನು—"ತಾನೆ ಸೀತೆ ಬಯಕೆಯಿಂದ ಅಡವಿಯ ಋಷಿಪತ್ನಿಯರನ್ನು ಕಾಣಬೇಕೆಂದು ಬಯಸಿದಳು. ಆದರಿಂದ ಈ ನೆಪದಿಂದ ಅಡವಿಯಲ್ಲಿ ಬಿಟ್ಟೇ ಬಾ" ಎಂದು ಹೇಳಿದನು. ಲಕ್ಷ್ಮಣನು "ದೊಡ್ಡದೇನು, ಹಾಗೆ ಮಾಡುತ್ತೇನೆ; ಸಂದೇಹ ಸ್ವಲ್ಪವೂ ಬೇಡ" ಎಂದು ದಿಮ್ಮನೆ ಎದ್ದು ನಡೆದನು.

ಹಾಗೆ ಲಕ್ಷ್ಮಣನು ಬಂದು ಸುವರ್ಣರಥವನ್ನು ಸಿದ್ಧಪಡಿಸಿ, ದಿವ್ಯಾಶ್ವಗಳನ್ನು ಹೂಡಿ, ವಾಗೆ(ಲಗಾಮು)ಯನ್ನು ಕೈಯಿಂದ ಎಳೆದು, ತಾನು ಏರದೆ ಮೆಲ್ಲನೆ ದೇವಿಯರ ಅಂತಃಪುರದ ಕಟ್ಟೆದುರಲ್ಲಿ ನಿಲ್ಲಿಸಿ, ಮುಖಮಂಟಪದ ಬಾಗಿಲಲ್ಲಿ ನಿಂತು ಬಹು ಕಲ್ಲು ಮನಸ್ಸಿನವನಾಗಿ "ಇದೆ ಇದೆ ಬಣ್ಣದ ರಥ, ವನಕ್ಕೆ ಒಯ್ಯಲೆಂದೇ ರಾಘವನು ಕಳುಹಿಸಿದನು, ತಡಮಾಡದೆ ಹೊರಡಿ" ಎಂದನು.

ವನಕ್ಕೆ ಹೋಗಿ ಪುಣ್ಯಾಶ್ರಮಗಳನ್ನು ಮತ್ತೊಮ್ಮೆಯೂ ಕಂಡು ಪಾವನೆಯಾಗುವೆನೆಂದು ಬಗೆದ ಹಂಬಲವು ತೀವ್ರವಾಗಲು, ಸೀತೆಗೆ ಕಣ್ಣಲ್ಲೇ ಬೆಳಗಾಗಲು, ಹೊರಬಾಗಿಲಲ್ಲಿ ಹೆಸರು ಹಿಡಿದು ಕರೆಯುವ ಧ್ವನಿಯಿಂದ ಲಕ್ಷ್ಮಣನೆಂದು ತಿಳಿದು, ಬಾಗಿಲು ತೆರೆದು ಹೊರಬಂದು, ಅರೆಮನಸ್ಸಿನಲ್ಲಿದ್ದ ಸೌಮಿತ್ರಿಗೆ "ಏನಯ್ಯ ಮೈದುನ, ಪ್ರಾಣೇಶ್ವರನು ನನ್ನ ಒಂದು ಬಿನ್ನಹ ವನ್ನು (ಗಾಳಿಗೆ) ತೂರದೆ ಪ್ರೀತಿ ಹೆಚ್ಚಲು ನಡೆಸಿದನೆ! ನಿನ್ನನ್ನು ಹೇಳಿ ಕಳುಹಿಸಿದನೆ ! ಕರುಣಾಕರನಲ್ಲವೆ ! ದೀನೆಯನ್ನು ನಲ್ಲನಲ್ಲದೆ ಬೇರೆ ಯಾರು ಕಾಯುವವನು ? ಒಡೆಯನ ಪಾದಕಮಲಗಳು ಯಾವಾಗಲೂ ಸುಖ ವಾಗಿರಲಿ ! ಆದರೆ ಇಷ್ಟೊಂದು ಬೇಗನೆ ಹೊತ್ತಾರೆಯಲ್ಲೇ (ಬೆಳಗಿನಲ್ಲೇ) ರಥವನ್ನು ತಂದೆಯ ? ಹಗಲು ಇನ್ನೂ ಒಂದು ಮೊಳ ಮೀರಿಲ್ಲ. ನಾನು ಅತ್ತೆಯವರಿಗೆ ನಮಸ್ಕರಿಸಿ ಆಶೀರ್ವಾದ ಪಡೆದಿಲ್ಲ! ಗೆಳತಿಯರನ್ನು ಕೇಳಿ ಕೊಂಡಿಲ್ಲ ! ಚಂದ್ರಮತಿಗೆ ಹೇಳಿಲ್ಲ ! ಏನು ಮಾಡಲಿ ?" ಎನ್ನುತ್ತ ವಿಚಾರ ಮಾಡಿ—"ಹೌದು ಹೌದು, ದೂರಪ್ರಯಾಣ, ಇರಲಿ ರಾಘವನು ಹೇಳು ವನು. ಅಲ್ಲದಿದ್ದರೆ ಶವಗೆ ತಾವೇ ತಿಳಿದುಕೊಳ್ಳುತ್ತಾರೆ. ಹೇಗೂ ಸ್ವಲ್ಪ ದಿನಕ್ಕೆ ಮರಳಿ ಬರುವೆನಲ್ಲವೆ ? ಆಗ ಋಷಿಪತ್ನಿಯರು ಹೇಳುವ ಒಳ್ಳೆಯ ಕತೆ ಯನ್ನೂ ಮತ್ತು ಕಾಡಿನಲ್ಲಿ ಕಂಡ ಹೊಸ ವಿನೋದವನ್ನೂ ಬಂದು ತಿಳಿಸುವೆ. ಸಂತೋಷವು ಇಮ್ಮಡಿಯಾಗುತ್ತದೆ. ಆಯ್ತು ಆಯ್ತು ಹೋಗೋಣ, ಹೋಗೋಣ" ಎಂದು, ಆನಂದಬಾಷ್ಪ ತುಂಬಿದ ಕಮಲಲೋಚನೆ, ಚಂದ್ರ ಮುಖಿ, ಮುನಿಕಾಂತೆಯರ ದರ್ಶನದ ಆತುರವುಳ್ಳವಳು, ರೋಮಾಂಚನ ಗೊಂಡ ಸರ್ವಾಂಗದವಳು ಹೀಗೆ ಆತುರದಲ್ಲಿದ್ದಳು.

ಆಗ ಊರ್ಮಿಳೆಯ ಅರಸನಾದ ಲಕ್ಷ್ಮಣನು "ಪ್ರಯಾಣ ಒಳ್ಳೆಯ ದಾಗಿರಲಿ" ಎನ್ನುತ್ತ, ಮನದಲ್ಲಿ ಸೂರ್ಯನನ್ನು ಬೇಡಿ, ಮತ್ತೆ ಪ್ರಕಾಶಮಾನ ನಾಗಿ—"ಇದೊ ರಥವು ಸಿದ್ಧ, ಏರಿರಿ" ಎನ್ನಲು, 'ಆಗಲಿ' ಎಂದು ಒಂದು ಮೂರು ಹೆಜ್ಜೆ ನಡೆದು ಸಂಭ್ರಮದಿಂದ ಲಕ್ಷ್ಮಣನಿಗೆ—"ಓ ಓ ! ಇರಿರು, ಬಂದೆ, ಪುಣ್ಯ ತಪೋವನವನ್ನು ಕಾಣುವ ಒಂದು ಆತುರವು ದೊಡ್ಡದಾಗಲು ಮುನಿಕಾಂತೆಯರಿಗೆಂದು ಕಟ್ಟಿದ ಬಾಗಿನಗಳನ್ನು ಮರೆತೆನಲ್ಲ ! ತರುವೆನು" ಎನ್ನುತ್ತ ಒಳಹೊಕ್ಕಳು.

ಹಾಗೆ ದೇವಿ ಹೋಗಲು, ಲಕ್ಷ್ಮಣನು "ಅಯ್ಯೋ! ಅಮ್ಮ ನನ್ನನ್ನು ಏಕೆಂದು ಹೆತ್ತಳೋ! ಮತ್ತು ತಂದೆಯು ಏನೆಂದು ಸಾಕಿದನೊ! ಮೊದಲು ಎಳೆಪ್ರಾಯದಲ್ಲಿ ಹದಿನಾಲ್ಕು ವರ್ಷ ಕಾಡಿಗೆ ಹೋಗಿ ನಿದ್ರೆ ಆಹಾರಗಳನ್ನು ಬಿಟ್ಟು ಶ್ರೀರಾಮಚಂದ್ರನನ್ನು ತ್ರಿಕರಣ (ದೇಹ, ಮಾತು, ಮನಸ್ಸು) ಶುದ್ಧಿಯಿಂದ ಸೇವಿಸಿಯೂ ಪಡೆದ ಪುಣ್ಯದ ಏಳಿಗೆಗೆ ಇಷ್ಟೊಂದು ಫಲಪ್ರಾಪ್ತಿಯಾಯಿತೇ! ಶಿವ ಶಿವಾ!" ಎನ್ನುತ್ತ ಚಿಂತಿಸುತ್ತಿದ್ದನು. ಅಷ್ಟರಲ್ಲಿ (ಸೀತೆಯು) ತಾನೇ ಮಾಂಗಲ್ಯದ ಬಿಚ್ಚೋಲೆಯ ಚಂದನದ ಕುಂಕುಮದ ಕರಿಮಣಿಯ ಕಸ್ತೂರಿಯ ಕರ್ಪೂರದ ಪರಿಮಳದ ಎಣ್ಣೆಯ ಕಾವಿಬಟ್ಟೆಯ ಭರಣಿಗಳನ್ನು ಕೈಯಲ್ಲಿ ತೆಗೆದುಕೊಂಡು ಅಂತಃಪುರದಿಂದ ಹೊರಟು ಹೊರಬಾಗಿಲಿಗೆ ಬಂದು—"ತಡಮಾಡದಿರು, ಹೋಗೋಣ ಹೋಗೋಣ" ಎಂದು ಮೈದುನನಿಗೆ ಹೇಳಿದಳು. ಆಗ (ಅತಿಕಾಯನನ್ನು ಜಯಿಸಿದ) ಲಕ್ಷ್ಮಣನು, ದೇಹದ ಒಂದು ಉರಿಯೂ, ಒಡಲಿನ ಒಂದು ಸಂತಾಪವೂ ಸೀತಾಂಗನೆಯ ಮುಖವೆಂಬ ಚಂದ್ರದರ್ಶನದಿಂದ ತಿಳಿಯಾಗಿ ಮಾರ್ಪಟ್ಟಿತೊ ಎನ್ನುವಂತೆ ದೃಢಚಿತ್ತನಾಗಿ ಪಕ್ಕನೆ ಒಂದು ಪಕ್ಕದಿಂದ ಇಳಿದು, ಹೂಡಿದ್ದ ರಥವನ್ನು ನೂಕಿ ಸಿದ್ಧಮಾಡಿ (ಸೀತೆಯ) ಕೈಯ ಭರಣಿಗಳನ್ನು ತಾನು ತೆಗೆದುಕೊಂಡು (ರಥದಲ್ಲಿ) ಇಟ್ಟು, ಸೀತೆಯು ರಥದಲ್ಲಿ ಕುಳಿತುಕೊಳ್ಳಲು, ಒಡನೆ ಲಕ್ಷ್ಮಣನು ಮನಸ್ಸಿನಲ್ಲೇ ಕುಲದೈವವನ್ನು ಧ್ಯಾನಿಸಿ, ಗುರುಜನರನ್ನು ಸ್ಮರಿಸಿ, ತ್ರಿವಿಕ್ರಮಮೂರ್ತಿಯನ್ನು ಸ್ಮರಿಸಿ, ಭೂಮಿಯೊ ಎನ್ನುವಂತೆ ರಥಕ್ಕೆ ಪ್ರದಕ್ಷಿಣೆ ಬಂದು, ಕುದುರೆಗಳ ಬೆನ್ನು ತಟ್ಟಿ, ತಾನೂ ಏರಿ, ಎಡದ ಕೈಯಲ್ಲಿ ವಾಗೆ (ಲಗಾಮು) ಯನ್ನು ಸಡಿಲವಾಗಿ ಹಿಡಿದು, ಬಲದ ಕೈಯ ಚಾವಟೆಯನ್ನು ಆಲುಗಿಸಿ ಚಪ್ಪರಿಸಿ ಹೊಡೆದನು.

ಹೀಗೆ ರಥವು ಮುಂದೆ ಮುಂದೆ ಹೋಗಲು, ನೋಟದ ಅಳತೆಯಲ್ಲಿಯೇ ಲೋಕಪಾವನೆಯೆನ್ನಿಸುತ್ತ, ಒಂದೇ ಸಮನೆ ಪಾತಾಳದ ಕಡೆಗೆ ಹೋಗುವ ಗಂಗಾನದಿ ಕಾಣಿಸಿಕೊಂಡಳು.

ಅಷ್ಟರಲ್ಲಿ ಕಣ್ಣಳತೆಯ ಪ್ರವಾಹ ಕೈಯಳತೆಯಷ್ಟಾಗಲು ರಥದಿಂದ ಇಳಿದು ಇಬ್ಬರೂ ದರ್ಶನಸ್ತುತಿಯನ್ನು ಮಾಡಿ ಮತ್ತೆ ದಾಟಲೆಂದು ಅಂಬಿಗರೊಡನೆ ದೋಣಿಯನ್ನೇರಿದರು.

ಅಷ್ಟರಲ್ಲಿ ದೋಣಿ ದಡದ ಬಳಿ ಬರಲು ನಾವಿಕರಿಗೆ ದಾಟಿಸಿದ ಹಣವನ್ನು ಕೊಟ್ಟು ಮನ್ನಿಸಿ ಇಬ್ಬರೂ ಅನುಕೂಲ ಸ್ಥಳವಾದ ಮರಳರಾಶಿಯಲ್ಲಿ ಇಳಿದರು. (ಅದು) ಮಧ್ಯಾಹ್ನ ಕಾಲವಾದುದರಿಂದ ಅವರು ಕೆಂಪು ಅಶೋಕೆಯ ನೆರಳಡಿಯ ನುಣುಪು ಮರಳರಾಶಿಯಲ್ಲಿ ಕೆಂಪು ಚಿಗುರಿನಿಂದ ಒಳ್ಳೆಯ ಹಾಸಿಗೆಯನ್ನು ಮಾಡಿ ಸ್ವಲ್ಪ ಹೊತ್ತು ಕುಳಿತಿದ್ದು ಮತ್ತೆ ತೀರ್ಥದಲ್ಲಿ ಮಿಂದರು. ಹಾಗೆ ಮಿಂದು ಸೀತೆ ತನ್ನ ಕಿರುಬೆರಳ ಶ್ರೀರಾಮಮುದ್ರಿಕೆಯನ್ನು ಕೈಗೆ ತೆಗೆದುಕೊಂಡು ಗಂಗಾಜಲದಿಂದ ಅಭಿಷೇಕ ಮಾಡಿ ಲಕ್ಷ್ಮಣನು ಕಿತ್ತುತಂದ ಪುಷ್ಪದಿಂದ ಅಲಂಕರಿಸಿ, ರುಚಿಹಣ್ಣುಗಳನ್ನು ಸಮರ್ಪಿಸಿ, ತೀರ್ಥ ಪ್ರಸಾದ ನೈವೇದ್ಯಗಳನ್ನು ಮೈದುನನಿಗೂ ಕೊಟ್ಟು ತಾನೂ ತೆಗೆದುಕೊಂಡಳು. ಲಕ್ಷ್ಮಣನು ಗಂಗಾಜಲಸ್ನಾನದಿಂದ ಪವಿತ್ರದೇಹವುಳ್ಳವನಾಗಿ ದೇವಿಗೆ ಮೂರು ಸಲ ಪ್ರದಕ್ಷಿಣೆ ಬಂದು ನಮಸ್ಕರಿಸಿ (ಆಕೆ) ಕೊಟ್ಟದ್ದನ್ನು ಮಹಾಪ್ರಸಾದವೆಂದು ಭಕ್ತಿಯಿಂದ ಸ್ವೀಕರಿಸಿದನು. (ಅವರು) ಹಾಗಿರಲು, ಬಿಸಿಲು ತಣ್ಣಗಾಗಲು, ತಂಗಾಳಿ ಮೈದೋರಲು, ಪಕ್ಷಿಗಳು ಸಂತೋಷದಿಂದ ಹಾಡಲು, ಸೂರ್ಯನು ಪಶ್ಚಿಮಾಭಿಮುಖನಾಗಲು ಸೀತಾಲಕ್ಷ್ಮಣರು ಉತ್ತರಾಭಿಮುಖರಾಗಿ ಹೊರಟರು.

ಹೀಗೆ ನಡೆನಡೆದು ಬಲು ದೂರ ಹೋಗಿ ನಟ್ಟಡವಿಯನ್ನು ಹೊಕ್ಕು ಕಟ್ಟಕಡೆಯಲ್ಲಿ ಅಣ್ಣನ ಕಟ್ಟಾಜ್ಞೆಯನ್ನು ಹೇಳಿ ಲಕ್ಷ್ಮಣನು ಭೂಸುತೆಯಾದ ಸೀತೆಯನ್ನು ಬಿಟ್ಟು ಹೋದನು.

ವಾಲ್ಮೀಕಿ ದರ್ಶನ

ಮನೋರಮೆ—(ಕಣ್ಣೀರು ಸುರಿಸಿ) ಆಃ ! ನನ್ನೊಡೆಯ ! ನೀನೂ ಸಹ ಹೇಗೆ ಕಲ್ಲುಮನಸ್ಸಿನವನಾದೆ ? ಒಮ್ಮೆಲೇ ದೇವಿಯನ್ನು ಕಾರಡವಿಯಲ್ಲಿ ಬಿಟ್ಟು ಲಕ್ಷ್ಮಣನು ಹೋದನು ಎನ್ನಬೇಕಾದರೆ ! ಮೈದುನನಿಗಾದರೂ ಹೇಗೆ ಮನಸ್ಸಾಯಿತೋ ! ಮತ್ತು ಹೇಗೆ ದೇವಿಯರಿಗೆ ಕಾವಲಿಡದೆ ಹೋದನೋ !

ತೊರೆದು ಹೋಗುವಾಗ ಸೀತೆ ಏನೆಂದು ಮರುಗಿದಳೋ! ಅಯ್ಯೋ! ಹೆಣ್ಣು ಗಳ ಒಂದು ಬಾಳ್ವೆ ಬಾಳ್ವೆಯೆ?

ಮುದ್ದಣ—(ತಾನೂ ಸುರಿವ ಕಣ್ಣೀರನ್ನು ಕಿರುಬೆರಳಿನಿಂದ ಹಾರಿಸಿ) ಪ್ರಾಣೇಶ್ವರೀ! ಈ ಸ್ಥಿತಿಯನ್ನು ಏನೆಂದು ಹೇಳುವೆನೊ? ದುಃಖವು ಕೊರಳನ್ನು ಹಿಡಿಯುತ್ತದೆ. ಮುಂದಿನ ಕಥೆಯನ್ನಾದರೂ ಹೇಳುವೆನು.

ಮನೋರಮೆ—ಹೆಣ್ಣೊಡಲಲ್ಲವೆ! ಹೇಗೆ ಸೈರಿಸಲಿ! ಸೀತೆ ಏನಾದಳು, ಹೇಳು.

ಮುದ್ದಣ—(ದೀರ್ಘವಾದ ನಿಟ್ಟುಸಿರು ಬಿಟ್ಟು) ಆಯಿತು, ಕೇಳು. ಹಾಗೆ ಗಂಗೆಯನ್ನು ಸ್ತುತಿಸಿ, ಮುಂದೆ ಸೀತೆಯೂ ಹಿಂದೆ ಸೌಮಿತ್ರಿಯೂ ಆಗಿ ಪ್ರಯಾಣ ಮಾಡಿದರು. ಸೀತೆಗೆ ಮುನಿವರ್ಗದ ಮುತ್ತೈದೆಯರನ್ನು ಎಷ್ಟೊತ್ತಿಗೆ ಕಾಣುವೆನೊ ಎಂಬ ಒಂದು ತವಕದಿಂದ ನಡೆ ಮುಂದಾದುದು; ಲಕ್ಷ್ಮಣನಿಗೆ ಅಣ್ಣನ ಆಜ್ಞೆಯನ್ನು ಎಂತು ಹೇಗೆ ಹೇಳುವೆನೋ ಮತ್ತು ಹೇಗೆ ದೇವಿಯನ್ನು ತೊರೆಯುವೆನೋ ಎಂಬ ಒಂದು ದುಗುಡದಿಂದ ಹಿಂದಾದುದು. ಈ ರೀತಿಯಿಂದ ಬಹು ದೂರ ನಡೆದು ಘೋರಾರಣ್ಯವೊಂದನ್ನು ಹೊಕ್ಕರು.

ಆ ಹೊತ್ತಿಗೆ ಸೀತೆ ದಿಕ್ಕುಗೆಟ್ಟು ದಿಣ್ಣೆಯನ್ನೇರಿ, ಬೆಟ್ಟವನ್ನಿಳಿದು, ತೊರೆಯನ್ನು ಕಳೆದು, ಅಗತೆಯನ್ನು (ಅಗೆದಿರುವ ಸ್ಥಳ) ದಾಟಿ, ಪೊಟರೆಯನ್ನು ಸಾರಿ, ಮರವನ್ನು ಹಾಯ್ದು, ಕಲ್ಲನ್ನು ಎಡವಿ, ಮುಳ್ಳನ್ನು ತಡವಿ, ಕಣ್ಣು ಕಾಣದೆ ಉಳುಕಿ ಬಳುಕಿ ನಡೆನಡೆದು ಕಾಲೊಡೆದು ರಕ್ತ ಸುರಿಯಲು ದೇಹ ಕುಂದಿ ನೆಲಕ್ಕೆ ಮೂರ್ಛೆಗೊಂಡು ಬೀಳಲು, ಸೌಮಿತ್ರಿ ಮುಂದುಕಾಣದೆ ದೇವಿಯನ್ನು ಉಪಚರಿಸುತ್ತಿದ್ದನು. ಆಗ ಸ್ವಲ್ಪ ಹೊತ್ತಿನಲ್ಲೇ, ಬೇಗನೆ ಮೂರ್ಛೆ ತಿಳಿದು ದುಃಖಾರ್ತೆಯಾಗಿ ಮೈದುನನಿಗೆ—"ಓ ಲಕ್ಷ್ಮಣಾ! ನಡೆಯಲಾರೆನಯ್ಯ, ನೋಡುನೋಡಯ್ಯ, ಕಲ್ಲನ್ನು ಎಡವಿ, ಮುಳ್ಳು ನಾಟಿ ಕಾಲಿನಿಂದ ಸುರಿಯುವ ರಕ್ತವನ್ನು! ಬಸಿರಿನ ಒಂದು ಬೇನೆಯಿಂದ ನೊಂದೆನು. ಅಯ್ಯೋ! ಹಾ ರಾಘವಾ! ಕಮಲವನ್ನು ಬಿಟ್ಟು ಮಧುವಿನ ಭ್ರಾಂತಿಯಿಂದ ಮುತ್ತುಗದ ಹೂವಿಗೆ ಎರಗುವ ದುಂಬಿಯಂತೆ ವ್ಯರ್ಥವಾಗಿ ಕಾಡಿಗೊಳಗಾದೆ, ಶ್ರೀರಾಮಚಂದ್ರನೇ! ಮುಂದೇನಯ್ಯ ನನಗೆ ದಾರಿ?" ಎಂದು ಬಾಯಾರಿ ಮರುಗಿದಳು.

(ಮುದ್ದಣ ಮನೋರಮೆಗೆ) ಮೋಹನಾಂಗಿಯೇ, ಹೀಗೆ ಪ್ರಲಾಪಿಸುವ ರಾಘವನ ಅರ್ಧಾಂಗಿಯ ಸ್ಥಿತಿಯನ್ನು ಕಂಡು ಲಕ್ಷ್ಮಣದೇವನ ಮನದಲ್ಲಿ ಏನಾಗಿದೆಯೆಂದು ಚಿಂತಿಸು. ಒಂದು ಕಡೆಯಲ್ಲಿ ಅಣ್ಣನ ಕಟ್ಟಾಜ್ಞೆ; ಮತ್ತೊಂದು ಕಡೆಗೆ ಸೀತೆಯ ಮೇಲಿನ ಮರುಕ. ಏನು, ದೇವಿಗೆ ನೀನು ಅಂಜದಿರು ಎನ್ನುವುದಕ್ಕೆ ಉಂಟೆ ? ಊರಿಗೆ ಮರಳಿಸುವೆನು ಎನ್ನುವುದಕ್ಕೆ ಉಂಟೆ ? ತಾನೆ ಕಾವಲಿರುವೆನು ಎನ್ನುವುದಕ್ಕೆ ಉಂಟೆ ? ಆಃ ! ತಲೆವೋಕನ ಒಂದು ಮಾಟವೆ ಹಾಗಿರಲು ಲಕ್ಷ್ಮಣನು ಒಂದೇ ಸಮನಾಗಿ ಸುರಿವ ಕಣ್ಣೀರ ಧಾರೆಯಿಂದ ಕೆನ್ನೆ ಒದ್ದೆಯಾದವನಾಗಿ, ನಡುಗುವ ದೇಹವುಳ್ಳವನಾಗಿ ಸೀತೆಯ ಪಾದಗಳಲ್ಲಿ ನಮಸ್ಕರಿಸಿ—"ದೇವಿಯರು ನನ್ನನ್ನು ಕಂದ ಎಂದು ಸಂಬೋಧಿಸಬೇಡಿ, ಶತ್ರುವೆಂದೇ ನಿರ್ಧರಿಸಿ. ಇಲ್ಲಿಯವರೆಗೆ ಅಣ್ಣನ ಆಜ್ಞೆಯನ್ನು ನಿಮ್ಮಲ್ಲಿ ಹೇಳಿಲ್ಲ. ನಾಡಿನಲ್ಲಿ ಯಾವನೊ ಮಡಿವಾಳನೊಬ್ಬನು ಅಮಂಗಳವಾಗಿ ದೇವಿಯರಲ್ಲಿ ಕುಂದಿಟ್ಟು ದೇವರನ್ನು ನಿಂದಿಸಿದನಂತೆ ! ಹಾಗೆ ಈ ಕಾರಣದಿಂದ ಅಣ್ಣನು ನಿಮ್ಮನ್ನು ಕಾಡಿನಲ್ಲಿ ಇಳಿಸಿ ಬರುವುದು ಎಂದು ನನಗೆ ಹೇಳಿದನು; ಇದೊ ತೆಗೆದುಕೊಳ್ಳಿ, ಸ್ವಾಮಿಕಾರ್ಯದ ಹೊರೆಹೊತ್ತವನೂ, ಅಣ್ಣನ ಆಜ್ಞಾನುವರ್ತಿಯೂ, ವೀರಾಗ್ರಗಣ್ಯನೂ, ಕೃತಕೃತ್ಯನೂ, ನೆಚ್ಚಿನ ಮೈದುನನೂ, ಲಕ್ಷ್ಮಣನೂ ಆದ ನನ್ನನ್ನು; ಈ ಪ್ರೇಮವಾರ್ತೆಯನ್ನು ಹೇಳುವುದಕ್ಕೆಂದು ಬಂದು, (ಮತ್ತೆ) ಬೆನ್ನು ತಿರುಗಿಸಿ ಪಟ್ಟಣಕ್ಕೆ ಹೋಗುವೆನು" ಎಂದನು.

ಸೀತೆಯ ಸ್ಥಿತಿಯನ್ನು ಏನೆಂದು ಹೇಳಲಿ ? ನೆಟ್ಟನೆ ಬೀಸುವ ಬಿರುಗಾಳಿಯ ಹೊಡೆತಕ್ಕೆ ಅರ್ಧಕ್ಕೆ ಮುರಿದು ಬಾಡುವ ಕರ್ಪೂರಬಾಳೆಯ (ಕಪ್ರಬಾಳೆ) ಗಿಡದಂತೆ, ಒಮ್ಮೆಲೆ ಮೈದುನನು ಆಡಿದ ಕಠಿಣತರ ವಾಕ್ಯ ಬಾಣವು ಕಿವಿಯ ಪೊಟರೆಗೆ ನಾಟಲು, ಮುಖ ಕುಂದಿ ದುಃಖಾವೇಶದಿಂದ ನಿಶ್ಚೇಷ್ಟಿತೆಯಾಗಿ ಮತ್ತೊಮ್ಮೆ ಮೂರ್ಛೆ ಹೋದಳು. ಅಷ್ಟರಲ್ಲಿ ಲಕ್ಷ್ಮಣನು ಪಕ್ಕದಲ್ಲೇ ಜಿನುಗುವ ಬೆಟ್ಟದ ತೊರೆಯ ನೀರನ್ನು ಮುಳ್ಳಿನಿಂದ ಚುಚ್ಚಿದ (ಹೊಲಿದ) ಎಲೆಯಲ್ಲಿ (ದೊನ್ನೆಯಲ್ಲಿ) ತಂದು ದೇವಿಗೆ ತನ್ನ ಒಂದು ಕಡೆ ಹೊತ್ತಿನ ಸೇವೆಯೆಂದು ಪಾದಕಮಲವನ್ನು ತೊಳೆದು, ಕಣ್ಣಿಗೆ ಸುರಿದು, ಕೈಗೆ ಸವರಿ, ದೊನ್ನೆಯನ್ನು ಪತ್ರಪುಷ್ಪವೆನ್ನುವಂತೆ ಬೈತಲೆಯಲ್ಲಿ ಧರಿಸಿಕೊಂಡನು.

ಈ ಶೈತ್ಯೋಪಚಾರದ ಸೇವೆಗೆ ಪ್ರಸನ್ನಳಾದಳಿನ್ನುವಂತೆ ಕಣ್ಣು ತೆರೆದು ಕೈಯನ್ನು ಅಲುಗಿಸಿ ಕಾಲು ಮಡಿಸಿ ಉಸಿರಾಡಿದಳು. ಹೀಗೆ ಮೈ ತಿಳಿದು ಮಿತಿಮೀರಿದ ಮನೋವ್ಯಥೆಯಿಂದ—“ನನ್ನೊಡೆಯನು ತೊರೆದನೇ! ಶ್ರೀರಾಮಚಂದ್ರನು ಇಂದು ನನ್ನ ಕೈಬಿಟ್ಟನೇ! ಹಾ ಕಾಂತ! ಯಾವಾಗಲೂ ನೀನೇ ಗತಿಯೆಂದು ನಂಬಿ ಸೇರಿದವಳನ್ನು ಹೀಗೆ ಒಮ್ಮೆಲೆ ತ್ಯಜಿಸುವುದಕ್ಕೆ ಹೇಗೆ ಮನಸ್ಸು ತಂದೆ? ನನ್ನಲ್ಲಿ ಯಾವುದು ನ್ಯೂನತೆಯನ್ನು ಕಂಡೆ? ಹಾ! ಮನೋವಲ್ಲಭ! ನಾನು ನಿನ್ನ ಅರ್ಧಾಂಗಿಯಲ್ಲವೆ? ಪಟ್ಟದ ರಾಣಿಯಲ್ಲವೆ? ನನ್ನನ್ನು ಬಿಟ್ಟು ಹೇಗೆ ಅರ್ಧದೇಹದಲ್ಲಿರುವೆ? ಹೇಗೆ ಸಿಂಹಾಸನವನ್ನು ಏರುವೆ? ಹಾ ರಾಘವಾ! ದುಷ್ಟರಾಕ್ಷಸ, ಕಪಟ ತಪಸ್ವಿ ಅಂದು ನನ್ನನ್ನು ಕದ್ದು ಒಯ್ಯಲು, ಒಡನೆ ಬಿಡಲಾರದ ಮೋಹದಿಂದ ಮರುಗಿ ಕೊರಗಿ ಹುಡುಕಿ ಬಂದು ತೀವ್ರವಾಗಿ ತುಂಬ ಆಯಾಸದಿಂದ ಕಡಲಿಗೆ ಅಣೆಕಟ್ಟನ್ನು ಕಟ್ಟಿ ರಾಕ್ಷಸರೊಡನೆ ಕಾದಾಡಿ ಯುದ್ಧದಲ್ಲಿ ಗೆದ್ದು, ನನ್ನನ್ನು ವನಕ್ಕೆ ಅಟ್ಟ ಬೇಕೆಂದೇನು ಮರಳಿಸಿದೆಯ? ಹಾ! ಕಾಂತ! ನಿನ್ನನ್ನು ಮತ್ತೆ ಇನ್ನೆಂದಿಗೆ ಕಾಣುವೆನೊ! ಎಂದಿಗೆ ನಿನ್ನ ಸವಿನುಡಿಯನ್ನು ಆಲಿಸುವೆನೊ? ಇನ್ನೆಂದಿಗೆ ಒಡಗೂಡುವೆನೊ! ಹಾ! ಹಾ! ಆ ಬಿನ್ನಾಣದ ಆ ಬೆಡಗಿನ ಆ ಸೊಗಸಿನ ಆ ರೂಪಿನ ಆ ಶೃಂಗಾರದ ಆ ನಟನೆಯ ಆ ಅಂದದ ಆ ಹಾವದ ಆ ಭಾವದ ಆ ನೋಟದ ಆ ಪ್ರೇಮದ ಆ ಕೂಟದ ಸುಗ್ಗಿಯನ್ನು ಹೇಗೆ ಮರೆಯುವೆನೋ! ಹಾ! ರಾಮಾ!” ಎಂದು ಸೀತೆ ಬಾಯ್ಬಿಟ್ಟು ಅತ್ತಳು.

ಹೀಗೆ ವರ್ಣಿಸಿ ವರ್ಣಿಸಿ ಮರುಮರುಗಿ ಮೌನದಿಂದಿದ್ದು ಮತ್ತೆ ಲಕ್ಷ್ಮಣನಲ್ಲಿ—“ಕುರುಬನ ರೋಗಕ್ಕೆ ಕುರಿಯ ಪಿತ್ತವೇ ಮದ್ದಾಯಿತು (ಔಷಧಿಯಾಯಿತು). ನೀವು ಅಷ್ಟೊಂದು ಜನ ಮೈದುನರಿದ್ದೂ ನನಗೆ ಈ ಪಾಡನ್ನುಂಟುಮಾಡಿದಿರೇ? ಅಣ್ಣನಿಗೆ ನೀತಿಯನ್ನು ಹೇಳಿರೇ! ತುಂಬಿದ ಬಸಿರಿಯಲ್ಲವೆ! ಒಡಲನ್ನು ಹೇಗೆ ನಾನು ಹಿಡಿದಿರುವೆನು? ಅತ್ತೆಯರು ಹೀಗೆ ಇದಕ್ಕೆ ಒಪ್ಪಿದರೆ? ನೆಚ್ಚಿನ ಸೇವಕ ಹನುಮಂತನು ಸುಮ್ಮನಿದ್ದನೆ? ಸುಮಂತ್ರಾದಿಗಳಿಗೆ ಮನಸ್ಸು ಬಂದಿತೆ? ವೃದ್ಧ ಜಾಂಬವ ತಡೆಯದಾದನೆ? ಹಾ! ಹಾ! ಹೆಣ್ಣಿನ ಒಂದು ಬಾಳ್ವೆ ಬಾಳ್ವೆಯೆ?” ಎಂದ ಬಳಿಕ ತನಗೆ ತಾನೇ ತಿಳಿದು—“ಆಃ! ನಿಮ್ಮಂಥವರನ್ನೇಕೆ ನಿಷ್ಕಾರಣವಾಗಿ ದೂರುವೆನೊ?

ನನ್ನ ಪೂರ್ವಕರ್ಮದಿಂದ ಈ ಗತಿಯಾದುದಲ್ಲದೆ ಆತನೇನು ಮಾಡುತ್ತಾನೆ; ಕರುಣಾಸಾಗರನಲ್ಲವೆ! ನಂಬಿದವರನ್ನು ಕಾಯುವನೆಂಬ ಬಿರುದುಳ್ಳವನಲ್ಲವೆ! ಆತನ ಪಾದದ ಒಲುಮೆಯೊಂದಿರಲಯ್ಯ!" ಎಂದು ಮತ್ತೆ ಕಣ್ಣೀರು ತುಂಬಿದಳು.

ಹೀಗೆ ಆಡಿದ ಜಾನಕಿಯ ಮಾತನ್ನು ಕೇಳಿ ಲಕ್ಷ್ಮಣನೂ ಮರುಗುತ್ತ ತಗ್ಗಿಸಿದ ಮುಖವುಳ್ಳವನಾಗಿ ನಿಂತಿರಲು; ಸೀತೆ ಮತ್ತೆ ಸೌಮಿತ್ರಿಗೆ— "ಕಂದಾ, ಏತಕ್ಕೆ ನಿಂತಿರುವೆ? ತಡಮಾಡಿದನೆಂದು ನಿನ್ನ ಮೇಲೆ ಅಣ್ಣನು ಕೋಪಿಸುವುದಿಲ್ಲವೆ? ಅಣ್ಣನ ಆಜ್ಞೆ ಸಂದಿತಲ್ಲಾ! ಹೋಗು ಹೋಗಯ್ಯ!" ಎಂದು ಹೇಳಿದಳು. ಆಗ ಲಕ್ಷ್ಮಣನು ತನ್ನನ್ನು ತಾನೇ ಹಳಿದುಕೊಂಡು ದೇವಿಗೆ—"ಹಸುವನ್ನು ಅಗಲಿದ ಎಳೆಯ ಕರುವಿನಂತೆ ನನ್ನ ಒಂದು ಸ್ಥಿತಿಯಾಯಿತೇ! ಅಣ್ಣನ ಆಜ್ಞೆಯೆಂಬ ಒಂದು ಹಗ್ಗವು ಕೊರಳನ್ನು ಬಿಗಿದು ಎಳೆಯುತ್ತದೆ. ಆಗಲೆ ಹಲವು ರೀತಿಯಲ್ಲಿ ಬೇಡಿದೆನು. ದೇವರ ಚಿತ್ತಕ್ಕೆ ಬಾರದಾಯಿತು. ದೇವಿ, ನಿರ್ದಯನನ್ನು ಕುಲಘಾತುಕನನ್ನು ದುಷ್ಟನನ್ನು ಉದ್ಧರಿಸವ್ವಾ!" ಎಂದು ಸೀತೆಯ ಪಾದದಲ್ಲಿ ಬಿದ್ದನು.

ಹೀಗೆ ಪಾದಕ್ಕೆ ಎರಗಿದ ಮೈದುನನನ್ನು ಸಂತೈಸಿ "ಏಳೇಳು ಕಂದ, ಕೈಹಿಡಿದ ನಲ್ಲನೇ ಮುನಿಯುವಲ್ಲಿ ಯಾರು ಏನೆನ್ನುತ್ತಾರೆ! ನಿನ್ನಲ್ಲಿ ಏನು ಅಪರಾಧ? ಹೆಣ್ಣೆನ್ನಿಸಿ ಹುಟ್ಟಿದ ನನ್ನದೇ ದೋಷ. ಹೊತ್ತು ಇಳಿಯಿತಲ್ಲವೆ, ಹೋಗಯ್ಯ. ನಿನಗೆ ಒಳ್ಳೆಯದಾಗಲಿ! ಮತ್ತೆ ಪ್ರಯಾಣವು ಸುಖವಾಗಿರಲಿ! ನಮ್ಮೆಲ್ಲರಿಗೆ ಶ್ರೀರಾಮನ ಪಾದಕಮಲದ ಒಲುಮೆಯೊಂದು ವಜ್ರಪಂಜರವಾಗಲಿ! ಹೋಗಯ್ಯ" ಎಂದು ಹರಸಿ ಲಕ್ಷ್ಮಣನಿಗೆ ಪ್ರಯಾಣಕ್ಕೆ ಅನುಮತಿ ಕೊಟ್ಟಳು.

ಆಗ ಸೌಮಿತ್ರಿ ಉಯ್ಯಾಲೆಯಂತೆ ತೂಗಾಡುವ ಮನಸ್ಸುಳ್ಳವನಾಗಿ ದೇವಿಯರಿಗೆ ಪ್ರದಕ್ಷಿಣೆ ಬಂದು ಕೈಮುಗಿದು ದಿಕ್ಪಾಲಕರಿಗೆ—"ಈಕೆ ನಿಮಿಕುಲದಲ್ಲಿ (ಜನಕನು ಹುಟ್ಟಿದ ಕುಲ; ನಿಮಿಯೆಂಬುವನಿಂದ ಹೆಸರು ಬಂದ ಕುಲ) ಹುಟ್ಟಿ ರಾಜಯೋಗಿಯಾದ ಜನಕನ ಪ್ರೀತಿಯ ಕುವರಿ, ರಾಕ್ಷಸರ ಬಳಗವನ್ನು ನಾಶಮಾಡಿ ದಿಕ್ಕುಗಳಿಗೆ ಬಲಿಕೊಟ್ಟು ನಿಮ್ಮನ್ನು ಹೊರೆದ ಶ್ರೀರಾಮನ ಪಟ್ಟದರಾಣಿ. ನಮ್ಮ ಅಣ್ಣನ ಆಜ್ಞೆಗಾಗಿ ಇವಳನ್ನು ಕಾಡಿನಲ್ಲಿರಿಸಿ

ಹೋಗುವೆನು. ಪೂರ್ಣಗರ್ಭಿಣಿ. ನೀವೆಲ್ಲರೂ ಕಾವಲಿದ್ದು ಕಾಪಾಡಿರಿ" ಎಂದೂ, ಸೂರ್ಯನಿಗೆ—"ಎಲೈ ಸೂರ್ಯನೆ, ನಿನ್ನ ಕುಲದ ಹೆಣ್ಣಿವಳು ; ನಿನ್ನ ವಂಶಬಳ್ಳಿ ಹಬ್ಬುವುದಕ್ಕೆ ಇವಳು ತಾಯಿಬೇರು. ಆದರಿಂದ ಇವಳಲ್ಲಿ ದೃಷ್ಟಿ ಇರಲಿ !" ಎಂದೂ, ವನದೇವಿಗೆ, "ಎಲೆ, ಶಾಕಂಭರಿ (ವನಸ್ಪತಿಗಳನ್ನು ತುಂಬಿಕೊಂಡಿರುವವಳೇ), ಇದೊ ತೆಗೆದುಕೊ, ಭಾಗ್ಯಲಕ್ಷ್ಮಿ ನಿನ್ನ ಗೆಳತನಕ್ಕೆ ಬಯಸಿ ಬಂದಿದ್ದಾಳೆ. ಆ ಕಾರಣವಾಗಿ ನೀನೂ ಇವಳೂ ಜೊತೆಯ ಗೆಳತಿಯರಾಗಿ ಸುಖವಾಗಿರಿ" ಎಂದೂ ಹೇಳಿ, 'ಅಗಲಿ ಹೋಗುವನು' ಎಂಬ ಒಂದು ಬೇಸರದಿಂದ ದುಃಖಿತೆಯಾಗಿ ತನ್ನನ್ನೇ ನೋಡುವ ದೇವಿಯ ಸ್ಥಿತಿಯನ್ನು ನೆನೆನೆನೆದು ಗಾಳಿಗೆ ಎದುರಾಗಿ ಹೋಗುವ ಧ್ವಜದ ಕಾವಿಯ ಬಟ್ಟೆಯಂತೆ ಮನಸ್ಸು ಹಿಂದುಳಿಯಲು, ನಡೆಯುವ ನಿರ್ಜೀವದೇಹವೆನ್ನುವಂತೆ ಹಲವು ಹಂಬಲದ ಒಂದು ಸಂಕಟವು ತೀವ್ರವಾಗಲು ಬೀಳ್ಕೊಂಡನು.

ಮುದ್ದಣ—ಅತ್ತ ಅಯೋಧ್ಯಾನಗರದಲ್ಲಿ ಯಜ್ಞಕುದುರೆಯನ್ನು....

ಮನೋರಮೆ—ಸುಡು ಸುಡು ನಿನ್ನ ಯಜ್ಞಕುದುರೆಯನ್ನು ! ಆ ಕಥೆಗೆ ಈಗಲೇ ಹೊತ್ತೇ ? ಆಃ ! ಸೀತೆಯೇನಾದಳು ಹೇಗಿರುವಳು ಎಂದು ಹೇಳಯ್ಯ !

ಮುದ್ದಣ—ಬಾಲೆಯೇ, ಆಯಿತಾಯಿತು, ಹಾಗೆ ಲಕ್ಷ್ಮಣನು ಬೆನ್ನು ತಿರುಗಿಸಿ ಹೋಗಲು, ಆ ದಿಕ್ಕನ್ನೇ ನೋಡಿ ನೋಡಿ ದುಃಖ ಮರುಕಳಿಸಿ ಒಂದೇ ಸಮನಾದ ತನ್ನ ಒಂದು ಬವಣೆಗೆ (ಕಷ್ಟಕ್ಕೆ) ಬಹು ಗಾಭರಿಗೊಂಡು ಚಿಂತಿಸಿ ತನ್ನಲ್ಲೇ ತಾನು—"ಆಃ ! ನಿಮಿಕುಲಕ್ಕೂ ಛಲಕ್ಕೂ ಗಂಡನು (ಅಧಿಪತಿ) ಎನ್ನುವಂತೆ ಹೆಸರು ಪಡೆದು ವೇದವನಿತೆಯರ ಬೈತಲೆಯ ರತ್ನ (ಚೂಡಾರತ್ನ)ಕ್ಕೆ ಬೆಲೆ ಕಟ್ಟೆ ಬ್ರಹ್ಮರ್ಷಿಗಳಿಗೂ ತತ್ತ್ವವನ್ನು ಬೋಧಿಸುವ ಒಂದು ಜಾಣ್ಮೆಯಿಂದ ಏಳಿಗೆ ಪಡೆದ ಜನಕರಾಜನಿಗೆ ಮುದ್ದು ಮಗಳೆನ್ನಿಸಿಯೂ, ಅಖಂಡ ಮಂಡಲೇಶ್ವರರೂ ಆಶ್ರಯ ಪಡೆದು ಒಂದುಗೂಡಿ ಬಾಳುವಂತೆ ತನ್ನ ಯಶಸ್ಸಿನ ಶೋಭೆಯಿಂದ ಪ್ರಸಿದ್ಧಿ ಪಡೆದ ಸಾರ್ವಭೌಮ ರಾಘವನ ಕೈ ಹಿಡಿದು (ಆತನ) ಪಟ್ಟದರಾಣಿಯಾಗಿಯೂ, ಅಂತಃಪುರದ ಸಮವಯಸ್ಸಿನ ಹೆಂಗಸರಿಂದ ಓಲೈಸಿಕೊಂಡೂ ಬಾಳಿದ ನನಗೆ ಈಗ ಇಂತಹದೊಂದನ್ನು ವಿಧಿ ಬಗೆಯಿತೇ ! ಉಃ ! ಹೋಗಲಿ ಹಲವು ದುಃಖಗಳಿಂದೇನು (ಅರಣ್ಯರೋದನ

ದಿಂದೇನು) ? ಶ್ರೀರಾಮನ ಒಲುಮೆಯೊಂದೇ ಶಾಶ್ವತ. ಆತನ ನಾಮ ಸ್ಮರಣೆಯೇ ನನಗೆ ದಾರಿ. ಹೇ ಕಲ್ಯಾಣರೂಪ! ನೀನು ನನ್ನನ್ನು ಕೈಬಿಡ ದಿರಯ್ಯ. ಹೇ ಕರುಣಾಕರ! ದಿಕ್ಕುಗೆಟ್ಟ ನನ್ನನ್ನು ಮರೆಯದಿರು. ಹೇ ಜಗದೊಡೆಯ! ಹೆಣ್ಣಾದ ನನ್ನಲ್ಲಿ ಕರುಣೆಯಿರಲಯ್ಯ. ರಾಮಾ! ರಾಮಾ!! ರಾಮಾ!!!" ಎಂದು ಧ್ಯಾನದಲ್ಲಿದ್ದಳು.

ಆ ಹೊತ್ತಿಗೆ ವೇದಪುರುಷನೇ ಮುದಿತನದ ಒಂದು ರೂಪದಿಂದ ಪ್ರತ್ಯಕ್ಷನಾಗಿ ನಡೆದುಬಂದನೊ ಎನ್ನುವಂತೆ ವಾಲ್ಮೀಕಿ ತಾನಾಗಿಯೇ ಆ ದಾರಿಯಲ್ಲೇ ಬರುತ್ತಿದ್ದನು.

ಹೀಗೆ ಬರುಬರುತ್ತ ಕಟ್ಟೆದುರಲ್ಲಿ, ಅರ್ಧಚಂದ್ರನಂತಹ ಗಲ್ಲವನ್ನು ಚಿಗುರಿನಂತಹ ಕೈಯಲ್ಲಿ ಊರಿ ಪೂರ್ವಾಹ್ನದ ಚಂದ್ರನಂತೆ ಕಳೆಗೆಟ್ಟು, ತನ್ನ ಒಂದು ಕಣ್ಣಕಾಂತಿ ಕಾಳಿಂದಿಯ ಕರ್ಮಡುವಿನಲ್ಲಿ ಓಲಾಡುವ ಬಾಳೆಮೀನಿನ ರೀತಿಯಿಂದ ಹೊಳೆಯುತ್ತಿರಲು, ಎತ್ತಲೊ ನೋಡುವ ಹೆಣ್ಣೊಬ್ಬಳಿರಲು, ಕಂಡು ಆಶ್ಚರ್ಯಪಟ್ಟು, ಯಾವಳೆಂದು ತಿಳಿಯೋಣವೆಂದು ಹತ್ತಿರಕ್ಕೆ ಬಂದು— "ಯಾರವ್ವ ? ವನದೇವಿಯಂತೆ ಈ ವನದಲ್ಲಿ ಒಬ್ಬಳೇ ಇರುವುದೇನು!" ಎಂದು ಕೇಳಿದನು. ಈ ನುಡಿಗೆ ಸೀತೆ ಮನಸ್ಸಿನ ಒಂದು ಭಯದಿಂದ ಗಕ್ಕನೆ ಎದ್ದು ಹಿಂಜರಿದು ಮೊದಲಿನ ಒಂದು ಕಷ್ಟವನ್ನು ನೆನೆದು ರಾಕ್ಷಸರ ಮಾಯೆ ಯೆಂದೇ ಬಗೆದು—"ನನ್ನಾಣೆ! ರಾಜನಾಣೆ! ಹತ್ತಿರ ಬಾರದಿರು, ಬಾರದಿರು" ಎಂದು ಕೆಂಪುಕಣ್ಣುಳ್ಳವಳಾಗಿ ಮರದ ಮರೆಗೆ ಹೋದಳು.

ಹೀಗಾಗಲು ಆ (ಹುತ್ತದ ಪುತ್ರನಾದ) ವಾಲ್ಮೀಕಿ ಯಾವಳೋ ಬಾಲೆ ತಲ್ಲಣಗೊಂಡಳೆಂದು ಮರುಮಾತಿನಲ್ಲಿ—"ಬಾಲೆ, ನಾವು ಅನ್ಯರಲ್ಲ; ತಪಸ್ವಿ ಗಳು, ಕಾಡೆ ನಾಡಾಗಿರಲು, ಈ ಎಡೆಯ ಆಶ್ರಮದಲ್ಲಿಯೇ ಇರುವೆವು. ವಾಲ್ಮೀಕಿ, ನೋಡು! ಅಂಜದಿರವ್ವ! ನೀನು ಯಾರು ? ಹೆಸರೇನೆಂದು ಹೇಳವ್ವ" ಎಂದು ಕೇಳಿದನು.

ಆಗ ಸೀತೆಗೆ ಮನದ ಭಯದ ಕವಲು ಹೊರಟುಹೋಗಲು, ಸಂದೇಹ ವೆಷ್ಟೋ ಹಿಂಜರಿಯಲು, ನಿಜದ ನಂಬಿಕೆಯುಂಟಾಗಲು—"ಹಾಗಾದರೆ ನೀನು ಮಾನ್ಯನು (ಗೌರವಸ್ಥನು). ನಿನಗೆ ಎರಗುವೆನು, ತಂದೆ! ನನ್ನ ಸ್ಥಿತಿ ಯನ್ನು ಏನೆಂದು ಹೇಳಲಿ ? ಜನಕರಾಜನಿಗೆ ಮಗಳಾಗಿ, ದಶರಥನಿಗೆ ಸೊಸೆ

ಯಾಗಿ, ಶ್ರೀರಾಮನಿಗೆ ಪಟ್ಟದರಾಣಿಯಾಗಿ ಬಾಳಿದ ನನ್ನ ಬದುಕು ಈಗ ವನದಲ್ಲಾಯಿತಯ್ಯ! ರಾಕ್ಷಸನಲ್ಲಿ ಬಂಧಿಯಾಗಿ ಬಾಳ್ದ ನನ್ನನ್ನು ಒಪ್ಪಿ ಕೊಂಡನೆಂಬ ಒಂದು ಲೋಕಾಪವಾದದ ಕಾರಣದಿಂದ ಶ್ರೀರಾಮನು ನನ್ನನ್ನು ಅಡವಿಯಲ್ಲಿ ಬಿಡುವುದೆಂದು ಲಕ್ಷ್ಮಣನಿಗೆ ಅಪ್ಪಣೆಯನ್ನು ಕೊಟ್ಟು ಕಳಿಸಿದ ನಯ್ಯ! ಹಾಗೆ ಲಕ್ಷ್ಮಣನು ಈಗ ತಾನೇ ಬಿಟ್ಟುಹೋಗಲು ಕಾಡಿಗೆ ವಶವಾದೆ ನೆಂಬ ಒಂದು ಭೀತಿಯಿಂದ ಬೆದರಿ ಗಾಭರಿಯಾಗಿ ಕಾಡಿನ ಕತ್ತಲೆಗೆ ಕರಗಿದ ಈ ಮರಗಳ ಪೊಟರೆಯಲ್ಲಿ ದಿಕ್ಕುಗೆಟ್ಟು ವನಪಿಶಾಚಿಯಂತಿದ್ದು ಇದೋ ಮರುಗುತ್ತಿರುವೆನು; ನನ್ನ ಈ ನಶ್ವರ ಶರೀರವನ್ನು ಬಾವಿ, ಹಗ್ಗಗಳಿಗೆ ಒಪ್ಪಿಸಿ ದರೆ, ನನ್ನ ಇನಿಯನನ್ನು ಮತ್ತೊಮ್ಮೆ ಕಾಣಲಾಗುತ್ತದೆಯೆಂದರೆ ಏನು ಮಾಡಲಿ ? ಆರು ತಿಂಗಳ (ಹೆರುವ ತಿಂಗಳ ?) ಗರ್ಭಿಣಿಯಾಗಿರುವುದರಿಂದ ಆತ್ಮಹತ್ಯೆ ಭ್ರೂಣಹತ್ಯೆಗಳ ದೋಷಗಳು ಒಮ್ಮೆಲೆ ಬಂದು ಒದಗುವುವು ಎಂದೇ ಬಿಟ್ಟೆನು. ಹಾ !" ಎಂದು ಆತನ ಪಾದಕ್ಕೆ ಬಾಗಿದಳು.

ಹೀಗೆ ಎರಗಿದವಳನ್ನು ಕಂಡು ಮುನಿಪನು—"ಹಾಗೆ ಆಗದವ್ವ! ನಿಶ್ಚಯವಾಗಿ ನೀನು ಮಕ್ಕಳನ್ನು ಪಡೆಯುವುದುಂಟು. ಮರುಗದಿರು. ಹತ್ತಿರ ದಲ್ಲೇ ನಮ್ಮ ಆಶ್ರಮವು (ಇದೆ). ಯೋಗಪಟ್ಟಕೆಯಾಣೆ (ಯೋಗಿಗಳು ತಮ್ಮ ಯೋಗಾಭ್ಯಾಸದ ಕಾಲಕ್ಕೆ ತಮ್ಮ ದೇಹಕ್ಕೂ ಕಾಲುಗಳಿಗೂ ಒಟ್ಟು ಸುತ್ತಿ ಕಟ್ಟುವ ಬಟ್ಟೆಯು ಪಟ್ಟೆ)! ರಾಘವನಾಣೆ! ಮಗಳೆಂದೇ ನಿನ್ನನ್ನು ಸಲಹುವೆನು. ಏಳವ್ವ !" ಎಂದು ಸಂತೈಸಿ, ಭಾಗ್ಯಲಕ್ಷ್ಮಿಯನ್ನು ಕೊಂಡೊಯ್ಯುವ ದೀನನಂತೆ, ಸಂತೋಷದಿಂದ ತನ್ನ ಆಶ್ರಮದ ಕಡೆಗೆ ಕರೆದುಕೊಂಡು ಹೋದನು. ಆಶ್ರಮವನ್ನು ಕಂಡು ಸಂತೋಷವಾಗಲು, ವಾಲ್ಮೀಕಿಯ ಜೊತೆ ಸೀತೆ, ಸಂಜೆಯಲ್ಲಿ ಸಂಧ್ಯಾದೇವಿಯಂತೆ, ಮುನಿ ತೋರಿಸಿದ ಎಲೆ ಮನೆಯನ್ನು, ಆಶ್ರಮವಾಸಿಗಳು ಹೊಗಳಲು, ದೇವತೆಗಳು ಕೊಂಡಾಡಲು, ಬಂದು ಪ್ರವೇಶಿಸಿ ಮುನಿಯ ಪಾಲನೆಯಲ್ಲಿ ಸುಖದಿಂದಿದ್ದಳು.

ವಿಜಯ ಪ್ರಯಾಣ

ಮುದ್ದಣ—ನನ್ನ ಕೊಂಡಾಡುವಿಕೆಯ ಜೀವಲಕ್ಷ್ಮಿಯೇ! ಹೀಗೆ ಸೀತೆಯು ವಾಲ್ಮೀಕಿಯ ಒಲುಮೆಯ ರಕ್ಷಣೆಯಿಂದ ಪುಣ್ಯಾಶ್ರಮದಲ್ಲಿರುವಾಗ ಇತ್ತ ಸಾಕೇತನಗರದಲ್ಲಿ (ಅಯೋಧ್ಯೆಯಲ್ಲಿ) ಸೀತಾರಾಮನು ತನ್ನ....

ಮನೋರಮೆ—ನಲ್ಲ, ಏನು ಮಾತೊ? ಸೀತೆಯನ್ನು ಹಾಗೆ ಬಿಟ್ಟೊ ಎಂತಹ ಸೀತಾರಾಮ? ಹೋ! ಬಿಡು! ಅವನಿಗೆ ಇನ್ನೆಲ್ಲಿಯ ಸೀತೆ? ಆಗುವ್ರದಾದರೆ ಇನ್ನು ಆ ಕಲ್ಲೆದೆಯವನು ರಾಮನೊಭೀಮನೊ, ಏನು?

ಮುದ್ದಣ—ನನ್ನ ಕ್ಸೆಯ ಕಳಸವೆ! ಹೀಗೂ ಹೇಳುವರೆ! ಶ್ರೀರಾಮನು ಕಲ್ಲೆದೆಯವನೆ? ಆಃ! ಬಳಿಕದ ಆತನ ಪ್ರಲಾಪವನ್ನು ನೀನು ಕೇಳಿದುದಿಲ್ಲ.

ಮನೋರಮೆ—ಏನು, ತಾನೇ ತಲೆ ಬಡಿದುಕೊಂಡು ಮರುಗಿದನೆ?

ಮುದ್ದಣ—ರಾಮನು ತಲೆಬಡಿದುಕೊಂಡನೇನು? ತಾನು ಯಶೋಧನನಾದ್ದರಿಂದ ಲೋಕಾಪವಾದಭೀತಿಗಾಗಿ ಅಡವಿಗೆ ಅಟ್ಟಿದನಲ್ಲದೆ ರಾಣಿಯಲ್ಲೇನು ಹಗೆಯೆ?

ಮನೋರಮೆ—ಹಗೆಯೇನು, ನಗೆಯೇನು! ಬಡವೆಯೊಬ್ಬಳು ಕಾಡಿಗಾದಳಷ್ಟೆ?

ಮುದ್ದಣ—ಹೀಗೆ ಇದನ್ನೇ ನೆನೆನೆನೆದು ವಿಶೇಷವಾಗಿ ಹಲುಬಿದನು.

ಮನೋರಮೆ—ಏನು ತನಗೆ ಬೇರೆ ಪತ್ನಿಯರು ಇಲ್ಲವೆಂದೆ?

ಮುದ್ದಣ—ಪರಿಹಾಸ್ಯ ಸಾಕು ಕೇಳು. ಯಾವಾಗ ಲಕ್ಷ್ಮಣನು ಸೀತೆಯನ್ನು ಕೊಂಡೊಯ್ದನೆಂಬ ವಾರ್ತೆ ಕೇಳಿಸಿತೊ ಆಗಲೇ ಪಶ್ಚಾತ್ತಾಪದಿಂದ ರಾಘವನ ಮನಸ್ಸು ಒಳಗೊಳಗೆ ಬೆಂದು ಬೇಯುವ ಕುದಿಯಲ್ಲಿತ್ತು (ತೀವ್ರ ಸಂತಾಪದಲ್ಲಿತ್ತು); ಮತ್ತು ಯಾವಾಗ ವನದಲ್ಲಿ ಇಳಿಸಿ ಬಂದನು ಎಂದನೊ ಆಗಲೇ ಒಮ್ಮೆಯೆ ಉಕ್ಕಿತು.

ಮನೋರಮೆಯೇ, ಮುಂದಿನ ಕಥೆಯನ್ನು ಕೇಳು. ಹಾಗೆ ಅಗಸ್ತ್ಯನ ಅಪ್ಪಣೆಯನ್ನು ಹಿಡಿದು ಅಶ್ವಮೇಧವನ್ನು ಕೈಕೊಂಡ ರಾಘವನು ಸ್ವರ್ಣ ಸೀತಾಸಮೇತನಾಗಿ ದೀಕ್ಷೆವಹಿಸಿದನು. ಅಗಸ್ತ್ಯನು ಬ್ರಹ್ಮನಾದನು, ವಸಿಷ್ಠನು

ಆಚಾರ್ಯನಾದನು. ಮತ್ತು ಋಷಿಗಳು ಅಧ್ವರ್ಯು ಉದ್ಗಾತೃ ಹೋತಾರರೂ ಋತ್ವಿಜರೂ ಸಾಮಾಜಿಕರೂ ಆಗಿ ಶೋಭಿಸಿದರು. ಅಷ್ಟರಲ್ಲಿ ಆಚಾರ್ಯನು ಶುಭಮುಹೂರ್ತದಲ್ಲಿ ಅಲಂಕೃತವಾದ ಸೊಗಸಾದ ಯಜ್ಞಕುದುರೆಯನ್ನು (ಶಾಸ್ತ್ರದಲ್ಲಿ) ಹೇಳಿದಂತೆ ಪೂಜಿಸಿ, ವಂಶದ ಶ್ರೇಷ್ಠತೆಯ ಬಿರುದಿನ ಮಾತನ್ನು ಬರೆದ ಓಲೆಯನ್ನು (ಅದರ) ಹಣೆಗೆ ಬಿಗಿದು, "ನಿರಾತಂಕವಾಗಿ ಐವತ್ತಾರು ದೇಶಗಳನ್ನು ಸಂಚರಿಸುತ್ತ ಕಪ್ಪಕಾಣಿಕೆಗಳನ್ನು ಕೂಡಿ ತರುವುದು" ಎಂದು (ಅದರ) ಶಿರದಲ್ಲಿ ಮಂತ್ರಾಕ್ಷತೆಯನ್ನು ಇಟ್ಟು (ಅದನ್ನು) ಬಿಟ್ಟನು. ಅನಂತರ ಯಜಮಾನನು "ಈ ಹೊತ್ತು ಹೋಗಲು ಬಿಟ್ಟ ಯಜ್ಞಾಶ್ವದ ಬೆನ್ನ ಹಿಂದೆ ಹೋಗಿ, ನೆರವನ್ನು ನೀಡುವ ನಾಡೊಡೆಯರ ಕಪ್ಪ ಕಾಣಿಕೆಯನ್ನು ಒಟ್ಟು ಗೂಡಿಸಿಕೊಂಡು, ಬಲದಿಂದ (ಕುದುರೆಯನ್ನು) ತಡೆಯುವವರೊಡನೆ ಹೋರಾಟ ನಡೆಸಿ (ಅದನ್ನು) ಹಿಂದಿರುಗಿಸಿ ತೆಗೆದುಕೊಂಡು, ಜಯವನಿತೆಗೆ ಯಶಸ್ಸಿನ ಹೊಸ ಹೂಮಾಲೆಯನ್ನು ಮುಡಿಸಿಕೊಂಡು, ಅವಳೊಡನೆ ಬರುವ ಸಾಮರ್ಥ್ಯವುಳ್ಳ ಗಂಡುಗಲಿಗಳಿರಾ, ನನ್ನ ಈ ಕೈ ವೀಳ್ಯವನ್ನು ಕೈಕೊಳ್ಳಿರಿ" ಎನ್ನಲು, ಆಗ ಉಂಟಾದ ನಾನು ತಾನು ಎನ್ನುವ ವೀರರ ಗಲಭೆಯ ಕೂಗನ್ನು ನಿಲ್ಲಿಸಿ ಹುಬ್ಬಿನ ಒಂದು ಜರ್ಬಿನಿಂದ, ಕಂಠದ ಒಂದು ಹುಂಕಾರದಿಂದ, ವೀರರ ಗುಂಪಿನಲ್ಲಿ ನುಗ್ಗಿ ದಾರಿಮಾಡಿಕೊಂಡು, ರಾಜನ ಎದುರು ಬಂದ ಶತ್ರುಘ್ನನು—"ಯಾರೂ ಅಲ್ಲ, ನಾನೇ ತೆಗೆದುಕೊಳ್ಳುವೆನು" ಎಂದನು. ರಾಮನು ತನ್ನ ಚಿಕ್ಕತಮ್ಮನ ವೀರತ್ವದ ದೇಹಶಕ್ತಿಯ ಬಿಂಕದ ಸಂಪ್ರದಾಯದ ನುಡಿಗೆ ಸಂತೋಷಗೊಂಡು—"ಒಳ್ಳೆಯದೊಳ್ಳೆಯದಯ್ಯ, ಭರತನು ನಗರ ಪಾಲಕನಾಗಿ ಒದಗಿರಲು, ಲಕ್ಷ್ಮಣನು ನನ್ನ ಸಹಾಯಕದ ಊಳಿಗದಲ್ಲಿರಲು, ನೀನಲ್ಲದೆ ಬೇರೆ ಯಾರು ಈ ಕಾರ್ಯದಲ್ಲಿ ಸಲ್ಲುವನು? ಹೋಗು, ಕ್ಷಾತ್ರಧರ್ಮ ಗಳಲ್ಲಿಯೂ ಉಪಾಯಗಳಲ್ಲಿಯೂ ನೀನು ಜಾಣನಿರುವುದರಿಂದ ಬೇರಾವ ನಡೆನುಡಿಯನ್ನು ಹೇಳಲಿ?" (ಎಂದನು.) ಆಗ ಶತ್ರುಘ್ನನು ರಾಘವನಿಗೆ ನಮಸ್ಕರಿಸಿ, ಭರತಾದಿಗಳಿಗೆ ನಮಸ್ಕರಿಸಿ, ತಾಯಂದಿರಿಗೆ ನಮಸ್ಕರಿಸಿ, ಗುರುವಿಗೆ ನಮಸ್ಕರಿಸಿ, ಹಿರಿಯರಿಗೆ ತಲೆಬಾಗಿ, ವಿಪ್ರರಿಗೆ ಕೈಮುಗಿದು, ಋತ್ವಿಜರಿಗೆ ನಮಸ್ಕರಿಸಿ, ಸಭ್ಯರಿಗೆ ನಮಸ್ಕರಿಸಿ, ಮುತ್ತೈದೆಯರ ಪಾದಮುಟ್ಟಿ ಆಶೀರ್ವಾದ ಪಡೆದು, ವಿನಾಯಕನಿಗೆ ನಮಸ್ಕರಿಸಿ, ಸೂರ್ಯನನ್ನು ಧ್ಯಾನಿಸಿ, ತ್ರಿಮೂರ್ತಿ

ಗಳನ್ನು ಸ್ತುತಿಸಿ, ನವಗ್ರಹಗಳನ್ನು ಧ್ಯಾನಿಸಿ ದಿಕ್ಪಾಲಕರನ್ನು ಸ್ಮರಿಸಿ, ಯಜ್ಞಾಶ್ವಕ್ಕೆ ಪ್ರದಕ್ಷಿಣೆ ಬಂದು, ಬಾಣಸಹಿತನಾಗಿ ಸರ್ವರ ಅನುಮತಿ ಪಡೆದು ಸುಮತಿಯೊಡನೆ ಹೊರಟನು. ಆ ಹೊತ್ತಿಗೆ ಹನುಮಂತ, ಸುಗ್ರೀವ, ನೀಲ, ನಳ, ಜಾಂಬವಾದಿಯಾದ ಕಪಿವೀರರೂ ಕೋತಿಪಡೆಯನ್ನು ಒಡಗೊಂಡು ನಾಯಕನ ಪ್ಕೆ ಕಾವಲಿಗೆಂದು ತೆರಳಿದರು.

ಈಗ ಶತ್ರುಘ್ನನ ಆಜ್ಞೆಯಿಂದ ಪುಷ್ಕಲನ ಒಂದು ನಿಯಮದಿಂದ ರಥಿಕರ ಮಂತ್ರಾಲೋಚನೆಯಿಂದ ಕಾಡುಮಾನವ ವೀರರ (ಕಾಡಿನ ಬೇಡರು ನುಗ್ಗಿ ಏರಿಹೋಗುವಂತೆ) ಪದ್ಧತಿಯಿಂದ ನಡೆಯುವ ಸೇನೆಯ ರಕ್ಷಣೆಯಿಂದ ಯಜ್ಞಾಶ್ವವು ತರಂಗಲೀಲೆಯಿಂದ ಇಷ್ಟ ಬಂದಂತೆ ಹೊರಟಿತು.

ಕಾಮಾಕ್ಷಿ ದರ್ಶನ

ಹೀಗೆ ಈ ರೀತಿಯಿಂದ ಯಜ್ಞಾಶ್ವವು ನಾನಾ ದೇಶಗಳಲ್ಲಿ ಮನೋರಥದ ಕುದುರೆಯಂತೆ ಸುತ್ತಿ ಸುತ್ತಿ ಬರುತ್ತಿರಲು, ಊರಾಳು ಬಲ್ಲಾಳು ಹೆಗ್ಗಡೆ ಮಹಾಸಾಮಂತ ಮಾನ್ಯರಾಜರು ಮುಂತಾದ ನಾಡೊಡೆಯರು ಶ್ರೀರಾಮನ ಸಾಮರ್ಥ್ಯದ ಶಕ್ತಿಯ ವಂಶದ ಬಿರುದನ್ನು ಓದಿ ಕುದುರೆಯ ಬೆಂಬಲದ ಶೂರಸೈನಿಕರನ್ನು ಕಂಡು ಕೈಮುಗಿದು, ಶತ್ರುಘ್ನನ ಮರೆಹೋಗಿ, ಕಪ್ಪವನ್ನು ಒಪ್ಪಿಸಿ, ತಾವೂ ಸೈನ್ಯಸಮೇತರಾಗಿ ಕುದುರೆಯ ಕಾವಲಿಗೆ ಸಿದ್ಧರಾಗಿ ಹೊರಟರು.

ಹಾಗೆ (ಹೋಗುತ್ತಿರಲು), ಮುಂಗಾರೆನ್ನದೆ ಸುಗ್ಗಿಯೆನ್ನದೆ ಬೇಸಿಗೆಯೆನ್ನದೆ ಆಷಾಢವೆನ್ನದೆ ನೀರಿನ ಬುಗ್ಗೆಯಿಂದ ತುಂಬಿ ಪ್ರವಾಹವಾಗಿ ಹರಿಯುವ ಸೊಂಪಿನ ಪೆಂಪಿನ (ಹಿರಿಮೆಯ) ಅಲಂಪಿನ (ಪ್ರೀತಿಯ) ಒಂದು ಚೊಕ್ಕಟದ ನೀರಿನ ತಾಣವನ್ನು, ಬನವನ್ನು, ದೇವಾಲಯವನ್ನು ಕಂಡು ಬಗೆಬಗೆಯ ಬಹು ಆಶ್ಚರ್ಯದಿಂದ ಶತ್ರುಘ್ನನು ತನ್ನ ವೃದ್ಧಮಂತ್ರಿಗೆ—"ಅಯ್ಯ ಸುಮಂತಿ, ನೋಡಿದೆಯಾ, ಈ ಕಟ್ಟುಬ್ಬಿನ ಬೇಸಿಗೆಯ ಬೇಗೆಯಲ್ಲಿಯೂ ಬತ್ತದೆ ತುಂಬಿ ನಿರ್ಮಲವಾಗಿ (ಪ್ರವಾಹವಾಗಿ) ಹರಿಯುವ ಸರೋವರವನ್ನು !

ಓ! ನೋಡಿದರೆ ಈ ವನವು ಪ್ರಸಿದ್ಧಿಪಡೆದ ದೇವತೆಗಳ ಉದ್ಯಾನವನ್ನೂ ಹೀನೈಸುತ್ತದೆ! ಆಶ್ಚರ್ಯವಲ್ಲವೆ? ಇದೋ ಆ! ತೋರುವುದು, ಆ! ತೋರುವುದು ಒಂದು ದೇವಾಲಯ ಬೆಳ್ಳಿಬೆಟ್ಟದ ರೀತಿಯಲ್ಲಿ! ಯಾವ ದೇವತೆ ಇರುವಳೊ? ಯಾವ ಹೆಮ್ಮೆಯ ಮೂಲವೊ ಹೇಳು" ಎಂದು ಕೇಳಲು, ಒಡನೆ ಮಂತ್ರಿಯು—"ಸ್ವಾಮಿಯೇ, ಹೀಗೆ ಇವೆಲ್ಲವೂ, ಅಲ್ಲಿ ತೋರುವ ಪಟ್ಟಣಕ್ಕೆ ಒಡೆಯನಾದ ಸುಮದನಿಗೆ ಒಲಿದು ಬಂದು ಈ ದೇವಾಲಯದಲ್ಲಿ ನೆಲೆಸಿರುವ ಕಾಮಾಕ್ಷಿದೇವಿಯ ಒಂದು ಮಹಿಮೆಯಷ್ಟೆ! ಅದರಿಂದ ಈ ಪುಣ್ಯ ರೂಪಿಯ ದರ್ಶನಮಾಡಿ ಪ್ರದಕ್ಷಿಣೆ ಬಂದರೆ ನಮಗೆ ಎಲ್ಲವೂ ಜಯ" ಎಂದನು. ಆ ಮಾತಿಗೆ ಶತ್ರುಘ್ನನು, "ಹಾಗೇನು? ಸುಮದನು ಯಾವ ನಾಡಿನ ಒಡೆಯನು? ಏಕೆ ದೇವಿಯನ್ನು ಮೆಚ್ಚಿಸಿದನು? ಏಕೆ ಬಂದಳು? ಯಾರು ಅವಳು? ನಾನು ತಿಳಿಯುವಂತೆ ವಿಸ್ತರಿಸಯ್ಯ" ಎಂದು ಕೇಳಿದನು. ಅದಕ್ಕೆ ಸಚಿವನು—"ಲಾಲಿಸಯ್ಯ, ಈ ಭೂಕಾಂತೆಗೆ ತಿಲಕದಂತೆ ಇದೇ ನಂದನಕ್ಕೆ ಪಕ್ಕದಲ್ಲಿ ಅಹಿಚ್ಛತ್ರಪುರವು ಶೋಭಿಸುವುದು. ಈ ನಾಡನ್ನು ಸುಮದ ನೆಂಬೊಬ್ಬನು ಪ್ರಸಿದ್ಧ ರಾಜನು ಆಳುವನು. ಮೊದಲೊಮ್ಮೆ ತನ್ನ ಪಟ್ಟಣ ವನ್ನು ಶತ್ರುರಾಜರು ಸೂರೆಮಾಡಲು, ಒಡನೆ ಅದು ವೈರಾಗ್ಯವನ್ನು ಹುಟ್ಟಿಸಲು, ಹತಭಾಗ್ಯನು (ಆ ರಾಜನು) ಕಾಡನ್ನು ಹೊಕ್ಕು, ಕಾಮಾಕ್ಷಿ ಯನ್ನು ಒಲಿಸಿಕೊಳ್ಳಲು ತಪಸ್ಸಿನಲ್ಲಿ ನಿಂತನು. ತರಗೆಲೆಯನ್ನು ಉಂಡು ಮೂರು ವರ್ಷ, ನೀರನ್ನು ಉಂಡು ಮೂರು ವರ್ಷ, (ಹೀಗೆ) ತುಂಬ ಉಗ್ರ ತಪಸ್ಸನ್ನು ಮಾಡಿದನು. ಹೀಗೆ ಹನ್ನೆರಡು ವರ್ಷದವರೆಗೆ ತಪಸ್ಸಿನಲ್ಲಿರಲು, ಕಡಲು ಕುದಿಯುವಷ್ಟು, ಪರ್ವತಗಳು ಕುಸಿಯುವಷ್ಟು, ಕಾಡು ಸುಡುವಷ್ಟು, ದಿಕ್ಪಾಲಕರು ಮೂಲೆಮೂಲೆಗೆ ಹಿಂಜರಿಯುವಷ್ಟು ತಪಸ್ಸಿನ ಪ್ರಭಾವ ಹೆಚ್ಚಾಗಿ ದಿಕ್ಕುದಿಕ್ಕಿನಲ್ಲೂ ವಿಜೃಂಭಿಸಲು, (ಇದನ್ನು) ಕಂಡು ಅಸೂಯೆ ಯಿಂದ ಇಂದ್ರನು ಕೆಟ್ಟ ಆಲೋಚನೆಯಿಂದ ತಪೋವಿಘ್ನವನ್ನುಂಟುಮಾಡ ಲೆಂದು ನಿರ್ಧರಿಸಿ ಕಾಮನನ್ನು ಬರಹೇಳಿ, ತಾನೂ ಆತನೂ ಮಂತ್ರಾ ಲೋಚನೆ ಮಾಡಿದ ಬಳಿಕ(ಇಂದ್ರ) 'ಎಲೈ ಕಾಮ, ನಾವೂ ನೀವೂ ತಪಸ್ವಿ ಗಳಿಗೆ ಹಗೆಗಳಲ್ಲವೆ? ಆ ರಾಜನ ತಪಸ್ಸಿಗೆ ಹೇಗಾದರೂ ಭಂಗವನ್ನುಂಟು ಮಾಡಬೇಕಯ್ಯ ಅಪ್ಸರಸ್ತ್ರೀಯರನ್ನು ನಿನ್ನ ಬೆಂಬಲಕ್ಕೆ ಕಳುಹಿಸುವೆನು'

ಎಂದನು. ಅವನೂ ಒಪ್ಪಿದನು.

ಕೇಳು, ದೇವಾಂಗನೆಯರು ಹೇಗೆ ಹೇಗೊ ಹೊಗಳಿ ತೆಗಳಿ ಬೈದು ಭಂಗಿಸಿ ಮಾತನಾಡಿಸಿದರೂ, ಮೌನವನ್ನು ಒಡೆಯದ, ಕಣ್ಣನ್ನು ತೆರೆಯದ, ಕದಲದ ರಾಜನ ಬಹು ಉಗ್ರ ತಪಸ್ಸಿನ ಶಕ್ತಿಯನ್ನು ಕಂಡು ದೂರದಿಂದಲೆ ಕೈಮುಗಿದು ಹಿಂತಿರುಗಿ ಹೊರಟುಹೋದರು; ಕಾಮನು ಯಾವ ನಾಡನ್ನೊ ಹೊಕ್ಕನು.

ಇತ್ತ ಹೀಗಾಗಲು ರಾಜನ ನಿಶ್ಚಲದ ಭಕ್ತಿಗೆ ಒಲಿದು ಕೆಲವಾರು ದಿನಕ್ಕೆ ದೇವಿ ಪ್ರತ್ಯಕ್ಷಳಾದಳು. ಹೀಗೆ ತನ್ನ ಕಣ್ಣೆದುರಲ್ಲಿ ಪ್ರತ್ಯಕ್ಷಳಾದ ಆದಿ ಮಾಯೆಯನ್ನು ಕಣ್ಣಾರೆ ಕಂಡು ಆನಂದಸಾಗರದಲ್ಲಿ ಓಲಾಡಿ, ಹಾಡಿ, ಹೊಗಳಿ, ನಮಃಸ್ಕರಿಸಿ, ದೈನ್ಯದಿಂದ—'ಎಲೆ ತಾಯೆ, ನೀನು ಭಕ್ತವತ್ಸಲೆ ಸಹಜ! ಧ್ಯಾನಗಮ್ಯೆ ಸಹಜ! ಸಕಲ ಇಷ್ಟವನ್ನೂ ಈಡೇರಿಸುವವಳು ಸಹಜ! ಆದಿಶಕ್ತಿಯೆನಿಸಿದ್ದು, ಮೂರು ಕವಲಾಗಿ ಹರಿಹರಬ್ರಹ್ಮರನ್ನು ಮೋಹಿಸಿದ ನಿನ್ನ ಈ ಮಾಯಾವಿನೋದವನ್ನು ಯಾರು ಬಲ್ಲರು! ನನ್ನನ್ನು ಉದ್ಧರಿಸವ್ವ!' ಎಂದು ಬಗೆಬಗೆಯಾಗಿ ಸ್ತುತಿಸುತ್ತ ಪಾದಕ್ಕೆ ನಮುಸ್ಕರಿಸಿದನು.

ಆಗ ಅತನನ್ನು ನಾಲ್ಕೂ ಕೈಗಳಿಂದ ಎತ್ತಿ—'ಮಗನೆ ಬಹಳವಾಗಿ ಆಯಾಸಗೊಂಡಿದ್ದೀಯೆ! ನಿನ್ನ ಇಷ್ಟಾರ್ಥವು ಸಿದ್ಧಿಸುವುದು ನಿಜ.' ಎನ್ನುವ ಶುಭರೂಪಿಣಿಯಾದ ಕಾಮಾಕ್ಷಿಗೆ, 'ನಿನ್ನನ್ನು ಕಂಡೂ ನನಗೆ ಬೇರೆ ಯಾವುದು ಇಷ್ಟ?' ಎಂದು ವಿಜ್ಞಾಪಿಸಿದನು. ಈ ಮಾತಿಗೆ (ದೇವಿಯು)—'ಹಾ! ಸುಖವಾಗಿ ಬಾಳಯ್ಯ, ಶತ್ರುವಿನಿಂದ ಅಪಹರಿಸಲ್ಪಟ್ಟ ನಾಡೂ, ಸಕಲ ಸಂಪತ್ತೂ ನಿನ್ನ ಒಡತನಕ್ಕೊಳಗಾಗಲಿ, ಹೋಗು' ಎಂದು ಹೇಳಲು, ಸುಮದರಾಜನು 'ಅಮ್ಮಾ, ನಿನ್ನ ಪಾದಗಳನ್ನು ಬಿಟ್ಟು ನಾನು ಹೋಗಲಿಕ್ಕೆ ಉಂಟೆ; ರಾಜ್ಯದಿಂದೇನು, ಭಾಗ್ಯದಿಂದೇನು, ನಾನು ಒಲ್ಲೆನು, ಈ ಕ್ಷಣ ನಶ್ವರದ ಭೋಗಗಳನ್ನು. ನೀನು ಒಲಿಯುವುದು ನಿಶ್ಚಯವೇ ಆದರೆ ನನಗೆ ಆ ಮೋಕ್ಷಪದವಿಯನ್ನು ತೋರಿಸು' ಎಂದು ಬೇಡಿದನು. ಮತ್ತೆ ಆ ರಾಜನ ಬಿನ್ನಹಕ್ಕೆ ಕಾಮಾಕ್ಷಿ—'ಹಾಗೆ ಆಗದಯ್ಯ, ನಿನಗೆ ಇಹಲೋಕದ ಭೋಗಗಳು ಇನ್ನೂ ತೀರಿಲ್ಲ. ಆದರಿಂದ ಅದು ಸವೆಯುವವರೆಗೆ ನೀನು ನಿನ್ನ ರಾಜ್ಯ ಪದವಿಯಲ್ಲೇ ಇದ್ದು ಬಾಳು. ಮತ್ತು ಎಂದಿಗೆ ಶ್ರೀರಾಮನ ಯಜ್ಞಾಶ್ವ

ನಾಡನ್ನು ಪ್ರವೇಶಿಸುವುದೊ ಅಂದೇ ರಾಜ್ಯವನ್ನು ಆತನ ಪಾದಕ್ಕೆ ಅರ್ಪಿಸಿ ನೀನು ಆತನ ಸೇವೆಯಲ್ಲಿದ್ದರೆ ಮುಂದೆ ಒಳ್ಳೆಯದಾಗುವುದು. ಅಲ್ಲಿಯವರೆಗೆ ನಿನಗೂ ಪಟ್ಟಣಕ್ಕೂ ರಕ್ಷೆಯಿರುವಂತೆ ನಾನು ನಿನ್ನ ನಾಡಿನಲ್ಲಿ ನಿಲ್ಲುವೆನು ಎಂದು ಅನುಗ್ರಹಿಸಿ ಮಾಯವಾದಳು. ಕೇಳು, ಹಾಗೆ ತನಗೆ ಅಪ್ಪಣೆಯಿತ್ತು ಮಾಯವಾದ ಆದಿಮಾಯೆಯ ಪಾದಗಳನ್ನು ನೆನೆಯುತ್ತ ತಪೋವನದ ಕಡೆಯಿಂದ ಹೊರಟು ಪಟ್ಟಣಕ್ಕೆ ಬಂದು ಶತ್ರುರಾಜರನ್ನು ಓಡಿಸಿ ತಾನು ರಾಜ್ಯಭಾರಮಾಡುತ್ತ ಈಗ ನಿಮ್ಮ ಆಗಮನವನ್ನು ಹಾರೈಸುತ್ತಿದ್ದಾನೆ.

ಹಾಗೆ ರಾಜನು ತನಗೆ ಒಲಿದ ಕಾಮಾಕ್ಷಿದೇವಿಗೆಂದು ಏರ್ಪಡಿಸಿದ ದೇವಾಲಯವಷ್ಟೆ ಇದು. ಯಾವಾಗಲೂ ತನ್ನನ್ನು ಮರೆಹೊಕ್ಕವರನ್ನು ಕಾಪಾಡುವ ಒಂದು ಮಹಿಮೆ ಪಡೆದು ಈ ದೇವಾಲಯದಲ್ಲಿ ನೆಲಸಿರುವಳೆ"ಂದು ಸುಮದರಾಜನ ಚರಿತೆಯನ್ನೂ ಹಾಗೂ ಕಾಮಾಕ್ಷಿಮಹಾತ್ಮ್ಯೆಯನ್ನೂ ಶತ್ರುಘ್ನನಿಗೆ ಮಂತ್ರಿಯು ಕೇಳಿಸಿದನು.

ಮುದ್ದಣ—ನನ್ನ ರಾಣಿಯೇ, ಶತ್ರುಘ್ನನು ಹೀಗೆ ಏರ್ಪಟ್ಟ ಒಂದು ಮಹಿಮೆಯನ್ನು ಕೇಳಿ ಸಂತುಷ್ಟನಾಗಿ ಮಂತ್ರಿಯೊಡನೆ ತಾನೂ ದೇವೀ ದರ್ಶನಾರ್ಥವಾಗಿ ದೇವಾಲಯದ ಒಳಹೊಕ್ಕು ಮೂರ್ತಿಯಾಗಿದ್ದ ಕಾಮಾಕ್ಷಿ ಯನ್ನು ಪ್ರಾರ್ಥಿಸುತ್ತಿದ್ದನು.

ಅಷ್ಟರಲ್ಲಿ ಅತ್ತ ತನ್ನ ಇಷ್ಟದಂತೆ ಹೋಗುವ ಯಜ್ಞಾಶ್ವವು ಮುಂದೆ ಶೋಭಿಸುತ್ತಿದ್ದ ಅಹಿಚ್ಛತ್ರಪುರವನ್ನು ಪ್ರವೇಶಿಸಲು, ನಗರಪಾಲಕರು ಹಿಡಿದು ರಾಜನಿಗೆ ಒಪ್ಪಿಸಿದರು. ಸಾಕು ಈ ವಿಸ್ತಾರ. ರಾಜನು ಕುದುರೆಯ ಹಣೆಯ ಬರಹವನ್ನು ಓದಿಸಿ, ಇಂದಿಗೆ ಪಾವನನಾದೆನೆಂದು ನಿಶ್ಚಯಿಸಿ, ಶತ್ರುಘ್ನನನ್ನು ಕರೆಸಿ, ತನ್ನ ಪಟ್ಟಣವನ್ನು ರಾಘವನ ಹೆಸರಲ್ಲಿ ಅರ್ಪಿಸಿ, ಆತನ ಸೇವೆಯ ಒಂದು ಆಸೆಯಿಂದ ಸೇನಾಸಮೇತನಾಗಿ ಶತ್ರುಘ್ನನೊಡನೆ ಹೊರಟನು. ಶತ್ರುಘ್ನನು ಆತನ ಕುಮಾರನಿಗೆ ಪಟ್ಟಕಟ್ಟಿ ರಾಜ್ಯಪದವಿಯಲ್ಲಿರಿಸಿ ಕಾಣಿಕೆ ಪಡೆದು ಕುದುರೆಯ ಬೆನ್ನಹಿಂದೆ ಮುಂದಕ್ಕೆ ತೆರಳಿದನು.

ಚ್ಯವನ ಮುನಿಕಥನ

ಸುಂದರಿಯೇ, ಹೀಗೆ ಶತ್ರುಘ್ನ, ತುಂಬಿದ ಭೂಮಿಗೆ ಸತ್ಯನಗರವೆಂಬ ಒಂದು ಯಶಸ್ಸಿನ ಹೆಸರು ಪಡೆದು, ಕೂಡಿ ಬಾಳುವ ಬ್ರಾಹ್ಮಣರ ಕುಲಧರ್ಮವು ಬಾಳುವ ಮನೆಯೆಂಬ ಒಂದು ಪ್ರಸಿದ್ಧಿಗೆ ಆಶ್ರಯವಾಗಿ ಸಂದ ಅಹಿಚ್ಛತ್ರ ಪುರವರದ ರಾಜನ ಮನ್ನಣೆಯನ್ನು ಆತಿಥ್ಯವನ್ನು ಕೈಕೊಂಡು ಮೂರು ದಿನವಿದ್ದ ಬಳಿಕ ಆತನನ್ನು (ಸುಮದನನ್ನು) ಒಡಗೊಂಡು ತನ್ನ ಅಧೀನದ ಸೈನ್ಯದೊಡನೆ ಕುದುರೆಯ ಬೆನ್ನ ಹಿಂದೆಯೇ ನಡೆದು ಹಲವು ನಾಡುಗಳನ್ನು ಕಳೆಕಳೆದು ಹೋಗಹೋಗುತ್ತ ಮುಂದೆ ಮುಂದೆ ತಪೋವನವೊಂದು ಕಂಗೊಳಿಸಲು, ಒಡನೆ ಶತ್ರುಘ್ನನು ಸುಮತಿಯಲ್ಲಿ "ಇದೇನು ತಪೋವನ! ಯಾವ ಮುನಿಪುಂಗವನ ಆಶ್ರಮ ಹೇಳು" ಎಂದು ಕೇಳಲು, ಸುಮತಿಯು ಶತ್ರುಘ್ನನಿಗೆ, "ಹೀಗೆ ಈ ತಪೋವನವು ಅಶ್ವಿನಿದೇವತೆಗಳಿಗೆ ದೇವಸಂಕ್ತಿಯಲ್ಲಿ ಎಡೆಮಾಡಿ ಹವಿಸ್ಸಿನ ಭಾಗವನ್ನು ಸಲ್ಲಿಸಿದ ಚ್ಯವನಋಷಿಗಳ ಆಶ್ರಮ" ಎಂದನು. (ಶತ್ರುಘ್ನನು) "ಯಾವಾಗ, ಹೇಗೆ, ಏನು? ಯಾರು ಆ ಮುನಿಪನು? ಜೋಡಿದೇವತೆಗಳಿಗೆ ಯಾವಾಗ ಸುರರಲ್ಲಿ ಪಂಕ್ತಿಕೊಟ್ಟನು, ಏಕೆ? ನಾನು ತಿಳಿಯುವಂತೆ ವರ್ಣಿಸಿ ಹೇಳು" ಎನ್ನಲು, (ಸುಮತಿಯು) ಪ್ರೀತಿಯಿಂದ ಕಥೆಯನ್ನು ಹೇಳಿದನು. ಅದು ಹೇಗೆಂದರೆ:

ಈ ಭೂಮಿಯಲ್ಲಿ ನಿಂತ ವೇದವನಿತೆಯರಿಗೆ (ವೇದಗಳಿಗೆ) ಗಂಡನೆನ್ನಿಸಿ, ಬಂದ ಪುಣ್ಯಕ್ಕೆ ಮೊದಲಿಗನಾಗಿ ಸುದಯೋಗಿಗಳ ಹಿರಿಯನೊಬ್ಬ ಭೃಗುವೆಂಬ ಹೆಸರಿನ ಋಷಿಯಿದ್ದನು. ಆತನು ಒಮ್ಮೆ ಬಯಸಿದ ಯಜ್ಞಶಾಲೆಗೆ ಸಮಿತ್ತು ಮುಂತಾದವುಗಳನ್ನು ತರುವ ಒಂದು ಉದ್ಯೋಗದಿಂದಾಗಿ ಸಂಜೆಹೊತ್ತಿನಲ್ಲಿ ತನ್ನ ಆಶ್ರಮದ ಕಡೆಯಿಂದ ಹೊರಕ್ಕೆಹೋದನು. ಆ ಗಳಿಗೆಯು ಹೊತ್ತೇ ಹೊತ್ತು (ಎಂದು ಆ) ಹೊತ್ತನ್ನೇ ನಿರೀಕ್ಷಿಸುತ್ತಿದ್ದ ದಮನನೆಂಬ ಒಬ್ಬ ದುಷ್ಟರಾಕ್ಷಸನು (ಈ ಮುನಿಯ) ಗುಡಿಸಲಿಗೆ ನುಗ್ಗಿ ಸೊಕ್ಕಿನ ಉಕ್ಕಿನಿಂದ ಹೊಡೆಯುವ ಸಿಡಿಲ ಬಿರುವನಿಯಲ್ಲಿ—"ಮುನಿಕಾಂತೆ ಯಾವಳು, ಎತ್ತ ಹೋದಳು, ಯಾರು, ಏನು" ಎಂದು ಗದರಿ, ಅತ್ತ ಇತ್ತ ನೋಡಿ ಕಾಣದೆ

ಮತ್ತೆ ಕುಂಡದ ಅಗ್ನಿಯನ್ನು ಹೆದರಿಸಿದನು (ಕೆದರಿದನು). ಹಾಗಾಗಲು ಅಗ್ನಿಯು ಈ ರಾಕ್ಷಸನ ಒಂದು ರೇಗಿಗೆ ಬೆದರಿ ನಡುಗಿ ಮುನಿಪತ್ನಿಯನ್ನು, ಗರ್ಭಿಣಿಯನ್ನು, ಪತಿಪರಾಯಣೆಯನ್ನು ತೋರಿಸಲು, ಒಡನೆ ಆ ರಾಕ್ಷಸನು ಹತ್ತಿರಕ್ಕೆ ಹೋಗಿ ಘಟಸರ್ಪದ ಹೆಡೆಯನ್ನು ಹಿಡಿಯುವ ದಡ್ಡನಂತೆ (ಆ) ಪತಿವ್ರತೆಯ ದೀರ್ಘಜಡೆಯನ್ನು ಹಿಡಿದು ಎಳೆಪು ಒಯ್ಯುತ್ತಿದ್ದನು. ಆಃ! ಮರುಗದವರಾರೊ ! ಕಟುಕನ ಬಂಧನಕ್ಕೊಳಗಾದ ಹಸುವಿನಂತೆ ಮುನಿಕಾಂತೆ ಗಾಭರಿಯಿಂದ ಸಿಡಿಮಿಡಿಗೊಂಡು ದಿಕ್ಕೆಟ್ಟು ಬಾಯಿಬಿಟ್ಟು ಹಿಂದಿನ ದಿಕ್ಕನ್ನೇ ನೋಡಿ ನೋಡಿ—"ಹಾ ಮುನಿ, ಹಾ ಗುರು, ಹಾ ನಾಥ, ಹಾ ನಾಯಕ, ರಾಕ್ಷಸನ ಒಂದು ಸೆರೆಯಿಂದ ರಕ್ಷಿಸಯ್ಯ" ಎಂದು ಕೀರಲುಧ್ವನಿಯಿಂದ ಕೂಗಿದಳು. ಆ ವೇಳೆಯಲ್ಲಿ ಹೀಗೆ ಭಯಗ್ರಸ್ತೆಯಾದ ಪತಿವ್ರತೆಯಾದ ಬಸಿರಿಂದ ಗಕ್ಕನೆ ಗರ್ಭವು ಸೋರಿ ನೆಲಕ್ಕೆ ಇಳಿಯಲು, ಪಿಂಡದಿಂದ ಒಂದು ಮೂರ್ತಿ ಉದ್ಭವಿಸಿ ಆಕಾರತಾಳಿ ಕೊಲೆಗಾರನನ್ನು ತಡೆದು, 'ಕಟ್ಟಕಾರ್ಯವನ್ನು ಮಾಡಿದ ನೀನು ಹೊತ್ತಿ ಬೂದಿಯಾಗೆ'ಂದು ಶಪಿಸಲು ಒಡನೆ ದಮನನು ಸುಟ್ಟು ಉರಿದು ಕರಿಮುರಿಹೋದನು. ಅನಂತರ ಆ ಹೆಂಗಸು ತಾನು ಹೆತ್ತ ಚಿಕ್ಕಕೂಸನ್ನು ತೋಳಿನಿಂದ ಎತ್ತಿ ಮೆಲ್ಲಮೆಲ್ಲನೆ ಆಶ್ರಮಕ್ಕೆ ನಡೆದು ಆಗಲೇ ಬಂದ ಕಾಂತನಿಗೆ ತನಗೆ ಒದಗಿದ್ದ ಒಂದು ಸಂಕಟವನ್ನು ಹೇಳಿದಳು. ಆಗ ಮುನಿಪನು ಅಗ್ನಿಯ ಒಂದು ಕೆಲಸಕ್ಕೆ ಸಿಟ್ಟಿನಿಂದ ಉರಿದು—"ನೀನು ರಾಕ್ಷಸನ ರೀತಿಯಂತೆ ಎಲ್ಲವನ್ನೂ ತಿಂದು ಸಾಯುವುದು" ಎಂದು ಬೈದನು. ಹಾಗಿರಲು ಬೈಗುಳಿನಿಂದ ನೊಂದು, ಬೆದರಿಕೆಯಿಂದ ನಡುನಡುಗಿ ಅಗ್ನಿಯು ಋಷಿಗೆ ನಮಸ್ಕರಿಸಿ—"ರಕ್ಷಣೆಯಾಗಲಿ, ಸುಳ್ಳಿನ ಪ್ರೀತಿಯು (ಅಸತ್ಯದ) ಮಾತಿನ ಒಂದು ಭೀತಿಯಿಂದ ತಾಯಿಯನ್ನು ತೋರಿದೆನು, ಒಡೆಯನಲ್ಲಿ ದ್ರೋಹದ ಯೋಚನೆಯಿಂದಲ್ಲ, ನನ್ನನ್ನು ಪ್ರೀತಿಯಿಂದ ಕಾಯುವ ಹೊರೆ ತಮ್ಮ ಪಾದದಲ್ಲಿ(ದೆ)" ಎಂದು ಕಣ್ಣೀರಿಡಲು ; ಪ್ರೀತಿಯ ಒಡೆಯನು ಅಗ್ನಿಗೆ "ಹಾಗೆ ಹಿಡಿದುದನ್ನು ಬಲಾತ್ಕಾರದಿಂದ ತುಂಬಿಕೊಂಡರೂ (ಬಾಯಿತುಂಬ ನುಂಗಿಯೂ) ಪವಿತ್ರನೆನ್ನಿಸಿಕೊ" ಎಂದು ಸಂತಯಿಸಿ ಬೀಳ್ಕೊಟ್ಟನು. ಇತ್ತ ಬಸಿರಿಂದ ಜಾರಿದವನಿಗೆ ಚ್ಯವನನು ಎಂಬ ಒಂದು ಸಂಸ್ಕೃತದ ಹೆಸರನ್ನಿಟ್ಟು ಕೊಂಡಾಟದಿಂದ ಹೊರೆಯುತ್ತಿರಲು ಮುದ್ದಿನ ಪುಟ್ಟ ಕುವರನು ಶುಕ್ಲಪಕ್ಷದ

ವೃದ್ಧಿಚಂದ್ರನಂತೆ ದಿನದಿನಕ್ಕೆ ಕಳೆಯೇರಿ ಬೆಳೆಯುತ್ತಿದ್ದನು. ಹೀಗೆ ಬೆಳೆದ ಕಂದನು ಸಾಂಗವೇದಗಳನ್ನು ಕಲಿತು ಗುರುವಿನಂತೆ ತಾನೂ ಹರಿಯ ಒಲುಮೆಯನ್ನು ಪಡೆಯಬೇಕೆಂದು ತಪಸ್ಸಿಗೆ ತೊಡಗಿದನು. ನೆಲೆಗೊಂಡ ನಿಶ್ಚಲದ ಯೋಗದ ಒಂದು ಧ್ಯಾನದಿಂದ ಮೈಮರೆತು ಒಳನೋಟದಿಂದಲೇ ಹಲವು ವರ್ಷ ಸಮಾಧಿಯಲ್ಲಿರಲು, ದೇಹದ ಮೇಲೆ ಹುತ್ತವು ಮೂಡಿ, ಹೆಗಲೆತ್ತರದಲ್ಲಿ ದೊಡ್ಡ ಕೊಂಬೆಯ ದೊಡ್ಡ ಮರಗಳು ಹುಟ್ಟಲು, ಕೆಂಪಾದ ಜಡೆಮುಡಿಯ ಪಾತಿಯಲ್ಲಿ ಹಬ್ಬಿದ ಬಲು ಪೊದರು ಕವಿದುಕೊಳ್ಳಲು, ಸ್ವರ್ಣಲತೆಯನ್ನು ತುಂಬಿಕೊಂಡು ಜಂಬೂವೃಕ್ಷದಿಂದ ಶೋಭಿಸುವ ಮೇರುಪರ್ವತದ ದಟ್ಟತಪ್ಪಲನ್ನು ಮೀರಿಸಿದನು.

ಅಷ್ಟರಲ್ಲಿ ಇತ್ತ ಶರ್ಯಾತಿ ಎಂಬ ಹೆಸರಿನ ಮನುಕುಲದ ರಾಜನೊಬ್ಬನು ಕುಟುಂಬ ಸಮೇತನಾಗಿ, ಅನುಸರಿಸುವ ಮೈಗಾವಲ ಚತುರಂಗ ಸೇನೆಯೊಡನೆ ತೀರ್ಥಯಾತ್ರೆಗೆಂದು ಬಂದು ನರ್ಮದಾತೀರದಲ್ಲಿ ಇಳಿದು ಪುಣ್ಯತೀರ್ಥದಲ್ಲಿ ಮಿಂದು ಕ್ಷೇತ್ರ ವಿಧಿಯಲ್ಲಿದ್ದನು. ಆ ಹೊತ್ತಿಗೆ ಆತನ ಪ್ರೀತಿಯ ಕುವರಿ ತನ್ನ ವಯಸ್ಸಿನ ಗೆಳೆತನದ ಜೊತೆಗಾತಿಯರೊಡನೆ ಆಡುತ್ತಾಡುತ್ತ ವಿನೋದದಿಂದ ವಿಹರಿಸುತ್ತಿದ್ದಳು. ಹೀಗೆ ಆಡುವ ಬಾಲೆ ತನ್ನ ಎದುರಿನ ಒಂದು ಹುತ್ತವನ್ನು ನೋಡಿ ಗೆಳತಿಯರಿಗೆ—"ನಾನು ಕಂಡೆನು ; ಏನು ಕಂಡೆನು ಹೇಳಿ" ಎಂದು (ಕೇಳಿದಳು). ಇದಕ್ಕೆ ಬಾಲೆಯರು ಉತ್ತರ ಕೊಡದಿರಲು ನಕ್ಕು—"ನನ್ನ ಈ ಪುಣ್ಯಕ್ಕೆ ಏನೆನ್ನಲಿ ! ಇದೇ ಹುತ್ತದಲ್ಲಿ ಹುದುಗಿಸಿಟ್ಟ ಕರಿಮಣಿ ಕಲ್ಲೆರಡನ್ನು ಕಂಡೆನು. ಈಗಲೇ ಕಿತ್ತುಕೊಳ್ಳುವೆನು" ಎಂದು ಕೈ ಆಟದ ಕವಲುಗೋಲಿನಿಂದ, ಮಣಿಯೆಂದೇ ಬಗೆದು, ನಿಶ್ಚಲವಾಗಿ ಮಿನುಗುವ ಮುನಿಯ ಕಣ್ಣುಗಳನ್ನು ಚುಚ್ಚಿದಳು. "ಅಯ್ಯೋ ! ಪ್ರವಾಹವಾಗಿ ಹರಿಯುವ ರಕ್ತದ ಕಾಲುವೆಯನ್ನು ಕಂಡು ಬಾಲೆ ಭಯದಿಂದ ಮನಸ್ಸಿನಲ್ಲಿ ತಳಮಳಗೊಂಡು ಯಾರಲ್ಲಿಯೂ ಹೇಳದೆ ತನ್ನ ಸ್ಥಳಕ್ಕೆ ಸರಿದಳು. ಆ ಕಾಲದಲ್ಲಿ ಏನೆನ್ನಲಿ ! ಉತ್ಪಾತವಾಯಿತು. ಹೀಗೆ ಎಡೆಬಿಡದೆ ತಲೆದೋರುವ ಅಪಶಕುನಗಳಿಗೆ ರಾಜನು ಬಹಳವಾಗಿ ಕೊರಗಿ ಏನಾದರೊಂದು ಮೂಲ (ಕಾರಣ)ವಿರಬೇಕೆಂದು ನಿರ್ಣಯಿಸಿ ಸುತ್ತಲೂ ಕಾಡಿನಲ್ಲಿ ತಿರುಗುತ್ತಿರಲು, ತನ್ನ ಎದುರಿನಲ್ಲಿ ವಿಂಧ್ಯಪರ್ವತದಿಂದ ಇಳಿದು ಬರುವ ಶೋಣಾರಕ್ತದನದಿಯ ('ಶೋಣ'

ಎಂಬುದು ಒಂದು ನದಿಯ ಹೆಸರು) ಎರಡು ಪ್ರವಾಹವೆಂಬಂತೆ ಒಂದು ಹುತ್ತದ ಕಡೆಯಿಂದ ಕವಲಾಗಿ ಹರಿಯುವ ರಕ್ತದ ತಿರುವನ್ನು ನೋಡಿ ಅತ್ಯಾಶ್ಚರ್ಯದಿಂದ ಹತ್ತಿರ ಬಂದು ನೋಡಲು ತಪಸ್ಸಿನಲ್ಲಿದ್ದ ಮುನಿಪನು ಕಾಣಿಸಿದನು. ಆಗ ಆತನ ಪಾದಗಳಿಗೆ ನಮಸ್ಕರಿಸಿ ರಾಜನು—"ಶಾಪಾನು ಗ್ರಹ ಸಮರ್ಥರು ನೀವೇ ನಿಶ್ಚಯ. ಹರಿಯುವ ರಕ್ತವೇನೊ! ಹೇಗೆ ತಿಳಿ ಯಲಿ, ಈ ಮಹಿಮೆಯನ್ನು ಅಲ್ಪ ಮನುಷ್ಯನಾದ ನಾನು. ತೀರ್ಥಯಾತ್ರೆ ಗಾಗಿ ಬಂದು ಈ ತೊರೆಯ ಪಕ್ಕದಲ್ಲೇ, ಕಾಡಿನಲ್ಲೇ ಬೀಡನ್ನು ಬಿಟ್ಟೆನು. ತಪೋವನವೆಂದು ತಿಳಿಯಲಿಲ್ಲ. ನಮ್ಮ ಈ ಸೈನ್ಯವು ಹೇಗೊ ಆದಿವ್ಯಾಧಿ ಕ್ಷಾಮಡಾಮರಗಳಿಗೆ ತುತ್ತಾಯಿತು. ನನ್ನೊಬ್ಬನ ಕಾರಣದಿಂದ ವನವೂ ಹಾಳಾಯಿತು. ಅಯ್ಯೋ! ಮುನಿರಾಯ! ಈಗ ನಿನ್ನನ್ನೇ ಮರೆಗೊಳ್ಳುವೆನು. ನೀನು ಕರುಣಿಸಿ ಕಾಪಾಡಬೇಕು" ಎಂದು ಪ್ರಾರ್ಥಿಸಲು, ಚ್ಯವನನು ರಾಜ ನಿಗೆ—"ನಮ್ಮದು ಇನ್ಯಾವ ಮಹಿಮೆಯೊ! ಯಾವ ತಪಸ್ಸೊ! ಕಣ್ಣು ಕುರುಡರಾದೆವಷ್ಟೆ! ಕೇಳು, ನಿನ್ನ ಮಗಳೇ ತನ್ನ ಆಟದ ಒಂದು ರೀತಿಯಿಂದ, ಸಲಿಗೆಯಿಂದ ನನ್ನ ಕಣ್ಣುಗಳನ್ನು ಕುಕ್ಕಿ ನೋಯಿಸಿದಳು; ಹೀಗೆ ಇದು ರಕ್ತ! ಏನು ಹೇಳುವೆನೋ! ನನ್ನ ಒಂದು ನೋವಿಗೆ ಹೀಗೆ ಉತ್ಪಾತಗಳು" ಎಂದು ಹೇಳಿದನು. ಆ ಮಾತಿಗೆ ರಾಜನು ನೊಂದು ಮತ್ತೆ ಶಾಂತಿಯೇನೆಂದು ಕೇಳಲು, ಮುನಿಪನು—"ನಿನ್ನ ಕನ್ಯಾಕುಮಾರಿಯನ್ನು ನನ್ನ ಸೇವೆಗೆ ಕೊಡುವುದರಿಂದ ನಿನಗೂ ಸೇನೆಗೂ ಸುಭಿಕ್ಷವಾಗುವುದು" ಎಂದು ಉತ್ತರಿ ಸಲು, ಒಡನೆ ಶರ್ಯಾತಿ ತಾನೇ ತಲೆಬಾಗಿಸಿ, ರಾಣಿಯಲ್ಲಿ ವಿಚಾರಿಸಲೆಂದು ತನ್ನ ಬೀಡಿಗೆ ಬಂದು, ರಾಣಿಗೆ ಈ ಕತೆಯನ್ನು ಹೇಳಿದನು. ಆಗ ಆತನ ರಾಣಿ ಹೆತ್ತ ಹೊಟ್ಟೆಯ ಉರಿಯಿಂದ ನೊಂದು ಪ್ರಲಾಪಿಸಿ ಮರುಮರುಗಿ ಮೂರ್ಛೆ ಹೋದಳು. ಆಗ ಆ ಎಳೆಪ್ರಾಯದ ರಾಜಕುಮಾರಿ ತಾಯಿಯನ್ನು ಸಂತೈ ಸುವ ಒಂದು ನುಡಿಯ ಬಿನ್ನಾಣದ ತಿಳುವಳಿಕೆಯ ಜಾಣ್ಮೆಯಿಂದ—"ಅಮ್ಮ, ಏನೆಂದು ಅಳುತ್ತಿ? ಹೆತ್ತವರಲ್ಲಿ ಹೆಣ್ಣೆಂಬ ಒಡವೆಯಿದು ಒತ್ತೆಯಿಟ್ಟದ್ದಲ್ಲವೆ? ಹೇಗೂ ಕುಲಕ್ಕೆ ಹೆರವಳಾಗಿರುವ ಮಗಳಲ್ಲಿ ಏನು ಮರುಕ! ಮನುವಾದ ರೇನು, ಮುನಿಯಾದರೇನು! ಕೊಡಗೂಸಿನ (ಕೊಡುವ ಕೂಸಿನ) ಒಂದು ಭಾಗ್ಯವೇ ಭಾಗ್ಯ, ಪುಣ್ಯವೇ ಪುಣ್ಯ. ಬೇರೆ ಯಾವ ಭೋಗ ಸಲ್ಲುತ್ತದೆ?

ಪೂರ್ವಜನ್ಮದ ಒಂದು ಕರ್ಮವ್ರತದ ಎಸಗುವಿಕೆಯು ಉಂಟಾದರೆ (ಜೊತೆ ಗೂಡಿದರೆ) ನಾಡಾಡಿಯೊಡನೆಯೂ ಅಮರಸ್ತ್ರೀಯರ ಭೋಗವನ್ನು ಊಟ ಮಾಡುತ್ತಾಳೆ. ಅಥವಾ ದುರದೃಷ್ಟೆಯಾದರೆ ರಾಜನ ಕೈ ಹಿಡಿದೂ ತಿರಿದು ಊಟಮಾಡುತ್ತಾಳೆ. ಆದಕಾರಣ ಸಮಾಧಾನದಿಂದಿರು" ಎಂದು ತಾಯಿಗೆ ನೀತಿ ಹೇಳಿ, ತಂದೆಗೆ—"ಅಯ್ಯ, ಮುನಿಯ ಹತ್ತಿರಕ್ಕೆ ಹೋಗೋಣ" ಎಂದು ಕರೆದುಕೊಂಡು ಹೋದಳು. ಹಾಗೆ ಬಂದು ಆ ಕನ್ಯಾಸ್ತ್ರೀ ತಪಸ್ವಿಗೆ— "ಒಡೆಯನೇ, ಹೌದು ಹೌದು, ನಾನು ಆಟದ ರಭಸದಲ್ಲಿ ತಮ್ಮ ಪಾದಗಳಿಗೆ ತಪ್ಪುಮಾಡಿದೆ. ಇದೊ! ತಂದೆಯು ನನ್ನನ್ನು ನಿಮಗೆ ಅರ್ಪಿಸಲೆಂದು ಬಂದಿರುವನು. ಅದರಿಂದ ಆ ದಾನವನ್ನು ಒಲಿದು ಕೈಕೊಂಡು ಪ್ರೀತಿಯಿಂದ ನಮ್ಮ ಯಾತ್ರಾಪ್ರಯಾಣಿಕರಿಗೆ ಉಂಟಾದ ಆದಿವ್ಯಾಧಿಗಳನ್ನು ಪರಿಹರಿಸಿ ಕಾಪಾಡು" ಎಂದು ಕಾಲಿಗೆ ಎರಗಿದಳು. ಹೀಗಾಗಲು ಚ್ಯವನನು ಕನ್ಯೆಸುಕನ್ಯೆಯ ಜಾಣ್ಮೆಯ ಮೃದುನುಡಿಗೆ ಒಲಿದು, ಸಮಾಧಿಯನ್ನು ಬಿಟ್ಟು, ರಾಜನು ಶಾಂತಿಗೆ ಎಂದು ಕೊಟ್ಟ ದಾನದ ಬಾಲೆಯನ್ನು ಒಪ್ಪಿ, ಪ್ರಯಾಣಿಕರಿಗೂ ನಾಡಿನವರಿಗೂ ಸುಖವಾಗುವಂತೆ ಕರುಣಿಸಿ, ಶರ್ಯಾತಿಯನ್ನು ಹರಸಿ ಬೀಳ್ಕೊಟ್ಟನು.

ಇತ್ತ ಶರ್ಯಾತಿರಾಜನ ಮಗಳು ತನ್ನ ಪತಿಯನ್ನು ತನಗೆ ಒಲಿದ ದೈವವೆಂದೇ ಬಗೆದು ಮುನಿಯ ಮನಸ್ಸು ಮೆಚ್ಚುವವರೆಗೂ ಉಚಿತ ಸೇವೆಯಲ್ಲಿಯೇ ಬಾಳಿದಳು. ಚ್ಯವನಋಷಿಯು ಮಾನವಿಯ ಒಂದು ಆರೈಕೆಯಿಂದ ತನ್ನ ಕುರುಡಿನ ಬೇನೆಯನ್ನು ಮರೆತು ಹತ್ತಿರದಲ್ಲೇ ಆಶ್ರಮವೊಂದನ್ನು ಏರ್ಪಡಿಸಿ ದೈವಭಕ್ತಿಯಲ್ಲಿಯೇ ಇದ್ದು ತಾನೂ ಸಮಾಧಾನದಿಂದಿದ್ದನು. ಹೀಗೆ ಕೆಲವಾರು ದಿವಸಗಳು ಕಳೆಯಲು ಒಮ್ಮೆ ದೇವವೈದ್ಯರು ಆ ದಾರಿ ಹಿಡಿದು ಬಂದು ಮುನಿಯ ಪರ್ಣಶಾಲೆಗೆ ಪ್ರವೇಶಿಸಲು, ಸುಕನ್ಯೆ ಅತಿಥಿಗಳನ್ನು ಯಥಾಪ್ರಕಾರ ಉಪಚರಿಸಿ ಮನ್ನಿಸಲು, ಅತಿಥಿಗಳಾಗಿ ಬಂದ ದೇವರು ಪತಿವ್ರತೆಯ ನಡೆವಳಿಕೆಗೂ ಭಕ್ತಿಗೂ ಮೆಚ್ಚಿ ಸಂತೋಷದಿಂದ ಮುನಿಪತ್ನಿಗೆ 'ವರವನ್ನು ಬೇಡು' ಎಂದರು. ಅದಕ್ಕೆ ಆ ಕಾಂತೆ—"ನಾನು ಬೇರಾವ ವರವನ್ನು ಬೇಡುವೆನೊ! ನನ್ನ ಈ ಪತಿಯ ಕುರುಡನ್ನು ಹೋಗಿಸಿ ಕಾಪಾಡುವುದೊಂದೆ" ಎಂದು ಉತ್ತರಿಸಿದಳು. ಇದಕ್ಕೆ ಆ ದೇವತೆಗಳು—

"ನಿನ್ನ ಮುನಿ ನಮಗೆ ದೇವೇಂದ್ರನ ಪಂಕ್ತಿ ಕೊಡುವೆನೆಂದು (ಸಾಲಿಗೆ ಸೇರಿಸುವೆನೆಂದು) ಮಾತು ಕೊಟ್ಟರೆ ಕಣ್ಣುಗಳನ್ನು ಕೊಡುವೆವು" ಎನ್ನಲು, ಮುನಿಪನು—"ಇದೊ ಭಾಷೆ ಕೊಡುವೆನು, ತಡೆಯೇನು, ನಾನು ಪುರೋಹಿತ ನಾಗಿದ್ದು ಹೋಮಮಾಡುವ ಯಜ್ಞದಲ್ಲಿ ನಿಮಗೇನೆ ಮೊದಲ ಎಡೆ, ಬಳಿಕ ಇಂದ್ರನಿಗೆ ಎಂದು ಕೈತಟ್ಟಿದನು (ಭಾಷೆ ಕೊಟ್ಟನು). ಆ ಮಾತಿಗೆ ದೇವವೈದ್ಯರು ಒಪ್ಪಿಗೆಕೊಟ್ಟು ತಡಮಾಡದೆ ಮುನಿಯೊಡನೆ ಒಂದು ಸರೋವರಕ್ಕೆ ಬಂದು ತಾವು ಮೂವರೂ ಮುಳುಗಿದೊಡನೆ ಕಲ್ಪಿಸಲೂ ಆಗದ ಪ್ರತಿರೂಪಗಳೆಂಬಂತೆ, ಒಂದೇ ಅಚ್ಚಿನಲ್ಲಿ ಎರಕಹೊಯ್ದ ಮೂರು ಬಂಗಾರದ ಬೊಂಬೆಯೆನ್ನುವಂತೆ, ಮೂವರೂ ಒಂದೇ ರೂಪಿನಲ್ಲಿ ಸ್ವಷ್ಟಿತರಾಗಿ ಮರಳಿ ಪರ್ಣಶಾಲೆ ಕಡೆಗೆ ಬಂದರು. ಹೀಗೆ ಬಂದ ಸುಕುಮಾರ ಶರೀರಗಳಾದ ಮೂವರು ದೇವರಲ್ಲಿ ಮುನಿ ಯಾರೆಂದು ಗುರುತಿಸಲಾರದ ಬಾಲೆ ದೇವವೈದ್ಯ ರನ್ನು ಮತ್ತೆ ಮರೆಹೋಗಲು, ಅವರು ಒಲಿದು ಪತಿಯನ್ನು ತೋರಿಸಿ ಮೆಚ್ಚಾಗಿ ಕೊಟ್ಟು ತಮ್ಮ ನೆಲೆಗೆ ಪ್ರಯಾಣಮಾಡಿದರು.

ಕೇಳಯ್ಯ ಶತ್ರುಘ್ನ, ಮೂರುಲೋಕವನ್ನೂ ತನ್ನ ಒಂದು ಯೋಗದ ಜಾಣ್ಮೆಯ ಮಹಿಮೆಯ ಶಕ್ತಿಯಿಂದ ಒಮ್ಮೆಲೆ ಒಂದುಗೂಡಿಸಿ ವಿಸ್ತರಿಸಿ ನೋಡಲಾಗುವ ತನ್ನ ಒಳಗಿನ (ನೋಟದ ಹೆಮ್ಮೆಯ ಯೋಗಿಗೆ ಈಗ, ಆಕಾಶಮಾರ್ಗದ ಹದ್ದಿಗಿಂತ) (ನೋಟಕ್ಕಿಂತ) ಏಳು ಮಡಿ ಹೆಚ್ಚಾಗಿ ಹೊರ ನೋಟ ಉಂಟಾಗಲು, ಎರಕಹೊಯ್ದ ಬಂಗಾರದ ರೂಪವೆನ್ನುವಂತೆ ದೇಹಶೋಭೆಯ ಕಾಂತಿ ಏರಲು, ಸೊಬಗು ಸ್ರವಿಸುವ ಮುಖಕಮಲವು ತಳತಳಿಸಲು, ಚ್ಯವನನು ಯೌವನದ ಏಳಿಗೆಯಿಂದ ಸಂತೋಷವಾಗಿ ಪತ್ನಿ ಯೊಡನಿದ್ದಾಗ ಒಮ್ಮೆ ಶರ್ಯಾತಿರಾಜನು ತಾನೇ ಸಂಕಲ್ಪಿಸಿ ಮಾಡಲಿದ್ದ ಯಜ್ಞಕ್ಕೆ ತನ್ನ ಅಳಿಯನನ್ನೇ ಪುರೋಹಿತನಾಗುವಂತೆ ಬರಹೇಳಲು ಕಳಿಸಿ ದಾಗ, ಒಡನೆ ಓಲೆಕಾರರು ಬಂದು ಮುನಿಗೆ ನಮಸ್ಕರಿಸಿ ಉಡುಗೊರೆಯನ್ನೂ ಕಟ್ಟೋಲೆಯನ್ನೂ ಒಪ್ಪಿಸಿದರು. ಚ್ಯವನನು ಓಲೆಯ ಒಕ್ಕಣೆಯನ್ನು ಓದಿ ರಾಜನ ಇಂಗಿತವನ್ನು ಅರಿತು ಸಂತೋಷಪಟ್ಟು ಕೆಲಸದ ಆಳುಗಳನ್ನು ಮನ್ನಿಸಿ, 'ಬರುವೆವು' ಎಂದು ಉತ್ತರವನ್ನು ಬರೆದು ಕಳುಹಿಸಿದನು.

ಹೀಗಿರಲು ಬಳಿಕ ಒಂದು ಶುಭದಿನದಲ್ಲಿ ಚ್ಯವನನು ಪುರೋಹಿತ

ನಾಗಲು, ರಾಜನು ಯಾಗದಲ್ಲಿ ತೊಡಗಿ, ನೆರೆರಾಜರು ಹೊಗಳುವಂತೆ, ಬ್ರಾಹ್ಮಣರು ತೃಪ್ತಿಗೊಳ್ಳುವಂತೆ, ದೇವತೆಗಳು ಸಂತುಷ್ಟರಾಗುವಂತೆ ಹೋಮ ಮಾಡಿದನು. ಆಗ ತನ್ನ ಒಂದು ಪ್ರತಿಜ್ಞೆಯನ್ನು ನೆನೆದು (ಪ್ರತಿಭಟಿಸಿದ ದೇವೇಂದ್ರನನ್ನು ಚ್ಯವನನು ಸೆರೆಹಿಡಿದನು. ಮನು, ಮುನಿ, ಸುರರು ದೇವೇಂದ್ರನನ್ನು ಉದ್ಧರಿಸುವಂತೆ ಸ್ತುತಿಸಲು) ದೇವೇಂದ್ರನನ್ನು ಸೆರೆಯಿಂದ ಬಿಟ್ಟು ದೇವವೈದ್ಯರಿಗೆ ಪಂಕ್ತಿ ಕೊಟ್ಟು ಪ್ರಸಿದ್ಧನಾದನು, ಈ ಲೋಕದಲ್ಲಿ.

ಮೆಚ್ಚುಗಾರ್ತಿಯೇ, ನಾಡಿಂದ ನಾಡಿಗೆ ಪ್ರಯಾಣ ಬಂದ ಬಳಲಿಕೆ ಮುಗಿಯುವವರೆಗೂ, ಕಿವಿ ನಲ್ಗತೆಯ ಹುರುಳಿಂದ ತುಂಬುವವರೆಗೂ ಶತ್ರುಘ್ನನು ಸುಮತಿ ಹೇಳಿದ ಕತೆಯನ್ನು ಕೇಳಿ ಸಂತೋಷವನ್ನು ತಾಳಿ, "ಹಾಗಿರುವಾಗ ಮುನಿಯನ್ನು ಕಾಣಬೇಕು" ಎಂದು ನಿತ್ಯದ ವೀರಭಟರೊಡನೆ ಪುಣ್ಯಾಶ್ರಮಕ್ಕೆ ಬಂದು ಚ್ಯವನನನ್ನು ಕಂಡು ನಮಸ್ಕರಿಸಿ—"ತಾನು ಶ್ರೀರಾಮನ ತಮ್ಮನಾಗಿದ್ದೇನೆ, ಶತ್ರುಘ್ನನೆಂಬ ಹೆಸರಿನ ಬಾಲಕನು, ಯಜ್ಞಾಶ್ವವನ್ನು ಬೆಂಬತ್ತಿ ಹೋಗುವ ದಾರಿಯಲ್ಲಿ ತಮ್ಮ ಪಾದವನ್ನು ಕಂಡು ಹರಕೆ ಪಡೆಯಲೆಂದು ಬಂದೆವು" ಎಂದು ಕೇಳಿಸಿದನು. (ಇದಕ್ಕೆ) ಮುನಿಯು ಹೀಗೆಂದನು: "ದೀರ್ಘಕಾಲ ಜಗತ್ಪ್ರಸಿದ್ಧಿಯಲ್ಲಿಯೆ ಬಾಳುವ ಒಂದು ಪುಣ್ಯವನ್ನು ನಿನ್ನಲ್ಲಿ ಈಶ್ವರನು ಉಂಟುಮಾಡಲಿ! ಶ್ರೀ ರಾಘವನು ಯಜ್ಞ ಮಾಡಲಿರುವನೆಂದು ಧ್ಯಾನದಿಂದ ತಿಳಿದುಕೊಂಡು ನೀವುಗಳು ಇತ್ತ ಬರುವ ಒಂದು ಹೊತ್ತನ್ನೇ ಹಾರೈಸುತ್ತಿದ್ದೆನು; ಚೆನ್ನಾಯಿತು, ಕುಳ್ಳಿರಿ" ಎಂದು ಯಥೋಚಿತವಾಗಿ ಸತ್ಕರಿಸಿದನು. ಮತ್ತೂ ಎಷ್ಟೋ ಹೊತ್ತು ಧರ್ಮಕಥಾ ಕಥನದಲ್ಲಿದ್ದ ಬಳಿಕ ರಾಘವನನ್ನು ಕಣ್ಣಾರೆ ನೋಡಲು ಬಯಸುವ ಮನಸ್ಥಿತಿಯನ್ನು ತಿಳಿಸಿದನು. (ಇದಕ್ಕೆ) ಶತ್ರುಘ್ನನು ಹೀಗೆಂದನು: "ಮುನಿಯ ಇಷ್ಟ ಹೀಗಿದ್ದು ಬಯಸುವೆಯಾದರೆ ಈಗಲೇ (ನಿನ್ನನ್ನು) ಕೊಂಡೊಯ್ಯುವಂತೆ ಈ ರಾಮದೂತನನ್ನು ಏರ್ಪಡಿಸುವೆನು" (ಎನ್ನಲು), ಮುನಿ ಹೀಗೆಂದನು: "ಒಳ್ಳೆಯದು ಒಳ್ಳೆಯದು! ಈ ಹೊತ್ತೆ ರಾಮನ ಪಾದಕಮಲವನ್ನು ಕಂಡು ಸಕುಟುಂಬ (ಸಹಿತನಾಗಿ) ಧನ್ಯನಾಗುತ್ತೇನೆ. ಯಾರವನು ರಾಮನ ನೆಚ್ಚಿನ ಬಂಟ?" (ಎನ್ನಲು), ಶತ್ರುಘ್ನನು ಹನುಮಂತನನ್ನು ತೋರಿಸಲು, ಒಡನೆ ಹನುಮಂತನು ಮುನಿಗೆ ತಲೆಬಾಗಿ—"ಆಜ್ಞೆಯೊಳಗಿರುವೆನು, ಈಗಲೇ

ಅಯೋಧ್ಯೆಗೆ ನಿಮ್ಮನ್ನು ಒಯ್ದು ಯಜ್ಞಶಾಲೆಯಲ್ಲಿ ಬಿಟ್ಟು ಮರಳುವೆನು" ಎಂದೊಡನೆಯೆ ಚ್ಯವನನು ತನ್ನ ಆಶ್ರಮವನ್ನು ಮಿಕ್ಕ ಉಳಿದ ಋಷಿಗಳಿಗೆ ಒಪ್ಪಿಸಿ ಅನುಜ್ಞೆ ಪಡೆದು ತಾನೂ ಸುಕನ್ಯೆಯೂ ವಾಯುಸುತನಾದ ಹನುಮಂತನ ಹೆಗಲನ್ನೇರಲು, (ಹನುಮಂತನು) ವಾಯುವೇಗದಿಂದ ಅಯೋಧ್ಯೆಗೆ (ಅವರನ್ನು) ಒಯ್ದು ಇಳಿಸಿ, ಇಲ್ಲೀವರೆಗಿನ ತಮ್ಮ ವಿಜಯ ಯಾತ್ರೆಯನ್ನು ರಾಘವನಿಗೆ ತಿಳಿಸಿ, ಮತ್ತೆ ಆತನ ಅಪ್ಪಣೆ ಪಡೆದು ಹಿಂತಿರುಗಿ ಶತ್ರುಘ್ನನಿಗೆ ಬೆಂಬಲವಾಗಿ ಬರುತ್ತಿದ್ದನು.

ನೀಲಾಚಲದರ್ಶನ

ನನ್ನ ನಿತ್ಯದ ಪೂಜೆಯ ಬಲುಮೆಚ್ಚಿನ ಪ್ರಾಣಲಿಂಗವೇ, ನನ್ನ ಕೈಬಳಕೆಯ ಒಡನಾಟದ ಮುತ್ತಿನ ಚೆಂಡೇ, ನನ್ನ ಚೆಲುವಿನ ಹೊನ್ನರಸಿಯೇ, ಹೀಗೆ ಹಯವು ಪಯೋಷ್ಣೀ ನದಿಯನ್ನು ದಾಟಿ ಬಲುದೂರ ನಡೆದು ಹೋಗಲು, ಮರೆಹೊಕ್ಕು ಬಂದ ರಾಜನನ್ನೂ ನಾಡನ್ನೂ ಒಪ್ಪಿಕೊಂಡು ಮುಂದೆ ಬರುವ ಆ ದಾರಿಯಲ್ಲಿ—ಚೆನ್ನಾಗಿ ಶೋಭಿಸುವ ಕಪ್ಪು ಆನೆಯ, ಕಪ್ಪು ಸಿಂಹದ, ಕಪ್ಪು ಕೋತಿಯ, ಕಪ್ಪು ಹಕ್ಕಿಯ ನೆಲೆಯಾದ ಕಪ್ಪುಮರದ, ಕಕ್ಕೆಯ, ಕಪ್ಪು ತಾಳೆಯ, ಕಪ್ಪು ಮಣಿಯ, ಕಪ್ಪು ಕಲ್ಲಿನ ಕಪ್ಪು ಬೆಟ್ಟವನ್ನು ಸ್ವಸ್ಥಾನದಲ್ಲಿ (ಹತ್ತಿರದಿಂದ) ನೋಡಿ ಶತ್ರುಘ್ನನು ಸುಮತಿಯನ್ನು—"ಎಲೈ ಆರ್ಯಮಂತ್ರಿ, ಮುಂದೆ ಇದೊ ಕಾಳರಕ್ಕಸಿಯ ಪಾಳೆಯದ ಕಪ್ಪುಬಟ್ಟೆಯ ಡೇರೆಯೆನ್ನುವಂತೆ ಕತ್ತಲೆಯ ಬಿಡಾರದ ಒಂದು ಇರುವಿಕೆಯಿಂದ ತೋರುವ ಕಪ್ಪು ಒಡಲಿನ ದೊಡ್ಡ ಬೆಟ್ಟವು ಏನೆಂದು ಹೇಳು" ಎಂದು ಕೇಳಲು, ಸರಿಯಾಗಿ ಹೊಂದಿಕೆಯಾದ ಮುದಿತನದ ಅರಿವಿನ ಒಂದು ಎತ್ತರವು ಅಂಗೈ ನೆಲ್ಲಿಯಾಗಿರಲು, ತಾನು (ಸುಮತಿಯು) ಹೀಗೆಂದನು. ಹೇಗೆಂದರೆ—

ವೀರರ ಪ್ರಸಿದ್ಧರ ಮಾನ್ಯರ ಅರಸನೇ, ವಿಷ್ಣುವಿನ ವಿಸ್ತಾರವಾದ ಹುತ್ತವೆಂಬಂತೆ ಅಲ್ಲಿ ತೋರುವುದೇ ನೀಲಾಚಲ. ಮತ್ತು ಈ ಹೆಮ್ಮೆಯ ದೊಡ್ಡಬೆಟ್ಟದ ತುತ್ತತುದಿಯ ತಪ್ಪಲಲ್ಲಿ, ತನ್ನನ್ನು ಮರೆಹೊಕ್ಕು ನಮಸ್ಕರಿಸಿ

ಸೇವಿಸುವ ಪ್ರಾರ್ಥಿಸುವ ದಾಸರಿಗೆ ಮರುಹುಟ್ಟನ್ನು ಹೋಗಾಡಿಸಿ, ತನ್ನ ರೂಪವನ್ನೇ ಕೊಟ್ಟು, ತನ್ನ ಹಾಗೆ ಮಾಡುವ, ನಾಲ್ಕು ತೋಳುಗಳಿಂದ ಶೋಭಿಸುವ ಪುರುಷೋತ್ತಮನ ಒಂದು ವಾಸದ ಗುಡಿಯಿದೆ. ಯಾವನಾದರೂ ಭಕ್ತಿಯಿಂದ ಆ ಕ್ಷೇತ್ರದಲ್ಲಿ ಸೇವಿಸುತ್ತ ಇದ್ದರೆ ತನ್ನಿಂದ ತಾನೆ ಚತುರ್ಭುಜನಾಗುತ್ತಾನೆ. ಶಂಖದ, ಚಕ್ರಾಯುಧದ, ಗದೆಯ, ತಾವರೆಯ ಸೊಬಗಿನ ಸೇರಿಕೆಯಿಂದ ಶೋಭಿಸುತ್ತಾನೆ.

ಕೇಳು ಎಲೆ ಚಿಕ್ಕರಸ, ಹೀಗೆ ನೀಲಾಚಲ ಶಿಖರವನ್ನು ಆರೋಹಣ ಮಾಡಿ ಶ್ರೀ ಪುರುಷೋತ್ತಮನ ಮೂರ್ತಿಯನ್ನು ಕಂಡು, ಪ್ರಸಾದವನ್ನು ಕೊಂಡು, ಅನ್ನವನ್ನು ಉಂಡು, ಕೆಲಕೆಲವರು ವಿಷ್ಣುವಿನ ರೂಪವನ್ನೇ ಹೊಂದಿದರು, ಕೆಲಕೆಲವರು (ಹಾಗೆ) ಹೊಂದಿ ವಿಷ್ಣುಲೋಕಕ್ಕೆ ತೆರಳಿದರು ; ಕೆಲಕೆಲವರು ಪುರುಷೋತ್ತಮನ ಸೇವೆಯಲ್ಲೇ ನಿಂತರು ; ಕೆಲವರು ಬಂದರು. ರತ್ನಗ್ರೀವನು ತನ್ನ ಸತಿಸುತ ಮಂತ್ರಿ ಪುರೋಹಿತರ ಸಹಿತ ದೇಹದೊಡನೆ ಸಾಯುಜ್ಯಪದವಿಗೆ ಏರಿದನು, ಕೆಣಾ ! ಹೀಗೆ ಏರ್ಪಟ್ಟ ಮಹಿಮೆ ಈ ಬೆಟ್ಟದ ಒಡೆಯನಿಗೆ ಸಲ್ಲುವುದು ಎಂದು ನೀಲಗಿರಿ ಮಹಾತ್ಮ್ಯೆಯನ್ನು ಮಂತ್ರಿಪನು ಕಥಿಸಿದನು.

ರಮಣೀರತ್ನವೇ, ಶತ್ರುಘ್ನನು ಇಷ್ಟೊಂದು ಹೆಮ್ಮೆಯ ಕ್ಷೇತ್ರದ ಒಂದು ಮಹಿಮೆ ದೊಡ್ಡದು ಎಂದು ಕೌತುಕಗೊಂಡು ದರ್ಶನ ಸ್ತುತಿಮಾಡಿ ಕುದುರೆಯ ಬೆಂಬಲದ ಸೈನ್ಯದ ರಕ್ಷಣೆಯಲ್ಲಿಯೇ ಹೋಗುತ್ತಿದ್ದನು.

ಸುಬಾಹುಯುದ್ಧ

ಹೀಗೆ ಮುಂಬರಿದು ಬಂದ ಶರತ್ಕಾಲದಲ್ಲಿ ರಾಘವನ ಯಜ್ಞದ ವರ್ಣಾಶ್ವವು ದಕ್ಷಿಣಕ್ಕೆ ಮುಖಮಾಡಿ ನಡೆಯುತ್ತಿರಲು, ಇತ್ತ ಆ ವೇಳೆಯಲ್ಲಿ ಚಕ್ರಾಂಕಪುರದ ರಾಜಕುಮಾರನು ಪ್ರಜೆಗಳ ಒಂದು ದೂರಿಗೆ ತನ್ನ ಒಂದು ವಿನೋದಕ್ಕೆ ಒಳ್ಳೆಯ ಒಡೆತನದ ಸಡಗರದಿಂದ ಬೇಟೆಗೆಂದು ಕಾಡನ್ನು ಪ್ರವೇಶಿಸಿದನು.

ಆಗ ತನಗೆ ದೊರೆತ ಒಂದು ಯೌವನದ ಹೊಸ ಕುದುರೆಯನ್ನು ನಿಟ್ಟಿಸಿ

ಅಕ್ಕರೆಯಿಂದ ಸಂತೋಷಗೊಂಡು ಹಣೆಯ ಬಿರುದಿನ ಹಾಡಿನ ಒಕ್ಕಣೆಯ ಓಲೆಯನ್ನು ಕೈಯಲ್ಲಿ ಹಿಡಿದು ಓದಿದನು. ಅನುಕ್ರಮದಿಂದ ಓಲೆಯನ್ನು ಓದಿದಾಗ ಕಹಿಯನ್ನು ಉಂಡಂತೆಯೂ, (ಕಲ್ಲನ್ನು ಎಡವಿದಂತೆಯೂ), ಮುಳ್ಳು ನಾಟಿದಂತೆಯೂ, ಚೇಳು ಕುಟುಕಿದಂತೆಯೂ ಮನಸ್ಸು ಕದಡಿ, ಗಾಯಗೊಂಡ ಕಾಡುಹಂದಿಯ, ದಾಟಲ್ಪಟ್ಟ ಸರ್ಪದ ಹೊಸ ದ್ವೇಷದ ಒಂದು ರೋಷದಿಂದ ಕಿಡಿಕಿಡಿಯಾಗಿ ಚಿಗುರುತ್ತಿರುವ ಮೀಸೆಯನ್ನು ತಿದ್ದುತ್ತ, "ಅಃ ! ಶ್ರೀರಾಮನಂತೆ, ಏಕಶ್ವೇತಚ್ಛತ್ರದಲ್ಲಿ ಆಳುವ ರಾಜನಂತೆ, ರಾವಣಾದಿಗಳನ್ನು ಕೊಂದವನಂತೆ, ಶಾಂತಿಯಂತೆ, ಯಜ್ಞಾಶ್ವವಂತೆ, ಯಜ್ಞಮಾಡುವವನಂತೆ ತಮ್ಮ ಶತ್ರುಘ್ನನಂತೆ, ರಕ್ಷಣೆಯಂತೆ, ಪರಾಕ್ರಮವುಳ್ಳ ವೀರರು ಕಾದಾಡಬಹುದಂತೆ, ಕಾಣಿಕೆಯಂತೆ, ಪ್ರತಿಜ್ಞೆಯಂತೆ, ತನ್ನ ಆಣೆಯಂತೆ, ಜಗಕ್ಕೆ ರಾಮನೊಬ್ಬನೆ ಛಲದಂಕನು ; ಶತ್ರುಘ್ನನೊಬ್ಬನೆ ವೀರನು ; ಮಿಕ್ಕ ರಾಜಕುಮಾರರು ಹೇಡಿಗಳೇನಾಗುವುದಿಲ್ಲವೆ? ಎಂತಹ ಒಂದು ಸೊಕ್ಕಿನ ಮಾತಿನ ಒಂದು ರೀತಿಯೊ ! ಇಂತಹ ಒಂದು ಪ್ರತಿಜ್ಞೆ ನಮ್ಮಂತಹವರಿಗೆ ಜ್ವಾಜಲ್ಯವಾಗಿ ಉರಿಯುವ ದೊಡ್ಡ ಕಿಚ್ಚಿನಲ್ಲಿ ಸುರಿದ ತುಪ್ಪಕ್ಕೆ ಸಮಾನವಾಗದೆ ಏನು ಹೋಗುತ್ತದೆಯೆ ? ಅದು ಕಾರಣ ನಾನು ನನಗೆ ದೊರೆತ ಕುದುರೆಯನ್ನು ಕಟ್ಟಿ, ಶತ್ರುವನ್ನು ನಿವಾರಿಸುವೆನು. ಮತ್ತು ನನ್ನ ಗಂಡುಗಲಿತನದ ಛಲವನ್ನು ತೋರಿಸುವೆನು" ಎಂದು ನಿರ್ಧರಿಸಿ ಶ್ರೀ ರಾಘವನ ಕುದುರೆಯನ್ನು ಸೆರೆ ಹಿಡಿದು ಬೇಟೆಸೈನ್ಯದ ಕಾವಲಿನಲ್ಲಿ ತನ್ನ ಪಟ್ಟಣಕ್ಕೆ ಅಟ್ಟಿದನು.

ನಸೆಗಾರ್ತಿಯೇ, ಹೀಗೆ ದಮನನು ಕುದುರೆಯನ್ನು ಸೆರೆಹಿಡಿದು ತನ್ನ ಪುರಕ್ಕೆ ಕಳುಹಿಸಲು, ಒಡನೆ ಇತ್ತ ಕುದುರೆಯ ಬೆಂಬಲದ ಕಾವಲಿನ ಆಳುಗಳು ಆತುರದಿಂದ ಒಟ್ಟುಗೂಡಿ ಹತ್ತಿರಬಂದು ರಾಜಕುಮಾರನನ್ನು ಸುತ್ತ ಮುತ್ತಿ, ಯುದ್ಧವೀರನನ್ನು, "ಎಲೆಲೆ ಹಗಲುಗಳ್ಳ, ಎಂತಹ ಒಂದು ಕೆಲಸ, ತಾನೇ ತಾನಾಗಿ ದಾರಿಹಿಡಿದು ಹೋಗುವ ಕುದುರೆಯನ್ನು ಇನ್ನು ನೀನು ಕಟ್ಟಿಕೊಂಡು ಒಯ್ಯುವ ಬಲ ಯಾವುದೋ ! ಯಾರ ಒಂದು ಕುದುರೆಯೆಂಬುದನ್ನು ವಿಚಾರಿಸ ಹೋಗದೆ ಹಿಡಿದುಕೊಳ್ಳುವ ನೀನು ಹಳ್ಳಿಯ ಹೆಡ್ಡನಾಗಿರಬೇಕು; ನಿಲ್ಲು ನಿಲ್ಲು ! ಬಿಡು ಬಿಡು ! ಶ್ರೀರಾಮನ ಯಜ್ಞದ ಒಂದು ಶೃಂಗಾರದ ಕುದುರೆ ಕಣಾ ! ದೇವರು ಮುನಿಯುವಲ್ಲಿ, ಕದ್ದೊಯ್ಯುವ ನಿನ್ನ ಈ ಬಲುಮೆ

ಪೊಳ್ಳಾಗುತ್ತದೆ. ನಿನ್ನ ನಾಡು ಬಟ್ಟಬಯಲಾಗುತ್ತದೆ, ಆದರಿಂದ ದುರ್ಬುದ್ಧಿಯಿಂದ ಅಯೋಗ್ಯನಾಗಿ ವ್ಯರ್ಥವಾಗಿ ನೀನು ಕಷ್ಟಕ್ಕೊಳಗಾಗದೆ ಬೇಗನೆ ಕುದುರೆಯನ್ನು ಬಿಟ್ಟು ಕೊಡಲಿ ನಮಗೆ ಶರಣುಹೋಗಿ ಸುಖವಾಗಿ ಬಾಳುವುದು" ಎಂದರು. ಆ ಮಾತಿಗೆ ಬಹುವಾಗಿ ನಕ್ಕು ಮತ್ತೆ ಕೆಂಪುಕಣ್ಣಿನವನಾಗಿ ದಮನನು ಕೈಯ ಹರಿತಖಡ್ಗದ ತೀಕ್ಷ್ಣವೊನೆಯನ್ನು ಮುಂದೆ ಮಾಡಿ (ತೋರಿಸಿ) "ಈ ಸಲಕ್ಕೆ ನಿಮ್ಮ ತಲೆಯನ್ನು ಕಾಯುವೆನು ; ಮುಂದೆ ಹೀಗೆ ಬಾಯಿಗೆ ಬಂದಂತೆ ಹರಟಿದರೆ ತುದಿನಾಲಗೆಯನ್ನು ಸರಕ್ಕನೆ ಸೀಳುವೆನು, ನಿಶ್ಚಯ, ನಾನೇ ಬಲವುಳ್ಳವನು, ಕುದುರೆಯನ್ನು ಕಟ್ಟಿದೆನು. ಕಾಡುವ ಒಂದು ಅಭ್ಯಾಸ ನಮಗಿದೆ. ಆ ಸೊಕ್ಕಿನ ರಾಮ ನಿಮ್ಮ ದೇವನು, (ನನಗೆ) ಯಾವನು ಏನು ಮಾಡುತ್ತಾನೆ ? ಈಗಲೆ ನಿಮ್ಮ ಒಡೆಯನನ್ನು ಎಬ್ಬಿಸಿ ಯುದ್ಧಕ್ಕೆ ಕಳುಹಿಸಿ. ಇದೊ ನನ್ನ ಒಂದು ತೋಳ್ಬಲವನ್ನು ಮೆರೆಯುವೆನು. ಕುದುರೆಯ ಒಂದು ಕಾರಣದಿಂದ ಯುದ್ಧದಲ್ಲಿ ನನ್ನ ಈ ಹರಿತದ ಖಡ್ಗಕ್ಕೆ ತಲೆಯನ್ನು ಮಾರಬೇಡಿರಿ ಹೋ ! ಹೋಗಿರಿ !" ಎಂದು ಕಾವಲಿನ ಆಳುಗಳನ್ನು ಗದರಿ ಗರ್ಜಿಸಿದನು.

ಹೀಗಾಗಲು ಅನುಚರರು ಪೆಟ್ಟಿಗೆಯ ಹಾವಿನ ಒಂದು ರೀತಿಯಿಂದ ಪ್ರತಿಬಂಧಿಸಿದವರಾಗಿ ಮರಳಿ ತಮ್ಮ ಒಡೆಯನಾದ ಪ್ರತಾಪಾಗ್ರ್ಯನಿಗೆ ಹೀಗೆ ಇದನ್ನು ವಿಸ್ತರಿಸಿದರು.

ಮುದ್ದಣ—ದೇವಿ !

ಮನೋರಮೆ—ಯಾವ ದೇವಿ ! ಶ್ರೀದೇವಿ ಏನು ಭೂದೇವಿ !

ಮುದ್ದಣ—ನಿನ್ನನ್ನೇ ದೇವಿಯೆಂದು ಕರೆದೆನು.

ಮನೋರಮೆ—ದೊಡ್ಡ ಕತೆಯನ್ನು ವಿಸ್ತರಿಸುವ ಒಂದು ದೊಡ್ಡ ಭ್ರಮೆಯಿಂದ ಏನು ನನ್ನನ್ನು ತೊತ್ತುಮಾಡಿ ದೇವಿಯೆಂದು ಕರೆದೆಯ ?

ಮುದ್ದಣ—ಏನು ಕಾಣೆನೆ ? ಭ್ರಾಂತನಾದೆನೆ ?

ಮನೋರಮೆ—ಮತ್ತೆ ಯಾವ ದೇವಿ ನಾನು ?

ಮುದ್ದಣ—ರತಿದೇವಿ !

ಮನೋರಮೆ—ಹಾಗಿದ್ದರೆ ನೀನು ಕಾಮದೇವ.

ಮುದ್ದಣ—ಆಗಲಿ, ದೇವಿಯ ಒಂದು ಪ್ರಸಾದ.

ಮನೋರಮೆ—ಎಲೆ ಮದನಮೋಹನರಾಜ, ಹಾಗಿದ್ದರೆ ನೀನು ಹೇಳಿದ ರತಿಯನ್ನೆ ವರ್ಣಿಸಿ ಹೊಗಳು, ನೋಡುವೆನು.

ಮುದ್ದಣ—ಓ! ಎಂತಹ ಮಾತು! ನನ್ನಿಂದ ಸಾಧ್ಯವೆ?

ಮನೋರಮೆ—ಆಃ! ರತಿಯನ್ನು ವರ್ಣಿಸುವುದಕ್ಕೆ ಆಗದ ನೀನು ಎಂತಹ ಕಾಮದೇವ!

ಮುದ್ದಣ—ಹಾಗಿದ್ದರೆ ಒಪ್ಪಿದೆನು, ಒಪ್ಪಿದೆನು. ಕಾಮದೇವನು ಎಂಬ ಒಂದು ಬಿರುದನ್ನು ಪಡೆದೂ ಸಹ ಸಾಧ್ಯವಾಗೆನೆ (ಸಾಧ್ಯವಾಗುವು ದಿಲ್ಲವೆ)? ತೆಗಳಬೇಡ, ಇರಲಿ! ಇದೊ ಇದೊ ತೊಡಗಿದೆನು; ಅಸಿದ (ಕೃಶ ವಾದ) ಶರೀರದ ಹೊಗಣ್ಣಿನ ಹೆಣ್ಣು; ಸಸಿ (ಚಂದ್ರ) (ಗಿಡದ) ಮುಖದ, ಕೆಂಪು ಬಾಯಿಯ ಪುಸಿ (ಸಣ್ಣ) (ಸುಳ್ಳು) ನಡುವಿನ ರಾಣಿ.......

ಮನೋರಮೆ—(ಅರೆನೋಟದಿಂದ) ಆಃ! ಕವಿಗಳಿಗೆ ನೀನು ಗುರು ವಾಗಿರಬೇಕು. ಎಂದೂ ಕಾಣದವರ ಒಂದು ರೀತಿಯಿಂದ ಹೇಳಿದ ಅಸ್ಪಷ್ಟ ವಾದ ನಿನ್ನ ಈ ವರ್ಣನೆಯ ನುಡಿಗೆ ಏನು ಹೇಳುವೆನೊ! ದೇಹ ಬಳುಕು ವುದೇನು? ಮುಖದಲ್ಲಿ ಎಂತಹ ಸಸಿ? ಕಣದಲ್ಲಿ ಎಂತಹ ಹೂ? ನಡುವಿನಲ್ಲಿ ಏನು ಹುಸಿ? (ಎಂದು ಬಾಯನ್ನು ತೆರೆದಳು.) ಹೋಗು ನೀನು ಕಾಮನಲ್ಲ, ಭೀಮ.

ಮುದ್ದಣ—(ಕಿರುನಗೆಯಿಂದ) ನನ್ನ ಕುಲದೇವಿ! ಇಷ್ಟೊಂದು ಮುನಿ ಸೇನು? ನನ್ನ ಅಜ್ಞಾನದಿಂದ ಹೀಗಾಗಿರಬೇಕು. ಸೈರಿಸು! ಸೈರಿಸು! ವಚೋ ವಿನ್ಯಾಸವನ್ನು ಶೋಧಿಸಿ ಹಾರೈಸದಂತೆ, ಇದ್ದಂತೆ ವರ್ಣಿಸುವ ಒಂದು ಜಾಣ್ಮೆ ದೊರೆಕೊಳ್ಳುವಂತೆ, ವಿದ್ಯಾದೇವತೆಯ ಒಂದು ಒಲುಮೆ ತಾಳಿ ವಾಕ್ಸಿದ್ಧಿ ಯನ್ನು ಪಡೆದು ನಿನ್ನನ್ನು ನನ್ನ ಜನಿವಾರದ ಆಣೆ, ರತಿಗಿಂತ ನೂರುಮಡಿ ಮಿಗಿಲೆನಿಸಿ ವರ್ಣಿಸುವೆನು.

ಸುವ್ವಿ! ಸುವ್ವಿ! ಚತುರ್ಮುಖನ ಅಗ್ಗಿಷ್ಟಿಕೆಯಲ್ಲಿ ಹುಟ್ಟಿದ ಬಿಳಿ ನಗೆಯ ಮುದ್ದು ಕುವರಿ! ಸುವ್ವಿ! ಸುವ್ವಿ! ವೀಣೆ ಪುಸ್ತಕಗಳನ್ನು ಹೊತ್ತ ಕೈಯ ಚೆಲುವೆ! ಸುವ್ವಿ! ಸುವ್ವಿ! ವಾಣಿ, ನನ್ನ ಈ ಮಡದೀಮಣಿಯನ್ನು ರತಿಗೆ ಸಮನೆಂದು ಹೊಗಳಿ ಹಾಡುವ ಒಂದು ಜಾಣ್ಮೆಯ ಹೊದ್ದಿಕೆಯ ನುಡಿ ಬಿನ್ನಾಣವನ್ನು ನನಗೆ ಕರುಣಿಸವ್ವ! ನಿನಗೆ ನಮಸ್ಕರಿಸುವೆನು. ಸುವ್ವಿ! ಸುವ್ವಿ! ಆ! ಆ! ಆ! ಆ! ಆ!

ಮನೋರಮೆ—ನೀನು ಮಾಡಿದ ಸರಸ್ವತಿಯ ಹೊಗಳಿಕೆಯ ತುತ್ತ ತುದಿಯ 'ಆ! ಆ! ಆ!' ಏನು ?

ಮುದ್ದಣ—ಹಾಗೆ ಅದು ಹಾಡಿನ ಜೊತೆಯ ದಾಟಿಯಷ್ಟೆ!

ಮನೋರಮೆ—ಆಯಿತಾಯಿತು ಚೆಲುವ. ಏನು ನಿನ್ನನ್ನು ಸರಸ್ವತಿ ಒಲಿದಳೆ ?

ಮುದ್ದಣ—ಹೇಗೆ ಹೇಗೋ ಹಾಡಿ ಬೇಡಿ ಒಲುಮೆ ಪಡೆದೆ. ಈಗ ಏನೂ ತಡಮಾಡದೆ ವರ್ಣಿಸಿ ನಿನ್ನ ಒಂದು ಒಲುಮೆ ಪಡೆಯುವೆನು. ಕೇಳು! ಮಹಾಕಾಳಿಯ ದೇಹಕಾಂತಿಗೆ....

ಮನೋರಮೆ—ನಿನ್ನ ರತಿಯನ್ನು ವರ್ಣಿಸುವ ಒಂದು ಸಂದರ್ಭದಲ್ಲಿ ಮಹಾಕಾಳಿಯಲ್ಲಿ ಏನು ಕಾರ್ಯ ?

ಮುದ್ದಣ—ಆಃ! ವಿಘ್ನೇಶ್ವರನನ್ನೇ ಮರೆತೆನು. ಆತನಿಗೆ ಪ್ರದಕ್ಷಿಣೆ ಬರದಿರುವುದರಿಂದ ಮೊಟ್ಟಮೊದಲಲ್ಲಿಯೇ ಇಷ್ಟೊಂದು ವಿಘ್ನ. ಓ! ಓ! ಏಕದಂತದ, ಬೀಸಣಿಗೆಕಿವಿಯ, ಮೂರು ಡೊಂಕಿನ ಮೂಗಿನ, ದೊಡ್ಡ ಹೊಟ್ಟೆಯ, ಇಲಿಯನ್ನೇ ರಥವಾಗಿ ಉಳ್ಳ ಗಣಪನೇ, ಇದೋ ಮಣಿಯುವೆನು. ಈ ರಮಣೀಮಣಿಯಾದ ರತಿದೇವಿಯನ್ನು ವರ್ಣಿಸುವ ಒಂದು ಕವನದ ಕಾರ್ಯದ ಉದ್ಯೋಗದ ಅಷ್ಟೊಂದು ಹೊತ್ತನ್ನು ಯಾವ ರೀತಿಯಲ್ಲಾದರೂ ಎಡರು (ತೊಂದರೆ) ಬಾರದಂತೆ ಕಾಯುವುದು. ಇಷ್ಟೊಂದು ಒಳ್ಳೆಯದನ್ನು ಮಾಡಿದೆಯಾದರೆ ಆ ವರ್ಣನೆಯ ಹೊಗಳಿಕೆಯ ಹಾಡಿಗೆ ಒಲಿಯುವ ನನ್ನ ಈ ಮಡದಿ ಪ್ರೀತಿಯಿಂದ ನನಗೆ ತಿನ್ನಲು ಬಡಿಸುವ ಆ ಹಸುಗೆಯ (ಪಾಲಿನ) ಚಕ್ಕುಲಿಯನ್ನು ಗಾರಿಗೆಯನ್ನು ಹುರಿಗಡಲೆಯನ್ನು ಅವಲಕ್ಕಿಯನ್ನು ಕಬ್ಬನ್ನು ತೆಂಗಿನಕಾಯಿಯನ್ನು ನಿನಗೂ ಪಾಲುಕೊಟ್ಟು ಮೊದಲಲ್ಲಿಯೇ ಅರ್ಪಿಸುವೆನು.

ಮನೋರಮೆ—ನಿನ್ನ ಬೆನಕನು ಒಂದೇ ಹಲ್ಲಿನ ಬಾಯಲ್ಲಿ ಹೇಗೆ ಉಣ್ಣುವನು ?

ಮುದ್ದಣ—ಏನು ರಮಣಿ, ದೇವರು ಊಟ ಮಾಡುವರೆ ? ಊಟ ಮಾಡುವುದಾದರೆ ಹಾಗೆ ಹೇಳುವೆನೆ ?

ಮನೋರಮೆ—ಮತ್ತೆ ಒಬ್ಬನೇ ತಿನ್ನಲು ಬಗೆಯುವೆಯಾ ?

ಮುದ್ದಣ—ನೀನು ಕೊಡುವುದು ಏನು ದಿಟವೆ ?

ಮನೋರಮೆ—ಹೇಗಾದರೂ(ಮಾಡಿ) ಕೊಟ್ಟರೆ ಏನು ಮಾಡುವೆ ?

ಮುದ್ದಣ—ಇಸ್ಸಿ ! ಅಷ್ಟೊಂದು ಭಕ್ಷ್ಯವನ್ನು ಒಬ್ಬನೇ ನುಂಗಲು ನಾನು ರಾಹುವೆ ? ಚಕ್ಕುಲಿ ಗಾರಿಗೆಗಳು ಕಾಮದೇವನಿಗೆ ; ಅವಲಕ್ಕಿ ಹುರಿಗಡಲೆಗಳು ಮುದ್ದಣನಿಗೆ, ಕಬ್ಬು ಕವಿಗೆ, ತೆಂಗಿನಕಾಯಿ ನನಗೆ, ಅಷ್ಟೆ !

ಮನೋರಮೆ—ನೀನು ಜಾಣನು, ನಿನ್ನ ರತಿದೇವಿಗೆ ಏನು ?

ಮುದ್ದಣ—ತಾನೆ ಒಲಿದು ಕೊಡುವ ದೇವಿಗೆ ಯಾವುದರಲ್ಲಿ ಆಸೆಯೊ ?

ಮನೋರಮೆ—ಹಾಗಿರಲು ಮನೋರಮೆಗೆ ಏನು ?

ಮುದ್ದಣ—ಓವೊ ! ರತಿಯನ್ನು ಬಣ್ಣಿಸುವ ಒಂದು ವ್ಯಸನದಲ್ಲಿ ಮನೋರಮೆಯನ್ನು ಮರೆತುಬಿಟ್ಟೆನು, ಆಗಲಿ ! ಕಬ್ಬಿನ ಸಿಪ್ಪೆಯೂ ಮುಗ್ಗಿದ ಗಾರಿಗೆ ಪುಡಿಯೂ ಮನೋರಮೆಗಿರಲಿ.

ಮನೋರಮೆ—ನೀನು ಬಲು ಗಡಸುಗಾರ, ಸಹಜ. ಇರಲಿ, ನೀನು ಮನಸ್ಸಿನಲ್ಲೇ ಮಂಡಿಗೆಯನ್ನು ಊಟ ಮಾಡಿದಂತೆ ಆಯಿತು. ಈಗ ಇನ್ನು ಕೇಳುವೆನು ರತಿಯ ಹೊಸ ವರ್ಣನೆಯನ್ನು !

ಮುದ್ದಣ—ಕೇಳು ! ನಾನು ವರ್ಣಿಸುವ ರತಿಗೆ ಸ್ನಾನಮಾಡಿದ ಮರಗೂಳನ (ಮರವನ್ನು ಅನ್ನವನ್ನಾಗಿ ಉಳ್ಳವನ) (ಅಗ್ನಿಯ) (ಬೆಂಕಿಯ) (ಇಜ್ಜಲಿನ) ದೇಹಕಾಂತಿ.

ಮನೋರಮೆ—ಮರಗೂಳನೆಂದರೆ ಯಾರು ?

ಮುದ್ದಣ—ದಿಕ್ಪಾಲಕರಲ್ಲಿ ಒಬ್ಬ.

ಮನೋರಮೆ—ಉಂ ! ಹುಂ !

ಮುದ್ದಣ—ಶೃಂಗಾರದ ಮಲೆನಾಡಿಗನ ಒಂದು ಭಂಗಿಯ ಮುಖ.

ಮನೋರಮೆ—ಮಲೆನಾಡಿಗನೆಂದರೆ ಯಾವನು ?

ಮುದ್ದಣ—ಮಲೆಯಲ್ಲಿಯೇ ನೆಲೆಸಿರುವ ನಾಲ್ಕು ಕೈಗಳ ದೇವರು.

ಮನೋರಮೆ—ಇಂತಹ ದೇವರ ಒಲುಮೆ ಪಡೆದೇ ಮಲೆನಾಡ ಹೆಣ್ಣುಗಳು ಕಣ್ಣಿಗೆ ಚೆಲುವೆಯರಾಗಿರಬೇಕು

ಮುದ್ದಣ—ಹೌದು. ಮತ್ತೆ ಆ ಚೆಲುವೆಗೆ ಇರುಳ್ಗಣ್ಣನಿಗೆ ಹೇಗೊ ಹಾಗೆ ಒಪ್ಪುವ ಬಟ್ಟನುಣ್ಗಣ್ಣು.

ಮನೋರಮೆ—ಇರುಳ್ಗಣ್ಣನು ಎಂದರೆ ಯಾವ ಪುಣ್ಯವುಳ್ಳವನು!

ಮುದ್ದಣ—ಇರುಳ್ಗಣ್ಣನೆಂದು ಚಂದ್ರ (ಪ್ರಸಿದ್ಧ) ನಾಗಿದ್ದಾನೆ.

ಮನೋರಮೆ—ಆಃ! ಕಾಮದೇವರ ದೇವ! ಈಗ ಈಗ ಅರಿತೆನು. ನೀನು ವರ್ಣನೆಯಲ್ಲಿ ಎರಡನೆಯ ಬ್ರಹ್ಮ, ನಿಶ್ಚಯ. ನನ್ನ ಈ ಜೋಲು ಮುಡಿಯ ಹೂವಮಾಲೆಯ ಆಣೆ! ನಿನಗೆ ಯಾವ ಭಕ್ಷ್ಯದಲ್ಲಿ ಇಷ್ಟ? ಹೂರಣ ಕಡಬನ್ನು ನೀಡಲೊ? ಚಕ್ಕುಲಿಯನ್ನೋ?

ಮುದ್ದಣ—ಇರು ಇರು! ಸರಿಯಾಗಿ ಬಚ್ಚಿಡು. ಮಹಾದೇವಿಯ ಪ್ರಳಯಕಾಲದ ಒಂದು ರೂಪಕ್ಕೆ ಪ್ರತಿರೂಪವಾಗಿ ಮೆರೆಯುವ ನನ್ನ ರತಿ ದೇವಿಯನ್ನು ಅಡಿಯಿಂದ ತೊಡಗಿ ಮುಡಿವರೆಗೂ ವರ್ಣಿಸದ ಮೊದಲೇ ಇಷ್ಟೊಂದು ಬೇಗನೆ ಒಲಿಯುವೆಯಾ?

ಮನೋರಮೆ—ಸಮುದ್ರದ ನೀರನ್ನು ರುಚಿನೋಡುವ ಒಂದು ರೀತಿಯಲ್ಲಿ ಆಗಸ್ತ್ಯನಂತೆ ದೊಡ್ಡ ಕಡಲನ್ನೇ ಕುಡಿಯಲಾಗುತ್ತದೆಯೇ? ಒಂದು ಹನಿ ಸಾಲದೆ?

ಮುದ್ದಣ—ಅಧಿಕಪ್ರಸಂಗ ಸಾಕು. ಹೀಗೆ ವ್ಯರ್ಥಾಲಾಪದಿಂದ ಹೊತ್ತನ್ನು ಕಳೆಯುವ ನಮ್ಮನ್ನು ಲೋಕದವರು ನಿಂದಿಸುವುದಿಲ್ಲವೆ? ಹೋ ಬಿಡು, ರಾಮಕಥೆಯನ್ನು ಇನ್ನು ಒರೆಯುವೆನು, ಕೇಳು.

ಆ ವೇಳೆಯಲ್ಲಿ ಶ್ರೀರಾಮನ ಕುದುರೆ ಬಲಿಷ್ಟ ವೈರಿರಾಜಕುಮಾರನಲ್ಲಿ ಸೆರೆಯಾಗಿದೆಯೆಂದು ಚಾರರು ಹೇಳಿದ ನಿಷ್ಠುರದ ಕರ್ಕಶದ ನುಡಿ ತನ್ನ ಕಿವಿಯ ಒಳಗನ್ನು ಪ್ರವೇಶಿಸುವ ಮೊದಲೇ ಪ್ರತಾಪಾಗ್ರ್ಯನು ಬಿಲ್ಲಿಗೆ ಹಗ್ಗ ವನ್ನು ಏರಿಸಿ, ಹಗ್ಗದ ಮಧ್ಯಕ್ಕೆ ಬಾಣವನ್ನು ಹೂಡಿ, ರಥವನ್ನು ಏರಿ, ನಾಲ್ಕು ಬಗೆಯ ಸೈನ್ಯದೊಡನೆ 'ಕುದುರೆ ಕಳ್ಳನು ಯಾರು, ಯಾರು? ತೋರು ತೋರು' ಎಂದು ವೈರಿಯನ್ನು ಆಕ್ರಮಿಸಿ ನಡೆದನು.

ಇತ್ತ ದಮನನು ಹೋರಾಟಕ್ಕೆಂದು ಬರುವ ಶತ್ರುಸೈನ್ಯವನ್ನು ಕಂಡು ತನ್ನ ಅಂಗರಕ್ಷಣೆಯ ಚಿಕ್ಕ ಸೈನ್ಯಕ್ಕೆ ಕೈಬೀಸಿ ಸೇನೆಯ ಮುಂಭಾಗದಲ್ಲಿಯೇ ನಿಂತು ತಾಗಿದನು. ಆಗ ಪ್ರತಾಪಾಗ್ರ್ಯನು ತನ್ನ ಒಂದು ಪರಾಕ್ರಮ ದಿಂದ ಶತ್ರುವನ್ನು ಬಾಣದ ಜಾಲದಿಂದ ಮುಸುಕಲು (ಮತ್ತು) ಒಡನೆ ಅರ್ಧ ದಾರಿಯಲ್ಲೇ ಬರುವ ಬಾಣಗಳನ್ನು ಮೂರು ತುಂಡು ಮಾಡಿ ಉತ್ತಮ

ಬಾಣಗಳನ್ನು ಪ್ರಯೋಗಿಸಲು, ಅಷ್ಟರಲ್ಲಿ ಪ್ರತಾಪಾಗ್ರ್ಯನ ಕವಚವು ಬೆಸುಗೆ ಬಿಟ್ಟಿತು ; ಕಡೆಯಲ್ಲಿ ಪ್ರತ್ಯಾಪಾಗ್ರ್ಯನು ದಮನನ ಬಲವಾದ ಮುಷ್ಟಿಯ ಗುದ್ದಿಗೆ ನಿದ್ದೆ ಹೋದನು. ಆ ಪ್ರಸ್ತಾವದಲ್ಲಿ (ಸಂದರ್ಭದಲ್ಲಿ) ರಥಿಕನ (ಪ್ರತಾಪಾಗ್ರ್ಯನ) ಒಂದು ಸೋಲನ್ನು ಕೇಳಿ ಪುಷ್ಕಲನು ಶತ್ರುಘ್ನನಿಂದ ಅಪ್ಪಣೆ ಪಡೆದು ತಡಮಾಡದೆ ಎದುರಾದ ವಿಕ್ರಾಂತರಾಜಪುತ್ರನನ್ನು ಬಾಣದ ಮಳೆಯಿಂದ ಕತ್ತಲಿಸಿ (ಕತ್ತಲೆಯುಂಟುಮಾಡಿ) ಬಣ್ಣ ಗುಂದಿಸಿ, ಬಹಳ ಕೋಪಗೊಂಡು ಬತ್ತಳಿಕೆಯಿಂದ ವಿಷವನ್ನು ಉಗುಳುವ ಕವಲಂಬುಗಳನ್ನು ಎಳೆದು ಮೇಲೆತ್ತಿ ಎಸೆಯುತ್ತ ಇರಲು, ದಮನನು ಎಡಕ್ಕೂ ಬಲಕ್ಕೂ ತಿರುಗಿ ಮುಂದುವರೆದು ಪ್ರತಿಬಾಣಗಳನ್ನು ಜೋಡಿಸಿಯೂ, ರಯ್ಯನೆ ಬರುವ ಶತ್ರುವಿನ ಹೊಸಬಾಣಗಳನ್ನು ಕತ್ತರಿಸಿಯೂ, ದೇವತೆಗಳು ಹೊಗಳುವಂತೆ ಸರಿಸಮನಾಗಿ ಹೋರಾಡಿದನು ಕಟ್ಟಕಡೆಯಲ್ಲಿ ಕೈ ಸೋತು ದೇಹ, ಕುಂದಿ, ಶಕ್ತಿ ಕುಂದಿ, ಮೂರ್ಛೆ ಹೋದನು.

ಮುದ್ದಣ—ಹೀಗೆ ಸುಬಾಹುವಿನ ಮಗನಾದ ದಮನನು ಪುಷ್ಕಲನ ಬಾಣದ ಪೆಟ್ಟಿಗೆ ತ್ರಾಣಕುಂದಿ ಮೈಮರೆಯಲು, ಒಡನೆ ಆಗಲೇ ತಡಮಾಡದೆ ಒಬ್ಬನು ಓಲೆಕಾರನು (ಅಲ್ಲಿಂದ) ಹೊರಟು ಪಟ್ಟಣಕ್ಕೆ ಬಂದು ತನ್ನ ಒಡೆಯನಾದ ಸುಬಾಹುವಿಗೆ ನಮಸ್ಕರಿಸಿ, "ಶತ್ರುರಾಜರೊಡನೆ ನಮ್ಮ ಚಿಕ್ಕರಾಜನು ಇಂದು ಕಾದಾಡಿ ಮೈಸೋತನು. ಇದೀಗ ಕಾರ್ಯನಿರ್ವಹಣೆಯ ಒಂದು ಬಿನ್ನಹ" (ಎಂದು ಹೇಳಿದನು). ಬಿನ್ನಹವೆಂದು ಕೇಳಿದೊಡನೆಯೇ ಸುಬಾಹು ಕಿಕ್ಕಿರಿದೆದ್ದು ಸಮರಕ್ಕೆಂದು ಹೊರಕ್ಕೆ ಹೆಜ್ಜೆಯಿಟ್ಟು ಉಳಿದ ಸೈನ್ಯ ನಡೆದು ಬರುವಂತೆ ರಣದುಂದುಭಿಯನ್ನು ಮೊಳಗಿಸಿದನು. ಅವರನ್ನು ಅನುಸರಿಸಿ ಚಿತ್ರ ಚಿತ್ರಾಂಗ ಸುಕೇತುಗಳೇ ಮುಂತಾದ ಪ್ರಸಿದ್ಧ ಮಹಾರಥರೂ ಅತಿರಥರೂ ಯೋಧರೂ, ನಿತ್ಯದ ಕಾವಲಿನ ಭಟರನ್ನು ಬಿಟ್ಟು, ಪ್ರಬಲಸೈನ್ಯವನ್ನು ಕೂಡಿಕೊಂಡು ತೆರಳಿದರು. ರಾಜನೂ ಬೆಂಬಲಗೊಂಡು ರಥವನ್ನು ಏರಿ ಹೊರಟನು.

ಆ ಹೊತ್ತಿಗೆ ಶತ್ರುಘ್ನನು ಮಂತ್ರಿಯನ್ನು—"ಅಯ್ಯ, ನಮ್ಮ ಕುದುರೆಯನ್ನು ಸೆರೆಹಿಡಿದು ಇಲ್ಲಿಯವರೆಗೆ ನಮ್ಮೊಡನೆ ಸಾಹಸ ತೋರಿಸಿದ ಶೂರನು ಯಾರು ? ಈಗ ಬಲವಾದ ಸೈನ್ಯದೊಡನೆ ಬಂದು ಎದುರಿಸುವವನು ಯಾರು?

ಯಾವ ನಾಡು ಇದು ? ಏನು ನಮ್ಮಲ್ಲಿ ಕಾದಾಡಲು ಸಮರ್ಥನೆ ಹೇಳು" ಎಂದು ಕೇಳಲು, ಒಡನೆ ಸುಮತಿ—"ಇಲ್ಲಿ ತೋರುವುದೇ ಚಕ್ರಾಂಕಪುರ ಶ್ರೇಷ್ಠ ; ಈ ರಾಜನು ಆ ನಾಡಿನ ಒಡೆಯನು. ಯುದ್ಧದ ಮೊದಲಲ್ಲಿ ಮಗನು ಶಕ್ತಿಕಳೆದುಕೊಂಡನೆಂದು ತಿಳಿದು ನಮ್ಮ ಮೇಲೆ ದಂಡೆತ್ತಿ ಬಂದಿರುವನು, ನಿಶ್ಚಯವಾಗಿ ಮಹಾಶೂರನು ಇವನು. ಕಾದಾಡಿ ಗೆಲ್ಲಲು ನಮ್ಮಿಂದ ಅಸಾಧ್ಯ. ಈತನೊಡನೆ ಕಾದಾಡುವ ವೀರನು ಯಾರೊ ? ಎಂದು ಸೈನ್ಯವು ಬೆರಗುಗೊಳ್ಳುವಂತೆ ನುಡಿದನು. ಆ ಮಾತನ್ನು ಅಪಹಾಸ್ಯ ಮಾಡಿ ಲಕ್ಷ್ಮೀನಿಧಿ ತಾನು ಕೈ ತಟ್ಟಿ 'ಎಂತಹ ಪೊಳ್ಳುರಾಜ ! ನನ್ನ ಒಂದು ವೇಗದ ಗದೆಯು ಬಡಿತಕ್ಕೆ ನೆಲಕ್ಕೆ ಬೀಳದೆ ಏನು ಹೋಗುತ್ತಾನೆಯೆ ? ಸುಮ್ಮನೆ ನೋಡುವುದು ನನ್ನ ಒಂದು ಕೈಚಳಕವನ್ನು' ಎಂದು ಪರಾಕ್ರಮದ ಗಂಡು ಗರ್ವದಿಂದ ನುಗ್ಗುವಿಕೆಯಲ್ಲಿ ಷಣ್ಮುಖನಂತೆ ಇದ್ದು, ಕ್ರೌಂಚವ್ಯೂಹದ ಕಡೆಗೆ ನಡೆಯಲು, ಬೆನ್ನಬಳಿಯ ಕಾಲಾಳ ಸೈನ್ಯ ವ್ಯೂಹವನ್ನು ಮುತ್ತಿತ್ತು. ಅಷ್ಟರಲ್ಲಿ ಚಿತ್ರನು ಹೂಡಿದ್ದ ಬಿಳಿ ಕುದುರೆಯು ತನ್ನ ರತ್ನದ ರಥವನ್ನು ನೂಕಿ ಬಾಣದ ಚಪ್ಪರವನ್ನು ಕಟ್ಟಿ—(ವೈರಿಯ) ಬಾಣಗಳನ್ನು (ತನ್ನ) ಬಾಣಗಳಿಂದ ಕತ್ತರಿಸಿ, ಭ್ರಾಮಕಾಸ್ತ್ರಗಳನ್ನು ಜೋಡಿಸಿ ಪರಾಕ್ರಮ ತೋರಿಸುವ ಪುಷ್ಕಲನೊಡನೆ ಬಗೆಬಗೆಯಾಗಿ ಹೋರಾಡುತ್ತಿದ್ದನು.

ಹೀಗೆ ಶೂರರ ವೀರತನವು ನಷ್ಟವಾಗಿ, ಸೊಕ್ಕು ಸೋರಲು, ಪರಾಕ್ರಮವು ಇಂಗಿಹೋಗಿ, ಛಲವು ನೆಲೆತಪ್ಪಿ, ಬಲವು ಶೂನ್ಯವಾಗಿ ಕ್ರೌಂಚ ವ್ಯೂಹವು ಧೂಳಿಕೋಟೆಯಾಗಲು, ಸುಬಾಹುವು (ತನ್ನ) ಬೆನ್ನಿನ ಎದುರುಗಡೆ (ಹಿಂಭಾಗದಲ್ಲಿದ್ದ) ಮಹಾಪರಾಕ್ರಮದ ವೀರರೊಡನೆ ನಿಯಂತ್ರಣದಿಂದ ಮುಂದುವರಿದು, ನುಗ್ಗಿ ಬರುವ ಶತ್ರುಘ್ನನನ್ನು ಸರಿಯಾಗಿ ಕಂಡು, ಪ್ರಳಯಕಾಲದ ಸಿಡಿಲ ಪ್ರತಾಪದಿಂದ ವಿಜೃಂಭಿಸಿ ಅಬ್ಬರಿಸಿ ದಿಕ್ಕರಿಸಿ ಉರಿದು ಮುತ್ತಿ ಮುಂಬರುವ ಸೂರೆಗಾರನನ್ನು (ಶತ್ರುಘ್ನನನ್ನು) ಶಕ್ತ್ಯಾಯುಧದಿಂದ ಹೊಡೆದನು. ಆ ವೇಳೆಯಲ್ಲಿ ಶತ್ರುಘ್ನನ ಹಿಂದಿನಿಂದಲೇ ಹೊಂಚು ಹಾಕುವ ಜಾಣತನದ ಹನುಮಂತನು ತನ್ನೊಡೆಯನನ್ನು ಹಿಂದೆ ಉಳಿಸಿ ತಾನು ಮುಂದುವರೆದು, ರಥಿಕನನ್ನು ಎದುರಿಸಿ ಹೊಡೆಯುವ ಶಕ್ತಿಯನ್ನು ಫಕ್ಕನೆ ಹಿಡಿದು ಹುಡಿಗಟ್ಟಿದನು. ಬಳಿಕ ಸುಬಾಹು ಹನುಮಂತನ

7

ಮುಂದೆ ನಿಂತು, "ಪಕ್ಕಕ್ಕೆ ತೊಲಗೊ ಹಾಳು ಮುಖದ ಮುದಿ ಮಂಗ! ತಡೆದ ನಿನ್ನನ್ನೂ ಅಡಗಿದ (ನಿನ್ನ) ರಾಜನನ್ನೂ ಸದೆದು ಸಮನಾಗಿ ದಿಕ್ಕು ಗಳಿಗೆ ಬಲಿಕೊಡುವ ಒಂದು ಬೆಡಗನ್ನು ನೀನು ಮೃತ್ಯುವಿನ ಅರಮನೆಯ ಮೊಗಸಾಲೆಯಲ್ಲಿದ್ದು ಕಾಣಬೇಕು" ಎಂದು ಹೇಳುತ್ತ ಬಲವಾದ ಬಾಣ ಗಳಿಂದ ಹನುಮಂತನನ್ನು ನೋಯಿಸಿದನು. ಆಗ ಬಾಣದ ಹೊಡೆತವನ್ನು ಅಣುವನು (ಹನುಮಂತನು) ಅಣುವಾಗಿ (ತೃಣವಾಗಿ) ಬಗೆದು ಸುಬಾಹು ವಿಗೆ, "ಕೊಲ್ಲುವವರು ನೀವೂ ಉಂಟು, ಸಾಯುವವರು ನಾವೂ ಉಂಟು, ಕುದುರೆಯನ್ನು ಬಿಡಿಸಿಕೊಂಡು ಒಯ್ಯುವ ದೊರೆ ಬೇರೆ ಉಂಟು. ಆಗು ಹೋಗು (ಇಲಿ ಬೆಕ್ಕು)ಗಳ ಒಂದು ಗೋಡವೆ ನಮಗೇಕೆ ? ಆದರೂ ಕಾಡಿನ ಮುದಿ ಕೋಡಗನ ಒಂದು ಕೈ ಚಳಕವನ್ನು ಪರೀಕ್ಷಿಸು" ಎಂದು ತನ್ನ ಕಾಲಿ ನಿಂದ (ಆತನ) ಎದೆಯನ್ನು ಒದೆದನು. ಏನೆನ್ನಲಿ, ಆ ರಾಜನು ವೀರನ ಒಂದು ಒದೆತಕ್ಕೆ ಎದೆಯ ಒಡಿತ ಹವ್ವನೆ ಹಾರಿದಂತಾಗಲು ಅತಿ ಆಯಾಸ ದಿಂದ ನೊಂದು ದಿಮ್ಮನೆ ನೆಲದಲ್ಲಿ ಮೂರ್ಛೆಗೊಂಡನು.

: ನನ್ನ ಪ್ರಾಣೇಶ್ವರಿಯೇ, ಹೀಗಾದಾಗ ಹನುಮಂತನ ಒದೆತಕ್ಕೆ ಶಕ್ತಿ ಕುಂದಿ ನಿದ್ದೆಹೋದನು. ಸುಬಾಹುವು (ತನ್ನ) ಕನಸಿನಲ್ಲಿ ಶ್ರೀರಾಘವನನು ಪ್ರತ್ಯಕ್ಷನಾದುದನ್ನು ಕಂಡನು. ಅದರಿಂದ ತನ್ನಲ್ಲಿ ಉಂಟಾದ ನಿಷ್ಕಲದ (ನಿರ್ಮಲವಾದ) ಭಕ್ತಿಯಿಂದ ನೆನೆನೆನೆದು "ಜಗದೊಡೆಯನಿಗೆ ಗೆಲುವಾಗಲಿ! ನೀನೇ ನನ್ನ ಒಡೆಯನು, ನನ್ನನ್ನು ಕಾಪಾಡುವ ದೇವನು, ಎಲೈ ಮಾಯ ಗಾರನೇ, ಮಂಕುಮಾಯೆಗೆ ಒಳಗಾಗಿ ಇಂತಹ ಒಂದು ಕೆಟ್ಟ ಕಾರ್ಯವನ್ನು ಮಾಡಿದೆನು, ನಿನ್ನ ಎದುರಲ್ಲಿ ನನಗೆ ಯಾವ ಛಲ ? ಯಾವ ಬಿಂಕ ? ಯಾವುದು ಅರಸುತನ ? ವ್ಯರ್ಥವಾಗಿ ಕಾದಾಡಿದೆನು. ನನ್ನ ತಪ್ಪು ಒಪ್ಪು ಗಳನ್ನು ನಿನ್ನಲ್ಲಿ ಒತ್ತೆಯಿಡುವೆನು. ಕಾಪಾಡಯ್ಯ !" ಎಂದು ಕನವರಿಸುತ್ತ ಮತ್ತೆ ಚೇತರಿಸಿ ಎಚ್ಚರಗೊಂಡು ಮುಂದಿದ್ದ ಸೋದರನನ್ನೂ ಕುಮಾರನನ್ನೂ ಯುದ್ಧದಿಂದ ಕೈ ತೆಗೆಯಿರಿ ಎಂದು ನೇಮಿಸಿ, ಶತ್ರುಘ್ನನಿಗೂ ಹನುಮಂತ ನಿಗೂ ಕೈಮುಗಿದು ನಿಮ್ಮ ದೆಸೆಯಿಂದ ನಾನು ಪಾವನನಾದೆನು ; ರಾಘವನ ಯಜ್ಞಾಶ್ವದ ಬರುವಿನ ಒಂದು ನೆಪದಿಂದ ನನ್ನ ನಾಡೂ ಬೀಡೂ ಬಳಗವೂ ಮೇಲ್ಮೆಗೊಂಡವು ; ಶ್ರೀರಾಮನನ್ನು ಕಂಡ ಮೇಲೆ ಇನ್ನು ಯಾವುದೋ !

ತಾನು ಪೋಳ್ಳಾಗುತ್ತದೆ. ರಾಮಭಕ್ತರಿಗೆ ಏನು ಬರುವುದಿಲ್ಲ! ಇದೊ ಯಜ್ಞಾಶ್ವ, ಇದೊ ಚತುರಂಗ ಸೈನ್ಯ, ಇದೊ ಭಂಡಾರ, ಇದೊ ರಾಜ್ಯ, ಹಲವಿನ್ನೇನು, ಇದೊ ಸರ್ವಸ್ವವೂ! ನಿಮ್ಮ ಪಾದಗಳ ಒಲುಮೆಯೊಂದನ್ನೇ ಬೇಡುವೆನು ಎಂದು ಮತ್ತೆ ಪಾದಕ್ಕೆ ನಮಸ್ಕರಿಸಿದ. ಹೀಗೆ ನಮಸ್ಕರಿಸುವ, ಬೇಡುವ ರಾಜನನ್ನು (ಶತ್ರುಘ್ನನು) ಕರುಣಿಸಿ, ತನ್ನ ಅರ್ಧ ಆಸನದಲ್ಲಿ ಕುಳ್ಳಿರಿಸಿ, ಅತನಿಗೆ, "ನೀನು ಮಾನ್ಯನು, ನಿನ್ನನ್ನು ಅನುಗ್ರಹಿಸಲೆಂದು ಶ್ರೀರಾಮಚಂದ್ರನು ನಮ್ಮಲ್ಲಿ (ಹಾಗೂ) ನಿಮ್ಮಲ್ಲಿ ಹೀಗೆ ಕಾಳಗವನ್ನು ಒಡ್ಡಿದ್ದಾನೆ." ಎಂದು ಸಮಾಧಾನಪಡಿಸಿ ಲಾಲಿಸಿ ಪಾಲಿಸಿ ಕಪ್ಪವನ್ನೂ ಕಾಣಿಕೆಯನ್ನೂ ಸ್ವೀಕರಿಸಿ (ಮುಂದಕ್ಕೆ) ಹೊರಟನು. ಸುಬಾಹುವು ತನ್ನ ಹಿರಿಯ ಮಗನಿಗೆ ಪಟ್ಟವನ್ನು ಕಟ್ಟಿ ತಾನೂ ಸೈನ್ಯದೊಡನೆ ಶತ್ರುಘ್ನನಿಗೆ ಬೆಂಬಲನಾದನು.

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI
Acc. No. 708

ತೇಜಃಪುರ ಗಮನ

ಮುದ್ದಣ—ನನ್ನ ವಿಸ್ತರದ ಚಿತ್ತಾರದ ಬೊಂಬೆಯೇ, ರಂಭೆಯೇ, ಈ ರೀತಿಯಲ್ಲಿ ಸುಮಿತ್ರೆಯ ಪುತ್ರ ಶತ್ರುಘ್ನನು ಚಿತ್ರ ಚಿತ್ರಾಂಗದರನ್ನು ಸ್ನೇಹಭಾವದಿಂದ ಒಪ್ಪಿಕೊಂಡು, ಸುಬಾಹು ಸುಧ್ವಜರಿಗೂ ಒಪ್ಪಿಗೆಯಾಗಿ, ದಮನನನ್ನು ಸಂತೈಸಿಕೊಂಡು ಮುಂದುವರೆದು ಸೈನ್ಯದೊಡನೆ ಕುದುರೆಯ ಬೆನ್ನಿನಲ್ಲೇ (ಹಿಂಭಾಗದಲ್ಲೆ) ನಡೆಯುತ್ತಿರಲು, ದೂರದಲ್ಲಿ ರಾರಾಜಿಸುವ ನಗರವನ್ನು ಕಣ್ಣು ತೃಪ್ತಿಯಾಗುವಷ್ಟು ಕಂಡು ಶ್ರುತಕೀರ್ತಿಗೆ (ಶತ್ರುಘ್ನನ ಹೆಂಡತಿಯ ಹೆಸರು) ಮನೋಹರವಾಗಿರುವ ಶತ್ರುಘ್ನನು ತನ್ನ ಮಂತ್ರಿಯನ್ನು "ಹೀಗಿರುವ ಇದು ಯಾವ ನಾಡು ?" ಎಂದು ಕೇಳಲು, (ಆತನು) "ವೀರರ ಒಡೆಯನೇ, ಇದೋ ನೋಡು, ಗೋಪೂಜಾಫಲದಿಂದ ಸಂತಾನವನ್ನು ಪಡೆದ ಋತಂಭರರಾಜನು ಆಳುವ ತೇಜಃಪುರ" ಎಂದು ಹೇಳಿದನು.

ಆ ಮಾತಿಗೆ ಶತ್ರುಘ್ನನು ಆಶ್ಚರ್ಯಗೊಂಡು—"ಹೇಗೆ ಆ ರಾಜನು ಗೋವಿನ ಸೇವೆಯಿಂದ ಮಗನನ್ನು ಪಡೆದನು ? ಧೇನುಮಹಾತ್ಮೆ ಅಷ್ಟೊಂದು

ದೊಡ್ಡದೇನು ? ನೀನು ತಿಳಿದಂತೆ ಹೇಳು" ಎನ್ನಲು, ಹೀಗೆ ಹೇಳಿದನು ಮಂತ್ರಿಯು ; ಅದು ಹೇಗೆಂದರೆ :—

ಅಯ್ಯ ! ಮೊದಲಿಗೆ ಈ ನಾಡಿನ ಒಡೆಯನು ಋತಂಬರ ಎಂಬ ಹೆಸರಿನಿಂದ ಪ್ರಸಿದ್ಧಿ ಪಡೆದ ರಾಜನಾಗಿದ್ದನು. ಬೃಹಸ್ಪತಿಯ ಜಾಣ್ಮೆ, ಶುಕ್ರನ ಜ್ಞಾನ, ಯಮನದರ್ಪ, ಕುಬೇರನ ಐಶ್ವರ್ಯ ತನ್ನಲ್ಲಿರಲು ಮನುವಿನ ಮಾರ್ಗ ದಲ್ಲಿ ನಡೆಯುತ್ತ ದೇವೇಂದ್ರನ ಓಲಗದ ಸೊಂಪಿಗೆ ಇಮ್ಮಡಿ ಮೀರಿದ ಹಿರಿಮೆ ಯಿಂದ ಮೆರೆದನು. ಆದರೂ ಈತನಿಗೆ ಸಂಸಾರದ ಗಾಂಭೀರ್ಯಕ್ಕೆ ಒಪ್ಪುವ ಒಂದು ವಂಶಾಭಿವೃದ್ಧಿಯ ಸಂತತಿಯ ಒಂದು ಸುಖ ಬತ್ತಿಹೋಯಿತು. ಈ ಕಾರಣದಿಂದಲೇ ಮನಸ್ಸು ಕೆಟ್ಟಿದ್ದ ರಾಜನ ಓಲಗಕ್ಕೆ ಒಮ್ಮೆ ಜಾಬಾಲಿ ಮುನಿಪನು ದಯಮಾಡಿಸಿದನು. ಆಗ ಅರಸನು ಬಂದ ಮುನಿಯನ್ನು ಯಥೋಚಿತವಾದ ಆಗತ ಸ್ವಾಗತಗಳಿಂದ ಕುಶಲವನ್ನು ಕೇಳಿ, ತರುವಾಯದ ರೂಢಿಯ ಮಾತುಕತೆಯ ಹೊತ್ತಿನಲ್ಲಿ—"ಋಷಿಗಳ ಜ್ಞಾನಿಯೇ, ಸಂತೋಷ ಹೆಚ್ಚಿದ್ದರೂ ಹೆತ್ತಕುವರನ ಬಾಲಲೀಲೆಯನ್ನು ಕಾಣದ ಕಣ್ಣುಗಳಿವು ನವಿಲುಗರಿಯ ಕಣ್ಣುಗಳಾಗುವುದಿಲ್ಲವೆ ? ಅಯ್ಯೊ ! ಮಗನನ್ನು ಪಡೆಯದೆ ನರಕವನ್ನು ಪ್ರವೇಶಿಸುವ ಒಂದು ಭಾಗ್ಯವನ್ನು ವಿಧಿಯು ನನ್ನಲ್ಲಿ ಉಂಟು ಮಾಡಿತೆ ? ನೂರರಿಂದೇನು ? ಇಹಕ್ಕೂ ಪರಕ್ಕೂ ಹೊರಗಾದ ಭೂತನಾದೆನು. ಅಯ್ಯ, ಮುಂದೇನು ದಾರಿ ? ಬೆರಳಿಟ್ಟು ತೋರಿಸು" ಎಂದು ತನ್ನ ಹಣೆ ಯಲ್ಲಿ ಜೋಡಿಸಿದ ಕೈಗಳುಳ್ಳವನಾದನು (ಕೈ ಮುಗಿದನು). ಆಗ ಮುನಿಪನು ಒಲುಮೆಯಿಂದ, "ರಾಜನೇ ನೀನು ಹೀಗೆ ಮರುಗಲು ಏನಾಗುತ್ತದೆ ? ನಿನ್ನ ಹೊಟ್ಟೆಯ ಸಂಕಟವನ್ನು ಕೇಳುವ ನರರು ಇದ್ದಾರೆಯೆ ? (ನೀನು) ನಂಬಿರುವ ದೈವಕ್ಕೆ ಕೇಳಿಸು ! ಆದರೂ ನನ್ನ ಈ ತಿಳುವಳಿಕೆಗೆ ನೀನು ಗೋವನ್ನು ಸೇವಿಸಿ ದರೆ ನಿನ್ನ ಅಭೀಷ್ಟ ಸಿದ್ಧಿಸುತ್ತದೆ ಎಂದು ತೋರುತ್ತದೆ. ಈ ಮೊದಲು ಹಿಂದಿನ ರಾಜನಿಗೆ ಸುರಭಿ (ಹಸು) ಒಲಿದುದು ಉಂಟು" ಎಂದು ಸಂತೈಸಿದನು.

ಹೀಗೆ ಜಾಬಾಲಿಯ ಒಂದು ಉಪದೇಶವನ್ನು ಗುರುವಿನ ಉಪದೇಶ ವೆಂದೇ ಬಗೆದು ಋತಂಭರನು ದೈವದ ಮೇಲೆ ಭಕ್ತಿಯಿರಿಸಿ ಸುಲಕ್ಷಣಲಕ್ಷಿತ ವಾದ ಹಸುವನ್ನು ಯಾವಾಗಲೂ ಸೇವಿಸುತ್ತಿದ್ದನು. ಕಟ್ಟಕಡೆಯಲ್ಲಿ ಸಲುಗೆಯ ಸುರಭಿ ರಾಜನ ಭಕ್ತಿಗೆ ಒಲಿದು 'ಪುತ್ರವಾನ್ ಭವ' ಎಂದು

ದೇವವಾಣಿಯಿಂದ ಹರಸಿ ತನ್ನ ಧೇನುಲೋಕವನ್ನು ಸೇರಿತು.

ಮತ್ತೆ ಆ ರಾಜನು ತನ್ನನ್ನು ಹರಸಿದ ಧೇನುವಿನ ಒಲುಮೆಯನ್ನು ನೆನೆನೆನೆಯುತ್ತ ಇದ್ದ ಬಳಿಕ ಕೆಲವಾರು ದಿವಸಗಳಲ್ಲಿ ತನ್ನ ರಾಣಿಯಲ್ಲಿ ಸತ್ಯವಂತನೆಂಬ ಒಬ್ಬ ಮಗನನ್ನು ಪಡೆದು (ಆತನಿಗೆ) ರಾಜ್ಯಭಾರವನ್ನು ಒಪ್ಪಿಸಿ ತಾನು ತಪಸ್ಸಿನ ಸಾಮ್ರಾಜ್ಯವನ್ನು ಸೂರೆಗೊಂಡು ಆಳುತ್ತಿದ್ದನು.

ಎಲೈ ಅರಸನೇ, ಈ ರೀತಿಯಿಂದ ಒಪ್ಪುವ ತೇಜಃಪುರದ ರಾಜನು ಯಾವಾಗಲೂ ಶ್ರೀರಾಮನನ್ನೇ ಆದಿದೈವವೆಂದೇ ಬಗೆದು, ಸೀತಾನಾಯಕನನ್ನೇ ಭಕ್ತಿಯಿಂದ ಭಜಿಸಿ, ರಘುವರನ ಲೀಲೆಯನ್ನೇ ಕೇಳಿ, ರಾವಣಾಂತಕನನ್ನೇ ಕಣ್ಣಾರೆ ನೋಡುವ ಒಂದು ಬಯಕೆಯಲ್ಲೇ ಇದ್ದಾನೆ.

ಕಾಂತೆ ಮನೋರಮೆಯೇ, ಹಾಗೆ ಇವರು ತಮ್ಮ ತಮ್ಮಲ್ಲೇ ಮಾತನಾಡುತ್ತಿರುವಾಗ ಮುಂಭಾಗದಲ್ಲಿ ನಡೆಯುವ ಕುದುರೆಯು ಊರ ಕೇರಿಯ ಜನ ಬೆರಗುಪಡೆಯುವಂತೆ ನೇರವಾಗಿ ಪಟ್ಟಣವನ್ನು ಪ್ರವೇಶಿಸಿತು. ಆಗ ಪಟ್ಟಣದ ಕಾವಲಿನ ಆಳುಗಳು ಹೊರ ನಾಡಿನ ಕುದುರೆಯನ್ನು ಹಿಡಿದು ತಮ್ಮ ಒಡೆಯನಿಗೆ ಒಪ್ಪಿಸಿದರು. ಹಾಗಾಗಲು ಸತ್ಯವಂತನು ಬಂದು ಸೆರೆಯಾಗಿದ್ದ ಕುದುರೆಯ ಹಣೆಯ ಪತ್ರದಲ್ಲಿ ಬರೆದಿದ್ದ 'ರಾಮ' ಎಂಬ ಎರಡಕ್ಷರಗಳನ್ನೇ ಓದಿದಾಗ ಸಂತೋಷದ ನವಿರು ಗುಂಪುಗೂಡಲು ಕುದುರೆಯ ಬೆಂಬಳಿಯಲ್ಲಿ ಬಂದ ಶತ್ರುಘ್ನನನ್ನು ಕಾಣುವ ಒಂದು ತವಕದಿಂದ ತನ್ನವರನ್ನು ಕೂಡಿಕೊಂಡು ಸಡಗರದಿಂದ ಬಂದು ಶತ್ರುಘ್ನ ಮುಂತಾದವರಿಗೆ ಕಾಣಿಸಿಕೊಂಡು ಮೃದುನುಡಿಗಳಿಂದ ಉಪಚರಿಸಿ ಬಿಡದೆ ಅವರನ್ನು ತನ್ನ ಅರಮನೆಗೆ ನಡೆಯಿಸಿ (ಕರೆದುಕೊಂಡು ಹೋಗಿ) ಸನ್ಮಾನಿಸಿ ಮತ್ತೆ ಹೆಜ್ಜೆ ಹೆಜ್ಜೆಗೆ ಶ್ರೀರಾಮಕಥೆಯ ವಿನೋದಗಳನ್ನು ಕೇಳಿ ತನ್ನ ನಾಡನ್ನು ರಾಘವನಿಗೆ ಒಪ್ಪಿಸಿ ಸರ್ವರಿಗೂ ಉಡುಗೊರೆಯನ್ನು ಕೊಟ್ಟು ತನ್ನ ಸೈನ್ಯದೊಡನೆ ಕುದುರೆಯ ರಕ್ಷಣೆಗಾಗಿ ಶತ್ರುಘ್ನನಿಗೆ ನೆರವಾಗಿ ತೆರಳಿದನು.

ಹೀಗಾಗಲು ಶತ್ರುಘ್ನನು ಆ ರಾಜಕುಮಾರನ ಭಕ್ತಿಗೂ ರೀತಿಗೂ ಮನವಿೂರಿ ಮೆಚ್ಚಿ ನಾಡಿನ ಒಡೆತನವನ್ನು ಆತನ ಪುತ್ರ ರುಕ್ಮನಿಗೆ ಒಪ್ಪಿಸಿ ಕಾಣಿಕೆಯನ್ನು ಸ್ವೀಕರಿಸಿ ಸೈನ್ಯಸಮೇತನಾಗಿ ಸರ್ವವೈಭವದೊಡನೆ ಮುಂದಕ್ಕೆ ಹೊರಟನು.

ಅರಣ್ಯಕಮುನಿ ದರ್ಶನ

ಎಲ್ಲೈ ನನ್ನ ಮೋಹದ ಗಿಳಿಯೇ, ಅಲ್ಲಿಗಲ್ಲಿಗೆ ಹೆಜ್ಜೆ ಹೆಜ್ಜೆಗೆ ಬಂದು ನಮಸ್ಕರಿಸುವ ಅರಿಕೆಯ ಬಲ್ಲಾಳ ಸಾಮಂತರಾಜರ ಮುಂದಲೆಯ ಅಚ್ಚ ಬಂಗಾರದ ಹೊಚ್ಚ ಹೊಸ ಬಾಸಿಂಗದ ಮುತ್ತಿನ ಗೊಂಡೆಯ ಗೊಂಚಲ ಬೆಳಕಿನಿಂದ ಕಳೆಯೇರಿದ ತನ್ನ ಪಾದಕಮಲಗಳ ಮೃದು ಕಾಂತಿಯಿಂದ ಅವರವರ ಹೆಂಡಿರ ಮಂಗಳ ಮಾಂಗಲ್ಯಗಳ ಬಣ್ಣವನ್ನು ಹೆಚ್ಚಿಸುತ್ತ (ಬರುವ ಶತ್ರುಘ್ನನ) ಮುಂದುಗಡೆಯಲ್ಲಿ ತಮ್ಮ ತಮ್ಮ ಸೈನ್ಯದೊಡನೆ ಬರುವ ನಾಡನಾಡಿನ ರಾಜರನ್ನೂ ಕೂಡಿಕೊಂಡು ಪುಷ್ಕಲಾದಿ ಸುಭಟರು, ತಮ್ಮನ್ನೇ ಒಲಿದು ಮೆಚ್ಚಿ ಬೆನ್ನು ಹಿಡಿದು ಬರುವ ವಿಜಯಶ್ರೀಯನ್ನು ಆಲಿಂಗಿಸಿ ನೋಡಿ ಕೂಡಿ ಕುದುರೆಯೊಡನೆ ಯೋಧರು, ಎಲ್ಲರೂ ಶತ್ರುಘ್ನನ ಒಂದು ಆಜ್ಞೆಯಲ್ಲಿನ ಕ್ರಮವನ್ನು ಅರಿತು ಉತ್ತರ ದಿಕ್ಕನ್ನು ಹಿಡಿದು ನಡೆಯುತ್ತಿದ್ದರು. ಆ ಕಾಲದಲ್ಲಿ ರಾಘವನ ಯಜ್ಞಾಶ್ವವು ಅರಣ್ಯಕನೆಂಬ ಒಬ್ಬ ಋಷಿಯ ಪುಣ್ಯಾಶ್ರಮವನ್ನು ಪ್ರವೇಶಿಸುದನ್ನು ಕಂಡು ಶತ್ರುಘ್ನಾದಿಗಳೂ ಮುನಿಯ ದರ್ಶನಕ್ಕೆಂದು ಅದರ ಒಳಕ್ಕೆ ಪ್ರವೇಶಿಸಿ ಮುನಿಗೆ ನಮಸ್ಕರಿಸಿದರು. ಆಗ ಅರಣ್ಯಕನು ಅಭ್ಯಾಗತರನ್ನು ಮನ್ನಿಸಿ ಸರ್ವರನ್ನೂ ಆತಿಥ್ಯದಿಂದ ಸತ್ಕರಿಸಿ ಶ್ರೀರಾಮನ ಸತ್ಕಥಾ ವಿನೋದ ಗೋಷ್ಠಿಯಲ್ಲಿ........

ಮನೋರಮೆ—ನನ್ನ ಚೆನ್ನಿಗನೇ, ಆತಿಥ್ಯವೆಂದರೆ ಏನು ? ಬರಿದೇ ಬಾಯಿಯ ಉಪಚಾರವೆ ?

ಮುದ್ದಣ—ಅಲ್ಲಲ್ಲ, ಬಾಯಿಯ ಉಪಚಾರವಲ್ಲ, ಬಂದವರಿಗೆ ಕೈಗೆ ಕಾಲಿಗೆ ನೀರುಕೊಟ್ಟು ಕುಳ್ಳಿರಿಸಿ ಮೃಷ್ಟಾನ್ನವನ್ನು ಇಟ್ಟು ಹೂವಿನಿಂದ ಶೃಂಗರಿಸಿ ಶ್ರೀಗಂಧದಿಂದ ಸೊಗಸುಗೊಳಿಸಿ ಜೊತೆಯಲ್ಲೇ ಇದ್ದು ನುಡಿದು ನಡೆದು ಮನ್ನಿಸುವುದು.

ಮನೋರಮೆ—ಹಾಗಿರುವುದ ? ಶತ್ರುಘ್ನನ ಸಾವಿರ ಲೆಕ್ಕದಷ್ಟು ದೊಡ್ಡ ಸೈನ್ಯಕ್ಕೆ ಅರಣ್ಯಕನು ಅನ್ನ ನೀರು ಕೊಟ್ಟು ಸನ್ಮಾನಿಸಿದನೆ ?

ಮುದ್ದಣ—ಹೌದು ಹೌದು. ಅಷ್ಟು ಜನರನ್ನೂ ಯಥೋಚಿತವಾಗಿ ಮೃಷ್ಟಾನ್ನ ಭೋಜನದಿಂದ ತೃಪ್ತಿಪಡಿಸಿದನು.

ಮನೋರಮೆ—ನನಗೆ ಇದು ಆಶ್ಚರ್ಯ. ಹೇಗೆ ಸಮರ್ಥನು ?

ಮುದ್ದಣ—ಏನು ! ಮುನಿಗಳ ಒಂದು ಜಪದ ತಪದ ಮಂತ್ರದ ಬಲವೇನು ಕಿರಿದೆ ? ಬೇಡಿದ ಹುರುಳನ್ನು ಬೇಗನೆ ತಂದುಕೊಡುವುದು.

ಮನೋರಮೆ—ಹಾಗೇನು ಗಹನ ! ಯಾವುದೋ ಮಂತ್ರ ?

ಮುದ್ದಣ—ಯಾವುದೇನು ! ಏಕಾಕ್ಷರಿ (ಒಂದು ಅಕ್ಷರದ್ದು), ದ್ವ್ಯಕ್ಷರಿ (ಎರಡು ಅಕ್ಷರದ್ದು), ತ್ರ್ಯಕ್ಷರಿ (ಮೂರು ಅಕ್ಷರದ್ದು), ಚತುರಾಕ್ಷರಿ (ನಾಲ್ಕು ಅಕ್ಷರದ್ದು), ಪಂಚಾಕ್ಷರಿ (ಐದು ಅಕ್ಷರದ್ದು), ಷಡಕ್ಷರಿ (ಆರು ಅಕ್ಷರದ್ದು) ಮುಂತಾದ ಪ್ರಸಿದ್ಧ ಮಂತ್ರಗಳು ಇವೆಯಲ್ಲವೆ ?

ಮನೋರಮೆ—ಇವುಗಳನ್ನು ಜಪಿಸಿದರೆ ಏನಾಗುವುದು ?

ಮುದ್ದಣ—ಈ ಮಂತ್ರಗಳನ್ನು ಬಿಡದೆ ಜಪಿಸಿ ಸಿದ್ಧಿಪಡೆದರೆ ಆಯಾ ಅಭಿಮಾನಿ ದೇವತೆಗಳು ಪ್ರತ್ಯಕ್ಷವಾಗಿ ಬಯಸಿದ ಐಶ್ವರ್ಯವನ್ನು ಕೊಟ್ಟು ಹೋಗುತ್ತಾರೆ.

ಮನೋರಮೆ—ಓ ! ಇಷ್ಟೊಂದು ಜಪದ ಬಲದ ನೆರವು ಇರುವುದರಿಂದಲೇ ಬೇರೊಂದರ ಗೊಡವೆಯಿಲ್ಲದೆ ಇರುತ್ತಾರೆ ತಾಪಸರು.

ಮುದ್ದಣ—ಹೌದು ಹೌದು, ತಪ್ಪೇನು ?

ಮನೋರಮೆ—ಹಾಗೆ ಅದು ಇರಲಿ. ನಿನ್ನಂತಹ ಕವಿಗಳು ಗೃಹಕೃತ್ಯದಲ್ಲಿ ಅಷ್ಟೊಂದು ಗೊಡವೆಗೊಳ್ಳದೆ ಸುಮ್ಮಸುಮ್ಮನೆ ಹಾಳುಕತೆಯ ಕಾವ್ಯದಲ್ಲಿ ಎಲ್ಲ ಹೊತ್ತೂ ಭ್ರಮೆಗೊಂಡಿರುವಿರಲ್ಲ ? ಅವರಿಗೇನು ದಾರಿಯೊ ? ಉಣಲೇನು, ತಿನ್ನಲೇನು ? ಹಾಗಿರಲು ಒಂದು ಜಪವನ್ನು ಹಿರಿಯತಪಸ್ವಿಗಳ ಕಡೆಯಿಂದ ಉಪದೇಶಿಸಿಕೊಂಡರೆ ಆಗದೆ ?

ಮುದ್ದಣ—(ಮುಗುಳ್ನಗೆಯಿಂದ) ಏನು ! ನಮ್ಮವರ ಒಂದು ಸ್ಥಿತಿಗೆ ನಗುವಾ ? ಆಃ ನಮ್ಮಂತಹವರ ಕವಿಗಳಿಗೆ ಏನು ಕೊರತೆಯೊ ! (ಅದು) ತಾನಾಗಿಯೇ (ನಾವು) ಬಯಸಿದ ಒಡವೆಯನ್ನು (ಅದು ಏನೇ ಆಗಿದ್ದರೂ)

ಆಗಲೇ ತಂದುಕೊಡುವ ಮಂತ್ರದ ಜಪದ ಒಂದು ನೆರವು ತಮ್ಮಲ್ಲಿಯೇ ಹೊಂದದಿದ್ದರಲ್ಲವೆ ಕಾಡಿನ ಜೋಗಿಗಳ ಕಡೆಯಿಂದ ಉಪದೇಶ ? ನಾಡನ್ನು ಕಾಡನ್ನಾಗಿಯೂ, ಕಾಡನ್ನು ಬೀಡನ್ನಾಗಿಯೂ ಮಾಡುವ ಒಂದು ಹೆಮ್ಮೆಯ ಬಲುಮೆಯ ಕವಿಗಳೇನು ಕಕಲಾತಿಯ ಮುದಿತಪಸ್ವಿಗಳಿಗಿಂತ ಹಿರಿಯರಾಗುವ್ರೆದಿಲ್ಲವೆ ? (ಅವರು ಏನನ್ನು) ನುಡಿಯುವರೊ ಅದೇ ಹುರುಳು, (ಅವರು ಏನನ್ನು) ಹಿಡಿಯುವರೊ ಅದೇ ತಿರುಳು ! ಹಲವೇನು, ಕೆಲವೇನು ? ತಮ್ಮ ಒಂದೇ ನುಡಿಯ ಬಲದಿಂದ ಮೂರೂ ಲೋಕಗಳನ್ನೂ ಅಳಿಸುವ ಹೊಗಳುವ ಕೊಂಡು ಆಳುವ ತಾಳುವ ಹಾರಿಸುವ ಹೂಳುವ ಹೇಳುವ ಬಾಳುವ ಶೃಂಗಾರದ ವರ್ಣನೆಯ ಕವಿಗಳಾದ ನಮ್ಮ ರೀತಿಯನ್ನು ಇನ್ನೂ ನೀನು ಅರಿತಿಲ್ಲ.

ಮನೋರಮೆ—(ವಿಸ್ಮಯಗೊಂಡು) ನಿಮ್ಮವರಿಗೂ ಹಾಗಿರಲು ಮಂತ್ರವು ಸಿದ್ಧಿಸಿದೆಯೇ ?

ಮುದ್ದಣ—ತಡೆಯೇನು, ಅಳುಕೇನು !

ಮನೋರಮೆ—ನಿನ್ನಲ್ಲಿಯೂ ಇವೆಯೆ ?

ಮುದ್ದಣ—ನನ್ನಲ್ಲಿ ಹೀಗಿದು ಹಾಸುಹೊಕ್ಕು

ಮನೋರಮೆ—ಆಃ ! ನೀನೂ ಬಲು ಮಹಿಮೆಗಾರನು. ನಿನಗೆ ಯಾರ ಕಡೆಯಿಂದ ಎಂದು ಉಪದೇಶವಾಯಿತು ?

ಮುದ್ದಣ—ಗುರುವಿನ ಕಡೆಯಿಂದ ಅಂದೇ ಬಾಲ್ಯದಲ್ಲೇ !

ಮನೋರಮೆ—ನನ್ನ ಪ್ರೀತಿಯವನೇ, ಅದು ಯಾವುದೋ ಮಂತ್ರ ನನ್ನಲ್ಲಿ ಹೇಳುವೆಯ ?

ಮುದ್ದಣ—ಆಃ ! ಆಃ ! ಒಳ್ಳೆಯದು, ಒಳ್ಳೆಯದು ! ಮಂತ್ರವಂತೆ ! ತನಗೆ ಹೇಳಬೇಕಂತೆ ! ಛೀಃ ! ಛೀಃ ! ಹೆಣ್ಣುಗಳಿಗೆ ಈ ಮಂತ್ರೋಪದೇಶ ಸಲ್ಲುವುದೆ ?

ಮನೋರಮೆ—ನಾನು ಅರಿಯೆನೆ ! ನಿನ್ನ ಕಡೆಯಿಂದ ಉಪದೇಶ ವನ್ನು ಬೇಡುವೆನೆ ? ನೀನು ಆಗ ಹೇಳಿದ ಮಂತ್ರಗಳಲ್ಲಿ ಯಾವುದು, ಅದರ ಹೆಸರೇನೆಂದೇ ಕೇಳಿದೆ.

ಮುದ್ದಣ—ಆಗ ಹೇಳಿದ ಮುನಿಗಳ ಮಂತ್ರಗಳಲ್ಲಿ ಇಲ್ಲ. ನಮ್ಮ ಮಂತ್ರಗಳ ರೀತಿ ಬೇರೆ; ಮೂರು ಎರಡು ಅಕ್ಷರದ ಮಂತ್ರಗಳು ನಮಗೆ ಆಗುತ್ತವೆಯೆ? ನಮ್ಮದು ಹಾಗೆ ಕಿರಿದಲ್ಲ, ಬಲು ಹಿರಿದು. ಒಂದು ಅಕ್ಷರವಲ್ಲ, ಎರಡಲ್ಲ, ಮೂರಲ್ಲ, ನಾಲ್ಕೈದಲ್ಲ, ಆರೂ ಅಲ್ಲ! ಏಳು ಅಕ್ಷರದ ಬೀಜಮಂತ್ರ. ಅದರಿಂದ ಸರ್ವಮಂತ್ರಗಳಿಗೂ ತಲೆಯಲ್ಲಿದ್ದು ಮೇಲು ಎನ್ನಿಸಿದ ಸಪ್ತಾಕ್ಷರೀ ಮಂತ್ರವೆಂದು ಹೆಸರು.

ಮನೋರಮೆ—ಹಾ ಹಾ! ಆ ಮಂತ್ರಕ್ಕೆ ಅಭಿಮಾನಿ ದೇವತೆ ಯಾವುದು? ಈ ಮೊದಲು ಯಾರು ಇದನ್ನು ಜಪಿಸಿ ಸಿದ್ಧಿ ಕಂಡರು.

ಮುದ್ದಣ—ಹೋ ಹೋ! ಅವುಗಳನ್ನು ತೆಗೆದುಕೊಂಡು ಏನು ಕಾರ್ಯ?

ಮನೋರಮೆ—ಇರಲಿ, ಕೇಳುವೆನು.

ಮುದ್ದಣ—ಹಾಗಿದ್ದರೆ ಕೇಳು ಹೇಳುವೆನು. ಹೀಗೆ ಏರ್ಪಟ್ಟ ಮಂತ್ರದ ಅಧಿದೇವತೆ ಜ್ಯೇಷ್ಠೆ. ಮೊದಲಿಗೆ ಈಶ್ವರನು ತನ್ನ ಒಂದು ಲೀಲೆಯಲ್ಲಿ ಜಪಿಸಿ ಸಿದ್ಧಿಗೊಂಡನು. ಅದರಿಂದ ಆತನೇ ಋಷಿ;

ಮನೋರಮೆ—ಓ ಓ! ಹೀಗಿದೆಯೆ ಮಂತ್ರದ ಒಂದು ಮಹಿಮೆ! ಎಲೈ ರಮಣ, ನಿನ್ನ ಪಾದಕ್ಕೆ ನಮಸ್ಕರಿಸುವೆನು. ನನ್ನದು ಇದೊಂದು ಬಿನ್ನಹ. ಹಾಗೆ ಉಂಟಾದ ಸಿದ್ಧಿಯ ಮಂತ್ರ ಯಾವುದೊ ಪ್ರೀತಿಯಿಂದ ತಿಳಿಯುವಂತೆ ಹೇಳು.

ಮುದ್ದಣ—ಆಗಲೇ ಹೇಳಿದೆನಲ್ಲವೆ, ಸಪ್ತಾಕ್ಷರಿ ಮಂತ್ರವೆಂದು?

ಮನೋರಮೆ—ಹಾಗೆ ಹೆಸರನ್ನಲ್ಲ, ಮೂಲವನ್ನೇ ಕುರಿತು ನನ್ನಲ್ಲಿ ಆಡಿ ತೋರಿಸು.

ಮುದ್ದಣ—ಅಬ್ಬಾ! ಹೆಣ್ಣು ಏನು ಗಡಸುಗಾರ್ತಿಯೊ! ಆಗ ಹೆಸರೇನು ಎಂದಳು; ಈಗ ಮೂಲವನ್ನು ಕೇಳುವಳು. ಇನ್ನು ಏನು ಮಾಡುವಳೊ? ಮೂರೆಳೆಯ ಜನಿವಾರದ ಆಣೆ! ಉತ್ತರೀಯದ (ಹೆಗಲ ಮೇಲೆ ಹಾಕಿಕೊಳ್ಳುವ ಬಟ್ಟೆ) ಆಣೆ! ಆಗದಾಗದು. ಕೇಳುವುದಕ್ಕೆ ಹೇಳುವುದಕ್ಕೆ ನಿಮಗೆ ಅಧಿಕಾರವಿರುವುದಿಲ್ಲ. ಕಣ್ಣಿಗೆ ಕಾಲಿಗೆ ಕೇಡು!

ಮನೋರಮೆ—ಕಿವಿಯಿಂದ ಕೇಳುವುದರಲ್ಲೇನು ದೋಷ ? ಹಾಗೆ ಏರ್ಪಟ್ಟ ವೇದವನ್ನಾದರೂ ಓದುವೆಡೆಯಲ್ಲಿ ಕೇಳದೆ ಹೆಣ್ಣು ? ನಿನ್ನಲ್ಲಿ ಏನು ಜಂಬವೋ !

ಮುದ್ದಣ—ವೇದಮಂತ್ರದ ರೀತಿ ಬೇರೆ. ಇದರ ರೀತಿ ಬೇರೆ, ಅಜಗಜಾಂತರ. ಅದರಲ್ಲಿಯೂ "ಗೂಢಾತ್ ಗೂಢತರ ಮಂತ್ರ" ಎಂದು ಹೇಳಿದುದುಂಟು. ಆದ ಕಾರಣ ನಾನು ಹೇಳಲೂ ಆಗದು ; ನೀನು ಕೇಳಲೂ ಆಗದು. ಮುಂದಣ ಕತೆಯನ್ನು ಕೇಳು. ಮತ್ತೆ ಅರಣ್ಯಕನು ಶತ್ರುಘ್ನಾದಿಗಳಲ್ಲಿ....

ಮನೋರಮೆ —ತೆಗೆ ತೆಗೆ! ನಿನ್ನ ಮುಂದಿನ ಕತೆಯನ್ನು, ವ್ಯಥೆಯನ್ನು. ಆದೇನು ಮಂತ್ರವೊ ಕೇಳುವೆನು. ಕೊರಳಾಣೆ, ಉಂಗುರದಾಣೆ, ಹೇಳಿದಲ್ಲದೆ ಬಿಡುವುದಿಲ್ಲ ಎಂದು ನಮಸ್ಕರಿಸಿದಳು.

ಮುದ್ದಣ—ಏನು ಛಲವೋ ಚಪಲೆಗೆ! ಹೇಳುವುದಿಲ್ಲ ಎಂದರೆ ಕೇಳುವುದಿಲ್ಲ. ಅಃ! ಬೇರೆಯವರಲ್ಲಿ ಹೇಳಿದ ನಮ್ಮ ಈ ಬೀಜಮಂತ್ರವನ್ನು ಹೇಗೆ ಹಾಳುಗೆಡಿಸಲಿ ! ಚಿಃ ! ಎಳೆಯ ಹೆಂಡಿರ ಕೈಯಲ್ಲಿರುವ ಕವಿಗಳ ಬಾಳುವೆಯೆ ದೂಷ್ಯ (ಎಂದು ಬಹಳವಾಗಿ ಯೋಚಿಸಿ), ಎಲ್ಲೆ ಹೆಣ್ಣೆ, ನೀನು ಯಾರಲ್ಲಿಯೂ ಎಂದೆಂದಿಗೂ ಹೇಳಬಾರದು, ಜೋಕೆ.

ಮನೋರಮೆ—ಎಂದೂ ಹೇಗೂ ಹೇಳುವುದಿಲ್ಲ, ಆಡುವುದಿಲ್ಲ.

ಮುದ್ದಣ—ಹಾಗಿದ್ದರೆ ಹೀಗಿದು ಕೇಳು, ಭ....ವ....ಬೇರೆಯವರಲ್ಲಿ ಆಡುವುದಿಲ್ಲ ಎಂಬ ನಂಬಿಕೆಯ ಕೈಯಲ್ಲಿ ತಟ್ಟು (ಭಾಷೆ ಕೊಡು).

ಮನೋರಮೆ—ಇದೊ ಹಿಡಿ ನಂಬಿಕೆಯ ಕೈಯನ್ನು, ನಿನ್ನ ಆಣೆ, ಕುಲದೈವದ ಆಣೆ! ಎಂದೂ ಬೇರೆಯವರಲ್ಲಿ ಹೇಳುವುದಿಲ್ಲ.

ಮುದ್ದಣ—ಉಂ!....ಭವತಿ....ಭಿ.... ಹೆಣ್ಣುಗಳನ್ನು ನಂಬಬಾರದು ಎನ್ನುವರು ಬಲ್ಲವರು. ನೀನು ಹೇಗೊ, ಮರವೆಯಲ್ಲಿ ಬೇರೆಯವರೊಡನೆ ಹೇಳಿ ಗುಟ್ಟನ್ನು ಬಿಟ್ಟರೆ ನಮ್ಮಂತಹವರ ಬಾಳು ಹಾಳಾಗುವುದು.

ಮನೋರಮೆ—ನಾನೇನು ಮೂಢೆಯೆ ? ಹೋ ! ತನ್ನಾಣೆ, ಕಣ್ಣಿನಾಣೆ, ಕೇಳುವೆನು.

ಮುದ್ದಣ—(ಗುಟ್ಟಿನಲ್ಲಿ) 'ಭವತಿ ಭಿಕ್ಷಾಂದೇಹಿ' ಎಂಬುದು, ಇದೇ ಕವಿಗಳಿಗೆ ಸಿದ್ಧಿಸಿದ ಹೆಮ್ಮೆಯ ಸಪ್ತಾಕ್ಷರೀ ಮಂತ್ರ. ಯಾರಲ್ಲಾದರೂ ಹೇಳಬೇಡ.

ಮನೋರಮೆ—(ಅರೆಮುನಿಸಿನಿಂದ) ಹೋಗು ಬಿಡು ಎಲೆ ರಮಣ, ನಿನ್ನ ನುಡಿಯನ್ನು ಸಹಜವಾಗಿ ನಿಶ್ಚಯ(ಸತ್ಯ)ವೆಂದೇ ಬಗೆದನು. ಈ ರೀತಿಯ ಮಾಟದ (ಕೃತಕದ) ಕಪಟ ನುಡಿಯ ಕೊಂಕು ಎಂಬುದನ್ನು (ನಾನು) ಅರಿಯದಾದೆ. ನೀನು ಕವಿಯೊ, ಹಾಸ್ಯಗಾರನೊ ? ನಿನ್ನ ಈ ಕಾವ್ಯದ ಸೊಗಸನ್ನು ನಮ್ಮಂತಹ ಜಾಣ್ಮೆಯಿಲ್ಲದ ಹೆಣ್ಣುಗಳೇ ಕೊಂಡಾಡುವರಲ್ಲದೆ ಬಲ್ಲವರು ಏನು ಒಲಿಯುವರೆ ?

ಮುದ್ದಣ—ಸಾಕು ಈ ಪರಿಹಾಸ್ಯ. ಮುಂದಿನ ಕತೆಯನ್ನು ಕೇಳು.

ಹೀಗೆ ಈ ರೀತಿಯಿಂದ ಅರಣ್ಯಕನು ಶತ್ರುಘ್ನಾದಿ ವೀರರನ್ನು ಉಪಚರಿಸಿ ಕುಳ್ಳಿರಿಸಿ ಮತ್ತೆ ಶ್ರೀರಾಮನ ಗುಣವಿವರಣೆಯಲ್ಲಿ—"ಏನೆನ್ನಲಿ, ಕಪಟ ನಾಟಕವೊ ! ತಾನೇ ಯಜ್ಞಪುರುಷನಾಗಿದ್ದು, ಹೋಮಿಸುವ ಯಜ್ಞವು ಯಾವುದೊ ! ಜಗದ ಮಾಯೆಗೆ ಹೀಗೆ ಇದನ್ನು ತೋರಿಸುವನಾಗಿದ್ದಾನೆ. ರಾಕ್ಷಸನ ಕೊಲೆಯ ದೆಸೆಯಿಂದ ತನಗೆ ಒಂದು ಪಾತಕವಂತೆ, ಶಾಂತಿಯಂತೆ, ಕುದುರೆಯಂತೆ, ಕಾಣಿಕೆಕಪ್ಪವಂತೆ, ಬಡರಾಜರಲ್ಲಿ ಹೋರಾಟವಂತೆ ! ನಾಡಿನ ಮನುಷ್ಯರ ರೀತಿಯ ಒಂದು ನಡವಳಿಯ ರಾಮನ ಸ್ಥಿತಿಗೆ ಏನು ಹೇಳಲೋ ! ಏನು ನಾನು ಅರಿಯೆನೆ, ಮುನಿ ಹೇಳಲಿಲ್ಲವೆ, (ಶ್ರೀರಾಮನು) ಜಗತ್ತಿನ ದೈವವೆಂಬುದನ್ನು ! ಅದು ಕಾರಣದಿಂದ ನಿಮ್ಮವರನ್ನು ಕಂಡು ಹಿಗ್ಗಿ ಹೋದೆನು. ಇನ್ನು ನಮ್ಮ ನಿಮ್ಮ ಮಹತ್ವದ ಕೂಡುವಿಕೆ ಅಯೋಧ್ಯೆಯಲ್ಲಿ ಆಗಲಿ." ಎಂದು ಶತ್ರುಘ್ನನನ್ನು ಮನ್ನಿಸಿ, ಮುಂದಣ ಪ್ರಯಾಣವನ್ನು ಮಾಡಿಸಿ, ತಾನು ಅಯೋಧ್ಯೆಯ ಕಡೆಗೆ ಮನೋವೇಗದಿಂದ ನಡೆದನು.

ದೇವಪುರವರ್ಣನ

ಚೆನ್ನಾಗಿ ಹೊಳೆಯುವ ಕಣ್ಣಿನ ಹೆಣ್ಣೇ, ಹೂಬಾಣಿಗನ ಕೊಂಬಿನ ಪ್ರದೇಶವೇ, ಬಹಳ ಬಳುಕುವ ಕೈಯ ನ್ಯಯ ಮಧುಕಕಂಪಿನ ಸೊಂಪಿನ ಸುಂದರಿಯೇ, ಕೇಳು.

ಮತ್ತೆ ಆಗ ಶತ್ರುಘ್ನ ಪುಷ್ಕಲ ಲಕ್ಷ್ಮೀನಿಧಿ ಸುಗ್ರೀವ ಮುಂತಾದ ವೀರಾಗ್ರಗಣ್ಯರು ಅರಣ್ಯಕನನ್ನು ಅಯೋಧ್ಯೆಯ ಕಡೆಗೆ ಬೀಳ್ಕೊಟ್ಟು ತಾವು ಮುಂದೆ ಬರಲು, ಎದುರಿನ ದಿಕ್ಕಿನಲ್ಲಿ ಒಂದು ಪಟ್ಟಣ, ದೇವಪುರ (ದೇವ ಲೋಕ)ದಂತೆ ಹಿರಿಮೆಗೊಂಡ ಆ ದೇವಪುರವನ್ನು ವೀರಮಣಿ ಎಂಬ ಹೆಸರಿನ ವೀರಮಣಿಯಾದ ಒಬ್ಬ ರಾಜನು ಆಳುತ್ತಿದ್ದನು. ಈತನಿಗೆ ರುಕ್ಮಾಂಗದನು ಹೇಗೊ ಹಾಗೆ ಹರಿಭಕ್ತಿಗೆ ನೆಲೆಯಾಗಿ ಒಪ್ಪುವ ರುಕ್ಮಾಂಗದನೆಂಬ ಸೀಮಂತ ಪುತ್ರನು ಇದ್ದಾನೆ. ಇತ್ತ ಆಗ ಈತನು ಅಂತಃಪುರದ ಸೊಕ್ಕು ಯೌವನದ ಕನ್ಯಾಸ್ತ್ರೀಗಳೊಡನೆ ಬೆರೆತು ವನವಿಹಾರದಲ್ಲಿದ್ದನು.

ಆ ಹೊತ್ತಿಗೆ ಸೀತಾರಮಣನ ಯಜ್ಞಾಶ್ವವು ಹಲವು ನಾಡುಗಳನ್ನು ಸುತ್ತಿಸುತ್ತಿ ಹುಲ್ಲಿಗೆ ಬಯಸಿ ಆ ವನವನ್ನೇ ಹೊಕ್ಕುಬಂದಿತು. ಆಗ ಅದನ್ನು ಕಂಡು ಒಬ್ಬಳು ಚಂಚಲಕಣ್ಣಿನ ಕೊಂಕಿದ (ಗುಂಗುರು) ಕೂದಲಿನವಳು ತನ್ನ ಒಡೆಯನಿಗೆ ಈ ವಿವರವನ್ನು ಅರಿಕೆಮಾಡಿದಳು. ರುಕ್ಮಾಂಗದನು ಆಶ್ಚರ್ಯತಾಳಿ ಕುದುರೆಯನ್ನು ಬರಿಸಿ, ಹಣೆಯಲ್ಲಿ ಶೋಭಿಸುವ ಓಲೆಯಿರಲು, (ಅದನ್ನು) ತೆಗೆದುಕೊಂಡು ಓದಿ, "ಆಗಲಿ, ಯುದ್ಧದಲ್ಲಿ ಗೆಲ್ಲುವ ವೀರರು ಬರಲಿ. ಅಷ್ಟರ ವರೆಗೆ ನಮ್ಮ ಲಾಯದಲ್ಲಿ ಸಾಮಾನ್ಯಜಾತಿಯ ಬಡಕುದುರೆಗಳ ಸಾಲಲ್ಲಿ ಕಟ್ಟುವೆನೆ"ಂಬ ನಿಶ್ಚಯದಿಂದ (ಅದನ್ನು) ಹಿಡಿದು ಸ್ತ್ರೀಜನದೊಡನೆ ಪಟ್ಟಣಕ್ಕೆ ಬಂದು ತಂದೆಗೆ ಈ ವಿಷಯವನ್ನು ಹೇಳಿದನು.

ಆಗ ವೀರಮಣಿರಾಜಶ್ರೇಷ್ಠನು ಕುಮಾರನು ಆಡಿದ ಹೊಸ ರೀತಿಯ ಬಿರುಸಿನ ಕಾಳಗದ ಮಹಾಕಾರ್ಯದ ಮಾತನ್ನು ಕೇಳಿ ತನ್ನಲ್ಲಿಯೇ ಆಲೋಚಿಸಿ ತನಗೆ ಮನೆತಳಿಯನೆನಿಸಿದ್ದ ಮಹಾದೇವ (ಈಶ್ವರ)ನಲ್ಲಿ ಈ ವಿಷಯವನ್ನು ಮಂತ್ರಾಲೋಚಿಸಿದನು.

ರಾಜನು ಅತಿ ಕಠಿನ ಕಾರ್ಯವನ್ನು ಪ್ರಶ್ನಿಸಲು ಈಶ್ವರನು ಸ್ವಲ್ಪ ಹೊತ್ತು ಧ್ಯಾನಿಸಿ ರಾಜನಿಗೆ—"ಅಃ! ಒಳ್ಳೆಯ ಮಂತ್ರವನ್ನು ನೆನೆದಯ್ಯ! ಪರಕ್ಕೆ ಪರನು ಎನ್ನಿಸಿದ ದೈವದೊಡನೆ ಇಂದು ಹಗೆ ಕಟ್ಟಿದನೆ! ಕುದುರೆಯನ್ನು ಕಟ್ಟಿದನೆ! ಯಜ್ಞಕ್ಕೆ ವಿಘ್ನವಾದನೆ! ಏನೆನ್ನಲಿ, ಈ ಮಕ್ಕಳಾಟಿಕೆಯ (ತಬ್ಬಲಿತನದ) ನಿಮ್ಮ ನುಡಿಗೂ ನಡೆಗೂ? ಶ್ರೀರಾಮನಿಗೂ ನಿಮಗೂ ಛಲವೆ? ಗುರಿ ತಪ್ಪದ ತನ್ನ ಒಂದು ಬಾಣಪ್ರಯೋಗದಿಂದ ರಾವಣ ಕುಂಭಕರ್ಣ ಮಾರೀಚ ಸುಬಾಹು ಮುಂತಾದ ರಾಕ್ಷಸರನ್ನು ತತ್ತರತರಿದ ರಾಮನೇನು ಗ್ರಾಮ್ಯನೆ? ಈಗ ಆತನ ಸೇನೆಯನ್ನು ಎದುರಿಸುವವನು ಯಾವನೊ? ಉಃ! ಹೋಗಲಿ, ಹೇಗಾದರೂ ಅವರೊಡನೆ ಸಂಧಿಗೆ ಒಪ್ಪಿ ಕುದುರೆಯನ್ನು ಬಿಟ್ಟು ಕಾಣಿಕೆ ಕೊಟ್ಟು ಅವರನ್ನು ಒಳಗು ಮಾಡುವುದು ಒಳ್ಳೆಯದು. ಕುಮಾರನ ಆರ್ಭಟಕ್ಕೆ ಮರುಳಾಗಿ ವ್ಯರ್ಥವಾಗಿ ಸತ್ತು ಮೃತ್ಯುವಿಗೆ ತುತ್ತಾಗಬೇಡ, ಸಾರಿ ಹೇಳಿದ್ದೇನೆ" ಎಂದನು. ಆ ನುಡಿಗೆ ರಾಜನು—"ಎಲೆ ದೇವ, ಹೀಗೂ ಹೇಳುವರೆ? ಕಟ್ಟಿದ ಕುದುರೆಯನ್ನು ಕೊಟ್ಟು ಮರೆಯಲ್ಲಿ ಬಾಳುವ ಕ್ಷತ್ರಿಯರಿದ್ದಾರೆಯೆ? ಇಂದೇ ಆಗಲಿ ಸಾವು, ಅಥವಾ ಇನ್ನೆಂದಾದರೂ ಆಗಲಿ, ತನ್ನ ಕುಲಕ್ಕೂ ಛಲಕ್ಕೂ ಕುಂದನ್ನೇ ಮುಂದಿಟ್ಟು, ಒದಗಿದ ಸಂಕಟದಲ್ಲಿ ಕುಂಟ ನಡೆಯುವ ಕಲಿಯೂ ಕಲಿಯೆ? ರಾಮನಾಗಲಿ, ಸೋಮನಾಗಲಿ, ಸಾಮವನ್ನು ಒಲ್ಲೆನು. ಆದರಿಂದ ನಿನ್ನ ಒಲುಮೆಯೊಂದಿದ್ದರೆ ಯುದ್ಧದಲ್ಲಿ ನಮ್ಮ ಛಲವನ್ನೂ ಬಲವನ್ನೂ ತೋರಿಸಿ ಕಾದಾಡುವೆವು, ನಿಶ್ಚಯ. ಇದರಲ್ಲಿ ನೀನು ಅಳುಕದೆ ಕೈತೋರಿಸಬೇಕು ಎಂದು ವಿನಯದಿಂದ ಹೇಳಿದನು.

ಆ ಮಾತಿಗೆ ಈಶ್ವರನು ಮನಮೆಚ್ಚಿ—"ಅಂಜದಿರು ಎಲೆ ನೃಪತಿ, ನಿನ್ನ ಒಂದು ಬಗೆಯ ಬಗೆ (ಮನಸ್ಸಿನ ರೀತಿ)ಯನ್ನು ಕಂಡೆನಲ್ಲದೆ ಯುದ್ಧಕ್ಕೆ ಅಳುಕಿ ಬಳುಕಿ ನುಡಿಯಲಿಲ್ಲ. ರಾಘವನು ತಾನೇ ಕಾಣಿಸಿಕೊಳ್ಳುವವರೆಗೆ ಹನುಮಗಿನುಮರನ್ನು ಗೆದ್ದು ಸೈನ್ಯವನ್ನು ದಿಕ್ಕುಗೆಡಿಸುವೆನು" ಎಂದು ಸಂತೈಸಿದನು.

ಹಾಗಿರಲು ಅತ್ತ ಕಾವಲಿನ ಆಳುಗಳಿಗೆ ಕುದುರೆ ಕಣ್ಮರೆಯಾಗಲು ನಾಲ್ಕು ದಿಕ್ಕುಗಳಲ್ಲಿ ಹುಡುಕಿ ಶತ್ರುಘ್ನನಲ್ಲಿ ಈ ಬಗೆಯನ್ನು ಹೇಳಿದರು.

ಅನಂತರ ಚಿಂತಿಸಿ ಶತ್ರುಘ್ನನು ಸುಮತಿಯೊಡನೆ "ಅಯ್ಯ ವೃದ್ಧಮಂತ್ರಿ, ಅಲ್ಲಿ ಕಾಣುವ ಪಟ್ಟಣವನ್ನು ನಮ್ಮ ಕುದುರೆ ಪ್ರವೇಶಿಸಿತು ಎಂದು ಚಾರರ ಮಾತಿನಿಂದ ತಿಳಿದೆನು. ಆ ನಾಡು ಯಾವುದು ? ಒಡೆಯನು ಯಾರು ? ಕುದುರೆಯನ್ನು ಕಟ್ಟುವವನೆ ? ಹೇಳು" ಎನ್ನಲು, ಸುಮತಿ ಶತ್ರುಘ್ನನಿಗೆ "ಇದೇ ದೇವಪುರ, ವೀರಮಣಿ ಆಳುವನು. ಬಲವುಳ್ಳ ಮಹಾಸಾಹಸಿ. ಅವನನ್ನು ಮುಕ್ಕಣ್ಣನು ಅಳಿಯನಾಗಿದ್ದು ಪಾಲಿಸುವನು. ನಮಗೆ ಯುದ್ಧ ಕಠಿಣವಾಗುತ್ತದೆ. ಆದ ಕಾರಣದಿಂದ ತಡಮಾಡದೆ ಸೈನ್ಯವನ್ನು ಎಚ್ಚರಿಸಿ ಪಟ್ಟಣವನ್ನು ಮುತ್ತಿ ವಶಪಡಿಸಿಕೊಳ್ಳುವುದು ಉಚಿತ"ವೆಂದು ತಿಳಿಸಲು, ವೀರರೆಲ್ಲರೂ ಹಿಗ್ಗಿ ತಾನು ಮೊದಲು, ನಾನು ಮೊದಲು ಎಂಬ ಒಂದು ಅಹಮಹಮಿಕೆಯಿಂದ ಎದೆಯೆತ್ತಿ ನಡೆದು ಪಟ್ಟಣವನ್ನು ಮುತ್ತಿ ಬೊಬ್ಬಿರಿದು ಸನ್ನೆ ಭೇರಿಗಳಿಂದ ಕಾಳಗಕ್ಕೆ ಶತ್ರುರಾಜರನ್ನು ಕರೆದರು.

ಆಗ ರುಕ್ಮಾಂಗದನು ಬೇಗನೆ ವೇಗದಿಂದ ತನ್ನ ಹೊನ್ನಿನ ರಥವನ್ನು ನೂಕಿ ಹಗೆಯನ್ನು ತಾಗಿ ಹೂಂಕರಿಸಿ ಧಿಕ್ಕರಿಸಿ ಶತ್ರುವಿನ ಬಾಣವನ್ನು ಕಡಿದು ಪ್ರತಿಯಾಗಿ ಬಾಣವನ್ನು ಹೂಡಿ ಬಿಟ್ಟನು. ಅಷ್ಟರಲ್ಲಿ ಪುಷ್ಕಲನು ಸಿಟ್ಟಿನಿಂದ ರುಕ್ಮಾಂಗದನ ಮುಂದೆ ಒತ್ತಿನಿಂತು ಹತ್ತು ಬಾಣಗಳಿಂದ ಕುದುರೆಯನ್ನು, ಏಳು ಬಾಣಗಳಿಂದ ಸಾರಥಿಯನ್ನು, ಐದು ಬಾಣಗಳಿಂದ ರಥವನ್ನು, ಎರಡು ಬಾಣಗಳಿಂದ ಧ್ವಜವನ್ನು ಮುರಿದು ಬೊಬ್ಬಿರಿದು, ಹರಿತವಾದ ಬಾಣಗಳಿಂದ ಆತನ ಬಿಲ್ಲನ್ನೇ ಮೂರು ತುಂಡು ಮಾಡಿದನು. ಅನಂತರ ಪುಷ್ಕಲನು ತಾನೂ ರಥವನ್ನು ಬಿಟ್ಟು ಭೂಮಿಗೆ ಧುಮುಕಿ ಎಸುಗಿಸಿದ ಯೋಧ (ಆಯುಧಗಾರ)ನೊಡನೆ ಹೋರಾಡಿದನು. ಹೀಗಿರಲು ಒಡನೆ ರುಕ್ಮಾಂಗದನು ಬತ್ತಳಿಕೆಯನ್ನೂ ಬಾಣವನ್ನೂ ಬಿಟ್ಟು ಗದೆಯನ್ನು ತೆಗೆದುಕೊಂಡು ಹೊಡೆಯಲು, ಪ್ರತಿಪಕ್ಷದ ವೀರನು ಹಿಂದೆಗೆದು ಎಡಕ್ಕೂ ಬಲಕ್ಕೂ ತಿರುಗಿ ತನ್ನ ಒಂದು ಹೊಸದಾಗಿ ಮಸೆದ ಬಾಣದಿಂದ ಕಡಿದನು. ಮತ್ತೆ ಗದೆ ಮುರಿಯಲು ಹರಿತ ಕತ್ತಿಯಿಂದ ಕತ್ತರಿಸಲಾಶಿಸಿದ ರಾಜಕುಮಾರನನ್ನು ನೋಯಿಸಿದನು ರಾಜಕುಮಾರನು ಇಂತಹ ಒಂದು ರೀತಿಯಿಂದ ನೊಂದು ಸಂಕಟದಿಂದ ಜೋಂಪಿಸಿ ಮೈಮರೆಯಲು, ಬೆಂಬಳಿಯ ಸೈನ್ಯ ಬೆನ್ನು ಕೊಡಲು (ಹಿಂದಕ್ಕೆ ಓಡಿಹೋಗಲು) ಆನೆ ಕುದುರೆಗಳು ದಿಕ್ಕೆಟ್ಟು ಚದುರಿದವು. ಹಾಹಾಕಾರವು

ಎಲ್ಲ ಕಡೆಯೂ ಶತ್ರುಸ್ಸೈನ್ಯದಲ್ಲಿ ಪ್ರತಿಧ್ವನಿಗೊಂಡಿತು. ಈ ಕಡೆಯಲ್ಲಿ ಈ ವಿವರವನ್ನು ಚಾರರು ವೀರಮಣಿಗೆ ಅರಿಕೆಮಾಡಲು, ಹಾವು ಅಡರಿದಂತೆ, ಸಿಡಿಲು ಎರಗಿದಂತೆ, ವಿಷವು ಏರಿದಂತೆ, ಸಂಜೆ ಕತ್ತಲಿಸಿದಂತೆ ರಾಜನು ಮುಂದುಗೆಟ್ಟು ಕಂಗೆಟ್ಟು ಬಗೆಗೆಟ್ಟು ವಶಕೆಟ್ಟು ನಡೆಕೆಟ್ಟು ಕುಮಾರನು ಮಡಿದನೆಂದೇ ಭ್ರಾಂತಿಯಿಂದ ಹಲವು ಬಗೆಯಲ್ಲಿ ಅಳುತ್ತಿರಲು, ಅತ್ತ ಪುಷ್ಕಳನು ಒಡ್ಡಿ ಬಂದು ನಿಂತು ರಾಜನೊಡನೆ—"ಎಲೆ ಹುಚ್ಚನೇ, ಕಾದಾಡುವ ಒಂದು ವ್ಯಸನದಿಂದ ಬಂದು ಈಗ ಈ ಹೆಣವನ್ನು ಕಂಡು ಮರುಗುವ ಗಂಡಸು ಷಂಡನು. ಚಿಃ ! ಹೋಗು ! ಬಿಲ್ಲು ತೆಗೆದುಕೊಂಡು ನನ್ನೊಡನೆ ಯುದ್ಧ ಮಾಡು. ಹಾಗೆ ಆಗದಿದ್ದರೆ ಕುದುರೆಯನ್ನು ಬಿಟ್ಟು ನಮ್ಮನ್ನು ನಂಬಿ ಬಾಳು" ಎಂದು ಜರೆಯಲು, ಹೊತ್ತಿದ ಅಗ್ನಿಯಲ್ಲಿ ತುಪ್ಪವನ್ನು ಎರೆದಂತೆ, ಉರಿಯುವ ಗಾಯಕ್ಕೆ ಉಪ್ಪನ್ನು ಲೇಪಿಸಿದಂತೆ, ಉರಿಯುವ ಕಣ್ಣಿನಲ್ಲಿ ಸುಣ್ಣವನ್ನು ಇಟ್ಟಂತೆ ಆಗಿ ಕೋಪವೆಂಬ ಬೆಂಕಿ ಉರಿದು ಕಿಡಿ ಕಿಡಿ ಹೋಗಿ ಉರಿದು ಮುರಿದೆದ್ದು ಹಗೆಯನ್ನು ಎದುರಿಸಿ ತರುಬಿ ಕರುಬಿ ಪ್ರತಿಬಾಣಗಳಿಂದ ಹೊಡೆದು ಕಾದಾಡಿದನು.

ಆಗ ಪುಷ್ಕಳನು ವೀರಮಣಿಯ ಬಾಣದ ಹೊಡೆತಕ್ಕೆ ಮೂರ್ಛೆಹೋಗಿ ಭೂಮಿಯಲ್ಲಿ ಬಿದ್ದನು. ಆಗ ಶತ್ರುಘ್ನನ ಸೈನ್ಯದಲ್ಲಿ ಹಾಹಾಕಾರವೂ ಶತ್ರು ಸೈನ್ಯದಲ್ಲಿ ಭೇರೀನಿನಾದವೂ ಬಹಳ ಹೆಚ್ಚಲು, ಒಡನೆ ತಾವು ತಮ್ಮಲ್ಲೇ ಆಶ್ಚರ್ಯಗೊಂಡು ಸುಬಾಹು ಮುಂತಾದ ವೀರರು ನಡೆದರು. ಶತ್ರುಘ್ನಾದಿಗಳೂ ಆಯುಧಗಳನ್ನು ತೆಗೆದುಕೊಂಡು ಮುಂದುವರೆದು ವೀರಮಣಿಯನ್ನು ತಾಗಿದರು.

ಆ ವೇಳೆಯಲ್ಲಿ ಇತ್ತ ಈಶ್ವರನು ಭಕ್ತನನ್ನು ಕಾಯುವ ಒಂದು ಮನಸ್ಸಿನಿಂದ ಹೊರಟು (ಪ್ರಮಥಗಣದೊಂದಿಗೆ ವೀರಭದ್ರ, ಭೈರವ, ಭೃಂಗಿ, ಶೃಂಗಿ, ಗುಳಿಕ) ಮುಂತಾದ ಭೂತ ಭೇತಾಳಗಳ ಭಕ್ತರ ಸೈನ್ಯದೊಡನೆ, ಅಗ್ನಿಗೆ ಸೂರ್ಯನಿಗೆ ವಡಬಾಗ್ನಿಗೆ ಸಿಡಿಲಿಗೆ ನೂರುಮಡಿಯಾಗಿ ಉರಿದು ಮಹಾರೋಷದಿಂದ ವಿಜೃಂಭಿಸಿ ಯುದ್ಧಕ್ಕೆ ಬಂದು ಪ್ರಳಯಕ್ಕೆ ಹೇಗೊ ಹಾಗೆ ಭೀಕರವಾಗಿ ಬೊಬ್ಬೆಯಿಟ್ಟು, ಯುದ್ಧದಲ್ಲಿ ಕಾದಾಡುತ್ತಿದ್ದ ರಾಜನಿಗೆ ಬೆಂಬಲವಾದನು. ಮತ್ತೆ ಆ ಗಣಗಳು ಬೊಬ್ಬಿರಿದು ಕಪಿಸೈನ್ಯವನ್ನು

ತರುಬಿದನು. ತರುವಾಯ ಶತ್ರುಘ್ನನೊಡನೆ ಯುದ್ಧಕ್ಕೆ ನಿಂತ ರಾಜಸನ್ನು ಹಿಂದಕ್ಕೆ ಒತ್ತಿ ಹಣೆಗಣ್ಣನು ತಾನೆ ಒಡ್ಡಿ ನಿಲ್ಲಲು, ಹನುಮಂತನು ಸಿಡಿಮಿಡಿಗೊಂಡು ರಭಸದಿಂದ ಕಾಮಾರಿಯನ್ನು ಕೈಯ ದೊಡ್ಡ ಮರದಿಂದ, ಶಿಲೆಯಿಂದ, ಬೆಟ್ಟದಿಂದ ಮಲೆತು ತಾಗಿಸನು. ದೇವತೆಗಳು ಅಳುಕಲು, ದಿಗ್ಗಜಗಳು ಬಳುಕಲು, ಕಮಠನ (ಭೂಮಿಯನ್ನು ಹೊತ್ತ ಆಮೆ) ಕೊರಳು ಕುಸಿಯಲು, ಆದಿಶೇಷನ ಹೆಡೆ ನೋಯಲು, ದಿಕ್ಪಾಲಕರು (ಹಿಂದಕ್ಕೆ) ಸರಿಯಲು, ಪರ್ವತಗಳು ಕುಸಿಯಲು, ಕಡಲು ಮೊಗೆಯಲು (ಮೇಲೇರಲು), ಉತ್ಪಾತಗಳು ಉಂಟಾಗಲು, ರುದ್ರನ ಅಬ್ಬರವು ತೀವ್ರವಾಯಿತು. ಬ್ರಹ್ಮಾಂಡದ ಓಡು ಬಿರಿಯುವಂತೆ, ದಿಕ್ಕುಗಳು (ಪರಸ್ಪರ) ತಾಗಿ ಪ್ರತಿಧ್ವನಿ ಕೊಡುವಂತೆ, ಸಿಡಿಲ ಪ್ರತಾಪವು ಆರಿ (ನಂದಿ) ಹೋಗುವಂತೆ ಗುಡುಗುಡಿಸಿ ಗುಡುಗಿ ಬೊಬ್ಬಿರಿದನು, ವೀರ ಹನುಮನು.

ಮತ್ತೆ ಬೇರೊಂದು ಸ್ಥಾನದಲ್ಲಿ ವೀರಮಣಿಗೂ ಶತ್ರುಘ್ನನಿಗೂ ಭೀಕರ ಯುದ್ಧವು ಉಂಟಾಗಲು ಬಹಳ ಹೊತ್ತು ಗಾಯಗೊಂಡ ದೇಹಗಳ ಹಂದಿ ಹುಲಿಗಳಂತೆ ರೋಷದಿಂದ ಹೋರಾಡುತ್ತಿದ್ದರು. ಕಟ್ಟಕಡೆಗೆ ಶತ್ರುಘ್ನನು ತಾನೂ ಕೈ ಸೋಲಲು, ಸೈನ್ಯ ಬಡವಾಗಲು ಚಟುವಟಿಕೆಯ ಬೆಂಬಲ ಹಜ್ಜೆಗೆಟ್ಟು ಬೆನ್ನು ಕೊಡಲು, ಅತ್ಯಂತ ಆಯಾಸದಿಂದ ಆಯುಧ ಹುರಿದು ದೃಷ್ಟಿ ಕೆಟ್ಟು ಇಂದಿಗೆ ನಮಗೆ ಶತ್ರುವಿನೊಡನೆ ಸೋಲಾಯಿತು ಎಂದು ನಿರ್ಧರಿಸಿ ಬಳಿಕ ಮುಂಗಾಣದೆ ಶ್ರೀರಾಮಚಂದ್ರಮನ ಪಾದಕಮಲಗಳನ್ನೇ ನೆನೆನೆನೆದು ಹಲುಬಿದನು. ಆ ಗಳಿಗೆಗೆ ಅಯೋಧ್ಯೆಯಲ್ಲಿ ದೀಕ್ಷೆಯುಳ್ಳಿದ್ದ ಕಾಯುವ ದೇವರ ದೇವನಾದ ರಾಮನು ಸಹೋದರನಿಗೆ ಕಾಣಿಸಿಕೊಂಡು ಅಷ್ಟೊಂದು ಕಷ್ಟವನ್ನು ಕೇಳಿ ತನ್ನವರನ್ನು ಸಂತೈಸುತ್ತ ಇದ್ದನು. ಆಗ ಶಿವನು ತನ್ನೊಡೆಯನು (ಎದುರು ಪಕ್ಷದ ಒಡೆಯನು) ತಾನಾಗಿ ತಮ್ಮನನ್ನೂ ಅದರಂತೆ ನಮ್ಮನ್ನೂ ಉದ್ಧರಿಸುವುದಕ್ಕೆ ದಯಮಾಡಿಸಿದನು ಎಂದು ಬಗೆದು ಹನುಮಂತನೊಡನೆ ಯುದ್ಧವನ್ನು ಸ್ವಲ್ಪಹೊತ್ತು ನಿಲ್ಲಿಸಿ ರಾಘವನ ದರ್ಶನಕ್ಕೆ ಬಂದನು. ರಾಮಸೇವಕನಾದ ಹನುಮಂತನೂ ಈ ವಿವರವನ್ನು ಅರಿತು ಹಲವು ದಿನದ ಒಂದು ಅಗಲಿಕೆಯ ಬೇಸರವನ್ನು ಹೋಗಿಸಿ ತಾನೂ ಒಡೆಯನ ಬಳಿಗೆ ಬಂದು ನಿಂತನು, ಮತ್ತೆ ಅಷ್ಟರಲ್ಲಿ ಸುಗ್ರೀವಾದಿ ಕಪಿಗಳೂ, ಸುಬಾಹು ರಾಜನೂ ಬಂದು ಒದಗಿ

ದರು. ವೀರಮಣಿಯೂ ತನ್ನ ಅಳಿಯನಾದ ಮಹಾದೇವನ ಜೊತೆಯಲ್ಲೇ ಬಂದನು. ಆ ವೇಳೆಯಲ್ಲಿ ಪರಮೇಶ್ವರನು ಜಗದೀಶ್ವರ (ಶ್ರೀರಾಮ)ನನ್ನು ಕಂಡು ನಮಸ್ಕರಿಸಿ (ತನ್ನ ಮಾವನನ್ನು) ಕಾಪಾಡುವ ಹೊರೆಯನ್ನು ಹೊತ್ತಿರುವುದಕ್ಕಾಗಿ ತಾನು ತನ್ನ ಒಡೆಯನನ್ನು ಎದುರಿಸಿದ ದೋಷವನ್ನು ಮರೆತು ಕಾಪಾಡುವುದು ಎಂದು ಬಿನ್ನವಿಸಿದನು. ಆಗ ರಾಜನೂ ತಿಳಿದು ಕೊಂಡು ದೇವರ ಯಜ್ಞದ ಕುದುರೆಯನ್ನು ಕಟ್ಟಿದ ಅಪರಾಧವನ್ನು ಕ್ಷಮಿಸು ವುದು ಎಂದು ಪ್ರಾರ್ಥಿಸಿದನು. ರುಕ್ಮಾಂಗದನೂ ಶ್ರೀರಘುವರನ ಮರೆ ಹೊಕ್ಕನು. ಬಳಿಕ ಆ ಮಹಾದೇವನು ತನ್ನವರಿಂದ ಕುದುರೆಯನ್ನು ತರಿಸಿ ಕಪ್ಪವನ್ನು ತರಿಸಿ ರಾಘವನ ಚರಣಕ್ಕೆ ಅರ್ಪಿಸಿದನು. ಮತ್ತೆ ಹೀಗೇ ಇರಲು ತನಗೂ ಶಿವನಿಗೂ ಸ್ವಲ್ಪವೂ ಭಿನ್ನವಿಲ್ಲ ಎಂಬ ರೀತಿಯಿಂದ ರಘುಪ್ರವರನು ಈಶ್ವರನನ್ನು ಸ್ನೇಹದಿಂದ ಒಪ್ಪಿಕೊಂಡು, ರಾಜವರ್ಗದಲ್ಲಿ ಅಷ್ಟೂ ಜನರನ್ನು ಸಂತೈಸಿ, ತಮ್ಮನವರನ್ನೂ, ಸೈನ್ಯವನ್ನೂ ಪ್ರೀತಿಯಿಂದ ಸಂತೈಸಿ, ತಾನು ಅಂತರ್ಧಾನನಾದನು. ಶತ್ರುಘ್ನಾದಿಗಳು ವೀರಮಣಿಯ ಒಂದು ಗೆಳೆತನದಿಂದ, ಹರನ ಒಂದು ನಲುಮೆಯಿಂದ ಮುಂದೆ ಪ್ರಯಾಣ ಮಾಡಿದರು.

ಹನುಮತ್ ಪರಾಜಯ

ಎಲೆಲೆ ಕಾಮಿನಿ, ಕಾಮಕಲೆಯ ನಿಧಿಯೇ, ಕಾಮುಮದಾಂಧ ಮದ್ದಾನೆಯಂತೆ ಸೊಗಸಾಗಿ ನಡೆಯುವವಳೇ, ಕಾಮನ ಕೃಷ್ಣಸರ್ಪದಂತೆ ಕೂದಲು........

ಮನೋರಮೆ—ನನ್ನ ರತ್ನವೇ, ಇಂದು ಇಷ್ಟೊಂದು ಹೀಗೇನು ಚೆಲುವಿನ ಒಂದು ವಿಸ್ತರದ ರೀತಿಯ ಹೊಸ ವರ್ಣನೆ ? ಮೆಲ್ಲನೆ ನಿನ್ನ ನಚ್ಚು ಮೆಚ್ಚಿನ ಕಾಮನ ಒಂದು ಧ್ಯಾನದಲ್ಲೇ ಬೆರೆತುದೇನು ?

ಮುದ್ದಣ—ಸಹಜ, ಈಗ ಇವುಗಳಲ್ಲವೆ ನಮ್ಮನ್ನು ಒಲಿದ—(ಓ ತಪ್ಪಿದೆನು ತಪ್ಪಿದೆನು) ನಿಮ್ಮನ್ನೇ ಒಲಿದ ಮುಟ್ಟಿನ ಕಾಮನ ಮಹೋತ್ಸವದ ಗಲಭೆಯ ಹಿರಿಯ ದಿವಸಗಳು ? ಇದೊ ಇದೊ ಬೆಡಗಿನ ನಾಡಿನ ಹೆಣ್ಣುಗಳು ರೂಢಿಸಿದ ಸಂತೋಷದ ಸಂಭ್ರಮವು ಮಿತಿಮೀರಿ ಮುನ್ನುಗ್ಗುತ್ತದೆ. ಅದ

ರಿಂದ ಈ ಹೊತ್ತು ಕಾಮನ ಹೆಸರಿನ ಒಂದು ನೆನಪು ತನಗೆ ತಾನೆ ಬೇಡ ಬೇಡವೆಂದರೂ ತುದಿನಾಲಿಗೆಯನ್ನು ರಭಸದಿಂದ ಏರಿಬರುವುದು. ಇದು ಮೊದಲಾಗಲು ಸುಮ್ಮನೆ ನಿನ್ನನ್ನೇ ಕರೆಯುವಾಗಲೂ, ತಿನ್ನುವ ಹುಗ್ಗಿಯಲ್ಲಿ ಒಗ್ಗರಿಸಿದ ಕಡಲೆಯಂತೆ, ಹೆಜ್ಜೆಹೆಜ್ಜೆಗೆ ಬಾಯಿಗೆ ಏರಿ ಬರುವುದಷ್ಟೆ.

ಮನೋರಮೆ—ಎಲೆ ಎಲೆ ರಮಣ, ಒಳ್ಳೆಯದು ಒಳ್ಳೆಯದಯ್ಯ, ನಿನ್ನ ಈ ಬಣ್ಣದ ಬೆಡಗಿನ ಬಿಡುನುಡಿಯ ಒಂದು ನೆವದಿಂದ ನನ್ನನ್ನು ಒಳ್ಳೆಯ ಬಗೆಯಲ್ಲೇ ಎಚ್ಚರಿಸಿದೆ.

ಮುದ್ದಣ—ಹಾಗೇನು ರಮಣಿ ?

ಮನೋರಮೆ—ನಾಳೆಗಲ್ಲವೆ ಕಾಮನ ಕಡ್ಡಾಯದ ಹಬ್ಬ ?

ಮುದ್ದಣ—ಓ ! ಓ ! ಭಂಗಿಯುಂಡವನು ಮೊದಲು ಉಂಡುದನ್ನು ಮರೆಯುವಂತೆ ನಾನೂ ತಿಳಿವುಗೆಟ್ಟೆನು, ಹೌದು ಹೌದು, ಆದರೇನು, ನಾಳೆಗೆ ಹೂರಣ ಕಡುಬೋ, ಸೊಂಡಿಗೆಯೋ, ಮಂಡಿಗೆಯೋ, ಹೋಳಿಗೆಯೋ ಒಳ್ಳೆಯ ಔತಣದ ಊಟಕ್ಕೆ ?

ಮನೋರಮೆ—ನಿನಗೆ ಒಂದೇ, ಭೀಮನಿಗೆ ಹೇಗೊ ಹಾಗೆ ತಿನ್ನುವ ಬಯಕೆ !

ಮುದ್ದಣ—ಮತ್ತೆ ಅದೇನು ?

ಮನೋರಮೆ—ನಾಳೆ ನನಗೆ ಒಂದು ವ್ರತ.

ಮುದ್ದಣ—ಹಾಗಿದ್ದರೆ ಆ ವ್ರತದ ಆಚರಣೆ ಹೇಗೆ ? ರೀತಿ ಹೇಗೆ ?

ಮನೋರಮೆ—ಹಿರಿದೇನು, ಸಂಜೆಯಲ್ಲಿ ಸ್ನಾನಮಾಡಿ ಮಡಿ ಉಟ್ಟು ಕಲ್ಪೋಕ್ತವಾಗಿ ಕಾಮನನ್ನು ಕ್ರಮವಾಗಿ ಅರ್ಚಿಸುವುದಷ್ಟೆ !

ಮುದ್ದಣ—ನೀನೊಬ್ಬಳೆಯೆ ?

ಮನೋರಮೆ—ನೀನೂ ನಾನೂ (ಇಬ್ಬರೂ)

ಮುದ್ದಣ—ಇದರಿಂದ ಏನು ಗುಣ ?

ಮನೋರಮೆ—ಈ ಹುಣ್ಣಿಮೆಯಲ್ಲಿ ಕಾಮನನ್ನು ಪ್ರೀತಿಯಿಂದ ಭಜಿಸಿದರೆ ಕಾಮೇಶನು ನಮಗೆ ಒಲಿಯುವನು. ಮತ್ತೆ ಎಂದಿಗೂ ನಮ್ಮನ್ನು ಅಗಲದೆ ಇರುವನು.

ಮುದ್ದಣ—ಹಾಗಿದ್ದರೆ ಅಜ್ಜಿ ಸತ್ತಂತೆ ಒಂದು ಸಂತೋಷ ನನಗೆ ಈ ವ್ರತದಲ್ಲಿ.

ಮನೋರಮೆ—(ನಸುನಕ್ಕು) ಆದರೂ ಇಷ್ಟೊಂದು ನಿಯಮ, ಹೊತ್ತಾರೆಯಿಂದ (ಬೆಳಗಿನಿಂದ) ಸಂಜೆಯವರೆಗೂ ಉಪವಾಸವಿರಲೇಬೇಕು.

ಮುದ್ದಣ—(ಗಾಬರಿಗೊಂಡು) ಈಗ ನಾನು ಕತ್ತರಿಯೊಳಾದೆನು (ಕತ್ತರಿಗೆ ಸಿಕ್ಕಿಕೊಂಡೆನು) ಕಲ್ಲಿನಲ್ಲಿ ಕಾಲು ಸಿಕ್ಕಿಕೊಂಡ ರಾಮನ ಕುದುರೆ ಹೇಗೊ ಹಾಗೆ ಮನಸ್ಸು ಮುಂಗೆಟ್ಟಿತು. ಹಾಗಾದರೆ ಈ ವ್ರತವನ್ನು ಒಲ್ಲೆನು.

ಮನೋರಮೆ—ಹಾಗೇನು! ನಡೆಯುವ ಯಜ್ಞಾಶ್ವವು ಯಾವಾಗ ಕಲ್ಲಿನಲ್ಲಿ ಸಿಕ್ಕಿಕೊಂಡಿತು ಹೇಳು.

ಮುದ್ದಣ—ಇದು ಆದರೆ ಆಗಬಹುದು. ಆದರೆ ಇಷ್ಟೊಂದಕ್ಕೆ ನಿನ್ನನ್ನು ಬೇಡುವೆ. ನಾಳೆಗೆ ಉಪವಾಸವಿಲ್ಲದ ವ್ರತವನ್ನು ಏರ್ಪಡಿಸಲೇಬೇಕು.

ಮನೋರಮೆ—ನೋಡೋಣ, ಮೊದಲು ಕತೆಯನ್ನು ವಿಸ್ತರಿಸು.

ಮುದ್ದಣ—ಆಯಿತಾಯಿತು ಕೇಳು, ತರುವಾಯ ದೇವಪುರದಿಂದ ಹೊರಟು ಭಾರತದ ಕೊನೆಗೆ ಹೋಗುವ ಬೆಡಗಿನ ಚೆಲುವಿನ ಯಜ್ಞಾಶ್ವವು ತನ್ನ ಒಂದು ಲೀಲೆಯಿಂದ ಹೇಮಕೂಟವನ್ನು ಪ್ರವೇಶಿಸಿ ಅದರ ಕಾಡಿನ ಒಂದು ತಪ್ಪಲಿಗೆ ನುಗ್ಗಿ ಮುಂದುವರೆದು ಪೊದರನ್ನು ಹಾಯ್ದು ಮುಗ್ಗರಿಸಿ ನಡೆಗೆಟ್ಟು ತಡೆದು ಅದರ ಗೊರಸು ತರಗೆಲೆಯ ರಾಶಿಯ ಮರೆಯ ಬಂಡೆಯಲ್ಲಿ ನಾಂಟಿಕೊಂಡವು. ಹೀಗೆ ಆಗಲು, ಒಡನೆಯೆ ಕಾಲು ಕೀಲನ್ನು ಬಲವಾಗಿ ನಾಟಿಸಿದಂತೆ ನಟ್ಟು ನಾಟಿರುವುದು, ಕುದುರೆಯ ಒಂದು ನಡೆ ಕಲ್ಲಿನ ಬೊಂಬೆಯ ಒಂದು ನಡೆಗೆ ಸಮವಾಯಿತು. ಆ ಹೊತ್ತಿಗೆ ದಿಕ್ಕೆಟ್ಟು ವಶಗೆಟ್ಟು (ಪರವಶವಾಗಿ) ಮರವಟ್ಟು (ಮರದಂತೆ) ಕುದುರೆಯ ಸ್ಥಿತಿಯನ್ನು ಕಂಡ ಕಾವಲಿನ ಭಟರು ಮಿಡುಕಿನಿಂದ (ವ್ಯಥೆಯಿಂದ) ಬೊಬ್ಬೆಯಿಟ್ಟು ಓಡಿಸಿ ಎಬ್ಬಿಸಿ ಹತ್ತಿರ ಬಂದು ಬಾಲವನ್ನು ಎಳೆದು ಕೊರಳನ್ನು ಅಲುಗಿಸಿ ಕಿವಿ ಹಿಡಿದು ಎತ್ತಿ ಸುತ್ತಾಡಿ ದಾರಿಕಾಣದೆ ಬುದ್ಧಿಗೆಟ್ಟವರಾಗಿ ತಮ್ಮ ಕೋಟೆಯಲ್ಲಿರುವವರಿಗೆ (ಒಡೆಯರಿಗೆ) (ಸೈನ್ಯಾಧಿಕಾರಿಗಳಿಗೆ) ಈ ಸುದ್ದಿಯನ್ನು ಹೇಳಿದರು. ಸೈನ್ಯಾಧಿಕಾರಿಗಳೆಲ್ಲರೂ ತಕ್ಷಣವೇ ಎದ್ದು ವೇಗವಾಗಿಬಂದು ತಾವೂ ಕೈಗೊಟ್ಟು ಕುದುರೆಯನ್ನು ಕೀಳಲು ಅಪೇಕ್ಷಿಸಿದರೂ (ಪ್ರಯತ್ನಿಸಿದರೂ) ಅದು ಎಳ್ಳಷ್ಟಾದರೂ ಚಲಿಸದೆ ಇದ್ದಿತು.

ಕುದುರೆಯ ಕಾಲುಗಳು ಹಾಗೆ ಕಲ್ಲಿನಲ್ಲಿ ಕೀಲಿಸಿರುವುದನ್ನು ಕಂಡು

ಬಿಡದೆ ಬಂದು ತಮ್ಮ ಒಡೆಯನಿಗೆ ತಿಳಿಸಿದರು. ಆಗ ಶತ್ರುಘ್ನನು ನಾಚಿಕೆ ಯಿಂದ ಕುಗ್ಗಿ ಆಶ್ಚರ್ಯಗೊಂಡಿರಲು ಬಳಿಕ ಬಳಿಯ ಮಂತ್ರಿಯು ಕೈಮುಗಿದು "ರಾಜನೇ, ಯಾವುದರ ಒಂದು ಆಶ್ಚರ್ಯವೊ ತಲೆಬುಡವನ್ನು ಪರೀಕ್ಷಿಸದೆ ನೀನೂ, ಮಾಟಗಾತಿಯಾದ ವಾರಾಂಗನೆಯ (ವೇಶ್ಯೆಯ) ಕೈಮುಸಕಕ್ಕೆ (ಚಳಕಕ್ಕೆ) ಆರಿವುಗೆಟ್ಟು ಕಳವಳಿಸುವ ಹೆಡ್ಡನು ಹೇಗೊ ಹಾಗೆ, ಚಿಂತಿಸು ತ್ತೀಯೆ. ಹತ್ತಿರದಲ್ಲೇ ಎಲ್ಲಿಯಾದರೂ ಪುಣ್ಯಾಶ್ರಮವಿರಬೇಕು. ಮತ್ತು ಆ ಋಷಿಗಳ ಒಂದು ಮಹಿಮೆಯಿಂದ ಕಾರ್ಯದಿಂದ, ಹೀಗಾಗಿರಬೇಕು. ಅದರಿಂದ ಈ ಭಾಗದಲ್ಲಿ ಹುಡುಕಿ ಕಾರಣವನ್ನು ತಿಳಿಯುವುದು ತುಂಬ ಒಳ್ಳೆಯದು." ಎಂದು ಎಲ್ಲ ಕಡೆಗೂ ಆಳುಗಳನ್ನು ಏರ್ಪಡಿಸಿ ಕಳುಹಿಸಲು, ಒಡನೆ ಅವರು ಎಂಟುದಿಕ್ಕಿನಲ್ಲಿಯೂ ಹುಡುಕಿಯೂ ಕಾಣದೆ ಬಳಿಕ, ಎಷ್ಟೋ ದೂರದಲ್ಲಿ ಒಂದು ತಾಣದಲ್ಲಿ ತುಂಬ ಸೊಗಯಿಸುತ್ತಿದ್ದ ಪುಣ್ಯಾಶ್ರಮವೊಂದು ಕಾಣಿಸಲು ಒಡನೆ ಕಂಡು ಬಿಡದೆ ಬೇಗನೆ ಹಿಂತಿರುಗಿ ತಮ್ಮ ಒಡೆಯನಿಗೆ ಈ ಸುದ್ದಿ ಯನ್ನು ವಿವರಿಸಿದರು.

ಶತ್ರುಘ್ನನು ಹರ್ಷದಿಂದ ಹನುಮಂತ ಜಾಂಬವ ಪುಷ್ಕಳನೇ ಮೊದ ಲಾದ ವೀರರೊಡನೆ ಆ ದಾರಿ ಹಿಡಿದು ಬಂದು ಆಶ್ರಮವನ್ನು ಹೊಕ್ಕು ವೇದ ನುಡಿಯ ತೊಡಕನ್ನು ಮತ್ತೆಮತ್ತೆ ಎಡವದಂತಿರಲು ಎಡಬಿಡದೆ ವಿಸ್ತರಿಸಿ ಶಿಷ್ಯ ರಿಗೆ ನಿರೂಪಿಸುವ ಕುಲಪತಿಯನ್ನು ಶೌನಕನನ್ನು ಅಗ್ನಿಯೊಡನಿದ್ದವನನ್ನು (ಯಜ್ಞ ಮಾಡುತ್ತಿದ್ದವನನ್ನು) ಪ್ರದಕ್ಷಿಣೆ ಬಂದು (ಅವನ) ನೇರ ಎದುರಿ ನಲ್ಲೇ ಮುಗಿದ ಕೈಗಳಿಂದ ನಿಲ್ಲಲು ಅವನು ಇವರನ್ನು ಪ್ರೀತಿಯ ಕಡೆನೋಟ ದಿಂದ ಓರೆನೋಟದಿಂದ ನೋಡಿ ಬಳಿಕ ಹುಲ್ಲಿನ ಚಾಪೆಯಲ್ಲಿ ಕುಳ್ಳಿರಲು ಹೇಳಿ ಕ್ಷೇಮ ಸಮಾಚಾರವನ್ನು ಕೇಳಿ ಉಪಚರಿಸುತ್ತ ಈ ಕಡೆಯ ಒಂದು ಬರವಿಗೆ ಕಾರಣವನ್ನು ಕೇಳಲು, ಶತ್ರುಘ್ನನು ಉಚಿತರೀತಿಯಿಂದ ಯಜ್ಞಾಶ್ವದ ನಡೆ ಕೆಡುಕನ್ನೂ(ಕೆಟ್ಟಿರುವುದನ್ನೂ) ತಾವು ದಿಕ್ಕುಗೆಟ್ಟಿರುವುದನ್ನೂ ವಿವರಿಸಿದನು.

ಆಗ ಶೌನಕಮುನಿಯು ಸ್ವಲ್ಪ ಹೊತ್ತು ಧ್ಯಾನಮಾಡಿ ಮತ್ತು ಆಕಳಿಸಿ ಶತ್ರುಘ್ನನಿಗೆ "ಎಲೆ ರಾಜ ಇದಕ್ಕೆ ಮುನ್ನಿನ ಒಂದು ಇತಿಹಾಸ ಉಂಟು. ಏನೆಂದರೆ, ಈ ನಾಡಿನ ದಕ್ಷಿಣಕ್ಕೆ ನಾಡಿನ ಒಡತಿಯ ಜೀವನಾಳವೆನ್ನುವಂತಹ ಹಿರಿದಾಗಿ ಶೋಭಿಸಿ ಹರಿಯುತ್ತಿರುವ ಕಾವೇರಿಯೆಂಬ ಒಂದು ನದಿಯುಂಟು.

ಆದರ ಪಕ್ಕದ ಒಂದು ಕೊಪ್ಪಲಿನಲ್ಲಿ ಒಬ್ಬನು ಸಾತ್ವನನೆಂಬ ಹೆಸರಿನ ದ್ವಿಜನು (ಬ್ರಾಹ್ಮಣನು) ದ್ವಿಜರಾಜಧರನನ್ನು (ಈಶ್ವರನನ್ನು) ಕುರಿತು, ಒಂದೊಂದು ದಿವಸ ನೀರನ್ನು ಸೇವಿಸಿ, ಗಾಳಿಯನ್ನು ಸೇವಿಸಿ, ನಿರಾಹಾರನಾಗಿ ತಪಸ್ಸನ್ನು ಆಚರಿಸುತ್ತಿರಲು ಒಡನೆ ಕೆಲವಾರು ದಿವಸಗಳಿಗೆ ಶಿವನು ಪ್ರೈದೋರಿದನು. ಹೀಗಿರಲು ಬ್ರಾಹ್ಮಣನು ಯಮನ (ಮುಂದಿನ ಹಲ್ಲುಗಳಿಗೆ ಸಿಕ್ಕಿಕೊಂಡನು) ಬಾಯಿಗೆ ತುತ್ತಾದನು. ಆದರೂ ತನ್ನ ಒಂದು ಸುಕೃತವಿಶೇಷದಿಂದ ಆಕಾಶ ದಿಂದ ಇಳಿಯುತ್ತಿದ್ದ ವಿಮಾನವೊಂದನ್ನು ಕಂಡು ತಾನು ಅದನ್ನು ಏರಿ ಆಕಾಶಕ್ಕೆ ಏರಿದನು. ಮತ್ತೆ ಆಗಿನ ಅರ್ಧಗಳಿಗೆಯಲ್ಲೇ ತಾನು ಮೇರು ಪರ್ವತದ ತುತ್ತತುದಿಯಲ್ಲಿರುವುದನ್ನು ಕಂಡನು. ಹೀಗೆ ದೇವಲೋಕವನ್ನು ಸೇರಿ ದೊರೆತ ಹೊಸಸುಖದ ಸುಗ್ಗಿಯ (ಸಮೃದ್ಧಿಯ) ನುಗ್ಗಿನಲ್ಲಿ ಜಂಭ ಪಟ್ಟು (ಅಗ್ಗದ ಸಗ್ಗದ) ಶ್ರೇಷ್ಠ ಸ್ವರ್ಗದ ಹೆಂಗಸರ ಒಂದು ಗುಂಪಿನೊಡನೆ ಸೊಗಸಿನಿಂದ ಬೆರೆತು ಯಾವಾಗಲೂ ವಿನೋದಗೊಳ್ಳುತ್ತ, ಜಲಕೇಳಿಯನ್ನು ಒಮ್ಮೆ ಬಯಸಿ ಸ್ತ್ರೀಪರಿವಾರದೊಡನೆ ಜಾಂಬವತೀ ನದಿಗೆ ಬಂದು, ಸೊಕ್ಕಿನ ಉಕ್ಕಿನ ಅನಾದರದಿಂದ, ಪಕ್ಕದಲ್ಲಿ ಪಾಪಪರಿಹಾರಮಾಡುವ ಮಂತ್ರವನ್ನು ಜಪಿಸುತ್ತಿದ್ದ ಮುನಿಗಳನ್ನು ಲೆಕ್ಕಿಸದೆ ತಕ್ಕುಳಿದು ಮುಕ್ಕುಳಿಸಿ ಜಕ್ಕುಳಿಸಿದನು (ಯೋಗ್ಯರೀತಿ ನಡೆದುಕೊಳ್ಳದೆ ಮುಕ್ಕುಳಿಸಿ ಅಣಕಿಸಿದನು—ಉಗುಳಿದನು) ಇಂತಹ ಒಂದು ಕೆಟ್ಟ ಕೆಲಸವನ್ನು ಕಂಡು ಮುನಿಗಳು ಗೋಹತ್ಯೆ ಮಾಡಿದ ಪಾಪಿಗೆ ಹೇಗೊ ಹಾಗೆ ಮುನಿದು 'ಭೂಮಿಯಲ್ಲಿ ರಾಕ್ಷಸನಾಗಿ ಹುಟ್ಟು' ಎಂದು ಬೈದರು. ಹೀಗೆ ಈ ಬೈಗಳು ಅವನಿಗೆ, ಕೊಲೆ ಹಿಡಿದವನ ಕಣ್ಣಿಗೆ ಸ ಣ್ಣ ನೇ ಕಾಡಿಗೆಯಾಗುವಂತಾಯಿತು (ಕೊಲೆ ಎಂದರೆ ಪ್ರಾಪಂಚಿಕ ಆಸೆ ಪೂರೈಸದೆ, ಸುಸ್ಥಾರವಿಲ್ಲದೆ ಅಲೆಯುವ ಜೀವಾತ್ಮ. ಕೊಲೆವಿಡಿದವನು ಎಂದರೆ ದೆವ್ವ ಹಿಡಿದವನು ಅಥವಾ ಗರಬಡಿದವನು ಎಂದರ್ಥ. ಹೀಗೆ ದೆವ್ವ ಹಿಡಿದವನನ್ನು ಯಥಾಸ್ಥಿತಿಗೆ ತಂಬೇಕಾದರೆ, ಅದನ್ನು ಬಿಡಿಸಬೇಕಾದರೆ ಅವನ ಕಣ್ಣಿಗೆ ಸುಣ್ಣ ಹಾಕುವುದು ಒಂದು ಮಾರ್ಗ). ನೆತ್ತಿಯ ಅಮಲು ಇಳಿದ ಕುಡುಕರು ಹೇಗೊ ಹಾಗೆ ತಿಳಿದುಕೊಂಡು ಮೆಲ್ಲಮೆಲ್ಲನೆ ಆ ಮುನಿಗಳ ಹತ್ತಿರಕ್ಕೆ ಬಂದು ಅವರ ಪಾದದಲ್ಲಿ ಹೊರಳಿ 'ದೇವರು ದಯೆ ತೋರಬೇಕು, ಕಾಪಾಡಬೇಕು. ನಿಮ್ಮ ಪಾದವೇ ಮುನಿಯುವ ಸಂದರ್ಭದಲ್ಲಿ ನಮಗೆ ಇನ್ನು ಯಾವುದು

ಸ್ಥಾನ ? ಮುನಿಗಳ ಮಹಿಮೆಯೇನು ಕಡಿಮೆಯೆ ? ಹೀಗೆ ಇದನ್ನು ತಿಳಿದೂ ರಾತ್ರಿ ಕಂಡ ಬಾವಿಯಲ್ಲಿ ಹಗಲಿನಲ್ಲಿ ಬಿದ್ದಂತೆ ಕೆಟ್ಟದ್ದನ್ನು ಮಾಡಿ ದುರ್ಗತಿಗೆ ಇಳಿದೆನು. ನಿಮಗೂ ಕೆಟ್ಟವನಾದೆನು. ಹತ್ತೇನು, ಹಲವೇನು, ಒಲಿಯುವುದೂ ಕೊಲ್ಲುವುದೂ ನಿಮಗೇ ಸೇರಿದುದು' ಎಂದು ಕಾಲು ಹಿಡಿದನು. ಮುನಿಗಳು ಶಾಂತರಾಗಿ 'ಆಯಿತಾಯಿತು, ಮತ್ತೆ ಎಂದಿಗೆ ದಾರಿ ಹಿಡಿದು ಕ್ರಮಪ್ರಕಾರದಿಂದ ದಾರಿಯಲ್ಲಿ ಹೋಗುವ ರಾಮನ ಯಜ್ಞಾಶ್ವವನ್ನು ತಡೆದು ಆದರ ನಡೆಯನ್ನು ಕೆಡಿಸುತ್ತೀಯೊ, ಮತ್ತೆ ಎಂದಿಗೆ ಶ್ರೀರಾಮನ ಚರಿತ್ರೆಯನ್ನು ಮನಸ್ಸು ತೃಪ್ತಿಯಾಗುವಂತೆ ಕೇಳುವೆಯೊ ಅಂದಿಗೆ ನಿನಗೆ ವಿಮೋಚನೆಯಾಗಲಿ ! ಅಲ್ಲಿಯವರೆಗೆ ನೀನು ಅಲ್ಲಿ ಕಾಣುವ ಕಾಡಿನಲ್ಲಿ ಮಾಯದ ರಾಕ್ಷಸನಾಗಿರಬೇಕು.' ಎಂದು ಹೇಳಿ ಕಾಡನ್ನು ತೋರಿಸಿಬಿಟ್ಟರು. ಶತ್ರುಘ್ನನೇ, ಹೀಗಿರಲು ಒಂದು ಶಾಪಕ್ಕೆ ಅಹಂಕಾರ ನಾಶವಾಗಿ ಶರೀರ ಕೆಟ್ಟು ಹಾರುವನು ಕರ್ಕಶದ ಬ್ರಹ್ಮರಾಕ್ಷಸನಾಗಿಯೂ ಮಾಯದ ಒಂದು ಪದ್ಧತಿ ಹಿಡಿದು ಈ ಕಾಡಿನಲ್ಲಿ ಸಂಚರಿಸುತ್ತಿದ್ದು ಈಗ ಈ ನಿಮ್ಮ ಕುದುರೆಯ ನಡೆಯನ್ನು ಕೆಡಿಸಿದನು. ನೀವು ಈಗಲೇ ಹೋಗಿ ಕುದುರೆಯ ಬಳಿಯಲ್ಲಿ ನಿಂತು ಶ್ರೀರಾಮನ ಚರಿತ್ರೆಯನ್ನು ವಿವರಿಸಿದೊಡನೆಯೇ ಬಾಡಬನಿಗೂ (ಬ್ರಾಹ್ಮಣನಿಗೂ) ಬಾಡಬಕ್ಕೂ (ಕುದುರೆಗೂ) ವಿಮೋಚನೆಯಾಗುತ್ತದೆ." ಎಂದು ಹೇಳಲು, ಶತ್ರುಘ್ನನು ಹನುಮನಿಗೆ ಈ ಮಾರ್ಗವನ್ನು ಹೇಳಿ ಕಳುಹಿಸಿದನು. ಆಗ ರಾಮನ ಸೇವಕನಾದ ಹನುಮಂತನು ಕುದುರೆಯ ಹತ್ತಿರಕ್ಕೆ ಹೋಗಿ ತಾನು ತಿಳಿದಂತೆ ರಾಮನ ಕತೆಯನ್ನು ವರ್ಣಿಸಿವರ್ಣಿಸಿ ಹೇಳಲು, ತಾನೇ ತಾನಾಗಿ ಕುದುರೆಯು, ತಡೆದಿದ್ದು ಬಿಟ್ಟ ಹಾವು (ಗಾರುಡಿಗ ಅಥವಾ ಮಂತ್ರವಾದಿಗಳು ಮಂತ್ರಬಲದಿಂದ ಸರ್ಪವನ್ನು ತಡೆಗಟ್ಟುತ್ತಾರೆ. ಆ ಮಂತ್ರದ ಪ್ರಭಾವವು ಮೂರು ದಿನಗಳವರೆಗಿರುವುದೆಂದೂ ಅನಂತರ ಆ ಸರ್ಪಕ್ಕೆ ಬಿಡುಗಡೆಯಾಗುವುದೆಂದೂ ನಂಬಿಕೆಯಿದೆ.) ಹೇಗೋ ಹಾಗೆ ಚಲನೆ ಪಡೆದು ತನ್ನಿಚ್ಛೆಯಿಂದ ಹೋಗಲು ಅದನ್ನು ನೋಡಿ ಸಾಲಿಗನು (ಸಾಲ ಪಡೆದವನು) ಮೂಲಿಗನಾದ (ಮೂಲಧನವುಳ್ಳವನಾದ) ಒಂದು ಸಂತೋಷದಿಂದ ಒಡೆಯನ ಬಳಿಗೆ ಹೋಗಿ ಈ ವಿವರವನ್ನು ವಿನಂತಿಸಿಕೊಂಡನು. ಶತ್ರುಘ್ನನು ಆ ವಿವರವನ್ನು ಮೆಚ್ಚಿಕೊಂಡು ಸುಮತಿಯು (ಮಂತ್ರಿಯು) ಸುಮತಿಗೂ (ಒಳ್ಳೆಯ

ಬುದ್ಧಿಗೂ) ಮುನಿಯ ತಿಳುವಳಿಕೆಗೂ ಹನುಮಂತನ ಸಾಹಸಕ್ಕೂ ಕುದುರೆಯ ರೀತಿಗೂ ಅತ್ಯಾಶ್ಚರ್ಯ ತಾಳಿದನು. ಮುನಿ ತಕ್ಷಣವೇ ಪುಷ್ಪಕ ವಿಮಾನ ವನ್ನೇರಿ ಹೋಗುವ ಆ ಬಾಹ್ಮಣನನ್ನು ತೋರಿಸಿ "ನಿಮ್ಮಿಂದ ರಾಮಕತೆ ಯನ್ನು ಕೇಳಿದ್ದರಿಂದ ಪವಿತ್ರನಾಗಿ ಮೊದಲಿನ ಪುಣ್ಯಲೋಕಕ್ಕೆ ಹೋಗುತ್ತಿದ್ದಾನೆ ಇದೋ!" ಎಂದು ಹೇಳಿದನು.

ನನ್ನ ಕಣ್ಣಮಣಿಯೆ (ಕಣ್ಣಿನ ರತ್ನವೇ) ಪೆಣ್ಣಮಣಿಯೆ (ಸ್ತ್ರೀರತ್ನವೇ), ಮತ್ತೆ ಬಂದ ರೋಗವು ಅಡಗಿ ಕ್ಷೇಮವಾಗಿರುವ ಹೋರಾಟದ ತೋಳ್ಬಲದ ನರದ ಗುಂಪಿನ ಬಲ ಹೇಗೊ ಹಾಗೆ ಒಂದು ಶಕ್ತಿಯಿಂದ ದೇಹ ಹೆಚ್ಚಿ ತನ್ನ ಇಚ್ಛೆಯಿಂದ ಮುಂದೆ ಮುಂದೆ ಹೋಗಹೋಗುವ ಕುದುರೆಗೆ ಮುಂದಿನ, ಕುಂಡಲಪುರವು ಪ್ರತಿಭಟಿಸಿ ನಿಂತಿತು. ಸುತ್ತೇನು ಸುಕ್ಕೇನು (ಹೆಚ್ಚೇನು, ಕಡಿಮೆಯೇನು), ಶ್ರೀರಾಮಚಂದ್ರನನ್ನು ಕಣ್ಣಾರೆ ಕಾಣುವ ಒಂದು ಹಂಬಲ ದಿಂದ ಬೆಂಡಾಗಿ ಕಂದುಬಗೆಯಿಂದ (ದುಃಖದಿಂದ) ನಂದಿ ಹೊಂದುಕುಂದಿರುವ (ವೈರಾಗ್ಯಪರನಾಗಿರುವ) ಪುರದ ಮಹಾರಾಜನಾದ ಸುರಥರಾಜನು ತಾನು ಓಲಗದಲ್ಲಿರುವಾಗ ಒಮ್ಮೆ ರಾಜನ ಒಂದು ಭಕ್ತಿಯನ್ನು ಪರೀಕ್ಷಿಸಬೇಕೆಂದು ಜವನು (ಯಮನು) ಜವದಿಂದ (ವೇಗದಿಂದ) ಚಿಕ್ಕವಯಸ್ಸಿನ ಎಳೆತಪಸ್ವಿಯ ಒಂದು ರೂಪವನ್ನು ತಾಳಿ ಬೇಗನೆ ಅರಮನೆಗೆ ಬಂದನು. ಹಾಗೆ ಬಂದ ಕಪಟ ಪಟುವನ್ನು (ಕಪಟದಲ್ಲಿ ಸಮರ್ಥನಾದವನನ್ನು) ವಟುವನ್ನು (ಬಾಲಕ ಬ್ರಾಹ್ಮಣನನ್ನು) ನೋಡಿ ಸುಮ್ಮನಿರದೆ ಎದುರಾಗಿ ಎದ್ದು ಹತ್ತಿರಕ್ಕೆ ಹೋಗಿ ಕಾಲು ಹಿಡಿದು ಕೈ ಹಿಡಿದು ಕರೆದುಕೊಂಡು ಹೋಗಿ ತನ್ನ ಹೊನ್ನಗದ್ದುಗೆ ಯಲ್ಲಿ (ಚಿನ್ನದ ಸಿಂಹಾಸನದಲ್ಲಿ) ಕುಳ್ಳಿರಿಸಿ ಯಥಾವಿಧಿ ಪೂಜಿಸಿ ಮತ್ತೆ ದೈನ್ಯದಿಂದ 'ಅಪೂರ್ವವಾಗಿ ನಿಮ್ಮ ಪಾದ ದಯಮಾಡಿಸಿವೆ, ಏನು ನಿರೂಪಿಸು ವುದು' ಎಂದು ಕೇಳಿಕೊಂಡನು. ಆ ಕಪಟ ತಪಸ್ವಿ 'ನಮ್ಮಂತಹವರೇನು ಎಲ್ಲಿಯೂ ಇರುತ್ತಾರೆ, ಹೋಗುತ್ತಾರೆ. ಮನವು ಒಲಿದ ಕಡೆಗೆ ಹೋಗಿ ಒಳ್ಳೆಯ ಧರ್ಮವನ್ನು ಬೋಧಿಸಿ ಹಿತೋಪದೇಶವನ್ನು ತಿಳಿಯುವಂತೆ ಹೇಳು ವುದು ಒಂದೇ ನೇಮವು ನಮಗೆ. ಹಾಗೆ ಆ ಕಾರಣವಾಗಿ ನೀನು ನಮಗೆ ನನ್ನಿಯ ನೇಹಿಗ (ನಂಬಿಕೆಯ ಸ್ನೇಹಿತ)ನಾದುದರಿಂದ ನಿನಗೂ ಹಾಗೆಯೆ ಧರ್ಮರಹಸ್ಯವನ್ನು ಹೇಳಲೆಂದೇ ಬಂದೆನು' ಎಂದು ಹೇಳಿದನು. ಆ ಮಾತಿಗೆ

ಸುರಥನು 'ಇಂದಿಗೆ ನಾವು ನಿಶ್ಚಯವಾಗಿಯೂ ಧನ್ಯರಾಗಿದ್ದೇವೆ ; ಆದರೂ ಹೀಗೆ ವಂಚಿಸಿ ನೋಯಿಸುವ ಒಂದು ಹುಟ್ಟು (ಸೃಷ್ಟಿ) ಉಳಿವು (ಜೀವನ, ಸ್ಥಿತಿ) ಅಳಿವು (ಮರಣ, ಲಯ) ಎಂಬ ಕೋಟಲೆಯಿಂದ ಮುಕ್ತನಾಗುವಂತೆ ನನಗೆ ದಾರಿಯನ್ನು ತೋರಿಸು.' ಎಂದು ಹೇಳಲು, ಮಾಯದ ಜವನಿಕೆಯ (ತೆರೆಯ ಮರೆಯಲ್ಲಿರುವ) ಜವನು (ಯಮನು) ಮುಗುಳುನಗುತ್ತ 'ಎಲೆ ರಾಜನೇ, ಮುಕ್ತಿಯಲ್ಲಿ ಏನಿದೆ ? ಲೋಕವು ಹೀಗೆ ಈ ಭ್ರಮೆಯಿಂದ ನಿಷ್ಕಾರಣವಾಗಿ ಅಗ್ಗದ ಸಗ್ಗದ (ಶ್ರೇಷ್ಠಸ್ವರ್ಗದ) ಸುಖವನ್ನು ಹಾಳುಮಾಡಿ ಕೊಳ್ಳುತ್ತದೆ. ಆದರಿಂದ ನಿಮಗೆ ಹೇಳಿದ ಧರ್ಮವೆಂದರೆ ಕರ್ಮ' ಎಂದು ಹೇಳಲು, ರಾಜನು 'ಸ್ವಾಮಿಯೇ, ಹೀಗೆ ಇದು ನನ್ನ ಮನಕ್ಕೆ ಸೇರದು ಬಾರದು. ಕರ್ಮಗಳಿಂದ ದೊರಕುವ ಸುಖ ಕ್ಷಣಿಕವಲ್ಲವೆ ? ಇಂದ್ರನಿಗೂ ಕರ್ಮಫಲಾನುಭವವು ಮುಗಿಯಲು ಒಡೊಡನೆಯೆ ಪತನವುಂಟಾಗುತ್ತದೆ. ಅದೇರೀತಿ ಬ್ರಹ್ಮನಿಗೂ ! ಆದರಿಂದ ಇದು ಆಗದು. ಮುಕ್ತಿಯನ್ನೇ ಬಯಸು ತ್ತೇನೆ' ಎಂದು ಹೇಳಿದನು. ಅದಕ್ಕೆ ಆ ತಪಸ್ವಿಯು 'ನೀನೂ ಬರಿದೆ ಭ್ರಮೆ ಗೊಳ್ಳಬೇಡ ; ಮರುಳರಿಗೆ ಉಂಟಾಗುತ್ತದೆ ಈ ಬಗೆಯ ಜ್ಞಾನ. ನಿನ್ನಂತಹ ವರಿಗೆ ಸತ್ಕರ್ಮ ಫಲವೇ ಫಲವೆಂಬುದು ನಿಶ್ಚಯ. ಹಿಂದಿನ ರಾಜರು ಕರ್ಮ ಗಳಿಂದ ಸ್ವರ್ಗವನ್ನು ಏರಿ ದೇವೇಂದ್ರನ ಬಲಭಾಗದ ಸಿಂಹಾಸನವೇರಿ ದೇವತಾಸ್ತ್ರೀಯರಿಂದ ಸೇವಿಸಿಕೊಂಡವರು ಇದ್ದಾರೆ. ಆದ ಕಾರಣ ಕಣ್ಣಿನ ಬೆಗಡಿನ ಮುಕ್ತಿಯ ಯುಕ್ತಿಯನ್ನು ನಿರೀಕ್ಷಿಸದೆ ಸತ್ಯದಿಂದ ದಾನಧರ್ಮ ಗಳಿಂದ ಸ್ವರ್ಗದ ಮುಂಬಾಗಿಲಿನ ದೊಡ್ಡ ಕೀಲನ್ನು ಮುರಿಯುವಂತೆ ಮಾಡಿಕೊ' ಎನ್ನಲು, ಒಡನೆ ರಾಜನು 'ಒಪ್ಪೆನು ಒಪ್ಪೆನು ಈ ನಿನ್ನ ಕಪಟ ಮಾತಿಗೆ' ನೀನು ಯಾವ ಊರಿನ ಕೊನೆಯ ತಿರುಕ ತಪಸ್ವಿಯೊ ? ಹಾಳಾದ ಕರ್ಮದಿಂದ ಏನು ? ಶ್ರೀರಾಮನ ಧ್ಯಾನವೊಂದೇ ಮುಂದೂ ಹಿಂದೂ ಎಂದೂ' ಎಂದನು. ಆಗ ಮುನಿ ತಾನು ಅತಿ ಆಶ್ಚರ್ಯಗೊಂಡವನಂತೆ 'ಯಾವನು ಒಬ್ಬ ರಾಮನು, ಆತನ ಧ್ಯಾನದಿಂದ, ಭಕ್ತಿಯಿಂದ ಏನು ಮುಕ್ತಿ ? ಮನುಷ್ಯರ ಮೇಲಿನ ಧ್ಯಾನದಿಂದ ಮನುಷ್ಯರು ಮುಕ್ತರಾಗುವರು ಹೇಗೊ ? ನಿನಗೆ, ದಡ್ಡನಿಗೆ ಇಷ್ಟೊಂದು ಜ್ಞಾನಮಾರ್ಗವನ್ನು ಬೋಧಿಸಿದ ಮರುಳನು ಬೇರೊಬ್ಬನು ಯಾವನೊ ? ಎಲೆರಾಜನೇ, ನನ್ನನ್ನು ಮನ್ನಿಸು.

ನನ್ನ ಉಪದೇಶವನ್ನು ಕೇಳು. ಹರಿ ಎಂದೂ, ಹರನು ಎಂದೂ, ರಾಮನು ಎಂದೂ ಕಾಮನು ಎಂದೂ ಹುಚ್ಚುಗೊಳ್ಳದೆ ನಿನ್ನ ಹಿರಿಯರು ಹೇಗೊ ಹಾಗೆ ಸುಖದಿಂದ ಬಾಳುವುದು ತುಂಬ ಮೇಲು.' ಎಂದು ಹೇಳಲು ತುಂಬ ಕೋಪ ದಿಂದ ಕೆಂಪು ಕಣ್ಣು ಮಾಡಿ 'ಎಲೆಲೆ ದುಷ್ಟನೇ, ನೀನು ಮುನಿಯಲ್ಲ. ನಮಗೆ ಈ ಬಗೆಯ ಒಂದು ಉಪದೇಶವನ್ನು ಮಾಡಲು ಬಂದ ನೀನು ಅಂದಿನ ಕಾಲನೇಮಿ (ಸಂಜೀವಿನಿಯನ್ನು ತರಲು ಹೋದ ಹನುಮಂತನಿಗೆ ಕಾಲನೇಮಿ ಎಂಬ ರಾಕ್ಷಸನು ಮುನಿವೇಷದಿಂದ ಕಾಣಿಸಿಕೊಂಡು ಕಪಟೋಪದೇಶದಿಂದ ವಂಚಿಸಲು ಯತ್ನಿಸಿ ಕೊನೆಗೆ ಕೊಲ್ಲಲ್ಪಟ್ಟನು)ಯಿರಬೇಕು. ಶ್ರೀರಾಮನನ್ನು ಹಳಿಯುವ ನಿನ್ನ ಈ ತುದಿನಾಲಿಗೆಯನ್ನು ಹರಿತವಾದ ಖಡ್ಗದಿಂದ ಸೀಳಬೇಡವೆ ?' ಎಂದು ಗುಡಿಗುಡಿಸಿ ಜಡಿದು ತನ್ನ ಆಳುಗಳನ್ನು ನೋಡಲು, ಯಮಧರ್ಮನು ತಾನೆ ಪ್ರತ್ಯಕ್ಷನಾಗಿ 'ಎಲೆ ರಾಜನೇ, ಮೆಚ್ಚಿದೆನು ಈ ನಿನ್ನ ದೃಢಭಕ್ತಿಗೆ ; ನಾನು ಯಮನು. ಹೀಗೆ ಇವುಗಳ ಒಂದು ಪರೀಕ್ಷಣದ ಉದ್ಯೋಗದಿಂದ ಬಂದೆನು. ನಿನಗಿಂತ ಯಾವನು ಅನ್ಯನು ಧನ್ಯನು (ಬೇರೆ ಯಾರು ಧನ್ಯರು) ? ಭವದ (ಜನ್ಮದ) ಭಯವು ಹಿಂಗಬೇಕಾದರೆ ಹೀಗೆ ಇದೊಂದೇ ದಾರಿ ; ಒಳ್ಳೆಯದು, ಒಳ್ಳೆಯದಯ್ಯ. ನಿನಗೆ ಯಾವುದರಲ್ಲಿ ಉಂಟು ಬಯಕೆ ಹೇಳು ಕುಂದದೆ ಸಲ್ಲಿಸುವೆನು' ಎಂದು ಹೇಳುವ ಧರ್ಮ ರೂಪವನ್ನು ಮೂರು ಸಲ ಪ್ರದಕ್ಷಿಣೆ ಬಂದು ಆತನ ಪಾದಕ್ಕೆ ನಮಸ್ಕರಿಸಿ ಕೈಗಳನ್ನು ಮುಗಿದು 'ಸ್ವಾಮಿಯೇ ನನ್ನಲ್ಲಿ ಪ್ರೀತಿಯಿದ್ದರೆ ಬರ್ದಿನ ಪೊರ್ದಿನ (ಸಾವನ್ನು ಸೇರುವುದಕ್ಕೆ) ಮೊದಲೇ ಶ್ರೀ ರಘುನಾಯಕನನ್ನು ಕಣ್ಣಾರೆ ಕಂಡು ಧನ್ಯನಾಗುವ ವರವನ್ನು ಕರುಣಿಸುವುದು' ಎಂದು ಸುರಥನು ಸೆರಗನ್ನು ಒಡ್ಡಿ ಬೇಡಿಕೊಂಡನು. ಈ ಮಾತಿಗೆ ಯಮನು 'ನೀನು ಪ್ರಾಮಾಣಿಕನಾದ ರಾಮಭಕ್ತನಾದುದರಿಂದ ಕೆಲವಾರು ದಿವಸಕ್ಕೇನೆ ರಾಘವನು ತಾನೆ ಬಂದು ಪ್ರತ್ಯಕ್ಷನಾಗಿಯೂ ನೀನು ಬೇಡಿದ ಇಷ್ಟಾರ್ಥಗಳನ್ನು ನೀಡಿಯೂ ಹೋಗುವನು. ಇವುಗಳಲ್ಲಿ ಸಂದೇಹವು ಸ್ವಲ್ಪವೂ ಇಲ್ಲ'ವೆಂದು ಸಮಾಧಾನ ಘಡಿಸಿ ತಾನೂ ಅಂತರ್ಧಾನನಾದನು, ಅಷ್ಟೆ. ಹೀಗೆ ಈ ಕತೆಯನ್ನು ಸುಮತಿ ತನ್ನ ಒಡೆಯನಿಗೆ ವಿಸ್ತರಿಸಲು, ಒಡನೆ ಶತ್ರುಘ್ನನು ತಲೆದೂಗಿ ಮುಂದಿನ ಕಾರ್ಯೋದ್ಯೋಗಕ್ಕಾಗಿ ಮಂತ್ರಾಲೋಚನೆಯಲ್ಲಿರಲು, ಅತ್ತ ಕುದುರೆಯನ್ನು

ಸೆರೆಹಿಡಿದ ನಗರದ ಕಾವಲುಗಾರರು ಒಮ್ಮೆಗೇನೆ ಮಹಾಸಭೆಯಲ್ಲಿದ್ದ ರಾಜನ ಬಳಿಗೆ ಬಂದು ನಾಡನ್ನು ಪ್ರವೇಶಿಸಿದ ಕುದುರೆಯ ಸ್ಥಿತಿಯನ್ನು ವಿವರಿಸಿ ಅದರ ಹಣೆಯಲ್ಲಿ ಶೋಭಿಸುತ್ತಿದ್ದ ಓಲೆಯನ್ನು ಒಪ್ಪಿಸಿ ತಾವು ಆಜ್ಞೆಯನ್ನು ನಿರೀಕ್ಷಿಸುತ್ತಿದ್ದವರಾದರು. ಹೀಗಾಗಲು ಒಡನೆ ಸುರಥನು ಕಾವಲುಗಾರರು ಕೊಟ್ಟ ಕಟ್ಟೋಲೆಯನ್ನು ತಾನೆ ಬಿಡದೆ ಆಮೂಲಾಗ್ರವಾಗಿ (ಮೊದಲಿಂದ ಕಡೆಯತನಕ) ಓದಿ ಸಂತೋಷಪಟ್ಟು ತನಗೆ ತಾನೆ 'ಬಹಳ ಒಳ್ಳೆಯದಾ ಯಿತು, ಸುಳ್ಳಾಗದಾಯಿತು ಅಂದು ಬಂದ ಧರ್ಮರೂಪನ (ಯಮಧರ್ಮನ) ಒಂದು ಅಮೃತಮಾತು, ನನ್ನನ್ನು ರಕ್ಷಿಸುವ ಬಗೆಯಿಂದಾಗಿ ಮುಂದಾಗಿ ಅಟ್ಟಿರಬೇಕು. ಏನು ಕರುಣಾಕರನಾಗುವುದಿಲ್ಲವೆ ದೇವನು! ಇರಲಿ, ರಘುಕುಲ ವೆಂಬ ಸಾಗರಕ್ಕೆ ಹುಣ್ಣಿಮೆಯ ಚಂದ್ರನೋಪಾದಿಯಲ್ಲಿರುವ ರಾಮನು ತಾನಾಗಿಯೇ ಪ್ರತ್ಯಕ್ಷನಾಗುವವರೆಗೆ ಕ್ಷತ್ರಿಯರ ಧರ್ಮವನ್ನು ಬಿಡದೆ ಕುದುರೆ ಯನ್ನು ಕಟ್ಟಿ ಯುದ್ಧಮಾಡುವೆನು' ಎಂದು ದೀರ್ಘವಾಗಿ ಯೋಚಿಸಿ, ತನ್ನ ಸೇನಾಪತಿಗಳನ್ನು ಬರಮಾಡಿ ದಂಡವು ಬಂಡಣಕ್ಕೆ (ಸೈನ್ಯವು ಯುದ್ಧಕ್ಕೆ) ಸಿದ್ಧವಾಗುವಂತೆ ಸಾರಿಸಿ, ಚಂಪಕ ಮೋಹಕರೇ ಮುಂತಾದ ಹತ್ತು ಜನ ಕುಮಾರರೊಡನೆ ತಾನೂ ಬದ್ಧದಿಂದ (ದೃಢತೆಯಿಂದ) ಯುದ್ಧಕ್ಕೆ ಸಿದ್ಧ ನಾದನು. ಇತ್ತ ಶತ್ರುಘ್ನನು ತಾನೇ ತನ್ನಲ್ಲೆ ನಿಶ್ಚಯಕ್ಕೆ ಬಂದು, 'ಹಾಗಾದರೆ ನಮಗೆ ಆ ರಾಯನೊಡನೆ ಯುದ್ಧದಲ್ಲಿ ಗೆಲ್ಲಲಾಗುವುದಿಲ್ಲ, (ಅದರಿಂದ ನಮಗೆ) ಒಳ್ಳೆಯದಾಗುವುದಿಲ್ಲ. ತನ್ನವನನ್ನು ನೋಯಿಸಿದರೆಂದು ನಮ್ಮ ಮೇಲೆ ಅಣ್ಣನು (ಶ್ರೀರಾಮನು) ಮುನಿಯುತ್ತಾನೆ. ಆದರಿಂದ ಈ ಬಗೆಯಿಂದ ನಮ್ಮಲ್ಲಿ ಒಬ್ಬನನ್ನು ದೂತನನ್ನಾಗಿ ಕಳುಹಿಸಿ ಆ ರಾಜನಿಗೆ ತಿಳಿಸಿ ಕುದುರೆಯನ್ನು ತರಿಸುವುದು ನಮಗೆ ಒಳ್ಳೆಯದು' ಎಂದು ಬಗೆದು ಆಗಲೇ ಸುಮತಿಗೆ ಹೇಳಿದನು. ಆತನು ಅದಕ್ಕೆ ಒಪ್ಪಿ ಅಂಗದನನ್ನು ಇದರಲ್ಲಿ ತೊಡಗಿಸಿ ಕಳುಹಿಸಿದನು.

ಹಾಗಾಗಲು ಆಗ ಉಕ್ಕಿನ ಸೊಕ್ಕಿನ ಅಳ್ತನದಿಂದ ನೀಳ ಅಂಗದವನಾದ (ದೊಡ್ಡ ದೇಹದವನಾದ) ಅಂಗದನು ಆ ರಾಜನಿಗೆ ಕಾಣಿಸಿಕೊಂಡು ಕಾಣಿಕೆ ಯನ್ನು ಒಪ್ಪಿಸಿ ಗೌರವವನ್ನು ಪಡೆದು, 'ಕುದುರೆಯನ್ನು ಬಿಟ್ಟು ಕಪ್ಪವನ್ನು ಕೊಟ್ಟು ಕೂಡಿಬಾಳುವುದು ತುಂಬ ಒಳ್ಳೆಯದು' ಎಂದು ಕಂಚು

ಮಿಂಚಾಗಿ (ಅನಿರೀಕ್ಷಿತವಾಗಿ) ಮಾತಾಡಿದ ಅಂಗದನ ಪೊಂಗದ (ಪೊಂಕಿನ) ಮಾತುಗಳನ್ನು ಆಲಿಸಿ ಸುರಥನು 'ಹೌದು ಹೌದು. ಬಲ್ಲೆ ಬಲ್ಲೆನು ಆ ಜಗದ ದೈವವನ್ನು! ಹಗೆಯನ್ನಾಗಿ ಬಗೆಯುವುದಿಲ್ಲ. ಕೇಳುವು ದಾದರೆ ಹೀಗೆ ಇದೊಂದು ಬಿನ್ನಹ, ದೇವರ ಪಾದದಲ್ಲಿ! ನೀನು ಹೇಳುವಂತೆ ತನ್ನ ಕುದುರೆಯನ್ನು ತಾನೆ ಬಂದು ಕೇಳಿದರೆ ಆಗದೆ ? ಕಾಣಿಕೆಯನ್ನು, ಕಪ್ಪವನ್ನು ನಾಡನ್ನು ಬೀಡನ್ನು ವಸ್ತುವನ್ನು (ಸಂಪತ್ತನ್ನು) ಅಸುವನ್ನು (ಪ್ರಾಣವನ್ನು) ಒಡಲನ್ನು (ದೇಹವನ್ನು) ಒಡವೆಯನ್ನೂ ಎಲ್ಲವನ್ನೂ ಒಪ್ಪಿಸುವುದಿಲ್ಲವೆ? ಆದರೆ ಎಲ್ಲಿಯವರೆಗೆ ಶ್ರೀರಾಮನು ತಾನೇ ಪ್ರತ್ಯಕ್ಷನಾಗಿ ಬರುವುದಿಲ್ಲವೊ ಅಲ್ಲಿಯವರೆಗೆ ವಾಜಿ (ಕುದುರೆ)ಯನ್ನು ಸಾಜ (ಸಹಜ)ದಿಂದ ಈಯೆನು (ನೀಡುವುದಿಲ್ಲ) ಬೀಯೆನು (ಮಡಿಯುವುದಿಲ್ಲ) ಮಿತಿಮೀರಿ ಉಳಿದಿರುವ ನಿಮ್ಮ ಸೊಕ್ಕಿನ ಯೌವನಿಗರನ್ನು ತಿಕ್ಕಿ ತೆಕ್ಕೆ (ಹಿಸುಕು) ಯಾಡುವೆನು ಹೀಗಿದು ಸತ್ಯ' ಎಂದನು. ಆಗ ಅಂಗದನು 'ಏನಯ್ಯ, ದೇವರು ನಿನ್ನ ಹತ್ತಿರಕ್ಕೆ ಬರುವು ದುಂಟೆ ? ಬರುವುದಿಲ್ಲ. ಆದಕಾರಣದಿಂದ ದೇವರು ಮುನಿಯುದ ಮುನ್ನ, ಮಾನವ ಶತ್ರುಘ್ನನ ಬಾಣದ ಹೊಡೆತಕ್ಕೆ ನೋಯದಮುನ್ನ, ಶ್ರೇಷ್ಠಪುಷ್ಕಳನ ಕವಲುಬಾಣದ ಎಸೆತಕ್ಕೆ ನಿಶ್ಯಕ್ತನಾಗದ ಮುನ್ನ, ಹನುಮಂತನ ಸಿಂಹಗರ್ಜ ನೆಗೆ ತಳಮಳಗೊಳ್ಳದ ಮುನ್ನ, ನನ್ನ ಗುದ್ದಿನಿಂದಾಗಿ ಸಾಯದ ಮುನ್ನ ಹೇಗಾ ದರೂ ನಮ್ಮವರನ್ನು ಕಂಡು ಆಶ್ರಯದಲ್ಲಿ ಬಾಳುವುದು ಮೇಲು' ಎಂದು ಸಭೆ ಬಿಲ್ಲುವುದ್ (ಅತಿಯಾಗಿ) ಬೆರಗಾಗುವಂತೆ ಜಬರ್ದಸ್ತಾಗಿ ಗರ್ವದಿಂದ ಹೇಳಿದನು. ಆ ರಾಜನು ತುಂಬ ಕನಲಿ 'ತೆಗೆ ತೆಗೆ ನಿನ್ನ ಶತ್ರುಘ್ನಗಿತ್ರುಘ್ನರನ್ನು, ಮುಕ್ಕಣ್ಣನೇ ಯುದ್ಧದಲ್ಲಿ ಎದುರಾದರೂ ಲೆಕ್ಕಿಸುತ್ತೇನೆಯೆ ? ನಿಮಗೂ ದೇವರಿಗೂ ನಯಕ್ಕೆ ಅಂಜುವೆನಲ್ಲದೆ ಭಯಕ್ಕಲ್ಲ! ಹಾಗಾಗದಿದ್ದರೆ ನೀವೇ ಬಿಲ್ಲಾಳ(ಬಿಲ್ಲನ್ನು ಹಿಡಿದವರಲ್ಲಿ) ಬಲ್ಲಾಳರು (ಬಲವಾದವರು). ಆದುದರಿಂದ ಯುದ್ಧದಲ್ಲೇ ಕುದುರೆಯನ್ನು ತೆಗೆದುಕೊಳ್ಳುವುದು; ರಾಮನನ್ನು ತೋರಿಸದೆ ಸಂಧಿಗೆ ಒಂದೆನು (ಒಪ್ಪುವುದಿಲ್ಲ), ಬಿಣ್ನುಡಿಗೆ (ದೊಡ್ಡಮಾತಿಗೆ) ಬೆರಗಾಗುವುದಿಲ್ಲ. ಇದು ಸಿದ್ಧ ಹಾಗೂ ಬದ್ಧ' ಎಂದು ಪ್ರತಿಜ್ಞೆ ಮಾಡಿ, ಬಂದಿದ್ದ ಪ್ರತಿನಿಧಿಯನ್ನು ಹಿಂದಕ್ಕೆ ಕಳುಹಿಸಲು, ಒಡನೆ ವಾಲಿಪುತ್ರನ ಇಚ್ಛೆ ಪಚ್ಚೆಯಾಗಲು (ಸಾಯಲು), (ಆತನು) ವೇಗದಿಂದ ಬಂದು ತಮ್ಮ ಒಡೆಯ

ನಿಗೆ ಹೀಗಿದನ್ನು ವಿವರಿಸಿದನು.

ವೀರತ್ವದ ಏಳಿಗೆಗೆ ತಮಗೆ ಆ ನುಡಿಯೆ ಗುಡಿ (ಯುದ್ಧಕ್ಕೆ ಸಂಕೇತ) ಯಾಗಲು ವೀರರೆಲ್ಲರೂ ವಿಕ್ರಮಿಗಳಾಗಿ ಎಲ್ಲ ಕಡೆಯೂ ಮುತ್ತಿ ಗರ್ಜಿಸಿದರು. ಆಗ ಎರಡು ಕಡೆಯಲ್ಲಿಯೂ ಉದ್ದ ಬಾಣಗಳ ದೊಡ್ಡಮಳೆ, ಎಲೆಯಾಕಾರದ ತುದಿಯುಳ್ಳ ಬಾಣಗಳ ಸರದಿಮಳೆ, ಉದ್ದ ಕಲ್ಲುಗಳ ಸಣ್ಣ ಮಳೆ, ದೊಣ್ಣೆಗಳ ಜಡಿಮಳೆ, ಹೊಡೆ ಮರಗಳ ಹೊಡೆ ಮಳೆ (ಹೊಡೆಯುವ ಮರಗಳ ಹೊಡೆಯುವ ಮಳೆ), ಬಟ್ಟಕೈದಿನ (ಚಕ್ರಾಯುಧಗಳ) ದಿಟ್ಟ ಸೋನೆ ಮಳೆ (ಉಂಟಾದ್ದರಿಂದ) ಎಲ್ಲ ಕಡೆಯೂ ಸುರಿದಂತಾಗಿತ್ತು. (ಇನ್ನು) ಈಗ ಎರಡೂ ಪಕ್ಷಗಳಲ್ಲಿ ಅತಿರಥರಿಗೆ ಅರ್ಧರಥರಿಗೆ ಮಹಾರಥರಿಗೆ ತಮ್ಮ ತಮ್ಮಲ್ಲಿಯೇ ಹೋರಾಟವಲ್ಲವೆ! ಕಲಕಲ (ಕೋಲಾಹಲ) ಹೆಚ್ಚಿತು. ಒಡನೆಯೆ ಸುರಥನು ರಥವನ್ನು ಆ ಕಡೆಗೆ ನೂಕಿ ಶತ್ರುವಾದ ಶತ್ರುಘ್ನನನ್ನು ಅಸ್ತ್ರಜಾಲದಿಂದ ಸೆರೆಹಿಡಿದು ಒಯ್ಯುವೆನು ಎನ್ನುವ ವೇಳೆಗೆ ಹನುಮನು ಸುರಥನಮೇಲೆ, ಆನೆಯಮೇಲೆ ಎರಗುವ ಮಹಾಸಿಂಹದಂತೆ ತನ್ನ ಒಂದು ಆಟೋಪದಿಂದ ತಾಗಿ ತೂಗಿ ಹಿಡಿಯಿಂದ ಗುದ್ದಿದನು. ಆಗ ಆತನ ರಥವು ಜಜ್ಜಿಹೋಯಿತು. ಆಗ ಸುರಥನು ರಥವಿಲ್ಲದವನಾಗಲು ಇಬ್ಬರೂ ಯುದ್ಧದಲ್ಲಿ ಸಮಬಲರಾಗಿ ಹೋರಾಡಿದರು. ಕುದುರೆಯನ್ನು ತೆಗೆದುಕೊಂಡು ಬಾ ಎನ್ನುವ, ರಾಘವನನ್ನು ಕರೆದುಕೊಂಡು ಬಾ ಎನ್ನುವ, ಪಕ್ಕಕ್ಕೆ ಹೋಗು ಎನ್ನುವ, ನೀನು ಯಾರು ಎನ್ನುವ, ಹೋರಾಡು ಎನ್ನುವ, ಬಾ ಎನ್ನುವ ಸಡಗರದ ಮಾತುಗಳೇ ಮಾತುಗಳು ಹೋರಾಟರಂಗದಲ್ಲಿ! ಸುರಥನು ಹೊಡೆದ ಗದೆಯನ್ನು ಹನುಮಂತನು ಮುರಿದನು; ಹೊಡೆದ ಹರಿತ ಕತ್ತಿಯನ್ನು ಮುರಿದನು, ಪ್ರಯೋಗಿಸಿದ ಅಗ್ನಿಬಾಣವನ್ನು ಮುರಿದನು, ಗರುಡಾಸ್ತ್ರವನ್ನೂ ಮುರಿದನು, ವಜ್ರಾಸ್ತ್ರವನ್ನೂ ಮುರಿದನು, ಬ್ರಹ್ಮಾಸ್ತ್ರವನ್ನೂ ಮುರಿದನು, ವಾಯುಬಾಣವನ್ನೂ ಸಹ ಮುರಿದನು. ರಾಮಬಾಣವೆಂದ ಮಾತ್ರಕ್ಕೆ ಪಕ್ಕಕ್ಕೆ ಸರಿದನು. ಏನೆಂಬ ಭಕ್ತಿಯೋ, ದೇವರಲ್ಲಿ! ಹಾಗೆ ಹೊಳೆಹೊಳೆದು ಬೆಳಬೆಳಗಿ ತೇಲುತ್ತ ಬರುವ ಹೊನ್ನಿನ ಗುರಿಯ ರಾಮಬಾಣವನ್ನು ದೂರದಿಂದಲೇ ಕಂಡು ಅಡಿಮುಡಿ ಒಂದಾಗುವಂತೆ ನಮಸ್ಕರಿಸಿ ಅದನ್ನು ಕೈಗೆ ತೆಗೆದುಕೊಂಡು ಎದೆಗೆ ಒತ್ತಿಕೊಂಡು ತಲೆಯ ಮೇಲಿಟ್ಟುಕೊಂಡು, ಸಂತೋಷದ ಸಿಹಿಸಾಗರದಲ್ಲಿ ಓಲಾಡಿ ನೋಡಿ ಹಾಡಿ ಮತ್ತೆ ನೇರ ಎದುರಿನಲ್ಲಿಯೇ ಇದ್ದ ಸುರಥನನ್ನು ಕಂಡು 'ಎಲೆ ರಾಜನೇ ಇಂದಿಗೆ

ನೀನೆ ಗೆದ್ದೆಯಯ್ಯ, ನಿನ್ನನ್ನೇ ದೇವರು ಒಲಿದರು. ಎಲೆ ದೇವ, ಭಕ್ತವತ್ಸಲನಾಗೆಯೂ, ಕರುಣಾಕರನಾಗೆಯೂ, ಮೂರು ಜಗದ ಒಡೆಯನಾಗೆಯೂ, ನನ್ನ ಒಡೆಯನಾಗೆಯೂ, ನಾನು ಬಂಟನಾಗಿಲ್ಲವೆ, ಮೊದಲಿನ ವಿಶ್ವಾಸಿಯಾಗಿಲ್ಲವೆ, ನನ್ನಲ್ಲಿ ಏನು ಅಪರಾಧವೊ, ಏನು ಉದಾಸೀನವೊ, ಹೇಳಿರೆ ದೇವಾ, ಈ ಹೀನರಾಜನೊಡನೆ ಯುದ್ಧ ನಡೆಯಬಹುದೆ, ನೀನೆ ಒಂದು ಹೊಡೆಯಬಹುದೆ, ಬಡಿಯಬಹುದೆ, ಸೆರೆಹಿಡಿಯಬಹುದೆ, ನಿನಗೂ ಈ ಹೇಡಿ ಪಶುವಿನಂತಹ ರಾಜನಲ್ಲಿ ಏನು ಪಕ್ಷಪಾತವೊ, ಸಹಜವಾಗಿ ನಿನ್ನಿಂದಾಗಿ ಶತ್ರುವಿಗೂ ಅಂಜುವಂತಾದೆ. ಗಣಪತಿಯನ್ನು ಕಂಡು ಚಿಕ್ಕ ಇಲಿಗೆ ನಮಸ್ಕಾರ ಮಾಡಿದೆ. ನೀನು ಇಲ್ಲದಿದ್ದಾಗ ನನಗೆ ಎಂತಹ ಪರಾಕ್ರಮ, ಎಂತಹ ಸಾಮರ್ಥ್ಯ, ಮತ್ತು ಎಂತಹ ಪ್ರತಾಪ, ನನಗೇಕೆ ಬಂಟತನ, ಏತಕ್ಕೆ ಕುದುರೆಯ ಬೆನ್ನು ಹತ್ತುವಿಕೆ' ಎಂದು ಹಲವು ರೀತಿಯಲ್ಲಿ ನಮಸ್ಕರಿಸಿ ನಮಸ್ಕರಿಸಿ ಹಾಡಿ ಬೇಡಿಕೊಳ್ಳುತ್ತಿದ್ದನು. ಬಾನ ಮೀನನ್ನೂ (ಆಕಾಶದ ನಕ್ಷತ್ರವನ್ನೂ) ಮಂಕಿಸುವ (ಮಂಕು ಮಾಡುವ) ಒಂದು ಉಜ್ವಲದ ಕುಂಡಲ, ಬಣ್ಣಿಸಿ ನುಣ್ಣಿಸಿದ (ಬಣ್ಣ ಹಚ್ಚಿ ನುಣುಪುಗೊಳಿಸಿದ) ಕರಿಮಣಿಕಲ್ಲಿನ ಕೈಗನ್ನಡಿ ಹೇಗೊ ಹಾಗೆ ತಳತಳಿಸುವ ಕೆನ್ನೆ, ಮುಗಿಲು ಪಗಿಲ್ತು (ನೋಡ ಕವಿದ) ಆಕಾಶದ ಪಚ್ಚೆಬಣ್ಣದ ದೇಹ ಕಾಂತಿ, ಪೂರ್ಣ ಚಂದ್ರನ ಕಳೆಗೆ ಕೆಳೆಯಾದ (ಸಮನಾದ) ಮುಖಕಾಂತಿ, ವಿಶಾಲ ಹಣೆಯ ಅಂದ, ಸೊಗಸು ಕೂದಲ ಜೆಂದ, ಮಂದಹಾಸದ ಗಾಡಿ (ಸೌಂದರ್ಯ), ಚೆಲುವಿನ ಹೂವಿನಂತಿರುವ ಕಣ್ಣುಗಳ ಕಡೆನೋಟದ ಮೋಡಿ (ಆಕರ್ಷಣೆ)–(ಇವು) ಮನಸ್ಸಿಗೆ ನಾಟಿಕೊಳ್ಳಲು, ಒಡನೆ ಜಿಂಕೆಯ ಕೊಂಬೂ ನಾರುಬಟ್ಟೆಯೂ ತನ್ನ ಲಕ್ಷಣವಾಗಿರಲು, ದೀಕ್ಷೆ ಹೊತ್ತಿದ್ದ ಕೋದಂಡ ದೀಕ್ಷಾಗುರುವನ್ನು ತನ್ನ ಎದುರಲ್ಲಿ ಕಂಡನು. ಹೀಗೆ ಪ್ರತ್ಯಕ್ಷವಾದ ತನ್ನ ಒಡೆಯನನ್ನು, ಆನಂದಬಾಷ್ಪ ತಾನೇ ತಾನಾಗಿ ಕಾಡಿನ ಪ್ರವಾಹದಂತೆ ಸೋರುತ್ತಿರಲು, ಕಣ್ಣು ಮುಚ್ಚದೆ ನೋಡಿ ಮತ್ತೂ ಮತ್ತೂ ದೇವರ ಪಾದದಲ್ಲಿ ಹೊರಳಿ ತನ್ನ ಕಷ್ಟವನ್ನು ನಿರೂಪಿಸುತ್ತಿದ್ದನು. ಅತ್ತ ಪ್ರತಿಪಕ್ಷದ ಸುರಥನು ತಡಮಾಡದೆ ಕುದುರೆಯನ್ನೂ ಕಪ್ಪವನ್ನೂ ಕಾಣಿಕೆಯನ್ನೂ ಹೊನ್ನಿನ ಭಂಡಾರವನ್ನೂ ತರಿಸಿ ರಾಘವನ ಪಾದಕ್ಕೆ ಒಪ್ಪಿಸಿ ತಾನೂ ಸಾಷ್ಟಾಂಗ ಪ್ರಣಾಮ ಮಾಡಿ 'ಸ್ವಾಮಿಯೇ, ದೇವ, ನನ್ನ ಒಡೆಯಾ, ನನ್ನದು ಅಪರಾಧ, ನನ್ನದು ಅಪರಾಧ, ಬಂದ ಕುದುರೆ ನಿನ್ನದು ಎಂದು ತಿಳಿದೂ ಬಿಡಲಿಲ್ಲ. ಕಡೆಯುವವರನ್ನು ಪೊಯ್ದೆನು ಬಯ್ದೆನು (ಹೊಡೆದೆನು, ಬೈದೆನು). ಆದರೂ

ನಿನ್ನನ್ನು ಕಾಣುವ ಬಯಕೆಯಿಂದಲ್ಲದೆ ಗೆಲ್ಲಬೇಕೆಂದು ಎಳ್ಳಷ್ಟಾದರೂ ಅಲ್ಲ. ಈಗ ಕಣ್ಣಾರೆ ಕಂಡೆ, ತಣಿದೆನು ದಣಿದೆನು, ಮತ್ತೆ ನನಗೆ ಯಾವುದರಲ್ಲಿ ಆಸೆ ? ಇದೊ ತೆಗೆದುಕೊ, ಕುದುರೆ, ಕಾಣಿಕೆ, ಕಪ್ಪ, ನಾಡು, ಬೀಡು, ನಮ್ಮ ಸೊಮ್ಮು (ಸಂಪತ್ತು)—(ಇವನ್ನು) ನಿನ್ನ ಪಾದಕ್ಕೆ ಅರ್ಪಿಸುವೆನು ; ನನ್ನ ಒಡಲನ್ನೂ, ಒಡವೆಯನ್ನೂ ಮಡದಿ ಮಕ್ಕಳನ್ನೂ ನಿನ್ನ ಪಾದಕ್ಕೆ ಒಪ್ಪಿಸಿದೆನು, ನೀನು ಓವುದು ಕಾವುದು (ಪ್ರೀತಿಸುವುದು ರಕ್ಷಿಸುವುದು)' ಎಂದು ಸೆರಗನ್ನು ಒಡ್ಡಿ ಬೇಡಿಕೊಂಡನು. ಆಗ ರಾಮಚಂದ್ರನು ಇಬ್ಬರನ್ನೂ ಎತ್ತಿ ಆಲಿಂಗಿಸಿ ತನ್ನ ಅಭಿಮಾನವನ್ನು ಇಬ್ಬರಲ್ಲಿಯೂ ಸಮನಾಗಿ ತೋರಿಸಿ ಕ್ರೋಧವನ್ನು ಶಮನ ಮಾಡಿ ಕಳುಹಿಸಿ ಮತ್ತೆ ಮೂರ್ಛೆಹೋದ ತಮ್ಮವರನ್ನು ಎಬ್ಬಿಸಿ ಸರ್ವರನ್ನೂ ಸಮಾಧಾನಿಸಿ ಮಾಯವಾದನು.

ಬಳಿಕ ಆ ಶತ್ರುಘ್ನರು ಅರ್ಧ ಹಗಲು ವಿಶ್ರಾಂತಿ ಪಡೆದು ಸುರಥನಿಂದ ಸತ್ಕಾರಗೊಂಡವರಾಗಿ ಆ ರಾಜನೊಡನೆ ಸಡಗರದಿಂದ ಮುಂದೆ ಮುಂದೆ ನಿತ್ಯ ಪ್ರಯಾಣದಿಂದ ನಡೆದರು.

ಕಥೋಪಸಂಹಾರ

ಹಾಗೆ ಕುಂಡಲಪುರದಿಂದ ಹೊರಟು ಹೆಳವರ ಕೆಳವರ (ಹೀನರ) ಕಣ್ಣಿಲ್ಲದ ಮುಖಡವರ ಕುಳ್ಳರ ಒಂದೊಂದು ನಾಡನ್ನೂ ಕಳೆಕಳೆದು ಬರುಬರುತ್ತಿರಲು, ಅತ್ತ ಮಲ್ಲೀವಲ್ಲೀಕುಂಜಪುಂಜರಂಜಿತವಾದ (ಮಲ್ಲಿಗೆ ಬಳ್ಳಿಯ ಲತಾ ಮಂಟಪದಿಂದ ಕೂಡಿ ಸೊಗಸಾದ) ಒಂದು ಮುನಿಗಳ ಆಶ್ರಮದ ಹೊರವಲಯದ ತೋಟದಲ್ಲಿ ಆಟದ ಚಿಕ್ಕಪ್ರಾಯದ ಕುಮಾರರಿಬ್ಬರು ಪರಾಕ್ರಮದಿಂದ ತಡೆದು ಹಿಡಿದು ಕುದುರೆಯನ್ನು ಕಟ್ಟಿಯೇಬಿಟ್ಟರು.

ಮನೋರಮೆ—(ಕೇಳುವ ಒಂದು ತವಕದಿಂದ ತುಂಬ ಹತ್ತಿರಕ್ಕೆ ಬಂದು ನಲುಮೆ ಹೆಚ್ಚಲು ನಲ್ಲನ ಗಲ್ಲವನ್ನು ಅಲುಗಿಸಿ ಗಾಢವಾಗಿ ಆಲಿಂಗಿಸಿ) ನನ್ನ ಚೆನ್ನರಸ, ಮುನಿಗಳ ಆಶ್ರಮದ ಬಾಲಕರಿಗೆ ಈ ಬಗೆಯಲ್ಲಿ ನಾಡಿನ ರಾಜರ ಯಜ್ಞದ ಕುದುರೆಯನ್ನು ಕಟ್ಟಿ ಯುದ್ಧ ಮಾಡುವ ಒಂದು ಬಲವೂ ಪರಾಕ್ರಮವೂ ಉಂಟಾದುದು ಹೇಗೆ ? ಯಾರಾಗಿದ್ದಾರೆ ಈ ಕುಮಾರರು, ಏನು

ಮಾಡಿದರು, ಏನಾದರು, ಹೇಗೆ ಕಾದಾಡಿದರು, ಹೇಳ ? ಅಬ್ಬಾ ! ಏನು ಬಿರುಸುಳ್ಳವರೊ !

ಮುದ್ದಣ—ಉಃ ! ಹೋಗಲಿ, ಬಾಳುಕೆಟ್ಟ ಮಕ್ಕಳು ಯಾರಾದರೆ ಏನು ? ಸಾಕು ಈ ಹಾಳು ಕತೆ ; ಕತೆ ಹೇಳಿ ಬೇಸತ್ತೆನು ; ಹೇಗೊ ಯಜ್ಞ ಪರಿಸಮಾಪ್ತಿ ಮಾಡುವೆನು.

ಮನೋರಮೆ—ಮುದ್ದು ಮುಖದ ಚೆನ್ನಿಗರಾಯ, ಆಗದು ಆಗದು, ತನ್ನಾಣೆ, ಬಾಲಕರು ಯುದ್ಧದಲ್ಲಿ ಸೋತರೆ, ಗೆದ್ದರೆ, ಹೇಳಯ್ಯ. ನಿನಗೂ ಏನು ಹೀಗೆ ಬೇಸರವೊ ಕಾಣೆನು.

ಮುದ್ದಣ—ನೀನು ಉಡುಗೊರೆಯನ್ನು ಕೊಡುವುದೇನನ್ನೂ ಕಾಣೆನು, ಸುಮ್ಮನೆ ಹೇಳು ಎಂದರೆ ಹೇಳುವರೆ ?

ಮನೋರಮೆ—(ಮುಗುಳುನಗುತ್ತ) ಎರೆಯ (ಪ್ರಿಯನೆ), ನೀನು ಬೇಡುವವರು (ಭಿಕ್ಷುಕರು) ಹೇಗೊ ಹಾಗೆ ಬೇಡುತ್ತೀಯ, ಇಸ್ಸಿ, ಕಾಡಿಬೇಡಿ ತೆಗೆದುಕೊಂಡರೆ ಅದು ಒಂದು ಉಡುಗೊರೆಯೆ ? ಮನ ಒಲಿದು ನೀಡಿದರೆ ಅಲ್ಲವೆ ಮೆಚ್ಚು ?

ಮುದ್ದಣ—ಮೆಚ್ಚನ್ನು ನೆಚ್ಚಿ ಪಚ್ಚೆ (ಕೆಟ್ಟು) ಹೋದೆನು. ಆಯಿತು ನೋಡುವೆನು. ಎಳೆ ಕುಮಾರರ ಒಂದು ಕತೆ ಮುಂದಿರಲಿ. ನೀನು ಮುನಿಯೊಡನೆ ಹೋದ ಸೀತೆಯ ಒಂದು ಸ್ಥಿತಿಯನ್ನು ತಿಳಿದಿದ್ದೀಯ ?

ಮನೋರಮೆ—(ನೆನಪು ಮಾಡಿಕೊಂಡು) ನನಗಂತೂ ಏನೊಂದು ಮರೆವೊ, ನನ್ನ ಅಮ್ಮ ಸೀತೆಯನ್ನು ಅಂದು ಆಗಲೇ ಮರೆತೆನು. ಹೌದು ಹೌದು. ಮುನಿಗಳ ಆಶ್ರಮದಲ್ಲಿ ಹೇಗಿದ್ದಾಳೆ, ಏನು ಮಾಡಿದ್ದಾಳೆ ? ತವರು ಮನೆಯವರು ಕಡೆಗೆ ಕರೆದುಕೊಂಡು ಹೋದರೇನು ? ನನಗೆ ಇದನ್ನೇ ಹೇಳು, ಆ ಮಕ್ಕಳು ಇರಲಿ ಹೋಗಲಿ.

ಮುದ್ದಣ—ಹಾಗೆ ಧರ್ಮವನ್ನು ಸತ್ಯವನ್ನು ಬೀಜವನ್ನು ಬೆಳೆಯನ್ನು ಹುರುಳನ್ನು ತಿರುಳನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗುವಂತೆ ಹೋಗಿ ಬಳಿಕ ಮುನಿಗಳ ಆಶ್ರಮಗಳ ನಟ್ಟನಡುವೆ ದೇವಿಯನ್ನು ಇರಿಸಿ, ಮುನಿಪತ್ನಿಯರನ್ನು ಸ್ನೇಹದ ನಲುಮೆ ಗೆಳತಿಯರನ್ನಾಗಿ ಮಾಡಿ, ಪಾಡುಕೆಟ್ಟ ಬೆಂಡಾಗದಂತೆ ತಾನೇ ಆರೈಕೆ ಮಾಡುತ್ತಿದ್ದನು.

ಸೀತೆ ನಿತ್ಯವೂ ಬೆಳಿಗ್ಗೆಗೆ ಮೊದಲೆ (ಮುಂಜಾನೆಯೆ) ಶ್ರೀರಾಮನ

ಒಂದು ನೆನಸಿನಲ್ಲಿ ಎಚ್ಚತ್ತು ಮೂಡಿಬರುವ ತನ್ನ ಕುಲಗುರುವಿಗೆ (ಸೂರ್ಯನಿಗೆ) ಅಭಿವಂದಿಸಿ ಸ್ನಾನಮಾಡಿ ಮಡಿಯುಟ್ಟು ಮುನಿಗೆ, ತಂದೆಗೆ ಹೇಗೊ ಹಾಗೆ ಪ್ರದಕ್ಷಿಣ ನಮಸ್ಕಾರ ಮಾಡಿ ಆಶೀರ್ವಾದವನ್ನು ಪಡೆದು ಮುನಿಪತ್ನಿಯರ ಕಾಲು ಹಿಡಿದು ಕಿತ್ತುತಂದ ಹೂಗಳನ್ನು ಅರ್ಪಿಸಿ ಸ್ವಲ್ಪ ಹೊತ್ತು ಇದ್ದು ಸಲ್ಲಾಪ ನಡೆಸಿ ನಿಲ್ಲದೆ ಅವರು ಕೊಟ್ಟ ಕಂದಮೂಲ (ಗೆಡ್ಡೆಗೆಣಸು) ಗಳನ್ನು ತೆಗೆದುಕೊಂಡು ತನ್ನ ಕಿರುಬೆರಳಿನ ಮುದ್ರೆಯುಂಗುರದ ಶ್ರೀರಾಮಮೂರ್ತಿಗೆ ಸಮರ್ಪಿಸಿ ಬಳಿಕ ತಾನು ಸ್ವಲ್ಪಸ್ವಲ್ಪವನ್ನೆ ಕೋಡಿ ಹರಿಯುವ ಕಣ್ಣೀರ ಬಿಸಿನೀರಿನೊಡನೆ ಊಟಮಾಡಿ ನೋಡಿ, ಮುನಿಗಳು ಓದುವ ರಾಮಚರಿತ್ರೆಯನ್ನು ಕಿವಿಯಾರೆ ಕೇಳಿ ತಾನೂ ಹಂಬಲಿಸಿ ನಡು ಹಗಲಿನವರೆಗೂ ಇದ್ದು, ಸಂಜೆಯಾದಾಗ ಸಂಧ್ಯಾದೇವಿಯನ್ನು ಧ್ಯಾನಿಸಿ ಮತ್ತೆ ತನ್ನ ಪ್ರಾಣೇಶ್ವರನ ನಲುಮೆಯ ವರ್ಣನೆಯನ್ನೆ ನೆನೆನೆನೆದು ಒಂದು ಪರವಶತೆಯಿಂದ ಮೈಮರೆಯುವಳು, ಮಲಗುವಳು, ಕನವರಿಸುವಳು. ಏನು ಸಾಧ್ವಿಯೊ ! ತನ್ನ ಪ್ರಿಯನದೆ ಹಾಡು, ತನ್ನ ಸ್ವಾಮಿಯದೆ ಭಕ್ತಿ, ತನ್ನ ಪ್ರೇಮಿಯದೆ ನೆನಪು ; ತನ್ನ ಅರಸನದೆ ಸರಸ ಸರಸಿಜಾಕ್ಷಿಗೆ (ಕಮಲಾಕ್ಷಿಯಾದ ಸೀತೆಗೆ) ಯಾವಾಗಲೂ ! ಹೀಗೆ ತನ್ನ ಒಂದು ಸ್ಥಿತಿಯ ನೋವನ್ನು, ಹೇಗೂ ತನ್ನ ಮನದನ್ನನ ನೆನಪಿನಿಂದ ಏರುವುದಕ್ಕೆ ಬಿಡುವುದಿಲ್ಲ. ಮುನಿಯ ಆರೈಕೆ, ಮುನಿಸತ್ನಿಯರ ಸ್ನೇಹ, ತನ್ನ ಒಂದು ಪಾತಿವ್ರತ್ಯ ನಿಶ್ಚಯವಾಗಿಯೂ ದೇವಿಗೆ ಮೂರು ಸುತ್ತಿನ ಕೋಟೆ (ರಕ್ಷಣೆ)ಯಾಯಿತು.

ಈ ರೀತಿಯಿಂದ ಇರುವ ಭೂಜಾತೆ (ಭೂಮಿಯ ಮಗಳು)ಗೆ ಸೀತೆಗೆ ತಿಂಗಳು ತುಂಬಿಬರುತ್ತ ಇದ್ದಂತೆ ಮುನಿ ತಿಳಿದು ಸೀಮಂತನದ ಕರ್ಮವನ್ನು ಯಥಾವಿಧಿ ಮಾಡಿಸಿದನು. ಬಳಿಕ ಹೂವಿನ ಹೊಸ ಅಲಂಕಾರ ಮಾಡಿಕೊಂಡು ದೇಹಧರಿಸಿ ನೇರ ಎದುರಿಗೆ ಫಕ್ಕನೆ ಬಂದು ನಿಂತ ವನದೇವಿಯ ಒಂದು ರೀತಿಯಿಂದ ದೇವಿ ಕಣ್ಣಿಗೆ ಸೊಗಸಾದಳು.

ಹೀಗೆ ಒಪ್ಪುವ ಸೀತೆ ಕೆಲವಾರು ದಿವಸಕ್ಕೆ ಮತ್ತೊಂದು ಮುಹೂರ್ತದಲ್ಲಿ ಅಮಳರನ್ನು (ನಿರ್ಮಲರನ್ನು) ಅಮಳರನ್ನು (ಅವಳಿ ಜವಳಿಯನ್ನು) ಚಂದ್ರ ಸೂರ್ಯರನ್ನು ಪೂರ್ವದಿಕ್ಕು ಎಂಬ ಸುಂದರಿ ಹೇಗೊ ಹಾಗೆ ಹೆತ್ತು, ಹತ್ತು ದಿವಸಗಳಿಗೆ ಮುನಿಪನು ಕುಶನೆಂದೂ ಲವನೆಂದೂ ಮುದ್ದಿನ ಹೆಸರನ್ನು ಇಟ್ಟು ಕರೆದನು. ಅಂದಿನಿಂದ ಇಂದಿನವರೆಗೆ ಕುಶಲವರೆಂಬ ಹೊಂದಿಕೊಂಡ ಹೆಸರಾಯಿತು, ಭೂಮಿಯಲ್ಲಿ ! ಒಮ್ಮಡಿಯ ಚೆಲುವು ಎರಡು ದೇಹವನ್ನು

ಹೆತ್ತಂತೆಯೂ, ಎರಡು ದೇಹದ ಸೋಮಕಾಮರು (ಚಂದ್ರ ಮನ್ಮಥರು) ಒನ್ಮೊದಲಲ್ಲಿ ಹುಟ್ಟಿಕೊಂಡಂತೆಯೂ ಹುಟ್ಟಿ, ಬೆಡಗಿಗೆ ಆಡುಂಬೊಲ (ಆಟದ ಬಯಲು), ಸತ್ತಿನ (ಸದ್ಗುಣದ) ಗೊತ್ತು (ನೆಲೆ), ಹರಿಸದ ಸರಿ ಸಮನೆ (ಹರ್ಷದ ಖಚಿತಸ್ಥಾನ) (ವೆನ್ನುವಂತೆ) ತೋರಿ ದಿನದಿನಕ್ಕೆ ಏರುವ ಚಂದ್ರನಂತೆ (ಶುಕ್ಲಪಕ್ಷದ ವೃದ್ಧಿ ಚಂದ್ರನಂತೆ) ಕಳೆ ಹೆಚ್ಚುತ್ತ ಬೆಳೆಯುತ್ತಿರುವ ಆ ನಿಸರ್ಗ (ಪ್ರಕೃತಿಯ, ಸಹಜ) ಸಂದರರು ಹೆತ್ತ ಅಮ್ಮನಿಗೂ ಹುತ್ತದ ಪುತ್ರನಿಗೂ (ವಾಲ್ಮೀಕಿಗೂ) ವೃದ್ಧ ಮುನಿಗಳಿಗೂ ಎತ್ತಿ ನಲಿವ ಬಾಲೆಯರಿಗೂ ಮತ್ತೆಲ್ಲರಿಗೂ ಮುದ್ದು ಮುದ್ದಾದರು. ಪುಟ್ಟ ಹೆಜ್ಜೆ, ದುಂಡು ಮುಖ, ಪುಟ್ಟ ಕೈ, ವಿಶಾಲ ಕಣ್ಣು, ನಟ್ಟನಡುವಣದ ಹೊಕ್ಕಳು, ತೀಕ್ಷ್ಣ ಪರಾಕ್ರಮದ ದೇಹಕಾಂತಿ, ನೋಡುವವರನ್ನು ಸಹಜವಾಗಿ ಭ್ರಮೆಗೊಳಿಸುವ ಮೊಳೆವ ಹಲ್ಲಿನ ಚೆಲುವು, ಮುಗುಳುನಗೆಯ ಅಂದ, ತೊದಲು ನುಡಿಯ ಸೊಗಸು, ಚಂಚಲಗತಿಯ ಬೆಡಗು ಮನಸ್ಸಿಗೆ ನಾಟಲು ಕಣ್ಣಿಗೆ ಇಷ್ಟವಾದರು, ಆ ಲಂಬಾಲಕರು (ದೀರ್ಘ ಮುಂಗುರುಳುಳ್ಳವರು) ಬಾಲಕರು!

ಅದಾದ ಬಳಿಕ ಮುನಿಪನು ಚೌಲ ಉಪನಯನ ಸಂಸ್ಕಾರವನ್ನು ಪಡೆದ ಬಾಲಕರಿಗೆ ಹಲವು ಓದುಗಳನ್ನು ಓದಿಸಿ ವಿದ್ಯೆಯಲ್ಲಿ ವಿದ್ವಾಂಸರನ್ನಾಗಿಸಿ ವೇದಗಳೆಲ್ಲವನ್ನೂ ಸಾಂಗವಾಗಿ ತಿಳಿಸಿ, ಶಾಸ್ತ್ರಗಳನ್ನು ಹೇಳಿ, ಪುರಾಣಗಳಲ್ಲಿ ಪರಿಣತರನ್ನಾಗಿ ಮಾಡಿ, ಗಾನದಲ್ಲಿ ಜಾಣರನ್ನಾಗಿ ಮಾಡಿ, ಬಿಲ್ಲುಗಾರಿಕೆಯಲ್ಲಿ ಪಳಗಿದ ಕೈಗಳ ಶೂರರನ್ನಾಗಿಸಿ, ಪಾಠವು ಆಟವಾಗುವಂತೆ ಕಲಿಸಲು ಒಡನೆ, ಮೋಡವು ನಾಶವಾದಾಗ ತಿಳಿಯಾದ ಕಲೆ ಗಳಿಂದ ಬೆಳಗುವ ಚಂದ್ರಮನಂತೆ ಬೆಳಗಿದರು, ಜೋಡಿ ಬಾಲಕರು! ಸುಳ್ಳು ಹೇಳದ, ಬೇಸರಗೊಳ್ಳದ ತೊಂದರೆ ಮಾಡದ ಭಾಷೆತಪ್ಪದ, ವಂಚನೆಮಾಡದ, ಚೆನ್ನಾಗಿ ಒಂದಾಗುವ ಪ್ರೀತಿ ಹೆಮ್ಮೆಯಿಂದ ಉಂಟಾಯಿತು, ತಮ್ಮಲ್ಲಿ ಜೊತೆಯವರಿಗೆ! ಯಾವಾಗಲೂ ಮುನಿಯಲ್ಲಿ ಒಂದು ಗುರುಭಕ್ತಿ, ತಾಯಿಯಲ್ಲಿ ದೈವಭಕ್ತಿ ಪ್ರತ್ಯಕ್ಷವಾಗಿದ್ದು, ತಪಸ್ವಿಗಳಲ್ಲಿ ಒಲುಮೆಯಿಂದ, ವಟುಗಳಲ್ಲಿ (ಬ್ರಹ್ಮಚಾರಿಗಳಲ್ಲಿ) ನಲುಮೆಯಿಂದ ಸುಖವಾಗಿ ಬೆಳೆಯುತ್ತಿದ್ದರು ಆ ಜಿತಮಾರರು (ಮನ್ಮಥನಿಗಿಂತ ಸುಂದರವಾಗಿರುವವರು) ಕುಮಾರರು.

ಓ ನನ್ನ ಪ್ರಾಣೇಶ್ವರೀ, ಹೀಗೆ ದಿನದಿನಕ್ಕೆ ಏಳಿಗೆ ಪಡೆದು ಬೆಳೆಯುತ್ತಿರುವ ಬಾಲಕರ ಅಭಿವೃದ್ಧಿಯನ್ನೇ ಕಂಡು ತನ್ನ ಮೊದಲಿನ ಕಷ್ಟವನ್ನು ಮಿಗಿಲಾಗಿ ಮರೆತು ನಲಿಯುವ ಸೀತೆಯ ಸ್ಥಿತಿಗೆ ಕೃತಕೃತ್ಯನಾದೆನು ಎಂದು

ಬಗೆ ಮಿಗೆ (ಮನಸ್ಸು ತುಂಬಿ) ಹಿಗ್ಗಿ ಸಂತೋಷದಿಂದಿರುವ ವಾಲ್ಮೀಕಿ ಕೆಲವಾದು ದಿನದಲ್ಲಿ ತನ್ನ ಒಂದು ಅವಸರದ ಕೆಲಸಕ್ಕಾಗಿ ಕುಶಲವರನ್ನು ಆಶ್ರಮಕ್ಕೆ ಕಾವಲಿಟ್ಟು ವರುಣಲೋಕಕ್ಕೆ ಹೋದನು. ಆಗ ಎಲ್ಲೆಲ್ಲಿಯೂ ಸ್ವೇಚ್ಛೆಯಿಂದ ನಡೆಯುವ ರಾಘವನ ಯಜ್ಞಾಶ್ವ ಆ ಆಶ್ರಮವನ್ನು ಪ್ರವೇಶಿಸಿಕೊಡನೆಯೆ—

ಮನೋರಮೆ—ಈಗ ಅರಿತೆನು ಕುದುರೆಯನ್ನು ಕಟ್ಟಿದ ಬಾಲಕರು ಯಾರೆಂಬುದನ್ನು, ಕುಶಲವರಲ್ಲವೆ ? ನೀನು ಯಾವ ನಾಡಿನ ಮೋಸಗಾರನೊ? ಆಗಲೆ ಸೀತೆಯ ಮಕ್ಕಳು ಕಟ್ಟಿ ಕಾದಿದರು ಎಂದಿದ್ದರೆ ಆಗುತ್ತಿರಲಿಲ್ಲವೆ ? ತಾನು ಹೇಳಲಾರನಲ್ಲ ! ಮುಚ್ಚುವನಲ್ಲ ! ಆಯಿತಾಯಿತು ಮುಂದಿನ ಕತೆಯನ್ನು ಹೇಳು ನೋಡುವೆನು !

ಮುದ್ದಣ—ಗುಟ್ಟು ಬಿಟ್ಟುಕೊಟ್ಟ ಪ್ರಿಯನನ್ನು ಮೂದಲಿಸುವ ಹುರುಡು ಹೆಂಗಸಿನ ಒಂದು ದೊಡ್ಡಸ್ತಿಕೆಯನ್ನು ಮೆರೆಯುವ ನಿನಗೆ ನಲ್ಮೆಯ ಗೆಳತಿಗೆ ಅಲ್ಲದೆ ಬೇರೆ ಯಾರಿಗೆ ಕತೆಯನ್ನು ಬಿತ್ತರಂ ಬಿತ್ತರಿಪನು (ವಿಸ್ತಾರವಾಗಿ ವಿವರಿಸುವನು), ಗದ್ಯಕಾವ್ಯದ ಗರ್ವದ ಉಬ್ಬರದಿಂದ (ಹೆಚ್ಚಳದಿಂದ) ಸಂತೋಷಗೊಂಡು ಸ್ವಕಾರ್ಯಸಿದ್ಧಿಯ ಹೆಚ್ಚಿನ ಹುಚ್ಚಿನ ಪೊಳ್ಳುಬಳ್ಳು (ಅಂತಃಸತ್ವ ಶೂನ್ಯವಾದ ನರಿ) ಮುದ್ದಣನು ! ಆಯಿತು ಕೇಳು, ಇಬ್ಬರೂನು ಅಲ್ಲ ಒಬ್ಬನೆ ಕಿರಿಯವನು ಲವನು, ತಾನು ಒಮ್ಮೆ ಜೊತೆಯವರೊಡನೆ ಆಶ್ರಮಕ್ಕೆ ಎಷ್ಟೊ ದೂರದ ತೋಟದಲ್ಲಿ ವಿನೋದಿಸುತ್ತಿರುವ ವೇಳೆಯಲ್ಲಿ ಬಿಂಕದಿಂದ ಅಲ್ಲಿಗಲ್ಲಿಗೆ ಸುಳಿದೂ ತುಳಿದೂ ಮೂಸಿಯೂ ಲದ್ದಿಹಾಕಿಯೂ ಮೇದೂ ಹಾಯ್ದೂ ವನವನ್ನು ಮನಸ್ಸು ಬಂದಹಾಗೆ ಹುಡಿಗುಟ್ಟಿ ಕೆನೆಯುವ ಕುದುರೆಯನ್ನು ನೋಡಿ 'ಯಾರದು ಇದೊಂದು ಕಟ್ಟಕುದುರೆ ? ನೋಡಿದಿರಾ (ನಿಮಗೆ ತಿಳಿದಿದೆಯಾ) ಅಜ್ಜನು ಇಲ್ಲದಾಗಲೇ ಬಂದು ಪ್ರವೇಶಿಸಿ ಹೊರ ತೋಟವನ್ನು ತೊತ್ತಳ (ನೆಲಸಮವಾಗುವಂತೆ) ತುಳಿದು ಹಾಳುಗೆಡಹುತ್ತದೆ. ಹೋಗುವ, ಹಿಡಿದು ಕಟ್ಟಿ, ಬಂದೊಡನೆ ವೃದ್ಧಮುನಿಗೆ ಒಪ್ಪಿಸುವ ಎಂದು ತಾನು ಮುಂದೆ ಹೊರಡಲು ಒಡನೆ ಉಳಿದ ವಟುಗಳು ಹಿಡಿ ಹಿಡಿ ಎಂದು ಕೂಗುತ್ತ ಬೆನ್ನು ಹತ್ತಿದರು ; ಲವನು ತಾನೇ ಮುಂದುವರೆದು ಉತ್ತರೀಯದಿಂದ ಕೊರಳನ್ನು ಬಿಗಿದು ಪಕ್ಕದ ಚಿಕ್ಕ ಗೋಳಿಮರದ ಸಣ್ಣ ಕೊಂಬೆಗೆ ಅದನ್ನು ಕಟ್ಟಿ ಅದರ ಹಣೆಯಲ್ಲಿ ಶೋಭಿಸುತ್ತಿದ್ದ ಬಿರುದಿನ ಓಲೆಯನ್ನು (ಬರಹವನ್ನು) ಓದಿಕೊಂಡು, 'ಉಂ, ಹೀಗಲ್ಲವೆ ವೀರರ ಒಂದು ಹೆಮ್ಮೆ

ಪಡೆದ ಏಳಿಗೆ, ತಾನು ಕೌಸಲ್ಯೆಯಲ್ಲಿ ಹುರುಳೂ ಲಕ್ಷಣವೂ ಒಂದೇ ದೇಹ ಧರಿಸಿತು ಎಂಬಂತೆ ಹುಟ್ಟಿರಬಹುದು, ಹೀಗಿರಲು ಹಾಗೆ ಅದನ್ನು ಬೇರ್ಪಡಿಸಿ ತೋರಿಸುವುದಕ್ಕೆ ನಮ್ಮ ಅಣ್ಣನೆ ಸಾಕು. ನೋಡುವೆನು, ಮಾರಿಯ ಊಟಕ್ಕೆ ಯಾರು ಎಂಬುದನ್ನು ; ಅಲ್ಲದಿದ್ದರೆ ಹೇಡಿಗಳಾಗುವುದಿಲ್ಲವೆ ? ಕುದುರೆಯನ್ನು ಮರಳಿಸಿಕೊಳ್ಳುವುದಕ್ಕೆ (ರಾಮನ) ಸೋದರನು ಸಾದರದಿಂದ ಬರಲಿ, ಅಷ್ಟರಲ್ಲಿ ಬೇಗನೆ ನಮ್ಮ ಅಣ್ಣನಿಗೆ ಹೀಗೆ ಇದನ್ನು ತಿಳಿಸಿ ಆತನನ್ನೂ ಕೂಡಿಕೊಂಡು ಬರುವೆನು.' ಎನ್ನುವಷ್ಟರಲ್ಲಿ ಬೇರೆ ಉಳಿದ ಬಾಲಕರು ಎಷ್ಟೊ ಬೆಚ್ಚಿ 'ನಿನಗೆ ಏನೆಲೆ ಸೊಕ್ಕು, ಬಲವುಳ್ಳ ನಾಡಿನ ರಾಜರ ಯಜ್ಞಾಶ್ವವನ್ನು ಕಟ್ಟಿ ಛಲದಿಂದ ಕಾದಾಡುವೆನು ಎನ್ನುವ ನೀನು ಹುಚ್ಚನಲ್ಲವೆ ? ಬಾಲಕ ನೀನು ಎಲ್ಲಿ, ಅತ್ಯಧಿಕ ತೀಕ್ಷ್ಣತೆಯ ಸೈನಿಕರು ಎಲ್ಲಿ ? ಹೋಗಲಿ ಬಿಡು, ಶತ್ರುಗಳಿಗೆ ತಿಳಿಯುವ ಮುನ್ನವೆ ಕಟ್ಟಿದ ಕುದುರೆಯನ್ನು ಹೋಗಲು ಬಿಟ್ಟು ಮನೆಗೆ ಹೋಗುವ. ಅಜ್ಜನ ಆಣೆ, ದುಡುಕಿ ಹೋಗದಿರು' ಎಂದು ಗದರಿಸಿದರು. ಅವನು ಅವರುಗಳನ್ನು ಗದರಿ 'ಛೀ, ಛೀ, ಕಣ್ಣು ಕಟ್ಟನ ತಪಸ್ಸಿನ ವ್ಯವಸಾಯದ ಮುದಿಗೂಬೆಗಳ ಪಿಳ್ಳೆಗಳು (ಮರಿಗಳು) ಹೋ ಹೋಗಿರೆ, ನಾನು ಎಳೆಯ ಹುಡುಗನಂತೆ, ಶತ್ರು ಮಹಾಶೂರನಂತೆ, ನಾನು ಚಿಕ್ಕವನು ಆದರೇನು ; ಅಣ್ಣನು ಹಿರಿಯನು ಸಾಲುವುದಿಲ್ಲವೆ ?' ಎಂದು ಹೀನಯಿಸಲು, ಒಡನೆ ಅತ್ತ ಕುದುರೆಯ ಬೆಂಗಾವಲಿನ ಆಳುಗಳು ಕುದುರೆಯನ್ನು ಹುಡುಕುತ್ತ ಬರುತ್ತಲೆ ನೇರಎದುರಿನಲ್ಲೆ ಬಾಲಕರನ್ನೂ ಮರದ ಬುಡಕ್ಕೆ ಕಟ್ಟಿರುವ ಕುದುರೆಯನ್ನೂ ನೋಡಿ ಕಟ್ಟಿದವರು ಯಾರೆಂದು ಜೋರಿನಿಂದ ಅಬ್ಬರಿಸಿ ಮಾತಾಡಿದಾಗ, ಉಳಿದ ವಟುಗಳು ನಡುನಡುಗಿ 'ನಾವಲ್ಲ ನಾವಲ್ಲ ಈ ಹೊಸ ಹುಡುಗನಾಗಿರಬೇಕು ಬೇಡಬೇಡವೆಂದರೂ ಛಲದಿಂದ ಹಿಡಿದು ಕಟ್ಟಿ ಸುಮ್ಮನಿರುವನೆ'ಂದು ಅವನನ್ನು ತೋರಿಸಿ ತಾವು ಮೆಲ್ಲಮೆಲ್ಲನೆ ಹಿಂಜರಿದು ಮರದ ಮರೆಗೆ ಹೋದರು. ಹಾಗಾಗಲು ಆಳುಗಳು ಆ ಲವನನ್ನು ಮುತ್ತಿ 'ಹಳ್ಳಿಯ ದನ ಕಾಯುವವನಂತೆ ಕುದುರೆಯನ್ನು ಏನೆಂದು ಕಟ್ಟಿದೆಯಯ್ಯ, ಕುದುರೆಯನ್ನೂ ನಮ್ಮನ್ನೂ ನೋಡದೆ ನಾಡಿನ ರಾಜರೆಂದು ಶಂಕಿಸದೆ ಕದನಕ್ಕೆ ಅಂಜದೆ ಜೀವದ ಆಸೆಯಿಲ್ಲದೆ ಕಟ್ಟಿ ನಿಂತ ನಿನಗೆ ಕಣ್ಣು ಮೂರಿರಬೇಡವೆ ? ಭೂಮಿಯನ್ನೂ ಪಾತಾಳವನ್ನೂ ಆಕಾಶವನ್ನೂ ತಾನು ಹಾಗೆ ಒಂದು ಮಹಿಮೆಯಿಂದ ರಕ್ಷಿಸುವ ದೇವರು ಮಾಡುವ ಯಜ್ಞದ ಮನ್ನಣೆಯ ಪುಣ್ಯದ ಕುದುರೆ ಕಣಾ (ನೋಡು)! ಅಬ್ಬಾ ಏನು ಸೊಕ್ಕೊ? ಕೋಲಿನ ರುಚಿ ಬೇರೆ, ಹೊನ್ನ

ಹಿಳುಕಿನ (ಬಾಣದ ಹಿಂಭಾಗ) ದೊಡ್ಡ ಬಾಣದ ರುಚಿ ಬೇರೆ, ಹೋ ಹೋ ಕಾಡಿನ ಕೋತಿ ಮರಿ' ಎಂದು ಸೊಪ್ಪಿನಿಂದ ಹೊಡೆಯಲು ಹೋದರು. ಅಷ್ಟರಲ್ಲಿ ಪ್ರತಿಭಟಿಸಿ, ಒಂದು ಕುರಿಯ ಹಿಂಡನ್ನು ಪ್ರವೇಶಿಸುವ ಮರಿಸಿಂಹದ ಒಂದು ಆಟೋಪದಿಂದ ಕಾವಲಿನವರ ಪಡೆಗೆ ನುಗ್ಗಿ ಬಾಣದ ಮಳೆಯನ್ನು ಕರೆದು ಗಾಯಗೊಳಿಸಿ ಬೊಬ್ಬಿರಿದು 'ನೋಡಿದಿರಾ ಕಾಡಿನ ಕೋತಿಮರಿಯ ಕೈಚಳಕವನ್ನು ! ನನಗೆ ಹೋರಾಟ ಹೊಂದುವುದೆ ? ಸಾಕಾಗುವುದೇ ನಿಮಗೆ ಇಂದಿನ ಗೆಲವು?' ಎಂದು ಮತ್ತೆ ಮತ್ತೆ ಬಾಣಗಳನ್ನು ಬಿಟ್ಟು ಎಷ್ಟೊ ದೂರಕ್ಕೆ ಓಡಿಸಿದನು. ಬಳಿಕ ಅವರು ಆತನಿಗೂ ಆತನ ಒಂದು ಹೊಡೆತಕ್ಕೂ ಬೆನ್ನುಕೊಟ್ಟು ಹಾಗೂ ಹೀಗೂ ಓಡಿ ತಮ್ಮ ಒಡೆಯನಿಗೆ ಹೀಗಿದನ್ನು ಹೇಳಿದರು. ಆತನು (ಶತ್ರುಘ್ನನು) ಮಾತನ್ನು ನಿಲ್ಲಿಸಿ ಸುಮತಿಯನ್ನು 'ಯಾರದು ಈ ವನದಲ್ಲಿ ಅಂತಹ ಬಾಲಕನೇನು ಇರುವನೆ? ನೀನು ಕೇಳಿದ್ದುಂಟೆ, ಹೇಳು' ಎಂದು ಕೇಳಲು, ಒಡನೆ ಆತನು 'ಹೀಗೆ ಈ ವನ ಮುನಿಗಳ ಆಶ್ರಮವೆಂಬುದನ್ನು ಬಲ್ಲೆನು. ಬಾಲಕನು ಯಾರು ಎಂಬುದನ್ನು ಅರಿಯೆನು' ಎಂದನು. ಅದಕ್ಕೆ ಆ ಶತ್ರುಘ್ನನು 'ಯಾರಾದರೇನಾಯಿತು, ದಂಡೆತ್ತಿ ಹೋಗೋಣ' ಎಂದು ಸೈನ್ಯದೊಡನೆ ಧಾವಿಸಿಬಂದು, ಕುದುರೆಯನ್ನು ಅಣ್ಣನ ಹತ್ತಿರಕ್ಕೆ ತೆಗೆದುಕೊಂಡು ಹೋಗುವ ಲವನನ್ನು ತಡೆದು ತಾಗಿದನು ಆಗಲಿ ! ಅವನ ವೀರತನವನ್ನು ಕಂಡು ಶತ್ರುಘ್ನನು ತಾನೆ ರಥವನ್ನು ನೂಕಿ ಬಾಲಕನಿಗೆ ಎದುರಾಗಿ 'ಎಲೆ ಮಾವಿನ ಮಿಡಿಯ ತೋರದ (ಗಾತ್ರದ) ತೋಱದ (ಕಾಣಿಸದ, ಬಲು ಸಣ್ಣ ಗಾತ್ರದ) ಹಗ್ಗಳಿಕೆಯ ಬಾಲಕ, ಮೊಟ್ಟೆಯೊಳಗೆಯೇ ಕೆಳೆವ (ಯುದ್ಧ ಮಾಡುವ) ಒಂದು ಪರಾಕ್ರಮ ನಿನಗೆ ಎಲ್ಲಿಂದ ಉಂಟಾಯಿತು ? ನೀನು ಯಾರು ? ಕುದುರೆಯನ್ನು ಏನೆಂದು ತಿಳಿದು ಕಟ್ಟಿದೆಯೊ? ಮಹಾಸಾಮರ್ಥ್ಯವೇನು ನಿನಗೆ? ಸೊಗಸಾಯಿತು, ಬಿಡು ಬಿಡು ಮರುಳೆ, ಆಟ ಕೂಟದ ನಿನ್ನಂತಹವರಲ್ಲಿ ಹೋರಾಡುವ ಅಂದ ಕದನವಲ್ಲ' ಎಂದು ಗದರಿ ಕುದುರೆಯನ್ನು ಹಿಂತಿರುಗಿಸುವ ಒಂದು ಹಂಚಿಕೆಯಿಂದ ಕುದುರೆಯ ಹತ್ತಿರಕ್ಕೆ ಹೋದನು. ಲವನು ಕೋಪಗೊಂಡು ಬಾಣವನ್ನು ಬಿಟ್ಟು ಶತ್ರುವನ್ನು ನೋಯಿಸಿ ಕಡೆಯಲ್ಲಿ 'ಪ್ರಾಯ ಕೂಸಾದರೇನು ಈ ಸಾಯಕ (ಬಾಣ)ವು ಕೂಸಾಗುತ್ತದೆಯೆ ? ಜಗದಲ್ಲಿ ನೀವೇ ಬಲವುಳ್ಳವರು, ನಾವು ಚಲನೆಯನ್ನು ಪಡೆದ ಸೀರುಹುಳುಗಳಲ್ಲವೆ, ಅಲ್ಲವಿದ್ದರೆ ಏನು ಹೆಗ್ಗಳಿಕೆಯೋ ? ನಾವೇ ಜಗದ ಗಂಡರ ಗಂಡರು, ಉಳಿದವರು ಹೇಡಿಹಸುಗಳು, ಕುದುರೆ ಬಂದೊಡನೆ

ಮರೆಹೊಕ್ಕು (ಮರೆಯಾಗಿ) ಬಾಳಬೇಕು, ಕಪ್ಪವನ್ನು ಒಪ್ಪಿಸಬೇಕು, ಅಲ್ಲವೆ ? ನೀವು ಧನವಿಲ್ಲದವರಾಗಿದ್ದರೆ ಬಯಸಿದ (ಮಾಡುವ) ಯಜ್ಞಕ್ಕೆ ಹಣವನ್ನು ಕೊಡಿ ಎಂದು ಬೇಡಿದರಾಗದೆ ? ಒಳ್ಳೆಯದು ಒಳ್ಳೆಯದು, ನಿಮ್ಮಂತಹವರ ನಾಡಿನ ರಾಜರ ಒಂದು ಪರಾಕ್ರಮ' ಎಂದು ಹಂಗಿಸಿ ನುಡಿದನು. ಆ ಮಾತಿಗೆ ಶತ್ರುಘ್ನನು ಸ್ವಲ್ಪ ಕೋಪಗೊಂಡು ಮತ್ತೆ ಒಂದು ಬಾಣವನ್ನು ಬಿಡಲು, ಲವನು ಒಡನೆ ಪ್ರತಿಭಟಿಸಿ ಅದನ್ನು ಮುರಿದು ತಾನು ಐದು ಹರಿತ ಬಾಣಗಳಿಂದ ಶತ್ರುಘ್ನನ ರಥವನ್ನೂ ಬಿಲ್ಲಿನ ಹೆದೆಯನ್ನೂ (ದಾರವನ್ನೂ) ಕತ್ತರಿಸಿ ಹೂಂಕರಿಸಿದನು. ಮತ್ತೆ ಶತ್ರುಘ್ನನು ಹೊಸ ದೊಡ್ಡ ರಥವನ್ನೂ ಹೊಸ ಬಿಲ್ಲನ್ನೂ ತೆಗೆದುಕೊಂಡು ಬಾಲಕನನ್ನು ಬಾಣಗಳಿಂದ ಮುಸುಕಿದ ಆ ಬಳಿಕ ಬಾಣಗಳ ತೀಕ್ಷ್ಣತೆಗೆ ಪ್ರತಾಪಕಟ್ಟು ಬಾಯಾರಿ ಕಷ್ಟ ಪಟ್ಟು ಮೂರ್ಛೆಹೋದ ಲವನ ಒಂದು ಗಂಡಗರ್ವಕ್ಕೆ ಮೆಚ್ಚಿ ಕೊಂಡಾಡಿ ಪ್ರೀತಿ ಹೆಚ್ಚಲು ತಾನೇ ತನ್ನ ತೋಳಲ್ಲಿ ಎತ್ತಿ ರಥದಲ್ಲಿಟ್ಟು ಕುದುರೆಯನ್ನು ಬರಮಾಡಿಕೊಂಡು ನಗರಕ್ಕೆ ಹೋಗ ಹೊರಟನು. ಉಳಿದ ಮಕ್ಕಳು ಹೀಗಿದನ್ನು ಕಂಡು ಬೆದರಿ ಅತಿಶೀಘ್ರದಿಂದ ತಮ್ಮ ಆಶ್ರಮಕ್ಕೆ ಬಂದು, ನಿಟ್ಟುಸಿರುಬಿಡುತ್ತ ಇಷ್ಟು ಹೊತ್ತೂ ಬಾರದೆ ನಿಂತ ಮಕ್ಕಳ ಬರುವನ್ನೆ ಹಾರೈಸುತ್ತ ಇದ್ದ ಸೀತೆಯನ್ನು ಕಂಡು, 'ಅಮ್ಮಾ, ಹೋಗು ಹೋಗು, ಈಗಲೆ, ಲವನನ್ನು, ಜಂಬದ ರಾಜರ ಕುದುರೆಯನ್ನು ತೆಗೆದುಕೊಂಡನು ಎಂಬ ಒಂದು ಕಾರಣದಿಂದ ಬೇಡಬೇಡವೆಂದರೂ ಕೇಳದೆ ಶತ್ರುಗಳು ಹಿಡಿದು ಕೊಂಡು ಹೋದರು, ಅಯ್ಯೋ, ಕುಶನು ಎಲ್ಲಿ, ಮುತ್ತಜ್ಜನೇನು ಬರಲಿಲ್ಲವೇ ಇನ್ನು, ಕೆಟ್ಟಿತು ಕೆಲಸ, ನಡೆನಡೆ ಹೋಗೋಣ, ತಡಮಾಡದಿರಿ' ಎಂದು ತಾವೂ ಕೈಯಲ್ಲಿ ದಂಡ ತೆಗೆದುಕೊಂಡು ಹೊರಹೊರಟರು.

ಹೀಗೆ ಆಡಿದ ಮಕ್ಕಳ ಮಾತನ್ನು ಕೇಳಿ ಸೀತೆ ಮನಮರುಗಿ ಹಲುಬಿ ಹಳಯಿಸು (ಪ್ರಲಾಪಿಸು)ತ್ತಿರುವ ಆ ವೇಳೆಗೆ ಶತ್ರುವೆಂಬ ಆನೆಗೆ ಅಂಕುಶ ದಂತಿರುವ ಕುಶನು ಕುಶ (ದರ್ಭೆ) ಸಮಿತ್ತು (ಯಾಗಕ್ಕೆ ಬೇಕಾಗುವ ವಿವಿಧ ಮರಗಳ ಚಕ್ಕೆಗಳು) ಹಣ್ಣು ಹೂವುಗಳನ್ನು ಹೊತ್ತು ಥಕ್ಕನೆ ಬಂದು ಹೊರೆ ಯನ್ನು ಇಳಿಸಿ ಮರುಗುವ ತಾಯಿಯ ಪಕ್ಕದಲ್ಲಿ ನಿಂತು 'ನನ್ನ ಅಮ್ಮ, ಹೀಗೇನು ಅಳಲು ಯಾರಿಂದ ಆಯಿತು ? ನಿನಗೆ ಏನು ಜಡ,' ಎಂದು ಇನ್ನೂ ಎಷ್ಟೋ ಹತ್ತಿರಕ್ಕೆ ಹೋಗಿ ಅವಳ ಕೊರಳನ್ನು ಗಟ್ಟಿಯಾಗಿ ಅಪ್ಪಿಯೂ ಗಲ್ಲವನ್ನು ಅಲುಗಿಸಿಯೂ ಸುರಿಯುವ ಕಂಬನಿಯನ್ನು ಒರೆಸಿ ಮಾತಾಡಿಸುವ

ಬಾಲಕನಿಗೆ ಉತ್ತರ ಕೊಡಲು ಆಗದಿದ್ದಾಗ ಹತ್ತಿರದ ಮಕ್ಕಳು ಶತ್ರುರಾಜರ ಯಜ್ಞದ ಕುದುರೆಯನ್ನು ಬಂಧಿಸಿ ಹಿಡಿದುದನ್ನೂ ಮತ್ತೆ ಕಾದಾಡಿ ಸೆರೆಗೆ ಒಳಗಾದುದನ್ನೂ ಕುಶನಿಗೆ ವಿವರಿಸಿದರು. ಹೀಗೆಂದ ವಟುಗಳನ್ನು ಗದರಿ ಬೆದರಿಸಿ ಹೋಗುವಂತೆ ಮಾಡಿ ತಾಯಿಗೆ 'ನನ್ನಾಣೆ ಮರುಗದಿರವ್ವ, ಯಮ ನಾಗಿರಲಿ, ಉರಿಗಣ್ಣಿನ ನಿಲಯವಾದ ರುದ್ರನಾಗಿರಲಿ, ಬೆಟ್ಟನಲ್ಲಿ ತಿಟ್ಟನ್ನೆತ್ತಿದ (ಬೆರಳಿನಲ್ಲಿ ಬೆಟ್ಟವನ್ನೆತ್ತಿದ)ಮಾಧವನಾಗಿರಲಿ ನಮ್ಮ ಲವನನ್ನು ಎತ್ತಿಕೊಂಡು ಹೋಗಿರುವವನನ್ನು ಸೊಕ್ಕು ಸುಕ್ಕು (ಕುಗ್ಗು)ವವರೆಗೂ ಬಡಿದು ಹಿಡಿದು ಜೀವಸಹಿತ ನಿನ್ನ ಪಾದಕ್ಕೆ ಒಪ್ಪಿಸದಿದ್ದರೆ (ನಾನು) ನಿನ್ನ ಮುದ್ದಿನ ಕಂದನೆ! ನೋಡು ನನ್ನ ಪರಾಕ್ರಮವನ್ನು!' ಎಂದು ಹೇಳಿ ಪ್ರತಿಜ್ಞೆಗೈದು, ತಾಯಿ ಯನ್ನು ಸಮಾಧಾನಪಡಿಸಿ ಮೊದಲಿಗೆ ಮುನಿ ತನಗೆ ಕೊಟ್ಟಿದ್ದ ಕವಚವನ್ನು ಶಿರಸ್ತ್ರಾಣವನ್ನು ಬಾಣವನ್ನು ಬತ್ತಳಿಕೆಯನ್ನು ಬಿಲ್ಲನ್ನು ಎಲ್ಲವನ್ನೂ ತೆಗೆದುಕೊಂಡು ತಾಯಿಗೆ ನಮಸ್ಕರಿಸಿ ಆಶೀರ್ವಾದ ಪಡೆದು ಅಂದಿನ ಷಣ್ಮುಖನ ಒಂದು ಪರಾಕ್ರಮದಿಂದ ಬೆನ್ನು ಹತ್ತಿ ನಡೆದು, ತಡೆದು ಶತ್ರು ಸೈನ್ಯವನ್ನು ಎದುರಿಸಿ—'ಎಲೆಲೆ ಬಣಗು (ಹೇಡಿ)ಗಳೇ, ಯುದ್ಧದಲ್ಲಿ ದೇಹ ಆಯಾಸಗೊಂಡ, ಸಗಿಸಾಟಿಯಲ್ಲದ ಬಾಲಕನೊಬ್ಬನನ್ನು ಬಳ್ಳುಪಿಳ್ಳೆ (ನರಿಯ ಮರಿ)ಯನ್ನು ಹೇಗೊ ಹಾಗೆ ತೆಗೆದುಕೊಂಡು ಹೋಗುವುದು ಇದು ಯಾವ ನ್ಯಾಯ? ಯುದ್ಧ ವೀರರಾದ ನಿಮ್ಮನ್ನು ಗೆಲುವಿನ ಹೆಣ್ಣು ಹೇಗೆ ಒಲಿಯು ವಳು? ಬಲವಿದ್ದರೆ ನನ್ನೊಡನೆ ತೋರಿಸಿ' ಎಂದು ಪ್ರಬಲ ಪ್ರಕಾಶದ ಹೊಸ ದಾಗಿ ಮಸೆದ ಬಾಣವನ್ನು ತೆಗೆದು ಬಿಟ್ಟು ಸೈನ್ಯದ ಮುಂಭಾಗವನ್ನು ಘಾತಿ ಸಿದ ಬಳಿಕ, ದಿಕ್ಕುಗೆಟ್ಟ ತಮ್ಮ ದಳವನ್ನು ಕೈಬೀಸಿ ಸಂತೈಸಿ ಪುಷ್ಕಲನು ಬಂದ ಹೋರಾಟಗಾರನಿಗೆ ಎದುರಾಗಿ 'ನೀನು ಅವನಿಗೆ ಸೋದರನಾಗಿರಬೇಕು, ಅದರಿಂದ ದುಡುಕಿದರೆ ನಿನ್ನನ್ನೂ ಸೆರೆಹಿಡಿದು ಕೊಂಡೊಯ್ಯುವ ನಜ್ಜುಗುಜ್ಜು ಮಾಡದೆ ಬಿಡುವೆನೆ, ನೋಡು.' ಎಂದು ಹೊನ್ನಿನ ಗರಿಯ ಹರಿತ ಬಾಣ ಗಳನ್ನು, ಗಟ್ಟಿಯಾಗಿ ಕೂಗುತ್ತ ಬಿಟ್ಟನು. ಹಾಗಿರಲು ಕುಶನು ಗುರಿಗೊಂಡು ಬರುವ ಬಾಣವನ್ನು ಕಾಣದಂತೆ ಕತ್ತರಿಸಿ ಪ್ರತಿಬಾಣವನ್ನು ಬಿಟ್ಟು 'ಈಗಲೇ ನಿಮ್ಮನ್ನು ಉಗಿದು ಬಗಿದು ದಿಕ್ಕುಗಳಿಗೆ ಬಲಿಕೊಟ್ಟು ನನ್ನ ಚಿನ್ನ ತಮ್ಮನನ್ನು ಪಡೆಯುತ್ತೇನೆ' ಎಂದು ನೋಯಿಸಿದನು. ಹೀಗಿರಲು ಪುಷ್ಕಲನು ಬಾಣದ ಪೆಟ್ಟಿಗೆ ಪ್ರತಾಪ ಕುಂದಿ ಬಾಯಾರಿ ಚೀರಿ ನೆಲಕ್ಕೆ ಉರುಳಿ ಸ್ವಲ್ಪಹೊತ್ತು ಮೂರ್ಛೆಯಿಂದ ಎಚ್ಚರಗೊಳ್ಳದಿರಲು ನೋಡಿ ಲವಣಾಂತಕನು (ಶತ್ರುಘ್ನನು)

ಅಂತಕನಂತೆ (ಯಮನಂತೆ) ಕನಲಿ ರಥವನ್ನು ಏರಿ ಬಂದು ನೇರ ಎದುರಿನ ಬಿಲ್ಲುಗಾರನನ್ನು ಕಂಡು 'ಅಬ್ಬಾ ನೋಡಿದಿರಾ ನೀರಿನ ಹಾವು ಹುತ್ತದ ಹಾವನ್ನು ನುಂಗಲು ಬಯಸುವ ಒಂದು ಅಂದವನ್ನು !' ಎಂದು ಬೆನ್ನು ಬೆನ್ನಿಗೆ (ಪುಂಖಾನುಪುಂಖವಾಗಿ) ಐದು ಬಾಣಗಳನ್ನು ಬಿಟ್ಟರೆ ಆ ಬಾಣಗಳು ಹೂಬಾಣಗಳಂತಾದವು. ಆಗ ಕುಶನು ಶತ್ರುವಿನ ಬಾಣಗಳನ್ನು ನಾಶಪಡಿಸಿ ಮತ್ತೆ ಎರಡರಿಂದ (ಎರಡು ಬಾಣಗಳಿಂದ) (ಶತ್ರುಘ್ನನ) ಕೈಯ ಕೋದಂಡ ವನ್ನು ಮುರಿದನು, ರಥವನ್ನೂ ಕುದುರೆಯನ್ನೂ ಕಡಿದು ರಥಿಯನ್ನೂ (ಶತ್ರುಘ್ನನನ್ನೂ) ಸಾರಥಿಯನ್ನೂ ಚೆನ್ನಾಗಿ ಸೋಲಿಸಿದನು. ಹಾಗಾಗಲು (ಶತ್ರುಘ್ನನು) ನೆಲಕ್ಕೆ ಇಳಿದು ಬಂದು ಗದೆಯನ್ನು ತೆಗೆದುಕೊಂಡು ಹೊಡೆ ಯಲು ಒಡನೆ ಕುಶನು ಹೇಗೋ ದೇಹವನ್ನು ಮುದುರಿಕೊಂಡು ಪುಟನೆಗೆದು ತನ್ನ ಒಂದು ಬಾಣದಿಂದ ಶತ್ರುಘ್ನನನ್ನು ಇರಿದನು. ಆಗ ಏನು ಹೇಳಲಿ ! ಪರ್ವತದ ಮಧ್ಯದ (ದೊಡ್ಡ) ಮರವು ಬಿರುಗಾಳಿಯ ಹೊಡೆತಕ್ಕೆ ಬೇರು ತುಂಡಾಗಿ ಬೀಳುವಂತೆ ದಿಮ್ಮನೆ (ತಟ್ಟನೆ) ಗದೆಯೊಡನೆ ಭೂಮಿಗೆ ಬಿದ್ದನು. ಮೊರೆಯಿಟ್ಟಿತು ಸೇನೆ. ಮುಂದೇನು ಮಾಡಬೇಕೆಂದು ತಿಳಿಯದಾಯಿತು, ಸೈನಿಕರ ಒಂದು ಗುಂಪು. ಗಜಬಜಿಸಿದರು ಮಹಾರಥಿಗಳು. ಹೀಗಾಗಲು ಒಡನೆ ಎಲ್ಲ ಕಡೆಯ ಸುಭುಜ (ಸುಬಾಹು), ಲಕ್ಷ್ಮೀನಿಧಿ (ಸೀತೆಯ ಸೋದರ) ಮುಂತಾದ ವೀರರೂ ಸುಗ್ರೀವ ಸುಷೇಣರೇ ಮೊದಲಾದ ಕಪಿನಾಯಕರೂ ಎರಡು ತಂಡವಾಗಿ ಸುತ್ತುಗಟ್ಟಿ ಕಾದಾಡಲು ಒಬ್ಬನೇ ಬಾಲಕನು (ಕುಶನು) ಅಷ್ಟು ಜನರನ್ನೂ, ಮರಿಸಿಂಹವು ಆನೆಗಳ ಹಿಂಡನ್ನು ಹೇಗೋ ಹಾಗೆ ಮಹಾ ಸಾಹಸ (ರೋಷ)ದಿಂದ ದಿಕ್ಕುಗೆಡಿಸಿದನು, ಕೆಲವರನ್ನು ಕಡಿದನು, ಕೆಲವರನ್ನು ಬಡಿದನು, ಕೆಲವರನ್ನು ಕುರಿಯನ್ನು ಕೊಚ್ಚಿದಂತೆ ಕತ್ತರಿಸಿದನು, ಕೆಲವರನ್ನು ಬಿಟ್ಟುಬಿಟ್ಟನು ಯುದ್ಧದಲ್ಲಿ !

ಆ ವೇಳೆಗೆ ಮೂರ್ಛೆಹೋದ ಲವನು ಸ್ವಲ್ಪ ಹೊತ್ತಿಗೇನೆ ಬೇಗ ಎಚ್ಚತ್ತು ತನ್ನ ಬಂಧನಕ್ಕೆ ಆಶ್ಚರ್ಯಪಟ್ಟು ಎಲ್ಲ ಕಡೆ ನೋಡಿ ವೈರಿಸೇನೆ ಬಟ್ಟ ಬಯಲಾಗಿರುವುದನ್ನು ಚೆನ್ನಾಗಿ ಗಮನಿಸಿ ಮುಂಭಾಗದಲ್ಲಿ ಸತ್ತು ಉಳಿದ ಸೈನಿಕರೊಡನೆ ಹೋರಾಡುವ ಅಣ್ಣನನ್ನು ಕಂಡು ತಾನೂ ಆಯುಧವನ್ನು ತೆಗೆದುಕೊಂಡು ಆತನನ್ನು (ಕುಶನನ್ನು) ಬೆಂಕಿಯನ್ನು ಗಾಳಿಯು ಹೇಗೊ ಹಾಗೆ ಕೂಡಿಕೊಂಡನು. ಸತ್ತು ಉಳಿದವರಲ್ಲಿಯೂ ಈಗ ಹಲವರು ಜೀವ ಕಳೆದುಕೊಂಡವರಾಗಲು (ಗತಾಸುಗಳಾಗಲು) ನೋಡಿ ಕಂಠಗತಾಸುಗಳು

(ಪ್ರಾಣ ಕಂಠಕ್ಕೆ ಬಂದವರು) ಹೇಗೊ ಯುದ್ಧಕ್ಕೆ ಬೆನ್ನುಗೊಟ್ಟು ಓಡಿ ಅತಿ ವೇಗದಿಂದ ನಗರಕ್ಕೆ ಬಂದು ರಾಘವನಿಗೆ ಈ ವಿವರವನ್ನು ಅರಿಕೆಮಾಡಿ ಕೊಂಡರು. ತನ್ನವರ ಸೋಲಿಗೆ ಮನಮರುಗಿಯೂ, ದ್ವೇಷಿಸಿದ ಮಕ್ಕಳಿಬ್ಬರ ಏಳಿಗೆ ಪಡೆದ ಶಕ್ತಿಗೆ ಬೆರಗಾಗಿಯೂ ದೀಕ್ಷೆಯಲ್ಲಿದ್ದ ರಾಘವನು ತಮ್ಮ ಲಕ್ಷ್ಮಣನನ್ನೂ ಕೂಡಿಕೊಂಡು ತಾನೆ ಹೊರಟನು. ಹೀಗೆ ತುಂಬ ವೇಗದಿಂದ ಸೈನ್ಯದೊಡನೆ ನಡೆದು ಕಾಡನ್ನು ಎಲ್ಲ ಕಡೆಯೂ ಮುತ್ತಿ ರಾಮಲಕ್ಷ್ಮಣರು ಒಂದೊಂದು ದಿಕ್ಕಿನಲ್ಲಿದ್ದು ಸೈನ್ಯವನ್ನು ಮುಂದೆ ಮಾಡಿ ಮಕ್ಕಳನ್ನು ಹಿಡಿಯಲು ಬರುತ್ತಿದ್ದಾಗ ಆ ಸೈನ್ಯವು ಗಾಳಿಸೈನ್ಯದ ಮುಂದಿನ ಮೋಡದ ಸೈನ್ಯವಾಯಿತು, ಬಾಲಕರ ಎದುರಿನಲ್ಲಿ !

ಹೀಗೆ ಶಂಕೆಯಿಲ್ಲದೆ ಬಿಂಕದಿಂದ ಸಮೀಪಕ್ಕೆ ಬರುವ ಮಕ್ಕಳ ಬಲಕ್ಕೂ ಛಲಕ್ಕೂ ಅತಿ ಆಶ್ಚರ್‍ಯಗೊಂಡು ರಾಘವನು ಲಕ್ಷ್ಮಣನಿಗೆ 'ಎಲೆ ತಮ್ಮ ನಾಡಿನ ಒಡೆಯರ ಮಕ್ಕಳಿಗೂ ಈ ಬಗೆಯ ಪೆಂಪೂ (ಹೆಮ್ಮೆಯೂ) ಕೆಂಪೂ (ಕೆಚ್ಚೂ) ನೋಡಿದರೆ ಅಸಾಧ್ಯವಷ್ಟೆ! ಪಾಡುಗೆಟ್ಟ ಕಾಡಿನ ತಬ್ಬಲಿಗಳಿಗೆ ಇಷ್ಟೊಂದು ವೀರತ್ವವು ಎಲ್ಲಿಯದು ? ಇವರಲ್ಲಿ ನನಗೆ ಏನೊ ಮಮತೆ ಹುಟ್ಟುತ್ತಿದೆ ; ಮುನಿಸು ಬರುತ್ತಿಲ್ಲ. ಯಾರು ಎಂಬುದನ್ನು ವಿಚಾರಿಸಿ ಹೇಳಯ್ಯ' ಎಂದು ಹೇಳಲು, ಲಕ್ಷ್ಮಣನು ರಥವನ್ನು ಏರಿ ಮುಂದಕ್ಕೆ ಹೋಗಿ ಬಿಲ್ಲಿನ ತುದಿಗೆ ಹೆದೆ (ಬಿಲ್ಲಿನ ಹಗ್ಗ)ಯನ್ನು ಜೋಡಿಸುತ್ತ ಬಾಣವನ್ನು ಹೊಂದಿಸುತ್ತ ನುಗ್ಗಿ ಬರುವ ಬಾಲಕರನ್ನು ತಡೆದು, 'ಎಲೆ ಮಕ್ಕಳಿರ, ನೀವು ಯಾರು ? ಕುದುರೆಯನ್ನು ಕಟ್ಟಿದಿರಿ ಏಕೆ ? ನಮ್ಮವರನ್ನು ಎದುರಿಸಿದಿರಿ ಏಕೆ ? ಹೋಗುವಿರೆಲ್ಲಿಗೆ ? ತಡೆಯಿರಿ' ಎಂದು ಬಿಲ್ಲನ್ನು ಏರಿಸಿದನು. ಆಗ ಲವನು 'ಎಲೆಲೆ ಬಲುಬಿರುಸಿನ ರಾಜನೆ, ಯುದ್ಧಕ್ಕೆ ಒಡ್ಡಿ ಬಂದು ನೀವು ಯಾರು ಎಂದು ಕೇಳುವುದು ಇದು ಯಾವ ನಡತೆ ? ಸಾಧ್ಯವಾದರೆ ಕಾದು (ಯುದ್ಧಮಾಡು), ಮೋದು (ಹೊಡಿ), ಆಗದಿದ್ದರೆ ಪಲಾಯನವನ್ನು ಹೊಂದು (ಮಾಡು). ಆದರೂ ನೀನು ಕೇಳಿದ್ದರಿಂದ ಹೇಳುವೆನು. ನಮ್ಮನ್ನು ಅಮ್ಮ ಹೆತ್ತಳು, ಅಜ್ಜ ಸಾಕಿದನು. ಛಲದಿಂದ ನಿಮ್ಮ ಕುದುರೆಯನ್ನು ಕಟ್ಟಿದೆವು. ಎದುರಿಸಿದ್ದರಿಂದ ಎದುರಿಸಿದೆವು. ಮೀಸಲಿರುವ ನಿಮ್ಮ ಸೈನಿಕರ ಸಮ್ಮುಖಕ್ಕೆ ಹೋಗುವೆವು. ತಡೆದರೆ ತಡೆಯುವೆವು' ಎಂದು ಪ್ರತ್ಯುತ್ತರ ಕೊಟ್ಟನು. ಲಕ್ಷ್ಮಣನು 'ಕೊಬ್ಬಿದ ಕೊಂಕುನುಡಿಗೆ ಇದು ಹೊತ್ತಲ್ಲ, ನೀವು ಎಳೆಯರು, ಗೆದ್ದ ಗೆಲುವು ಸೋತ ಸೋಲು ವೀರರಿಗೆ ಬರುವುದಿಲ್ಲ. ನಮಗೆ

ಒಳ್ಳೆಯ ಮಾತನ್ನು ಕೇಳಿ, ಯುದ್ಧವನ್ನು, ಕುದುರೆಯನ್ನು, ಮಹಾಫಲವನ್ನು ಬಿಟ್ಟುಹೋಗಿ. ಈ ಮಾತು ನಿಮಗೆ ಸೊಗಸಾಗದೆ ಹೋದರೆ ನಿಮ್ಮ ದೇಹವನ್ನು ಬಿಟ್ಟು ಹೋಗುವಿರಿ. ಇದು ನಿಶ್ಚಯ' ಎಂದು ಬತ್ತಳಿಕೆಯಿಂದ ಬಾಣವನ್ನು ಎತ್ತಿ ಬಿಲ್ಲಿಗೆ ಹೂಡಿದನು. ಆದಕ್ಕೆ ಆ ಲವನು ಲವವೂ (ಸ್ವಲ್ಪವೂ) ಬೆಚ್ಚದೆ 'ಎಲೆ ಹೀನಯಿಸುವೆಯೇನು? ನಾವು ಎಳೆಯರಾದರೆ ಏನು, ಬಾಣಕ್ಕೆ ಒಂದು ಎಳೆಯತನವಿದೆಯೆ ?' ಎಂದು ಎಷ್ಟೆಷ್ಟನ್ನು (ಬಾಣಗಳನ್ನು) ಲಕ್ಷ್ಮಣನು ಪ್ರಯೋಗಿಸಿದನೊ ಅಷ್ಟಷ್ಟನ್ನೂ ಕೊಚ್ಚಿ ಕತ್ತರಿಸಿದನು, ಲವನು. ಅತ್ತ ಮತ್ತೊಂದು ದಿಕ್ಕಿನಲ್ಲಿ ವೇಗದಿಂದ ಹೋಗುವ ಕುಶನನ್ನು ತಡೆದು ರಾಘವನು 'ಎಲೆ ಹಸುಳೆ, ನೀನು ಯಾರು ? ಕುದುರೆಯನ್ನು ಏನೆಂದು ಕಟ್ಟಿದೆಯಯ್ಯ ? ನನ್ನಾಣೆ, ನಿನ್ನಲ್ಲಿ ನನಗೆ ಅಕ್ಕರೆಯುಂಟು. ನೀನು ಮಾಡಿದ ದುಷ್ಟತನವನ್ನೂ ಕೆಟ್ಟ ಕಾರ್ಯವನ್ನೂ ಮರೆತೆನು. ಇದೊ (ಮಾತು) ಕೈಗೆದುಕೊ, ನಿನ್ನನ್ನು ಕಾಪಾಡುವೆನು. ನಿಮಗೆ ಇಷ್ಟೊಂದು ಬಲ ಹೇಗೆ ಉಂಟಾಯಿತು ? ಬಿಲ್ಲಿನ ಗುರು ಯಾರು? ಹುಟ್ಟಿದಿರೆಲ್ಲಿ ? ಹೇಳು' ಎಂದು ಕೇಳಲು, ಕುಶನು 'ಕೇಳು ಎಲೆ ರಾಜನೆ, ನಿನ್ನ ಕುದುರೆಗಿದುರೆಯನ್ನು ನಾನು ಕಟ್ಟಲಿಲ್ಲ. ಚಿಕ್ಕವನು ತಿಳಿಯದೆ ಕಟ್ಟಿರಬೇಕು. ಮತ್ತೆ ನನ್ನಲ್ಲಿ ಯಾವುದೂ ದುಷ್ಟತನ ಬರುವುದಿಲ್ಲ. ನಿಮ್ಮವರು ಆತನನ್ನು ಬರಿದೆ ನೋಯಿಸಲು ಒಡನೆ ನನಗೆ ನಿಮ್ಮ ಮೇಲೆ ಮುನಿಸು ಉಂಟಾಯಿತು. ಈಗ ನಿಮ್ಮನ್ನು ಎದುರಿಸುವಂತಾದೆನು. ನಮಗೆ ಆಜ್ಜನು ಬಿಲ್ಲಿನ ಓಜನು (ಗುರು), ಕಾಡಿನಲ್ಲೆ ಹುಟ್ಟಿದೆವು, ಅಮ್ಮನ ಹರಕೆ, ಮುತ್ತಜ್ಜನ ಕಾವಲು, ಗೆಳೆಯರ ನಲುಮೆ, ಹಿರಿಯರ ಒಲುಮೆ, ನಮಗೆ ಈ ಬಗೆಯ ಬಲವನ್ನು ಉಂಟುಮಾಡಿತು' ಎಂದು ಆಡಿದನು. ಆ ಮಾತಿಗೆ ರಾಘವನು ತಲೆತೂಗಿ 'ಕಿರಿ ಕೂಸುಗಳು ನಿಮಗೆ ನಮಗೆ ಯುದ್ಧ ಒಪ್ಪುವುದೆ? ಬರಿದೆ ಕಾದಾಡಿ ಬಳಲಿದಿರಿ. ಕಟ್ಟಿರುವ ಕುದುರೆಯನ್ನು ಬಿಟ್ಟು ಸುಮ್ಮನೆ ಹೋಗಿರಿ ಹೋಗಿರಿ' ಎಂದು ಹೇಳಿದ ಬಳಿಕ, ಕುಶನು 'ನಿನ್ನ ಈ ಕೊಬ್ಬಿನ ನುಡಿ ಹಾಗಿರಲಿ, ಕಟ್ಟಿರುವ ಕುದುರೆಯನ್ನು ಬಿಚ್ಚಿಕೊಟ್ಟು ಬಾಳುವ ಮಾತು ಉಂಟೆ ? ಅಮ್ಮ ರೋಡಿಸುವುದಿಲ್ಲವೆ ? ಅಜ್ಜ ನಿಂದಿಸುವುದಿಲ್ಲವೆ ? ನನ್ನ ಛಲಕ್ಕೂ ತೋಳಿನ ಬಲಕ್ಕೂ ಕುಂದಾಗುವುದಿಲ್ಲವೆ ? ನನ್ನ ಮತ್ತು ನನ್ನ ಹೊನ್ನಿನ ಗರಿಯಿರುವ ಬಾಣದ ಬಾಲ್ಯತನವನ್ನು ನೋಡು' ಎಂದು ಅಬ್ಬರಿಸಿ ಮಾತಾಡಿ ರಾಘವನ ದೇಹವನ್ನು ಬಾಣಪ್ರಯೋಗದಿಂದ ಚಿಗುರಿದ ಅಶೋಕ ಮರವನ್ನಾಗಿ (ರಕ್ತಮಯವನ್ನಾಗಿ) ಮಾಡಿದನು. ಎಷ್ಟೋ ಕೋಪದಿಂದ

ಬಿಲ್ಲನ್ನು ಬಲವಾಗಿ ಹಿಡಿದು ಪ್ರಸಿದ್ಧವಾದ ಬಾಣವನ್ನು ಜೋಡಿಸಿದನು. ಆ ಬಾಣವು ಬಿಡದೆ ಹೋಗಿ ಗುರಿ ತಪ್ಪಿ ಬಂದಿತು. ಏನೊಂದು ಆಶ್ಚರ್ಯವೋ, ಯುದ್ಧವೀರ ರಾಮನಿಗೆ ಇಂದು ಮಕ್ಕಳಾಟ ಕೊಟದ ಹಸುಳೆಗಳ ದೆಸೆಯಿಂದ ಸೋಲಾಯಿತಲ್ಲ! ಲಕ್ಷ್ಮಣನ ಅಸಿ (ಕತ್ತಿ) ದಸಿ (ಗೂಟ)ಯಾಯಿತಲ್ಲ! ರಾಮಬಾಣಕ್ಕೂ ಮಣಿಯಲಿಲ್ಲವಲ್ಲ!

ನನ್ನ ಕಣ್ಣೆ ಹೆಣ್ಣೆ, ಹೀಗೆ ಕುಶಲವರು, ಬಾಂಬಟ್ಟೆಗರು (ಆಕಾಶವೇ ದಾರಿಯಾಗಿರುವವರು, ದೇವತೆಗಳು) ಒಟ್ಟಾಗಿ ಸೇರಿ ಆಶ್ಚರ್ಯಪಡುವಂತೆ, ರಾಮಲಕ್ಷ್ಮಣರೊಡನೆ ಯುದ್ಧಮಾಡುತ್ತಿರಲು, ಒಡನೆ ಆ ವೇಳೆಗೆ ಅತ್ತ ವರುಣಲೋಕಕ್ಕೆ ಹೋದ ವಾಲ್ಮೀಕಿ ಬಾಲಕರ ಸ್ಥಿತಿಯನ್ನು ನಾರದನ ಕಡೆಯಿಂದ ತಿಳಿದು ತಡಮಾಡದೆ ತನ್ನ ಆಶ್ರಮಕ್ಕೆ ಬರಲು, ಅಲ್ಲಿ ಮಕ್ಕಳ ದಾರಿಯನ್ನೇ ಎದುರುನೋಡುತ್ತ ಹಂಬಲಿಸಿ ಗಾಬರಿಗೊಳ್ಳುವ ಸೀತೆ ಮುನಿಯನ್ನು ಕಂಡು ನಮಸ್ಕರಿಸಿ, ಲವನನ್ನು ಶತ್ರುಗಳು ಕುದುರೆಯ ನೆಪದಿಂದ ಸೆರೆಗೊಂಡುದನ್ನೂ, ಮತ್ತೆ ಆತನನ್ನು ಹಿಂತಿರುಗಿಸಲೆಂದು ಕುಶನು ಹಿಂಬಾಲಿಸಿದುದನ್ನೂ, ಇನ್ನೂ ಬಾರದೆ ತಡಮಾಡಿರುವುದನ್ನೂ ಬಿನ್ನಯಿಸಿದಳು. ಅದಕ್ಕೆ ಆ ಮುನಿಪನು ಸೀತೆಯನ್ನು ಸಮಾಧಾನಿಸಿ ಮಕ್ಕಳನ್ನು ಕೂಡಿಕೊಂಡು ಬರುವೆನೆಂದು ಹೊರಟು ಬರುತ್ತಿದ್ದನು.

ಹೀಗೆ ಬರುಬರುತ್ತ ಇರಲು, ಒಡನೆ ಎಷ್ಟೋ ದೂರದಲ್ಲಿ ರಣ (ಯುದ್ಧದ) ವಿಕ್ರಮಮೂರ್ತಿಗಳಂತೆ ಕೋಡದೆ (ಹೆದರದೆ) ಬಾಡದೆ ಸಾಹಸ ಮಲ್ಲರೊಡನೆ ಹೋರಾಡುವ ಕುಶಲವರನ್ನು ಕಂಡು ತಲೆ ತೂಗಿ ಹತ್ತಿರಕ್ಕೆ ಹೋಗಿ 'ಓ ಓ ತಡೆತಡೆಯಿರಿ' ಎಂದು ನುಡಿದು ತಡೆದು ಮಕ್ಕಳನ್ನು ಆಲಿಂಗಿಸಿ ರಾಮಲಕ್ಷ್ಮಣರಿಗೆ ಕಾಣಿಸಿಕೊಂಡನು.

ಮುದ್ದಣ—(ಮನೋರಮೆಗೆ) ಏನು ಎಲೆ, ಕಡೆಗೆ ಹುಂಗುಟ್ಟದೆ ಮಹಾಮೌನದಿಂದ ಇದ್ದೀಯೆ?

ಮನೋರಮೆ—ಮಕ್ಕಳ ಕೊನೆಯಿಲ್ಲದ ಸಾಹಸಕ್ಕೆ ಬೆರಗುಪಟ್ಟು ಇಷ್ಟು ಹೊತ್ತೂ ಸುಮ್ಮನಿದ್ದೆನು

ಮುದ್ದಣ—ನೀನೊಬ್ಬಳೇ ಅಲ್ಲ, ಆಕಾಶದಲ್ಲಿ ದೇವತಾ ಸ್ತ್ರೀಯರೂ ನೋಡಿ ಬೆರಗುಗೊಂಡು ಬೆಂಡಾದರು. ಹಾಗಿರಲು ತಡಮಾಡದೆ ಆಗಲೆ ಇಬ್ಬರೂ ಮುನಿಗೆ ನಮಸ್ಕರಿಸಿದರು. ವಾಲ್ಮೀಕಿ ಮುಗುಳ್ನಗೆಯಿಂದ ರಾಘವನಿಗೆ

'ಓ ಓ! ಇಷ್ಟೊಂದು ಜಗಕ್ಕೆ ಹೊಸತು ಎನ್ನುವಂತೆ ತಂದೆ ಮಕ್ಕಳು ನಿಮಗೆ ಯುದ್ಧವು ತೀಕ್ಷ್ಣವಾಯಿತೇನು? ಹೀಗೂ ಉಂಟೆ? ಕಾದಾಡುವವರು ಉಂಟು ದಾಯಾದಿಗಳು, ಶತ್ರುಗಳು, ಅಣ್ಣ ತಮ್ಮಂದಿರು ತಮ್ಮ ತಮ್ಮಲ್ಲಿ. ಇಲ್ಲಿಯವರೆಗೆ ಕಂಡೂ ಇಲ್ಲ, ಕೇಳಿಯೂ ಇಲ್ಲ ಈ ರೀತಿಯ ಪ್ರಸಿದ್ಧಿ ಪಡೆದ ಹೋರಾಟವನ್ನು! ಹಾಗಲ್ಲದೊಂದು ನಿಮಗೇನು ಜಗದ ಮಾಯದ ತೆರೆಯ ಬೆಗಡೊ! ನಿನ್ನ ಬಣ್ಣದ ರೂಪು, ನಿನ್ನ ತೂಕದ (ನಿನ್ನಷ್ಟೆ) ಶಕ್ತಿ (ಇವು, ನೀನು) ಮಾಡಿದ ಯುದ್ಧದಲ್ಲಿ ನಿನ್ನನ್ನು ಎಚ್ಚರಿಸದೆ ಹೋದುವೆ? ನೀನು ನಾಡಿನ ಒಡೆಯನು ಎಂಬ ಒಂದು ಉಕ್ಕಿನಿಂದ ಸೊಕ್ಕಿನಿಂದ ಕೈ ಹಿಡಿದ ಹೆಂಡತಿಯನ್ನು ಬಗೆಯದ ನಿನಗೆ ಈ ಬಾಲಕರ ಗುರುತು ಹೇಗೆ ಆಗುತ್ತದೆ!' ಎನ್ನಲು, ಒಡನೆ ರಾಮನು ಲಕ್ಷ್ಮಣನ ಮುಖವನ್ನು ನೋಡಲು, (ಲಕ್ಷ್ಮಣನು) 'ಅಯ್ಯಾ ಮುನಿಯು ಹೇಳಿದಂತೆ ಆಗದಿದ್ದರೆ ಕಾಡಾಡಿ ಮಕ್ಕಳಿಗೆ ಈ ಬಗೆಯ ತೋಳ್ಬಲವು ಉಂಟಾಗುತ್ತದೆಯೆ? ನೋಡಿದರೆ ನಿನ್ನನ್ನು ಹೋಲುವರು' ಎಂದನು. ಅದಕ್ಕೆ ಆ ರಾಮಚಂದ್ರಮನು 'ಸೀತೆಯ ವಾರ್ತೆಯೇನು?' ಎಂದು ಕೇಳಿದನು. ಲಕ್ಷ್ಮಣನು ತಾನು ಜೊತೆಯಲ್ಲಿ ಕರೆದುಕೊಂಡು ಬಂದುದನ್ನೂ ಕಾಡಿನಲ್ಲಿ ಇಳಿಸಿ ಬಂದುದನ್ನೂ ಆಡಿ ತೋರಿಸಿದನು. ಮುನಿಪನು ಅದರ ನಂತರದಲ್ಲಿ ತನ್ನ ಆಶ್ರಮಕ್ಕೆ ಕರೆದುಕೊಂಡು ಹೋಗಿ ಆರೈಕೆ ಮಾಡಿದುದನ್ನೂ ಮೊದಲು ಮಾಡಿ ಅವಳಿಗಳು ಹುಟ್ಟಿದುದನ್ನೂ (ಅವರ) ಬಿಲ್ಲುಗಾರಿಕೆಯ ಬಿನ್ನಾಣವನ್ನೂ ನಾನಾ ವಿದ್ಯೆಯ ತಿಳಿವನ್ನೂ ನಿರೂಪಿಸಿ ಮುಗಿಸಿದನು. ಆಗ ಆಕಾಶದಕಡೆಯಿಂದ 'ಇವರು ಈ ಬಾಲಕರು ಅಪ್ರತಿಮವೀರರು, ನಿನಗೆ ಸೀತೆಯಲ್ಲಿ ಹುಟ್ಟಿದರು, ಇವರನ್ನು ಸ್ವೀಕರಿಸು' ಎಂದು ಮುಗಿಲ ಮಾತು (ಅಶರೀರವಾಣಿ) ಹುಟ್ಟಲು, ಒಡನೆ ದೇವತೆಗಳು ಹೂಮಳೆ ಕರೆದರು.

ಮತ್ತೆ ರಾಘವನು ನಾಚಿಕೆಯಿಂದ ಸುಮ್ಮನೆ ಇರುವುದನ್ನು (ನೋಡಿ) ವಾಲ್ಮೀಕಿಯು ಮಕ್ಕಳನ್ನು ತಂದೆಯ ಪಾದಕ್ಕೆ ನಮಸ್ಕರಿಸಿಸಿ 'ಇವರಲ್ಲಿ ಏನು ಅನ್ಯಾಯ? ನಿನ್ನನ್ನು ಮೀರಿದ ಹೆಚ್ಚಿನ ಶಕ್ತಿಯ ಬಾಲಕರು ಎಂಬ ಯಶಸ್ಸು ಜಗತ್ತು ಅರಿಯುವಂತೆ ಹಬ್ಬಿತು. ಅಯ್ಯಾ ಬರುವ ಜಯಾಪಜಯಗಳನ್ನು ನೀನು ತಿಳಿಯದುಂಟೆ? ನಿನ್ನ ಲೀಲೆಗೆ ಏನು ಹೇಳಲೊ!' ಎಂದನು. ಆಗ ಸಂತೋಷದ ಕಣ್ಣೀರು ಕಾಡಿನ ಪ್ರವಾಹವಾಗಲು, ರೋಮ ಸಮೂಹ ನೆಟ್ಟಗೆ ನಿಲ್ಲಲು (ರೋಮಾಂಚನವಾಗಲು), ನಮಸ್ಕರಿಸಿದ ಮಕ್ಕಳಿಬ್ಬರನ್ನೂ ಎತ್ತಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ಆಲಿಂಗಿಸಿ ಮುದ್ದಿಸಿ ಮುಂಡಾಡಿ

(ಹಣೆಗೆ ಹಣೆ ತಾಕಿಸಿ ಮುದ್ದಿಸುವುದು), ತಲೆಯನ್ನು ಆಘ್ರಾಣಿಸಿ (ಮೂಸಿ ನೋಡಿ), ಮುಂಗುರುಳನ್ನು ನೇವರಿಸಿ, ಮೈಯನ್ನು ಸವರಿ, ಮಕ್ಕಳ ದೇಹ ಸ್ಪರ್ಶದ ಒಂದು ಪರವಶತೆಯಿಂದ ಮನಸ್ಸು ಉಬ್ಬಿದ ರಾಘವನು 'ಎಲೆಲೆ ಬಾಲಕರಿರ, ನಿಮಗೆ ಈ ಜಾಣ್ಮೆಗೆ ಯಾವುದು ಮೊದಲು ಹೇಳಿ' ಎಂದು ಕೇಳಿದನು. (ಅವರು) 'ನಮಗೆ ಈ ಅಜ್ಜನು ಉಪದೇಶಿಸಿದ ರಾಮಾಯಣವೆ ಮೊದಲಾಯಿತು' ಎಂದರು. ಆಗ ವಾಲ್ಮೀಕಿಯು, ತಾನವಿತಾನವು (ವಿವಿಧ ಸ್ವರಗಳು) ಇಂಪನ್ನು ಉಂಟುಮಾಡಲು, ಕೊರಳೂ ಬೆರಳೂ (ಹಾಡಿನ ಧ್ವನಿಯೂ ವೀಣೆಯ ಧ್ವನಿಯೂ) ಒಂದಾಗಿ ಬೆರೆಯಲು, ಲಯದಲ್ಲಿ ತಡ ವರಿಸಿದ ತಾಳದ ಮೇಳದಿಂದ, ಹತ್ತು ಬಗೆಯ ಗಮಕಗಳ ಸೊಗಸಿನಿಂದ, ಶುದ್ಧ ಮಿಶ್ರ ಸಂಕೀರ್ಣಗಳೆಂಬ ಹಲವು ಬಗೆಯ ರಾಗಗಳಲ್ಲಿ ಬಾರಿಸುವ ವಾಣಿಯ ವೀಣೆಯ ಇಂಪು ಸ್ವರಕ್ಕೆ ಸರಿಹೊಂದುವ ಒಂದು ಭಂಗಿಯಿಂದ ಬಾಲಕರಿಂದ ರಾಮಾಯಣವನ್ನು ಒಪ್ಪಿಸಿದನು. ದೇವತೆಗಳು ಹಿಗ್ಗಿದರು, ಅಷ್ಟರಲಿ ಮುನಿಪನು ತನ್ನ ಕಮಂಡಲುವಿನ ನೀರನ್ನು ಚಿಮುಕಿಸಿ ಮೂರ್ಛೆ ಹೋದವರನ್ನು ಎಚ್ಚರಿಸಿದನು ಈಗ ಸರ್ವರೂ ಊರಿಗೆ ದಯಮಾಡಿಸಿದರು.

ಮನೋರಮೆ—ಏನು ಸೀತೆಯನ್ನು ಇನ್ನೂ ಜೊತೆಯಲ್ಲಿ ಕರೆದು ಕೊಂಡು ಹೋಗಲಿಲ್ಲವೆ ? ಬಿಟ್ಟೇ ಹೋದನೆ ರಾಮನು ?

ಮುದ್ದಣ—ಓ ! ಇನ್ನೂ ಬಿಟ್ಟಿರುವನೆ ಸತಿಯನ್ನು ! ಈ ಹೊತ್ತು ತನ್ನ ರಾಣಿಯ ದೋಷವಿಲ್ಲದ ನಡತೆಗೆ ದೇವತೆಗಳನ್ನು ಸಾಕ್ಷಿ ಕೊಟ್ಟು, ಆಗಲೆ ತನ್ನ ಅನ್ಯಾಯವನ್ನು ಕ್ಷಮಿಸು ಎಂದು ಒಳ್ಳೆಯ ಮಾತನ್ನು ಆಡಿ ಸಮಾಧಾನಪಡಿಸಿ, ಸುಂದರಿ ಸೀತೆಯನ್ನು ಹೊನ್ನಿನ ಪಲ್ಲಕ್ಕಿಯಲ್ಲಿ ಏರಿಸಿ, ದೇವತೆಗಳು ಹೊಗಳಲು ತಾನೂ ತನ್ನವರೂ ಆಶ್ರಮದ ಮುನಿಗಳೂ ಒಂದುಗೂಡಿ ಹೋದ....

ಮನೋರಮೆ—ಓ ! ರಾಮನು ಒಳ್ಳೆಯವನಾಗಿರಲಿ, ಸುಖವಾಗಿ ಬಾಳಲಿ, ರಾಮನಿಗೆ ಗೆಲುವಾಗಲಿ, ರಾಮನನ್ನು ಕೊಂಡಾಡಲಿ, ಯಶಸ್ಸು ಹೆಚ್ಚಿ ಹರಿಯಲಿ, ರಾಮನಲ್ಲಿ ಸತ್ಯ ನೆಲಸಿರಲಿ....

ಮುದ್ದಣ—ಹೀಗೆ ರಾಮನನ್ನು ನೀನು ಹರಸುವ ಹರಕೆಯ ಸೊಗಸು, ಬಲು ಸೊಗಸು ! ನನ್ನ ಪಟ್ಟದ ರಾಣಿಯೇ, ಇನ್ನು ಎಲ್ಲ ಕಡೆಯೂ ನಿರಾಮಯ (ರೋಗವಿಲ್ಲ), ನಿರಾಕುಳ (ವ್ಯಥೆಯಿಲ್ಲ), ಸುಭಿಕ್ಷ, ಶಾಂತಿ....

ಮನೋರಮೆ—ಏನೆಲೆ ರಮಣ, ಇಂದು ಇದೇನು ಎಲ್ಲಿಯ ಶಾಂತಿಗೀಂತಿಗಳು ?

ಮುದ್ದಣ—ರಾಘವನ ಯಜ್ಞದ ಕುದುರೆ ವರ್ಷದವರೆಗೆ ಬಿಡದೆ ಸಂಚರಿಸಲು ಒಡನೆ ಗೊರಸಿನ ತುಳಿತಕ್ಕೆ ಪಾವನವಾದ ನಾಡಿನ ಜನರಿಗೆ ಎಲ್ಲ ಕಡೆಯೂ ಮಂಗಳ ಎಂದೆನು. ಅತಿ ಆಯಾಸದ ನಿತ್ಯಪ್ರಯಾಣವೂ, ಕಷ್ಟದ ದಾರಿಯ ಬಳಲಿಕೆಯೂ, ಹೀನಹಿಂಸಕರೊಡನೆ ಹೋರಾಡುವ ವಂಚನೆಯ ನಿಷ್ಠುರದ ಸೆಣಸಾಟವೂ ರಾಮನಸೇನೆಗೆ ಮುಗಿಯಿತು. ಈಗ ತಮ್ಮ ತಮ್ಮ ಬೀಡಿಗೆ ಬಂದು ವೀರರೆಲ್ಲರೂ, ಪ್ರೀತಿ ಮೀರಲು ತಮ್ಮ ತಮ್ಮ ರಾಣಿಯರಿಂದ ಓಲೈಸಿಕೊಳ್ಳುವರು.

ಮನೋರಮೆ—ಹಾಗಾದರೆ ನೀನು ಹೇಳುವ ಒಳ್ಳೆಯ ಕಥೆ ಮುಗಿಯುವುದಕ್ಕೆ ಬಂದಿತು.

ಮುದ್ದಣ—ಉಂ, ಹೇಗೆ ಹೇಗೊ ರಗಳೆಯ ಹಾಳುಕತೆ ಕೊನೆಗೊಂಡಿತು.

ಮನೋರಮೆ—ಚಿಃ, ಶ್ರೀರಾಮನ ಪುಣ್ಯಚರಿತೆಯನ್ನು ಹಾಳುಕತೆಯೆಂದು ಹೀನೈಸಿ ತೆಗಳುವೆಯಾ ?

ಮುದ್ದಣ—ಶ್ರೀರಾಮನ ಚರಿತೆಯನ್ನು ಹೀನೈಸಿ ಅಲ್ಪತೆಯಿಂದ ಹೇಳಲಿಲ್ಲ. ಹುರುಳಿಲ್ಲದ ಒಪ್ಪದ ಕೆಟ್ಟ ನನ್ನ ವ್ಯರ್ಥ ವರ್ಣನೆಯ ಬೇಸರಿಕೆಯ ಹಾಳು ಕಾವ್ಯವನ್ನು ಪೊಳ್ಳು ಎಂದು ಹೇಳಿದೆನು.

ಮನೋರಮೆ—(ಸವಿನಯದಿಂದ) ತಮ್ಮ ಒಡವೆಯನ್ನು ತಾವೇ ಹೊಗಳುವರೆ ಬಲ್ಲವರು? ಅಲ್ಲದಿದ್ದರೆ ನವರಸದ ತನಿ (ಮಧುರ)ರಸವು ಉಕ್ಕುವ ವರ್ಣಕಾವ್ಯವನ್ನು ಪೊಳ್ಳು ಎಂದು ಹೇಳುವ ನಿನಗೆ ಏನು ನಿರಹಂಕಾರವೊ ನಿನ್ನ ಆ ಜಾಣ್ಮೆಯಲ್ಲಿ !

ಮುದ್ದಣ—ಏನು ನನ್ನ ಕಾವ್ಯವು ನಿನಗೆ ಮೆಚ್ಚಿಕೆಯಾಯಿತೆ ?

ಮನೋರಮೆ—ನನಗೆ ಒಬ್ಬಳಿಗೆ ಎಂದರೇನು, ನಾಡಿನಲ್ಲಿ ಎಲ್ಲರಿಗೂ.

ಮುದ್ದಣ—(ನಕ್ಕು) ನನ್ನಲ್ಲಿ ಒಂದು ಅಭಿಮಾನದಿಂದ ಹೀಗೆ ಹೇಳಿರಬೇಕು.

ಮನೋರಮೆ—ನಿನ್ನಾಣೆ, ತಡೆಯೇನು ? ಸುವಾಸನೆಯ ಹೊಗಮಗಮಿಸದೆ ಏನು ಹೋಗುತ್ತದೆ !

ಮುದ್ದಣ—ಅಜ್ಜಿಯಾಣೆ !

ಮನೋರಮೆ—ಅಜ್ಜಿಯಾಣೆ, ಇಸ್ಸಿ, ಪುಸಿ(ಸುಳ್ಳು)ಯನ್ನು ಯಾವ ಹೊತ್ತಿಗೂ ಹೇಳೆನು. ಈ ಬಗೆಯ ಗದ್ಯಕಾವ್ಯವು ಮುಂದಿಲ್ಲ (ಮುಂದೆ ಬರುವುದಿಲ್ಲ) ಹಿಂದಿಲ್ಲ (ಹಿಂದೆ ಇರಲಿಲ್ಲ)ವೆಂದಾಯಿತು.

ಮುದ್ದಣ—ಹೇಗೊ ನಿನಗೆ ಸೊಗಸಾಯಿತಲ್ಲ, ಇದುವೇ ಪರಮಾನಂದ ನನಗೆ.

ಮನೋರಮೆ—ಬಿನ್ನಾಣದ ಬಣ್ಣನೆಯ ಮಾತಲ್ಲ ; ಬಲುಸೊಗಸು, ಬಲುಸೊಗಸು ನೀನು ಹೇಳಿದ ಕತೆ.

ಮುದ್ದಣ—ಹಾಗಿದ್ದರೆ ತಾರೇ ಎಲೆ ನೀನು ಹೇಳಿದ ಮೆಚ್ಚಿನ ಉಡುಗೊರೆಯನ್ನು.

ಮನೋರಮೆ—(ಕಣ್ಣು ಬೆಡಗುಗೊಂಡವರಂತೆ ನಟಿಸಿ) ಇನ್ನೇನು ಜಾಣನೋ ! ನೀನು ಏನೂ ಅರಿಯದವರಂತೆ ಸುಮ್ಮನಿದ್ದು ನನ್ನಿಂದಲೇ ನನ್ನನ್ನೇ ಕಟ್ಟಿಸಿದ ದಿಟ್ಟ (ಜೋರು)ಗಾರ, ನಿನಗೆ ಏನು ಹೇಳಲಿ, ಏನು ಹೇಳಲೋ ! ನಿನ್ನ ಆ ಬಣ್ಣದ ಮಾತಿಗೆ ಮಾರುಹೋದೆನು (ಎಂದು ಹೇಳಿ ಮತ್ತೆ ವಿಚಾರ ಮಾಡಿ) ಆಯಿತಾಯಿತು, ಹೇಳಿದ ಕತೆಗೆ ಮಂಗಳವನ್ನು ಮಾಡು. ಮೆಚ್ಚುಗಿಚ್ಚು ಬಳಿಕ ಅಲ್ಲವೆ ?

ಮುದ್ದಣ—ಬರಿದೆ ಮಂಗಳವಾಗುತ್ತದೆಯೆ, ಹೋಳಿಗೆ ತುಪ್ಪವನ್ನು ತಿನ್ನಲು ಬಡಿಸಬೇಡವೆ ?

ಮನೋರಮೆ—ಹೋಳಿಗೆ ತುಪ್ಪಕ್ಕೆ ಇಂದೇನು ನಿನಗೆ ಶೋಭನವೆ ?

ಮುದ್ದಣ—ಇಂದು ನನಗೆ ಎಂದರೇನು ? ನನಗೂ ನಿನಗೂ.

ಮನೋರಮೆ—ಹೋಗು ಸಾಕು ಈ ಬಣ್ಣದ ಕೊಂಕುನುಡಿ. ರಾಘವನ ಯಜ್ಞವು ಹೇಗೆ ಪರಿಸಮಾಪ್ತಿಯಾಯಿತು ಹೇಳು.

ಮುದ್ದಣ—ಶೋಭನಾಂಗೀ, ಹಾಗೆ ರಾಘವನು ಸತಿಸುತರೊಡನೆ ಅಯೋಧ್ಯೆಗೆ ಹೋದನು. ಕೆಲವಾರು ದಿನಕ್ಕೆ ಯಜ್ಞಾಶ್ವವು ಪಟ್ಟಣಕ್ಕೆ ಎದುರು ಮುಖ ಹಾಕಿ ನಡೆಯಿತು. ಕಾಪಲಿನ ದೊಡ್ಡ ಪಡೆಯೂ ಬಳಿಸಾರಿ (ಜೊತೆಯಲ್ಲಿಯೇ) ಬಂದಿತು ಶತ್ರುಘ್ನ ಮೊದಲಾದ ಪ್ರಮುಖವೀರವರ್ಗವೂ ಬಂದಿತು. ಓ ಓ ! ಇದೆಲ್ಲಿಯ ಕಪ್ಪಕಾಣಿಕೆಗಳೊ ! ಹೊನ್ನೇನು, ಹೊನ್ನಿನ

ಒಡವೆಯೇನು, ರತ್ನವೇನು, ಬಗೆಬಗೆಯ ಪಟ್ಟೆಯ ಬಟ್ಟೆಯೇನು, ನಾಡಿನಲ್ಲಿರುವ ಐಶ್ವರ್ಯವೆಲ್ಲ ಒಂದುಗೂಡಿ ತಮ್ಮ ಒಡೆಯರನ್ನು ಮುಂದುಮಾಡಿ ಯಜ್ಞದ ಮಹೋತ್ಸವವನ್ನು ಕಾಣಬೇಕೆಂದು ಹೊರಟು ಹೋಗುವಂತಾಯಿತು. ಹೀಗೆ ಬಂದು ಪಟ್ಟಣಕ್ಕೆ ಗಾವುದ ದೂರದಲ್ಲಿ ನಿಂತು ದಿಗ್ವಿಜಯವನ್ನು ಮಾಡಿಬಂದು ಸಂತೋಷದ ಸುದ್ದಿಯನ್ನು ಹೇಳಿಕಳುಹಿಸಿದೊಡನೆ ರಾಜಕಾರ್ಯದಲ್ಲಿ ನಿರತನಾದ ಭರತನು ಅವರೆಲ್ಲರನ್ನೂ ಗೌರವಿಸುತ್ತ ಅಕ್ಕರೆಯಿಂದ ಎದುರುಗೊಂಡು ರಾಘವನಿಗೆ ಕಾಣಿಸಲು, ಒಡನೆ ಬೇರೆಬೇರೆ ಬಂದ ಸಾಮಂತರನ್ನು ಸತ್ಕರಿಸಿ; ಮಂಡಳಿಕರನ್ನು ಕೊಂಡಾಡಿ, ತನ್ನ ಕಿರಿ ತಮ್ಮನ (ಶತ್ರುಘ್ನನ) ಸಾಹಸವನ್ನು ಹೊಗಳಿ, ಪುಷ್ಕಲನನ್ನು ಮೆಚ್ಚಿ, ಲಕ್ಷ್ಮೀನಿಧಿಯನ್ನು ಗೌರವಿಸಿ ಮತ್ತೂ ಉಳಿದ ವೀರರನ್ನು ಉಪಚರಿಸಿ, ಸರ್ವರನ್ನೂ ಬಿಡಾರಕ್ಕೆ ಕಳುಹಿಸಿ ಕೊಟ್ಟನು.

ಮರುದಿವಸ ಮಾಡುವ ಯಜ್ಞಕ್ಕೆ ಪೂರ್ಣಾಹುತಿಯ ಹೊತ್ತಿಗೆ ಮೊದಲೇ ಸರ್ವಸಂಭಾರವೂ (ಸಲಕರಣೆಯೂ) ಏರ್ಪಟ್ಟಿತು. ಬಂದ ಬ್ರಾಹ್ಮಣರಿಗೊಂದು ಸಭೆ, ಮುನಿಜನಗಳಿಗೆ ಒಂದು ಸಭೆ, ಕ್ಷತ್ರಿಯರಿಗೊಂದು ಸಭೆ, ಊರಿನ ಮುತ್ತೈದೆಯರಿಗೊಂದು ಸಭೆ, ಯೋಜನದ ಅಳತೆಯಲ್ಲಿ ಆಯಿತು. ಈಗ ಯಾಗಶಾಲೆಯಲ್ಲಿ ಎಂಟು ದಿಕ್ಕಿನಲ್ಲಿಯೂ ಬಾಗಿಲಲ್ಲಿ ಒಬ್ಬಿಬ್ಬರು ಮುನಿಗಳು ರಕ್ಷೋಘ್ನ ಸೂಕ್ತವನ್ನು (ರಕ್ಕಸರನ್ನು ಘಾತಿಸುವ ವೇದ ಮಂತ್ರ) ಪಠಿಸುತ್ತ ಕಾವಲುಗಾರರಾಗಿ ಶೋಭಿಸಿದರು. ಮತ್ತೆ ಹದಿನಾರು ಯಾಜಕರು (ಹೋಮ ಮಾಡುವವರು) ಒಂದೊಂದು ದಿಕ್ಕಿನಲ್ಲಿ, ಸಾಮಗಾನವನ್ನು ಹಾಡುತ್ತ ಉದ್ಗಾತೃಗಳು (ಸಾಮವೇದವನ್ನು ಹಾಡುವವರು) ಒಂದು ಕಡೆಯಲ್ಲಿ, ತಂತ್ರದ ಅಧ್ವರ್ಯಗಳು (ಯಜ್ಞದ ಕಾರ್ಯಗಳನ್ನು ನಿರ್ವಹಿಸುವ ಯಜುರ್ವೇದವನ್ನು ಹೇಳುವವರು) ಒಂದು ಕಡೆಯಲ್ಲಿ, ಹೋತಾರರೂ (ಋಗ್ವೇದ ಹೇಳುವ ಯಜ್ಞ ಸಹಾಯಕ) (ಒಂದು ಕಡೆಯಲ್ಲಿ) ಶೋಭಿಸಿದರು. ವೇದಘೋಷ, ವಾದ್ಯಘೋಷ, ನೃತ್ಯಘೋಷವು ಎಲ್ಲಕಡೆ ದಿಕ್ಕಿನ ಗಡಿಯನ್ನು ತುಂಬಿತು. ಯಜ್ಞಕುಂಡದಲ್ಲಿ ಇಲ್ಲಿಯವರೆಗೆ ಎಡಬಿಡದೆ ಚಟಚಟಿಸುವ ಯಜ್ಞದ ಉರಿ ನಾಲಗೆಗಳನ್ನು ನೀಡಿಕೊಂಡಿತ್ತು.

ಈಗೀಗ ಮಂಗಳ; ದಿಕ್ಪಾಲಕರು ಪ್ರತ್ಯಕ್ಷರಾಗಿ ಯಜ್ಞಕ್ಕೆ ಬಂದು ತಮ್ಮ ತಮ್ಮ ಪಾಲನ್ನು ಮನಸ್ಸು ತೃಪ್ತಿಯಾಗುವಷ್ಟು ಕೈಯಾರೆ ತೆಗೆದುಕೊಂಡರು, ಅವರಿಗೂ ಮಂಗಳ. ಋತ್ವಿಜರೆಲ್ಲರೂ ಕೊಳಗ ಮತ್ತು ಎರಡು ಬಳ್ಳ ರತ್ನವನ್ನು

ಹೊನ್ನಿನ ರಥವನ್ನು, ಒಳ್ಳೆಯ ಹಸುವನ್ನು ಸ್ವೀಕರಿಸಿ, ರಾಮನನ್ನು ಹರಸಿ ಹೋದರು, ಅವರಿಗೂ ಮಂಗಳ. ಮುನಿಗಳೆಲ್ಲರೂ ಮನುಷ್ಯಲೀಲೆಯ ಪರ ಬ್ರಹ್ಮನನ್ನು ಕಣ್ಣು ತೃಪ್ತಿಯಾಗುವಷ್ಟು ನೋಡಿದೆವು ಎಂಬ ಒಂದು ಸಂತೋಷದಿಂದ ನಲಿಯುತ್ತ ತಮ್ಮ ಆಶ್ರಮಕ್ಕೆ ಹೋದರು, ಅವರಿಗೂ ಮಂಗಳ. ಮೂಗಿನವರೆಗೂ ಊಟಮಾಡಿ ಊಟಮಾಡಿ ತೇಗಿ, ಕೊಟ್ಟ ದಕ್ಷಿಣೆಯನ್ನು ಹೊತ್ತು ಉಬ್ಬಸಪಡುತ್ತ ನಡೆದರು ಬ್ರಾಹ್ಮಣರು, ಅವರಿಗೂ ಮಂಗಳ. ಪುರದ ಪುರುಷರು, ಪುರದ ಸ್ತ್ರೀಯರು ಶ್ರೀರಾಮನ ದಿವ್ಯಮೂರ್ತಿಯನ್ನು ಕಂಡು ಸಂತೋಷ ತಾಳಿ ತಾವೇ ತಮ್ಮಲ್ಲೇ ಮಾತು ಕುಟ್ಟಿಕೊಳ್ಳುತ್ತ ಹೋದರು, ಅವರಿಗೂ ಮಂಗಳ. ಕೊಂಡಾಟದ ಮಹಾಸಾಮಂತರು ತಮಗೆ ದೊರೆತು ಬಂದ ಆನೆ, ರಥ, ಕುದುರೆ, ಆಭರಣ ಮೊದಲಾದವುಗಳನ್ನು ತೆಗೆದುಕೊಂಡು ರಾಘವನಿಗೆ ನಮಸ್ಕರಿಸಿ ಆತನ ಪಾದದ ಆಜ್ಞೆ ಪಡೆದು (ತಮ್ಮ ತಮ್ಮ) ಊರಿಗೆ ಪ್ರಯಾಣ ಮಾಡಿದರು, ಅವರಿಗೂ ಮಂಗಳ. ಹೀಗೆ ಶ್ರೀರಾಘವನು ಸೀತಾಸಮೇತನಾಗಿ ಯಜ್ಞವನ್ನು ಮಾಡಿ ತನ್ನ ಒಂದು ಶ್ವೇತಯಶಸ್ಸಿನಿಂದ ದಿಕ್ಕಿನ ಮೂಲೆಗಳನ್ನು ಬೆಳಗಿಸಿ ಸೋದರರೊಡನೆ ಹಲವು ಕಾಲ ರಾಜ್ಯಭಾರ ಮಾಡುತ್ತ ಇದ್ದನು, ಅವನಿಗೂ ಮಂಗಳ, ಶುಭ, ಭದ್ರ, ಕಲ್ಯಾಣ.

ಮುದ್ದಣ—(ಅಷ್ಟರಲ್ಲಿ ಮನೋರಮೆ ಎದ್ದು ಹೋದಳು. ಹಾಗೆ ಎದ್ದು ಹೋಗುವವಳನ್ನು ಎಳೆದು ತಡೆದು) ಬಲು ಸೊಕ್ಕಿನವಳು ಕಣಾ ! ಮುದ್ದಣ ನನ್ನೂ ವಂಚಿಸುವ ಹೆಂಗಸರು ಇದ್ದಾರೆಯೆ ? ಕೊಂಕು ಮಾತಿನ ಒಂದು ನೆವದಿಂದ ಬಿಂಕದಿಂದ ಎದ್ದರೆ ಆಯಿತೆ ? ಮೆಚ್ಚನ್ನು ಕೊಟ್ಟಲ್ಲದೆ ಹೋದರೇನು ಬಿಡುವೆನೆ !

ಮನೋರಮೆ—ಕತೆಗೆ ಮಂಗಳವನ್ನು ಮಾಡದೆ ಬರಿದೆ ಉಡುಗೊರೆ ತುಡುಗೊರೆಯೆಂದರೇನು ?

ಮುದ್ದಣ—ಕತೆಗೆ ಮಂಗಳವನ್ನು ಆಗಲೇ ಹೇಳಿದೆನು ಬಿಡಲಿಲ್ಲ. ಈಗ ಉಳಿದಿರುವುದೊಂದೆ ನಿನ್ನ ಉಡುಗೊರೆ.

ಮನೋರಮೆ—ಉಡುಗೊರೆಯ ಕಾಟಕ್ಕೆ ಇನ್ನು ಎಲ್ಲಿಗೆ ಹೋಗಲಿ ! ನೀನು ಏನನ್ನು ಬೇಡುವಯ್ಯ ?

ಮುದ್ದಣ—(ಹುಸಿ ಮುನಿಸಿನಿಂದ) ಬೇಡಲೇನು ತಿರುಕನೇ ? ಮನೆಗೆ ಬಂದೆನೆ ? ಮೆಚ್ಚಿ ಕೊಟ್ಟರೆ ಅದನ್ನೇ ಸ್ವೀಕರಿಸುವೆನು.

ಮನೋರಮೆ—ನಾನು ಹೇಗೂ ಪರಾಧೀನೆ, ಮತ್ತು ನನ್ನದೇ ಒಡವೆ ಯಾವುದು ? ಏನನ್ನು ಕೊಡಲಿ, ಹೇಗೆ ಕೊಡಲಿ ?

ಮುದ್ದಣ—ಏನೋ, ಹೇಗೋ, ನಾನು ಮೆಚ್ಚುವಂತೆ ಕತೆಯ ಹುರುಳಿಗೆ ಒಪ್ಪುವಂತೆ ನಾಲ್ಕು ಜನರು ತಲೆದೂಗುವಂತೆ ಉಡುಗೊರೆ ನೀಡಿದರೆ ಆಯಿತು.

ಮನೋರಮೆ—ಹಾಗಿದ್ದರೆ ಹೀಗೆ ಇದು.......ನಿನ್ನ ಈ ಕಾವ್ಯವನ್ನು ಓದುವ ಜಾಣರು ಯಾವ ಬಗೆಯ ಉಡುಗೊರೆಯನ್ನು ನೀಡು ಎನ್ನುವರೊ ಆ ಬಗೆಯ ಮೆಚ್ಚನ್ನು ನೀಡುವೆನು.

ಮುದ್ದಣ—"ಅಂತಾನುಮಕ್ಕೆ ಪೋಪಂ
ಧರೆಯರಿಯೆ ಜೀವರಾಶಿಗೆ
ಪಿರಿಯಂ ನರನಾದಮಾದನಾತ್ಮಂ ತನ್ನೊಳ್
ದೊರೆಕೊಂಡಿರ್ಪಿನಮಂತದು
ಪರಿನಿರ್ಮಲಮಾಗೆ ಪೆರ್ಮೆಯಿರ್ಮೆಯ್ಯಪ್ಪುಡೆಗುಂ"

[ಹಾಗಾದರೂ ಆಗಲಿ ! ಹೋಗೋಣ. ಲೋಕ ತಿಳಿದಿರುವಂತೆ ಜೀವರಾಶಿಗೇ ಹಿರಿಯನು ಮಾನವನು ಆದನು (ಆದಮ್ಮನು) ಆದನು, ಆತ್ಮ (ವಿವೇಚನಾಶಕ್ತಿ) ತನ್ನಲ್ಲಿ ಸೇರಿಕೊಂಡಿರುವುದರಿಂದ. ಹಾಗೆ ಅದು (ಆತ್ಮ-ವಿವೇಚನಾಶಕ್ತಿ) ಪರಿನಿರ್ಮಲವಾದರೆ ಹೆಮ್ಮೆ ಇಮ್ಮಡಿಯಾಗುತ್ತದೆ.]

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. ...1388... 708

ಈ ಲೇಖಕರ ಕೃತಿಗಳು

ನಾಗೇಂದ್ರ ಮತ್ತು ಇತರ ಜನಪದ ಕತೆಗಳು

ಪ್ರತಿಕ್ರಿಯೆ

ಎಪ್ಪತ್ತೊಂದು ಜನಪದ ಕತೆಗಳು

ರಾಘವಾಂಕನ ಹರಿಶ್ಚಂದ್ರಕಾವ್ಯ ಕಥಾಸಾರ

ಜನ್ನಕವಿಯ ಯಶೋಧರ ಚರಿತೆ (ಸಂಗ್ರಾನುವಾದ)

ಮುದ್ದಣಕವಿಯ ಶ್ರೀರಾಮಾಶ್ವಮೇಧಸಂಗ್ರಹ (ಹೊಸಗನ್ನಡಾನುವಾದ)

ಮಿತ್ರ ಪ್ರಕಾಶನದ ಪ್ರಕಟಣೆಗಳು

	ಸಾದಾಪ್ರತಿ	ಉತ್ತಮಪ್ರತಿ
ಸುರಹೊನ್ನೆ—ಎಚ್ಚೆಸ್ಕೆ	ರೂ. 10	ರೂ. 20
ಪು.ತಿ.ನ. ಒಂದು ಅಧ್ಯಯನ (ವಿಮರ್ಶಾ ಸಂಕಲನ)—ವಿವಿಧ ಲೇಖಕರು	10	20
ಚಂದ್ರಕಾಂತಿ—ಎಚ್ಚೆಸ್ಕೆ	8	16
ಸ್ತವನ—ಡಾ. ಹಾ. ಮಾ. ನಾಯಕ	9	20
Quantative techniques of Economics—C. K. Renukarya	10	—
ಮುದ್ದಣ ಕವಿಯ ಶ್ರೀರಾಮಾಶ್ವಮೇಧ ಸಂಗ್ರಹ—ಕೆ. ವೈ. ಶಿವಕುಮಾರ್	7.50	15.00

ಅಚ್ಚಿನಲ್ಲಿ

ಸ್ಮರಣ	ಡಾ. ಹಾ. ಮಾ. ನಾಯಕ
ಸಾಹಿತ್ಯ ಮತ್ತು ಅಭಿರುಚಿ	ಡಾ. ಶಂಕರ ಮೊಕಾಶಿ ಪುಣೇಕರ
ನಿಕೊಲಸ್ ಕೊಪರ್ನಿಕಸ್	ಜಿ. ಟಿ. ನಾರಾಯಣರಾವ್
ಕೆಂಡಸಂಪಿಗೆ (ಕಥಾಸಂಕಲನ)	ಬಿ. ಶಾಮಸುಂದರ
ನಾಗರಿಕತೆಯ ಕಥೆ	ಜಿ. ಎಸ್. ಭಟ್ಟ

SRI JAGADGURU VISHWARADHYA
JNANA SIMHASAN JNANAMANDIR
LIBRARY.
Jangamwadi Math, VARANASI,
Acc. No. 708

"ಕೆಲವು ಅರೆಕೊರೆಗಳಿದ್ದರೂ ಒಂದು ಸತ್ಕೃತಿಯಾಗಿರುವ, ತಿರುಳ್ಗನ್ನಡ ದಿಂದ ಕೂಡಿರುವ ಕನ್ನಡದ ಶ್ರೀರಾಮಾಶ್ವಮೇಧ ಕನ್ನಡ ಶಾರದೆಗಾಗಿ ಮುದ್ದಣ ನೇಯ್ದಿರುವ ಒಂದು ಸಾಮಾನ್ಯ ನೂಲಿನ ವಸ್ತ್ರವಲ್ಲ, ಒಂದು ಒಳ್ಳೆಯ ರೇಷ್ಮೆ ಸೀರೆ. ಇದರಲ್ಲಿ ಮಧ್ಯೆ ಮಧ್ಯೆ ಕೆಲವು ನೂಲಿನ ಎಳೆಗಳು ಸೇರಿರುವುದೂ ಉಂಟು. ನಡುನಡುವೆ ಕಿತ್ತುಹೋಗಿರುವ ಒಂದೆರಡು ರೇಷ್ಮೆ ಎಳೆಗಳನ್ನು ಅಲ್ಲಲ್ಲೇ ಗಂಟು ಹಾಕಿರುವುದೂ ಉಂಟು. ಆದರೂ ಹಾಸು ಹೊಕ್ಕಾಗಿರುವ ಅಸಂಖ್ಯಾತ ರೇಷ್ಮೆ ಎಳೆಗಳ ನಡುವೆ ಅವು ಗೌಣವಾಗಿ ಸುಂದರ ರೇಷ್ಮೆ ಸೀರೆಯ ಸೌಂದರ್ಯವೇ ಎದ್ದುಕಾಣುತ್ತಿದೆ. ಕೃತಿಯ ಆರಂಭ ದಲ್ಲಿ, ಮಧ್ಯಮಧ್ಯದಲ್ಲಿ, ಮುಕ್ತಾಯದಲ್ಲಿ ಅಳವಡಿಸಿರುವ ಮುದ್ದಣ ಮನೋರಮೆಯರ ಸರಸ ಸಲ್ಲಾಪವೇ ಆ ಸೀರೆಗೆ ಕಲಾಪತ್ತಿನ ಅಂಚೂ, ಬೂಟಾ ಹೂವೂ, ಸೆರಗೂ ಆಗಿ ಅದರ ಮೆರಗಿನ ಸೊಬಗಿನ ಕಳೆಯನ್ನು ಇಮ್ಮಡಿಯಾಗುವಂತೆ ಮಾಡಿದೆ."

—ಪ್ರಸ್ತಾವನೆಯಿಂದ

ಮಿತ್ರ ಪ್ರಕಾಶನ : ಸರಸ್ವತೀಪುರಂ : ಮೈಸೂರು 570 009

ರೂ. 7·50